
ಸಂಪಾದಕ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್



ತುಳುನಾಡಿನ ಜನಪದ ಕತೆಗಳು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
KARNATAKA FOLKLORE UNIVERSITY

ತುಳುನಾಡಿನ ಜನಪದ ಕತೆಗಳು

ಸಂಪಾದಕ

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ - ೫೮೧ ೨೦೫
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

2

TULUNADINA JANAPADA KATEGALU

(Folktales of Tulunadu)

Edited by
Dr. Palthady Ramakrishna Achar
'Nele' Narimogaru Post
Puttur Tq, Dakshina Kannada Dist.
PIN- 574 202, Cell: 94807 32356

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 205
Shiggavi Taluk, Haveri Dist., Karnataka
Phone: 0836 - 2255180

Pages: xx + 170 **Price: ₹ 100/-**
www.janapadauni.in
First Impression: 2013
ISBN 978-93-83149-00-1

ಬೆಲೆ : ₹ ೧೦೦/-

ಅಕ್ಷರ ಸಂಯೋಜನೆ
ಚಿರಾಗ್ ಕಂಪ್ಯೂಟರ್ಸ್, ಶೇಣಿ
Cell No.: 94495 92380

ಪುಟವಿನ್ಯಾಸ
ಸವಿತ ಗ್ರಾಫಿಕ್ಸ್, ಕಮಲಾಪುರ
Cell No.: 94802 57392

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೨೦೫
ಶಿಗ್ಗಾವಿ ತಾಲೂಕು ಹಾವೇರಿ ಜಿಲ್ಲೆ

ಬೆಂಗಳೂರು ಕಚೇರಿ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ
ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡರಸ್ತೆ
ಮಾಗಡಿ ಕಾರ್ಡ್ ರಸ್ತೆ, ವಿಜಯನಗರ
ಬೆಂಗಳೂರು ೫೬೦ ೦೪೦

Prited at :
Krishna Printers
Bangalore

ದೇಶ ಸುತ್ತು ಕೋಶ ಓದು

ಕನ್ನಡ ನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು,

ಮುಂದಿನ ವರ್ಗಕ್ಕೆ ಕೊಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳ ಬೇಕಾದುದು ಇಂದಿನ ಅಗತ್ಯವಾಗಿದೆ. ಜಾನಪದವು ಭೂಮಿ ತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು-ಪ್ರಸರಣ ಮಾಡುವುದು ಜ್ಞಾನಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ, ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ-ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿ ಗಳನ್ನು ರೂಪಿಸಿಕೊಳ್ಳುವುದು ಅವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರು ವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು,

ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆ ಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿಹಾಡಿದೆ.

ಕನ್ನಡ ನಾಡು ಜನಪದ ಕತೆಗಳ ಕಣಜ. ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಸಾಕ್ಷೀಕರಿಸುವ ಜನಪದ ಕತೆಗಳ ಒಡಲಲ್ಲಿ ಮಾನವೀಯ ಮೌಲ್ಯಗಳು ತುಂಬಿಕೊಂಡಿ ರುತ್ತವೆ. ನಾಡು ಪ್ರಾದೇಶಿಕವಾಗಿ ಭಿನ್ನತೆ ಹೊಂದಿರುವಂತೆ ಆಯಾಯ ಪ್ರದೇಶಗಳಲ್ಲಿ ಸೃಷ್ಟಿಯಾಗುವ ಸಾಹಿತ್ಯವು ಭಿನ್ನವೂ, ವೈವಿಧ್ಯಮಯವೂ ಆಗಿರುವುದು ಸಹಜ. ಅದರಲ್ಲೂ ಜನಪದ ಕತೆಗಳು ಆ ಪ್ರದೇಶದ ನೆಲ ಮೂಲ ಜೀವನ, ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಿರುತ್ತವೆ. 'ತುಳುನಾಡಿನ ಜನಪದ ಕತೆಗಳು' ಕೃತಿಯಲ್ಲಿ ತುಳುನಾಡಿನ ಕೆಲವು ಮೂಲ ಜನಪದ ಕತೆಗಳನ್ನು ಸಂಗ್ರಹಿಸಿ ಯಥಾವತ್ತಾಗಿ ನೀಡುವ ಮೂಲಕ ತುಳುನಾಡಿನ ಜನಜೀವನ ಹಾಗೂ ಅಲ್ಲಿನ ಸಂಸ್ಕೃತಿಯ ವಿವಿಧ ಭಿತ್ತಿಗಳನ್ನು ಪರಿಚಯಿ ಸುವ ಅಗತ್ಯತೆಯನ್ನು ಲೇಖಕರು ಪೂರೈಸಿದ್ದಾರೆ. ಈ ಕೃತಿಯಲ್ಲಿ ಒಟ್ಟು ೩೨ ಜನಪದ ಕತೆಗಳಿದ್ದು, ತುಂಬ ಆಪ್ತವಾಗಿ ಓದಿಸಿಕೊಳ್ಳುತ್ತವೆ. ಒಂದೇ ತೆರೆನಾದ ಕತೆಗಳ ಆಯ್ಕೆ ಮಾಡಿಕೊಂಡರೂ, ಆಶಯಗಳ ದೃಷ್ಟಿಯಿಂದ ವೈವಿಧ್ಯಪೂರ್ಣವಾಗಿವೆ. ತುಳುನಾಡಿನ ಜನಪದ ಕತೆಗಳಲ್ಲಿ ಪುರುಷಪ್ರಧಾನ ಕತೆಗಳೇ ಹೆಚ್ಚು. ಈ ಕೃತಿಯು ಅದನ್ನು ಪುಷ್ಟೀಕರಿಸಿದರೂ, ಸ್ತ್ರೀಪ್ರಧಾನ ಹಾಗೂ ಸಾಮಾನ್ಯ ಕತೆಗಳೂ ಇಲ್ಲಿ ಸ್ಥಾನ ಪಡೆದು ಕೊಂಡಿವೆ. ಮೌಖಿಕ ಪರಂಪರೆಯಲ್ಲಿಯೇ ಮರೆಯಾಗಿ ಹೋಗಬಹುದಾದ ಕತೆಗಳು ಇಲ್ಲಿ ವಾಚಿಕನೆಲೆಗೆ ಒದಗುತ್ತಿರುವುದು ಅತ್ಯಂತ ಮಹತ್ವದ ಸಂಗತಿ. ಸಂಕೀರ್ಣ, ಸರಳ ಹಾಗೂ ಮಕ್ಕಳ ಕತೆಗಳು ಸೇರಿಕೊಂಡು, ಒಟ್ಟು ತುಳುನಾಡಿನ ಸಂಪದ್ಭರಿತ

ಜನಪದ ಸಂಸ್ಕೃತಿಯನ್ನು ದರ್ಶಿಸುವ ಪ್ರಯತ್ನ ಈ ಕೃತಿಯ ಮೂಲಕ ಸಾಧ್ಯವಾಗಿದೆ. ತುಳುನಾಡಿನ ಜನಪದ ಕಥಾ ಪ್ರಪಂಚವನ್ನು ಅರಿಯ ಹೊರಡುವ ಪಥಿಕರಿಗೆ ಒಂದು ಮಾರ್ಗವನ್ನು ಒದಗಿಸುವ ಮೌಲಿಕ ಕೃತಿಯನ್ನು ರಚಿಸಿ, ಮಹತ್ವದ ಕಾರ್ಯವನ್ನು ಆಗು ಮಾಡಿಕೊಟ್ಟ ಹಿರಿಯರಾದ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರು ಆದ ಪ್ರೊ. ಸ.ಚಿ. ರಮೇಶ್ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂಥ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ'ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ, ಸಿದ್ಧಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆಯುತ್ತಿರುವ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು, ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು, ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು

ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಕರ್ನಾಟಕವು ವೈವಿಧ್ಯಮಯ ಸಂಸ್ಕೃತಿಗೆ ಹೆಸರುವಾಸಿ. ಜನಾಂಗ, ಭಾಷೆ, ಉಡುಗೆ-ತೊಡುಗೆ, ಆಹಾರ ಪದ್ಧತಿ, ಆಚಾರ-ವಿಚಾರ, ಹಬ್ಬ-ಹರಿದಿನಗಳು, ಸಂಸ್ಕೃತಿ ಆಯಾಯ ಪ್ರದೇಶಗಳಿಗೆ ತಕ್ಕಂತೆ ಭಿನ್ನವೂ, ವೈವಿಧ್ಯಮಯವೂ ಆಗಿದ್ದು, ಆ ಪ್ರದೇಶದ ಅನನ್ಯತೆಯ ಕುರುಹುಗಳಾಗಿರುತ್ತವೆ. ನಾಡಿನ ವಿಶಿಷ್ಟ ಸ್ಥಳಗಳಲ್ಲಿ ಕರಾವಳಿ ಪ್ರದೇಶವು ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ. ತುಳುನಾಡಿನ ಜನಪದ ಸಂಸ್ಕೃತಿ ಕುರಿತು ಬೇಕಾದಷ್ಟು ಅಧ್ಯಯನಗಳು ಆಗಿವೆ ಮತ್ತು ಆಗುತ್ತಿವೆ. ಆದರೆ ಅಲ್ಲಿಯ ನೆಲಮೂಲ ಸಂಸ್ಕೃತಿಯನ್ನು ತಿಳಿಯಲು ಜನಪದ ಕತೆಗಳನ್ನೇ ಆಶ್ರಯಿಸಬೇಕಾಗುತ್ತದೆ. ತುಳುನಾಡಿನಲ್ಲಿ ಜನಪದ ಕಥಾಸಂಪತ್ತಿಗೆ ಕೊರತೆಯಿಲ್ಲ. ಅಂತಹ ಮೂಲಕತೆಗಳನ್ನು ಸಂಕಲಿಸುವ ಪ್ರಯತ್ನವನ್ನು ಹಿರಿಯ ಜಾನಪದ ವಿದ್ವಾಂಸರಾದ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರು ಮಾಡಿದ್ದಾರೆ. ಆ ಮೂಲಕ ತುಳುನಾಡಿನ ಜನಜೀವನ, ಅಲ್ಲಿನ ಸಂಸ್ಕೃತಿ ಪರಂಪರೆಯನ್ನು ದರ್ಶಿಸುವ 'ತುಳುನಾಡಿನ ಜನಪದ ಕತೆಗಳು' ಎಂಬ ಅಮೂಲ್ಯವಾದ ಮೌಖಿಕ ಜನಪದ ಕತೆಗಳ ಸಂಕಲನವನ್ನು ಕೊಟ್ಟಿದ್ದಾರೆ. ಈ ಸಂಕಲನದ ಎಲ್ಲ ಕತೆಗಳು ತುಳುನಾಡಿನ ಜನಪದ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತವೆ. ಅಷ್ಟೇ ಅಲ್ಲ, ತುಳುನಾಡಿನ ಜನಪದ ಕಥಾಪ್ರಪಂಚಕ್ಕೆ ರಹದಾರಿಯಾಗಬಲ್ಲ ಮತ್ತು ಅಧ್ಯಯನಾಸಕ್ತರಿಗೆ ಅನುಕೂಲವಾಗಬಲ್ಲ ಆಕರ ಕೃತಿಯಾಗಿದೆ. ಇಂತಹ ಅಮೂಲ್ಯವಾದ ಕೃತಿಯನ್ನು ನೀಡಿದ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರಿಗೆ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ್

ನಿರ್ದೇಶಕರು, ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಬೀಸಿತು ಪಡುವಣ ಕಡಲ ಗಾಳಿ

"ಸಾಹಿತ್ಯವಿಲ್ಲದ ಜೀವನವಿಲ್ಲ. ಜೀವನದ ತಿರುಳಲ್ಲಿ ಕೀಳು ಮೇಲೆಂದಿಲ್ಲ. ಎಲ್ಲ ಜೀವನವೂ ಅದ್ಭುತವಾದ ರಸಾಯನ, ಅದನ್ನು ಉಣ್ಣದವರಿಲ್ಲ. ಶಬ್ದ ಮಾತ್ರವಲ್ಲ ಕಾವ್ಯ, ಕವಿ ಮಾತ್ರವಲ್ಲ ಜೀವ. ಆದರೆ ಜೀವನವು ಆತ್ಮವಿದ್ದೂ ಅದರ ಅರಿವಿಲ್ಲದುದ ರಿಂದ, ಪರಿವೆ ಇಲ್ಲದುದರಿಂದ ತೊಳಲಿ ಬಳಲಿದಂತೆ ಬದುಕನ್ನು ಶ್ರದ್ಧೆಯಿಲ್ಲದ ಮಾನವ ಅಸಾರವತ್ತಾಗಿ ಕಾಣುತ್ತಿದ್ದಾನೆ. ಜಾನಪದ ಸಾಹಿತ್ಯದ ಅಂತಃಸ್ಫೂರ್ತಿಯು ಈ ಶ್ರದ್ಧೆಯಲ್ಲಿದೆ" ಎಂದಿದ್ದಾರೆ ಕವಿ ದ.ರಾ. ಬೇಂದ್ರೆ. ಈ ಜಗತ್ತಿನಲ್ಲಿ ಮಾನವನ ಸೃಷ್ಟಿ ಯಾವತ್ತು ನಡೆಯಿತೋ ಅಂದೇ ಜಾನಪದದ ಉಗಮವಾಯಿತು. ಮಾನವನ ಬೆಳವಣಿಗೆಯೊಂದಿಗೆ ಜಾನಪದವೂ ಮುಂದುವರಿಯಿತು. ಆದಿ ಮಾನವನ ಜೊತೆ ಯಲ್ಲಿಯೇ ನಡೆ–ನುಡಿ, ಆಚಾರ ವಿಚಾರ, ಆಹಾರ–ವಿಹಾರ, ನಂಬಿಕೆ–ನಡವಳಿಕೆಗಳು ಹುಟ್ಟಿಕೊಂಡವು. ಮಾನವನ ಜೊತೆ ಜೊತೆಯಾಗಿ ಆತನ ನಡಾವಳಿಗಳು, ನಂಬಿಕೆಗಳು ಆಚರಣೆಗಳು ಆಹಾರಪದ್ಧತಿ, ವೈದ್ಯಪದ್ಧತಿಗಳು, ಮನೋಲ್ಲಾಸಗಳು ಮುಂದುವರೆ ಯುತ್ತಾ ಬಂದಿದ್ದರೂ ಕೂಡ ಅದರ ಬಗ್ಗೆ ಯಾರೂ ವಿಶೇಷ ಗಮನಹರಿಸಿರಲಿಲ್ಲ. ಶಾಸ್ತ್ರ ಬಲದಿಂದಲೂ, ಸಂಸ್ಕೃತ ಪ್ರತಿಭೆಯಿಂದಲೂ ರಚಿತವಾದ ಶಿಷ್ಟ ಪ್ರೌಢ ಸಾಹಿತ್ಯವೇ ಸಾಹಿತ್ಯವೆಂದು ನಂಬಿದ್ದರು. ಹಳ್ಳಿಗಳಲ್ಲಿಯೂ, ಬೀದಿಗಳಲ್ಲಿಯೂ, ಮನೆಗಳಲ್ಲಿಯೂ, ಜನ ಸಾಮಾನ್ಯರು ಹಾಡಿಕೊಳ್ಳುವ ಹಾಡು, ಮಾತಾಡಿಕೊಳ್ಳುವ ಮಾತು, ಕುಣಿಯುತ್ತಿದ್ದ ಕುಣಿತಗಳು, ಹೇಳುತ್ತಿರುವ ಕತೆಗಳು, ಸಾಹಿತ್ಯವಲ್ಲವೆಂದು ಪಂಡಿತರ ಭಾವನೆಯಾಗಿತ್ತು. ಮಧುರ ಕವಿ ಇವನ್ನೇ ತನ್ನ ಕಾವ್ಯದಲ್ಲಿ "ಗೊರವರ ದುಂಡುಚಿಯೇ ಬೀದಿವರೆಯೆ ಬೀರನ ಕಥೆಯೇ?" ಎಂದು ಹಾಸ್ಯ ಮಾಡಿದ್ದೂ ಇದೆ. ಆದರೆ ಈ ಅಭಿಪ್ರಾಯಕ್ಕೆ ವಿರೋಧವಾಗಿ ಸಂಶೋಧಕರು, ವಿದ್ವಾಂಸರು "ಮೊದಲು ಹುಟ್ಟಿದುದು ಜನವಾಣಿ. ಅದು ಬೆಳೆದು ಪರಿಷ್ಕರಣಗೊಂಡು ಕವಿವಾಣಿಯಾಯಿತು. ಜನವಾಣಿ ಬೇರು, ಕವಿವಾಣಿ ಹೂವು. ಜನಸಾಮಾನ್ಯರಿಂದುದಯಿಸಿದ ಸಾಹಿತ್ಯವೇ ಎಲ್ಲ ಶಿಷ್ಟ ಸಾಹಿತ್ಯಗಳಿಗೂ ಮೂಲ" ಎಂಬ ಅಭಿಪ್ರಾಯವನ್ನು ಪ್ರಸ್ತುತ ವ್ಯಕ್ತಪಡಿಸುತ್ತಿದ್ದಾರೆ.

ಭಾರತದಲ್ಲಿ ಈ ಬಗೆಯ ಜನಸಾಮಾನ್ಯರ ಸಾಹಿತ್ಯದ ಕಡೆಗೆ ವಿದ್ವಾಂಸರ ಕಣ್ಣು ಹರಿಯುವ ಮೊದಲೇ ಯುರೋಪ್‌ಖಂಡದ ಹಲವಾರು ವಿದ್ವಾಂಸರು ಇಂತಹ ಬಾಯ್ದೆರೆ ಸಾಹಿತ್ಯದ ಸಂಗ್ರಹ ಕಾರ್ಯವನ್ನು ನಡೆಸಿ ಅಕ್ಷರಸ್ಥ ಜನರಿಗೆ ನೀಡಿ ಅದನ್ನು ಓದಿ ಸಂತೋಷ ಪಡೆವ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇಂಗ್ಲೆಂಡಿನ

ಹೆನ್ರಿ ಬೌರ್ನ್ ಎಂಬವನು ಇಂತಹ ನಡಾವಳಿಗಳನ್ನು ಸಂಗ್ರಹಿಸಿ "Popular antiquities" ಎಂಬ ಹೆಸರಿನಿಂದ ಪುಸ್ತಕದ ರೂಪದಲ್ಲಿ ತಂದರೆ ಜಾನ್ ಬ್ರ್ಯಾಂಡ್ (೧೭೪೪–೧೮೦೬) ಎಂಬವನು ಇದನ್ನು ಪರಿಷ್ಕರಿಸಿ ಪ್ರಕಟಿಸಿದನು. ಹೆನ್ರಿ ಎಲ್ಲೀಸ್ (೧೭೭೭–೧೮೫೯) ಎಂಬಾತನು ಇದನ್ನು ಮತ್ತಷ್ಟು ವಿಸ್ತರಿಸಿ ಮತ್ತು ಪರಿಷ್ಕರಿಸಿ ಬರೆದನು. ಇಂತಹ ವಾಙ್ಮಯ ಸಾಹಿತ್ಯದ ಸಂಗ್ರಹ ಕಾರ್ಯ ಜರ್ಮನಿಯಲ್ಲೂ ನಡೆಯಿತು. ಜರ್ಮನಿಯಲ್ಲಿ ಈ ಸಾಹಿತ್ಯವನ್ನು Volks kunde ಎಂದು ಕರೆದರು. ಆದರೆ ಇವರೆಲ್ಲರಿಗಿಂತ ಜಾನಪದ ವಿದ್ವಾಂಸರು ಹೆಚ್ಚು ಸ್ಮರಿಸಿಕೊಳ್ಳುವುದೆಂದರೆ ಜರ್ಮನಿಯ ಗ್ರಿಮ್ ಸಹೋದರರನ್ನು. ಜೇಕಬ್ ಗ್ರಿಮ್(೧೭೮೫–೧೮೬೩) ಮತ್ತು ಆತನ ಸಹೋದರ ವಿಲ್ ಹೆಲ್ಮ್ ಗ್ರಿಮ್(೧೭೮೬–೧೮೫೯) ಎಂಬವರಿಬ್ಬರು ಜೊತೆಯಾಗಿ ಅಪಾರ ಶ್ರಮ ವಹಿಸಿ ಬಹಳಷ್ಟು ಮೌಖಿಕ ಕತೆಗಳನ್ನು ಸಂಗ್ರಹಿಸಿ ಲೋಕ ಪ್ರಸಿದ್ಧರಾದರು. ವಿದ್ವಾಂಸರೂ, ಸಾಹಿತಿಗಳೂ, ಭಾಷಾಶಾಸ್ತ್ರಜ್ಞರೂ ಆದ ಇವರನ್ನು ಜನಪದ ಕತೆಗಳ ಪಿತಾಮಹರೆಂದೇ ಕರೆಯಲಾಗುತ್ತದೆ.

ಪ್ರಾಚೀನ ನಡಾವಳಿಗಳ ಬಗ್ಗೆ ಕೆಲವೊಂದು ಸಂಗ್ರಹಕಾರ್ಯ, ವಿಮರ್ಶೆ ಕಾರ್ಯಗಳು ನಡೆಯುತ್ತಿದ್ದರೂ ಕೂಡ ಇದನ್ನೊಂದು ಪ್ರಕಾರವನ್ನಾಗಿ ಯಾರೂ ವಿಂಗಡಿಸಿರಲಿಲ್ಲ. ಶಾಸ್ತ್ರವನ್ನಾಗಿ ಪರಿಗಣಿಸಿರಲಿಲ್ಲ. ಇದೊಂದು ಶಿಸ್ತು ಎಂದು ಪರಿಗಣಿಸಲ್ಪಟ್ಟದ್ದು ೧೮೪೬ರಿಂದ ಈಚೆಗೆ. ಇವನ್ನು Folklore ಎಂದು ಹೆಸರಿಸಿದವನು ಇಂಗ್ಲೆಂಡಿನ ವಿಲಿಯಮ್ಸ್ ಜಾನ್ ಥಾಮ್ಸ್(೧೮೦೩–೧೮೮೫). ಈ ಶಾಸ್ತ್ರಕ್ಕೆ ಆತ ಬಳಸಿದ ಪದವು ಆಕರ್ಷಣೀಯವಾಗಿದ್ದು ಶೀಘ್ರ ಚಲಾವಣೆಗೆ ಬಂತು. ಆತನ ಅಭಿಪ್ರಾಯದ ಪ್ರಕಾರ ಫೋಕ್‌ಲೋರ್ ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ಒಂದೇ ಉದ್ದೇಶ, ಧರ್ಮ, ವೃತ್ತಿ, ಭಾಷೆ ಅಥವಾ ಅಭಿಪ್ರಾಯಗಳನ್ನು ಹೊಂದಿದ ಜನರಲ್ಲಿರುವ ಜ್ಞಾನ. 'ದಿ ಅಥೀನಿಯಂ'(೨೬–೮–೧೮೪೬) ಇಂಗ್ಲಿಷ್ ಪತ್ರಿಕೆಯಲ್ಲಿ ತನ್ನ ಅಭಿಪ್ರಾಯವನ್ನು ಆತ ಪ್ರಕಟಿಸಿದ. ಮುಂದೆ ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಹಾ.ಮಾ. ನಾಯಕರ ನೇತೃತ್ವದಲ್ಲಿ ನಡೆದ ವಿದ್ವಾಂಸರ ಸಭೆಯಲ್ಲಿ ಫೋಕ್‌ಲೋರ್ ಎಂಬ ಪದಕ್ಕೆ ಸಂವಾದಿಯಾಗಿ 'ಜಾನಪದ' ಎಂಬ ಪದವನ್ನು ಬಳಸಿಕೊಳ್ಳಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಪರಂಪರಾಗತವಾಗಿ ಬಂದ ಧರ್ಮ, ಜಾತಿ, ಭಾಷೆ, ವೃತ್ತಿ ಇತ್ಯಾದಿ ವಿಷಯಗಳಲ್ಲಿ ಕನಿಷ್ಟ ಒಂದನ್ನಾದರೂ ಅನುಸರಿಸಿಕೊಂಡು ಬಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಜನರ ಗುಂಪು ಜನಪದ. ಈ ಜನಪದರಿಗೆ ಸಂಬಂಧಪಟ್ಟಂತೆ ಇರುವ ಎಲ್ಲಾ ವಸ್ತು ಮತ್ತು ವಿಷಯಗಳು ಜಾನಪದ. ಜಾನಪದಕ್ಕೆ ತನ್ನದೇ ಆದ ಕೆಲವೊಂದು ವಿಶಿಷ್ಟ ಲಕ್ಷಣಗಳಿವೆ. ಮೌಖಿಕ ಗುಣ, ಪ್ರಸರಣ ಗುಣ ಪಾಠಾಂತರಗಳನ್ನು ಹೊಂದಿರುವುದು, ಜೀವಂತ ಪಳೆಯುಳಿಕೆಯಾಗಿರುವುದು, ವ್ಯಷ್ಟಿಯಿಂದ ಸಮಷ್ಟಿಯೆಡೆಗೆ ಸಾಗುವುದು ಇತ್ಯಾದಿಗಳು ಜಾನಪದದ ಲಕ್ಷಣಗಳು.

ಮುಂದೆ ಜಾನಪದವು ಒಂದು ವಿಶೇಷ ಶಿಸ್ತು ಆಗಿ ಬೆಳೆಯಿತು. ಬಹಳಷ್ಟು ಜನ ವಿದ್ವಾಂಸರು ಈ ವಿಚಾರದಲ್ಲಿ ಸಂಶೋಧನೆಗಳನ್ನು ನಡೆಸಿದರು. ಕರ್ನಾಟಕದಲ್ಲಿಯೂ ಜಾನಪದ ವೈಜ್ಞಾನಿಕ ವಿವೇಚನೆ ನಡೆಯುತ್ತದೆ. ಜಾನಪದವು ಒಂದು ಶಾಸ್ತ್ರೀಯ ಅಧ್ಯಯನದ ವಿಷಯವಾಗಿದೆ. ಜಾನಪದದ ವಿಷಯಕ್ಕಾಗಿಯೇ ಕರ್ನಾಟಕದಲ್ಲೊಂದು ವಿಶ್ವವಿದ್ಯಾಲಯ ತೆರೆಯಲ್ಪಟ್ಟದ್ದು ಕರ್ನಾಟಕದ ಜನರೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಜಾನಪದವೆಂದರೆ ಒಂದು ಸಾಗರವಿದ್ದಂತೆ. ಇದನ್ನು ಪ್ರತ್ಯ-ಪ್ರತ್ಯೇಕವಾಗಿ ವಿಭಜನೆಗೊಳಿಸುವುದು ಸುಲಭವಲ್ಲ. ಯಾವುದೇ ಒಂದು ದೃಷ್ಟಿಯನ್ನಿಟ್ಟುಕೊಂಡು ವಿಭಜನೆಗೊಳಿಸುತ್ತಾ ಹೋದರೂ, ಒಂದು ವಿಭಾಗದಲ್ಲಿ ಬರುವ ವಿಷಯವು ಇನ್ನೊಂದು ವಿಭಾಗದ ವಿಷಯವನ್ನೊಳಗೊಂಡಿರುತ್ತದೆ ಅಥವಾ ಸಂಬಂಧವನ್ನು ಬೆಳೆಸಿಕೊಂಡಿರುತ್ತದೆ. ಬಹಳಷ್ಟು ಜನ ವಿದ್ವಾಂಸರು ಅವರದ್ದೇ ಆದ ಅಭಿಪ್ರಾಯವನ್ನಿಟ್ಟುಕೊಂಡು ಜಾನಪದವನ್ನು ತಮ್ಮ ತಮ್ಮ ದೃಷ್ಟಿಯಲ್ಲಿ ವಿಂಗಡಣೆಗೊಳಿಸುತ್ತಾ ಬಂದಿದ್ದಾರೆ. ರಿಚರ್ಡ್ ಡಾರ್ಸನ್ ಎಂಬ ಜಾನಪದ ವಿದ್ವಾಂಸನು ೧. ಮೌಖಿಕ ಸಾಹಿತ್ಯ ೨. ಭೌತಿಕ ಸಂಸ್ಕೃತಿ ೩. ಧಾರ್ಮಿಕ-ಸಾಮಾಜಿಕ ಆಚರಣೆಗಳು ಮತ್ತು ೪. ಪ್ರದರ್ಶನ ಕಲೆಗಳು ಎಂಬುದಾಗಿ ನಾಲ್ಕು ವಿಂಗಡನೆ ಮಾಡಿದ್ದಾನೆ. ಆತ ಈ ರೀತಿಯ ವಿಭಜನೆ ಮಾಡಿದ್ದರೂ ಕೂಡ ಒಂದು ಪ್ರಕಾರವು ಇನ್ನೊಂದರೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿರುವುದರಿಂದ ಖಂಡ-ತುಂಡಾಗಿ ಒಂದು ವಿಷಯವು ಇಂಥದ್ದೇ ಆಗಿದೆ ಎಂದು ಹೇಳಲು ಬರುವುದಿಲ್ಲ. ಉದಾಹರಣೆಗೆ, ಪ್ರದರ್ಶನ ಕಲೆಯ ಬಗ್ಗೆ ಹೇಳುವಾಗ ಅವುಗಳಲ್ಲಿ ಧಾರ್ಮಿಕ-ಸಾಮಾಜಿಕ ಆಚರಣೆಗಳೂ ಇವೆ. ಮೌಖಿಕ ಸಾಹಿತ್ಯವೂ ಅದನ್ನು ಒಳಗೊಂಡಿರುತ್ತದೆ. ಈ ಕಲೆಯಲ್ಲಿ ಬಳಸುವ ವೇಷ-ಭೂಷಣ, ಆಯುಧ-ಪರಿಕರವೆಲ್ಲ ಭೌತಿಕ ಸಂಸ್ಕೃತಿಗೆ ಒಳಪಟ್ಟದ್ದೇ ಆಗಿರುತ್ತದೆ. ಮೌಖಿಕ ಸಾಹಿತ್ಯದಲ್ಲಿ ಮುಖ್ಯವಾಗಿ ೧. ಜನಪದ ಕತೆಗಳು ೨. ಜನಪದ ಗೀತೆಗಳು ೩. ಐತಿಹ್ಯಗಳು ೪. ಗಾದೆಗಳು ೫. ಒಗಟುಗಳು ೬. ನಂಬಿಕೆಗಳು ಇತ್ಯಾದಿ ಒಳ ವಿಂಗಡನೆಗಳನ್ನು ಮಾಡಬಹುದು.

ಜನಪದ ಸಾಹಿತ್ಯದ ಪ್ರಮುಖ ಭಾಗವೇ ಜನಪದ ಕತೆಗಳು. ಇವು ಇಲ್ಲದ ಭಾಷೆ ಇಲ್ಲ, ಪ್ರದೇಶಗಳಿಲ್ಲ. ಎಲ್ಲಾ ಕಡೆಗಳಲ್ಲಿಯೂ ಪ್ರಚಾರದಲ್ಲಿರುತ್ತವೆ. ನಾಡಿನ ಹಳ್ಳಿಗಳಲ್ಲಿ ಅಸಂಖ್ಯಾತ ಕತೆಗಳು ಜನಜೀವನದ ಹಾಸುಹೊಕ್ಕಾಗಿರುತ್ತವೆ. ಇಂತಹ ಕತೆಗಳನ್ನು ನಮ್ಮಲ್ಲಿ ಅಜ್ಜಿ ಕತೆಗಳೆಂದು ಕರೆಯುತ್ತಿದ್ದರು. ಹಿಂದೆ ಇವುಗಳನ್ನು ಕೇಳುವುದರಿಂದ ಮನರಂಜನೆ ದೊರೆಯುತ್ತಿತ್ತು. ಮನುಷ್ಯ ಹಲ್ಲಿಯಾಗುವುದು, ಕೀಲುಕುದುರೆಯ ಮೇಲೆ ಕುಳಿತು ಆಕಾಶದಲ್ಲಿ ಹಾರುವುದು, ಹಣ್ಣು ತಿಂದೊಡನೆ ಮಂಗನ ರೂಪ ತಾಳುವುದು, ತಲೆಯ ಮೇಲೆ ಕೋಡು ಮೂಡುವುದು, ಇದೆಲ್ಲ ಕೇಳಿದ ಮಕ್ಕಳು ಸಂತೋಷ ಪಡುತ್ತಿದ್ದರು. ಜೊತೆಯಲ್ಲಿ ಮಕ್ಕಳಲ್ಲಿ ಮಾನವೀಯ ಗುಣಗಳು, ಧರ್ಮ,

ಬುದ್ಧಿ, ಸಾಹಸಪ್ರವೃತ್ತಿ ಬೆಳೆಯುತ್ತಿತ್ತು, ಜ್ಞಾನಾರ್ಜನೆ ಲಭಿಸುತ್ತಿತ್ತು. ಹಿಂದೆ ಇದ್ದ ಅವಿಭಕ್ತ ಕುಟುಂಬದ ಮನೆಗಳಲ್ಲಿ ಬಹಳಷ್ಟು ಸಂಖ್ಯೆಯ ಮಕ್ಕಳಿರುತ್ತಿದ್ದರು. ಈ ಮಕ್ಕಳ ಮನಸ್ಸನ್ನು ಸಂತುಷ್ಟಗೊಳಿಸುವ ಸಲುವಾಗಿ, ಕತೆಯ ಮೂಲಕ ಮನಸ್ಸನ್ನು ಕೇಂದ್ರೀಕರಿಸಿ ನಿದ್ರೆ ಮಾಡಿಸುವ ಸಲುವಾಗಿ ಮನೆಯ ಅಜ್ಜಿಯಂದಿರು ಪ್ರತಿ ಮನೆಗಳಲ್ಲೂ ಮುಸ್ಸಂಜೆಯಿಂದ ರಾತ್ರಿ ಉಂಡು ಮಲಗುವವರೆಗೆ ಕತೆಗಳನ್ನು ಹೇಳುವ ಪದ್ಧತಿಯನ್ನು ಬೆಳೆಸಿಕೊಂಡಿದ್ದರು. ಹಾಗಾಗಿ ಈ ಕತೆಗಳೆಲ್ಲ ಅಜ್ಜಿಕತೆಗಳಾಗಿವೆ. ಇವು ತಲೆಮಾರಿನಿಂದ ತಲೆಮಾರಿಗೆ ಬಾಯ್ದೆರೆಯಾಗಿ ಹರಿದು ಬಂದಿವೆ. (The Story which been handed down from generation to generation by word of mouth - Smith Thomson) ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಾಗುವ ಸಂದರ್ಭದಲ್ಲಿ ಇವು ಒಂದು ಊರಿನಿಂದ ಇನ್ನೊಂದು ಊರಿಗೂ ಪ್ರಯಾಣ ಬೆಳೆಸಿವೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಭಾಷಾಂತರಗೊಂಡಿವೆ. ಪಾಠಾಂತರಗೊಂಡಿವೆ.

ಜನಪದ ಕತೆಗಳ ಸ್ವರೂಪ ಹಾಗೂ ವರ್ಗೀಕರಣದಲ್ಲಿ ಬಹಳಷ್ಟು ಚರ್ಚೆಗಳು ನಡೆಯುತ್ತಲೇ ಇವೆ. ಯಾರ ಅಭಿಮತವನ್ನು ಕೂಡ ನಿರ್ದಿಷ್ಟವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಎಡ್ವಿನ್ ಸಿಡ್ನಿ ಹಾರ್ಟ್‌ಲಾಂಡ್ ಎಂಬಾತ ಈ ಕತೆಗಳನ್ನು ಸಾಗಾ(Saga) (ಸರಳ) ಕತೆಗಳು ಮತ್ತು ಮಾರ್ಷೆನ್(Marchen) (ಸಂಕೀರ್ಣ) ಕತೆಗಳೆಂದು ಎರಡು ವಿಭಾಗ ಮಾಡಿದ್ದಾನೆ. ಮೊದಲನೆಯ ಜಾತಿಯ ಕತೆಗಳು ಒಬ್ಬ ವ್ಯಕ್ತಿಯ ಅಥವಾ ಘಟನೆಗೆ ಸಂಬಂಧಪಟ್ಟ ಪುಟ್ಟ ಕತೆಯಾಗಿರುತ್ತದೆ. ಎರಡನೆ ಜಾತಿಯ ಕತೆಗಳು ದೀರ್ಘ ಕತೆಗಳಾಗಿದ್ದು, ಸಾಮಾನ್ಯವಾಗಿ ಒಂದು ಕತೆಯೊಳಗೆ ಇನ್ನಷ್ಟು ಕತೆಗಳು ಸೇರಿಕೊಂಡಿರುತ್ತವೆ. 'ಎನ್‌ಸೈಕ್ಲೋಪಿಡಿಯಾ ಆಫ್ ಬ್ರಿಟಾನಿಕಾ'ದಲ್ಲಿ ಜನಪದ ಕತೆಗಳನ್ನು ಪುರಾಣಗಳು, ಐತಿಹ್ಯಗಳು ಮನರಂಜಕಗಳೆಂದು ಮೂರು ವಿಭಾಗ ಮಾಡಲಾಗಿದೆ. ಸ್ಮಿತ್ ಥಾಮ್ಸನ್ ಎಂಬ ಜನಪದ ವಿದ್ವಾಂಸನು ಸಾಗಾ ಎಂದರೆ ಐತಿಹ್ಯಗಳು, ಕಿನ್ನರ ಕತೆಗಳು ಸಂಪ್ರದಾಯದ ಕತೆಗಳಾಗಿರುತ್ತವೆ. ಸತ್ಯ ಪ್ರತಿಪಾದನೆಯೇ ಇವುಗಳ ಉದ್ದೇಶ ಎಂದಿದ್ದಾನೆ. ಅದೇ ರೀತಿ ಮಾರ್ಷೆನ್ ಎಂದರೆ ಪ್ರಾಣಿ ಕತೆಗಳು, ಅತಿಮಾನುಷ ಕತೆಗಳು, ವಿನೋದ ಕತೆಗಳು, ತಂತ್ರದ ಕತೆಗಳು ಎಂದು ವಿವರಣೆ ನೀಡಿದ್ದಾನೆ. ಮಾಕ್ಸ್‌ಮುಲ್ಲರ್ ಜನಪದ ಕತೆಗಳನ್ನು ಪುರಾಣಗಳ ತುಣುಕುಗಳು ಎಂದಿದ್ದಾನೆ. ಇತ್ತೀಚಿನ ವರ್ಷಗಳಲ್ಲಿ ಜನಪದ ಕತೆಗಳ ವಿಂಗಡಣೆಯ ಬಗೆಗೆ ಬಾಗ್ಸ್ ಅವರು ಒಂದು ವಿಧಾನವನ್ನು ರೂಢಿಗೆ ತಂದರು. ಗುಂಪು, ಪಂಗಡ, ವರ್ಗ, ಪ್ರಕಾರ, ವಿಭಾಗ ಉಪವಿಭಾಗಗಳಾಗಿ ವಿಂಗಡಿಸುವ ಪ್ರಯತ್ನ ನಡೆಸಿದರು. ಜಾನಪದದ ಬಗೆಗೆ ಸಂಶೋಧನೆಗಳು ಬಹಳಷ್ಟು ಮುಂದುವರಿದಿವೆ. ಈ ಬಗೆಗೆ ಬಹಳಷ್ಟು ಕೆಲಸಗಳನ್ನು ನಡೆಸಿದ ಸ್ಮಿತ್ ಥಾಮ್ಸನ್ ಎಂಬ ಸಂಶೋಧಕರು, ಜಾನಪದವನ್ನು ವಿಧ(Type)ಗಳಾಗಿ ವಿಂಗಡಿಸಿ ಅದರ ಅತ್ಯಂತ ಚಿಕ್ಕ ಘಟಕ ಆಶಯ

(Motif) ಅಥವಾ ಪ್ರೇರಕಗಳೆಂದು ಹೆಸರಿಸಿದರು. ಜಾನಪದವನ್ನು ಸಂಗ್ರಹಿಸಿ ವಿಂಗಡಿಸಿ ಅವುಗಳಲ್ಲಿ ಬರುವ ಆಶಯಗಳನ್ನು ಗುರುತಿಸಿ ಅವುಗಳಿಗೆ ಕ್ರಮಸಂಖ್ಯೆಗಳನ್ನು ನೀಡಿ ಒಂದು ಕೋಶವನ್ನೇ ರಚಿಸಿದರು. Motif Index of Folk Literature ಎಂಬ ಈ ಗ್ರಂಥ ಜಾನಪದ ಅಧ್ಯಯನಕಾರರಿಗೆಲ್ಲ ಮಾರ್ಗದರ್ಶಕ ಗ್ರಂಥವಾಗಿದೆ.

ಜನಪದ ಕತೆಗಳ ವ್ಯಕ್ತಿ ಪಾತ್ರಗಳಲ್ಲಿ ವೈವಿಧ್ಯತೆ ಇದ್ದರೂ ಕ್ರಿಯೆಗಳು ಮಾತ್ರ ಸಾಮಾನ್ಯ. ಕ್ರಿಯೆಗಳ ಅನುವೃತ್ತಿ ಒಂದೇ ಗತಿಯಲ್ಲಿರುತ್ತದೆ. ರಚನೆಯ ದೃಷ್ಟಿಯಲ್ಲಿಯೂ ಒಂದೇ ವರ್ಗದವುಗಳಾಗಿರುತ್ತವೆ. ಕತೆಗಳು ಪ್ರಾರಂಭವಾಗುವ ಶೈಲಿಯಿಂದ ಅವುಗಳನ್ನು ಕಂಡುಕೊಳ್ಳಬಹುದು. ರಚನೆಯ ವಿಧಗಳು, ಆಶಯಗಳು ಜಗತ್ತಿನ ಎಲ್ಲಾ ದೇಶಗಳ, ಎಲ್ಲಾ ಭಾಷೆಗಳ ಜನಪದ ಕತೆಗಳಲ್ಲೂ ಏಕಪ್ರಕಾರವಾಗಿರುತ್ತವೆ.

ಜನಪದ ಕತೆಗಳು ಸರ್ವಸಜೀವ ವಾದ(animism)ವನ್ನು ಪ್ರತಿಪಾದಿಸುತ್ತವೆ. ಗಿಡಮರಗಳು, ಪ್ರಾಣಿ ಪಕ್ಷಿಗಳು ಕಲ್ಲು ಬಂಡೆಗಳು ಮಾತನಾಡುತ್ತವೆ. ಪುನರಾವರ್ತನೆ ಸರ್ವೇಸಾಮಾನ್ಯ. ಪಾತ್ರಗಳ ನಿರ್ವಹಣೆ ನೇರವಾಗಿರುತ್ತದೆ ಮತ್ತು ಸರಳವಾಗಿರುತ್ತದೆ. ಕತೆಗಳು ಯಾವತ್ತೂ ಸುಖಪ್ರದವಾಗಿ ಮುಕ್ತಾಯಗೊಳ್ಳುತ್ತವೆ. ಕತೆಯ ಕೇಂದ್ರಬಿಂದು ಯಾವುದೆಂದು ನಿರ್ಧರಿಸುವುದು ಕಷ್ಟ. ಇತ್ತೀಚೆಗೆ ಜಾನಪದ ವಿದ್ವಾಂಸರು ಜನಪದ ಕತೆಗಳ ಆಶಯಗಳ ಪಟ್ಟಿಗಳನ್ನು ಸಿದ್ಧಗೊಳಿಸಿ ಅದಕ್ಕೆ ಸಂಖ್ಯಾ ಸಂಕೇತಗಳನ್ನು ನೀಡಿ ವಿಮರ್ಶಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಆಶಯಗಳಿಗೆ ಅನುಸಾರವಾಗಿ ಕತೆಗಳನ್ನು ವಿಮರ್ಶಿಸಲು ಸುಲಭಸಾಧ್ಯವಾಗುತ್ತದೆ.

ಜನಪದ ಸಾಹಿತ್ಯ ಒಂದು ನಿರ್ದಿಷ್ಟ ಮತಾಚಾರಕ್ಕೆ ಮಾತ್ರ ಒಳಪಟ್ಟಿರುವುದಿಲ್ಲ. ಭಾಷೆ ಮತ್ತು ಅದರ ಉಪಭಾಷೆಗಳಿಗೂ ರೂಪಾಂತರಗೊಳ್ಳುತ್ತವೆ. ಕತೆಗಳ ಜೊತೆಗೆ ಗಾದೆಗಳು, ಒಗಟುಗಳು, ಹಾಸ್ಯಗಳು ಕೂಡ ಸಂಚರಿಸುತ್ತವೆ. ಕತೆಗಳು ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಿಗೆ ಅಥವಾ ಹಳ್ಳಿಪ್ರದೇಶಗಳಿಗೆ ಸಂಬಂಧಪಟ್ಟವುಗಳಾಗಿರುತ್ತವೆ. ಊರನ್ನಾಳುವ ಅರಸನು ಕೂಡ ಬೇಸಾಯ ಮಾಡುತ್ತಾನೆ, ಗದ್ದೆ ಉಳುತ್ತಾನೆ, ಗಾಳ ಹಾಕಿ ಮೀನು ಹಿಡಿಯುತ್ತಾನೆ. ಕತೆಗಳಲ್ಲಿ ಹೆಚ್ಚಾಗಿ ಕಿರಿಯವರು ಜಯಶೀಲರಾಗುತ್ತಾರೆ. ವೀರಾರಾಧನೆ ಕಂಡುಬರುತ್ತದೆ. ಜಾತಿಮತಗಳಲ್ಲಿ ಸಮಾನತೆ ಇರುತ್ತದೆ. ಕೀಳರಿಮೆ ಎಲ್ಲೂ ಕಂಡುಬರುವುದಿಲ್ಲ.

ಕೆಲವು ಜನಪದ ಕತೆಗಳು ಪುರಾಣದ ತುಣುಕುಗಳೆಂಬುದರಲ್ಲಿ ಸಂಶಯವಿಲ್ಲ. ಅಷ್ಟೇ ಅಲ್ಲ; ಗಣಪತಿ, ಶಿವ, ಸುಬ್ರಹ್ಮಣ್ಯ, ದೇವಿ ಮುಂತಾದ ದೇವತೆಗಳ ಕತೆಗಳೂ ಜಾನಪದದಲ್ಲಿ ಕಂಡುಬರುತ್ತವೆ. ಆದರೆ ಆ ಕತೆಗಳು ಮಹಾಕಾವ್ಯದ ಕವಿಗಳ ಕತೆಗಳಂತಿರುವುದಿಲ್ಲ. ಉದಾ: ತುಳು ಜಾನಪದ ರಾಮಾಯಣ ಕತೆಯಲ್ಲಿ ರಾಮ, ಸೀತೆ, ಲಕ್ಷ್ಮಣ ವನವಾಸದಲ್ಲಿರುತ್ತಾರೆ. ರಾಮ ಮತ್ತು ಸೀತೆ ಪರ್ಣಕುಟೀರದಲ್ಲಿ ಮಧ್ಯಾಹ್ನ ಉಂಡು ಮಲಗಿ ನಿದ್ದೆ ಮಾಡಿಕೊಂಡಿರುತ್ತಾರೆ. ವನಪ್ರದೇಶಕ್ಕೆ ಹೋದ

ಲಕ್ಷ್ಮಣ ಹಣ್ಣು ಹಂಪಲುಗಳನ್ನು ಕೊಯ್ದುಕೊಂಡು ಕುಟೀರಕ್ಕೆ ಬರುತ್ತಾನೆ. ಅವನು ಬಂದು ನೋಡುವಾಗ ಮಲಗಿರುವ ಸೀತೆಯ ಕುಪ್ಪಸದ ಗುಂಡಿಗಳು ಬಿಚ್ಚಿ ಹೋಗಿರುತ್ತವೆ. ಗುಂಡಿಹಾಕಬೇಕಾದರೆ ತನ್ನ ಕೈಯಿಂದ ಮುಟ್ಟಬೇಕಲ್ಲ. ಇದು ತಪ್ಪಾಗುವುದಿಲ್ಲವೇ ಎಂದು ಆಲೋಚನೆ ಮಾಡುತ್ತಾನೆ. ಸೀತೆ ತನ್ನ ತಾಯಿಗೆ ಸಮಾನವೆಂದು ಭಾವಿಸಿದ ಆತ ತನ್ನ ಹಲ್ಲಿನಿಂದ ಕಚ್ಚಿ ಎದೆಕಟ್ಟನ್ನೇ ಮೇಲಕ್ಕೆಳೆದು ಸರಿಪಡಿಸಿ ತೃಪ್ತಿಪಟ್ಟುಕೊಳ್ಳುತ್ತಾನೆ–ಇದು ವಾಲ್ಮೀಕಿಯ ಕಲ್ಪನೆಯಲ್ಲ. ಇದು ಜನಸಾಮಾನ್ಯರ ಕಲ್ಪನೆ. ತುಳು ಜಾನಪದದಲ್ಲಿ ಈಶ್ವರ ಕೊರಗನಾಗಿ ಒಂದು ಕೊರಗರ ಹೆಣ್ಣನ್ನು ಪ್ರೇಮಿಸುವ ಕತೆಯಿದೆ. ಪ್ರೇಮಿಗಳಿಬ್ಬರು ಒಟ್ಟು ಸೇರಿದಾಗ ಕೊರಗ ರೂಪದ ಶಿವನ ಮುಂದೆ ನಿಂತಿದ್ದ ಕೊರಪೊಳು(ಕೊರಗ ಜಾತಿಯ ಹೆಣ್ಣು) ಪಾರ್ವತಿ ತನ್ನ ನಿಜರೂಪ ತಾಳುತ್ತಾಳೆ. ಶಿವನ ಲಂಪಟತನವನ್ನು ಬಯಲಿಗೆಳೆಯುತ್ತಾಳೆ. ಜಾನಪದದ ಪ್ರಕಾರ ಗಣಪತಿ ಪಾರ್ವತಿಯ ಮಗನಲ್ಲ ಆತ ಮೈಸಗ ಎಂಬ ಯಕ್ಷಿಣಿಯ ಮಗ. ಆತನ ಮೊದಲ ಹೆಸರು ಬಾಮಕುಮಾರ. ರಾವಣ ರಾಮನೊಡನೆ ಯುದ್ಧಕ್ಕೆ ಹೋಗುವ ಮೊದಲು ಸೂರ್ಯ ದೇವರಿಗೆ ಅರ್ಘ್ಯ ಹಿಡಿಯುತ್ತಾನೆ. ಆಗ ಕಾಗೆಯೊಂದು ಕಾಕಾ ಎಂದು ಸುತ್ತು ಹಾರಾಡುತ್ತಾ ಬಂದು ಬೊಗಸೆಯಲ್ಲಿ ಹಿಡಿದಿರುವ ನೀರಿಗೆ ಮಲ ವಿಸರ್ಜನೆ ಮಾಡಿ ಅಪಶಕುನ ನುಡಿದು ಹಾರಿ ಹೋಗುತ್ತದೆ. ಕತೆಗಳಲ್ಲಿ ದೇವಕನ್ಯೆಯರು ಅಪ್ಸರೆಯರು, ಯಕ್ಷಿಣಿಯರು, ದೇವತೆಗಳು ಬರುವುದು ಸಾಮಾನ್ಯ. ಪುರಾಣದ ಕತೆಗಳಲ್ಲದೆ ಪ್ರಾಚೀನ ಕಥಾಗ್ರಂಥಗಳಾದ ಪಂಚತಂತ್ರದ ಕತೆಗಳು, ಕಥಾ ಸರಿತ್ಸಾಗರದ ಕಥೆಗಳು, ಅಕ್ಬರ್ ಬೀರ್‌ಬಲ್ಲರ ಕತೆಗಳು, ತೆನ್ನಾಲಿ ರಾಮಕೃಷ್ಣನ ಕತೆಗಳು ಇವೆಲ್ಲವು ಕೂಡ ಎಲ್ಲಾ ಭಾಷೆಯ ಜನಪದ ಕಥಾಕೋಶಕ್ಕೆ ಸೇರಿಹೋಗಿವೆ. ಇತ್ತೀಚೆಗಿನ ತುಳುನಾಡಿನಲ್ಲಿ ಪ್ರಚಲಿತವಿರುವ ರಾಂಪನ ಜೋಕುಗಳಂತಹ ಮೋಜಿನ ಕತೆಗಳು ಕೂಡ ಜನಪ್ರಿಯಗೊಂಡು ರೂಪಾಂತರ ಪಡೆದು ಜನಪದ ಕತೆಗಳಾಗಿವೆ.

ಕೆಲವು ಕತೆಗಳು ವ್ರತಕ್ಕೆ ಸಂಬಂಧಪಟ್ಟ ಮಹಿಮೆಯನ್ನು ಬಿತ್ತರಿಸುವ ಸಲುವಾಗಿ ಹುಟ್ಟಿಕೊಳ್ಳುತ್ತವೆ. ಉದಾ: ಸತ್ಯನಾರಾಯಣ ವ್ರತದ ಕತೆ, ಮಹಾಲಕ್ಷ್ಮಿ ವ್ರತದ ಕತೆ ಇತ್ಯಾದಿಗಳು. ಇದರಂತೆ ದಾಸರ, ಶಿವಶರಣರ, ಬಾಬಾರ ಕತೆಗಳು, ಪವಾಡಗಳೂ ಕೂಡ ಜನಪದ ಕತೆಗಳಾಗಿ ಮಾರ್ಪಾಡು ಗೊಂಡಿವೆ. ಸಹ್ಯಾದ್ರಿಯ ಪಶ್ಚಿಮ ತಪ್ಪಲಿನಿಂದ ಅರಬ್ಬೀ ಕಡಲ ತಡಿಯವರೆಗೆ ಕೇರಳದ ಕಾಸರಗೋಡಿನಿಂದ ಉಡುಪಿ ಜಿಲ್ಲೆಯ ಕಲ್ಯಾಣಪುರದವರೆಗೆ ಇರುವ ಭೂಭಾಗವನ್ನು ಸಾಂಸ್ಕೃತಿಕವಾಗಿ ತುಳುನಾಡು ಎನ್ನುತ್ತಾರೆ. ಇಲ್ಲಿನ ವ್ಯವಹಾರ ಭಾಷೆ ದ್ರಾವಿಡ ಪರಿವಾರಕ್ಕೆ ಸೇರಿದ ತುಳುವಿಗೆ ಬಹಳಷ್ಟು ಪ್ರಾಚೀನತೆ ಇದೆ. ತುಳುವಿನಲ್ಲಿ ವಿಪುಲವಾದ ಜಾನಪದ ಸಂಪತ್ತಿದೆ.

ಎಲ್ಲಾ ಭಾಷೆಗಳಲ್ಲಿರುವಂತೆ ತುಳುವಿನಲ್ಲೂ ಬಹಳಷ್ಟು ಕತೆಗಳಿವೆ. ಆದರೆ ಆಧುನಿಕ ಶಿಕ್ಷಣ, ಸಂಸ್ಕೃತಿ ನಾಗರಿಕತೆಯ ಪ್ರಭಾವದಿಂದಾಗಿ ಕತೆಗಳೆಲ್ಲಾ ನಶಿಸಿ ಹೋಗಿವೆ.

ಇದಕ್ಕೆ ಆಧುನಿಕ ಸಮಾಜದ ಜೀವನ ಪದ್ಧತಿಯೇ ಕಾರಣ. ಅವಿಭಕ್ತ ಕುಟುಂಬ ಪದ್ಧತಿ ಕಡಿಮೆಯಾಗುತ್ತಿರುವುದು, ಕೃಷಿ ವೃತ್ತಿಯಿಂದ ಕೈಗಾರಿಕೆಗೆ ಪರಿವರ್ತನೆಗೊಳ್ಳುವುದು ವಿಭಕ್ತ ಕುಟುಂಬದಲ್ಲಿ ತಂದೆ ತಾಯಿ ಇಬ್ಬರೂ ಉದ್ಯೋಗದಲ್ಲಿರುವುದು, ವೃದ್ಧ ಮಾತಾಪಿತರನ್ನು ಮಕ್ಕಳು ವೃದ್ಧಾಶ್ರಮಕ್ಕೆ ಸೇರಿಸುವುದು-ಕತೆಗಳ ನಾಶಕ್ಕೆ ಇವೆಲ್ಲಾ ಕಾರಣಗಳಾಗುತ್ತವೆ. ಈ ಆಧುನಿಕತೆಯ ಪ್ರಭಾವ ತುಳುನಾಡಿನ ಸಮಾಜದ ಮೇಲೆ ಇತರ ಕಡೆಗಳಿಗಿಂತ ಹೆಚ್ಚು ಪ್ರಭಾವ ಬೀರಿದೆ ಎಂದರೂ ಕೂಡ ತಪ್ಪಾಗಲಾರದು.

ಊಟ ಮಾಡದ ಮಕ್ಕಳನ್ನು ಉಣಿಸುವ ಸಲುವಾಗಿ, ನಿದ್ದೆ ಮಾಡದ ಮಕ್ಕಳನ್ನು ನಿದ್ದೆ ಮಾಡಿಸುವ ಸಲುವಾಗಿ ತಾಯಂದಿರು ಮಕ್ಕಳಿಗೆ ಕತೆಗಳನ್ನು ಹೇಳುತ್ತಿದ್ದರು. ದನ ಮೇಯಿಸುವ ಹುಡುಗರು ಕುಳಿತುಕೊಂಡು ತಮ್ಮೊಳಗೆ ಕತೆಗಳನ್ನು ಹೇಳಿ ಕೊಳ್ಳುತ್ತಿದ್ದರು. ರಾತ್ರಿ ಹೊತ್ತು ಗದ್ದೆ ತೋಟಗಳನ್ನು ಕಾಯುತ್ತಿರುವವರು ತಮ್ಮ ಅಟ್ಟಣಿಗೆಗಳಲ್ಲಿ ಮಲಗಿಕೊಂಡು ಕತೆ ಹೇಳಿಕೊಳ್ಳುತ್ತಿದ್ದರು. ನೇಜಿ ತೆಗೆಯುವಾಗ ಪಾಡ್ದನ ಹೇಳಲು ಬಾರದಿದ್ದರೆ ಯಾರಾದರೊಬ್ಬರು ಕತೆ ಹೇಳುತ್ತಿದ್ದರು. ಇನ್ನಿತರರು ಹೂಂಗುಟ್ಟುತ್ತಿದ್ದರು. ಹಿಂದೆ ಗುಂಪು ಗುಂಪಾಗಿ ಜನರು ತೀರ್ಥಯಾತ್ರೆಯನ್ನು ಕಾಲ್ನಡಿಗೆಯಲ್ಲಿ ಕೈಗೊಳ್ಳುತ್ತಿದ್ದರು. ಅವರು ರಾತ್ರಿ ಹೊತ್ತು ತಂಗಿದ ಜಾಗದಲ್ಲಿ ಕುಳಿತುಕೊಂಡು ಕತೆ ಹೇಳುತ್ತಿದ್ದರು. ಚಳಿಗಾಲದ ಹೊತ್ತಿಗೆ ಮನೆಯ ಮುದುಕರು ರಾತ್ರಿ ಹೊತ್ತಿನಲ್ಲಿ ಮನೆಯಂಗಳದಲ್ಲಿ ಅಗುಡೆ ಹಾಕಿ(ಕಟ್ಟಿಗೆ ರಾಶಿ ಹಾಕಿ ಬೆಂಕಿ ಕೊಟ್ಟು) ಅದರ ಸುತ್ತು ಮನೆಯ ಮಕ್ಕಳೊಂದಿಗೆ ಕುಳಿತು ಚಳಿ ಕಾಯಿಸುವ ಪದ್ಧತಿ ಇತ್ತು. ಆಗ ಅಜ್ಜಂದಿರು ಮಕ್ಕಳಿಗೆ ಕತೆ ಹೇಳುತ್ತಿದ್ದರು. ವಿದ್ಯುತ್ ಇಲ್ಲದ ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಮುಸ್ಸಂಜೆಯಾದೊಡನೆ ಊಟ ಮಾಡಿ ಮಲಗುವ ಪದ್ಧತಿ. ಮಲಗಿದ ತಕ್ಷಣ ಮಕ್ಕಳಿಗೆ ನಿದ್ದೆ ಬರುತ್ತಿರಲಿಲ್ಲ. ತಂದೆ-ತಾಯಿಯ ಜೊತೆ ಮಲಗಲು ಹಟ ಮಾಡುತ್ತಿದ್ದ ಮಕ್ಕಳನ್ನು ಆಕರ್ಷಿಸಲು ಅಜ್ಜಿಯಂದಿರು ಕತೆಗಳ ಆಮಿಷವೊಡ್ಡಿ ತಮ್ಮ ಚಾಪೆಗೆ ಕರೆಸಿಕೊಳ್ಳುತ್ತಿದ್ದರು. ಹೀಗೆ ಕತೆಗಳು ಪರಂಪರಾಗತವಾಗಿ ಮುಂದುವರಿಯುತ್ತಿದ್ದವು.

ಸಾಮಾನ್ಯವಾಗಿ ಜನಪದ ಕತೆಗಳು ಸುಖಾಂತ್ಯದ ಕತೆಗಳು. ಪ್ರತಿಯೊಂದು ಕತೆಯಲ್ಲೂ ಒಬ್ಬ ವೀರ ಮತ್ತೊಬ್ಬ ಆತನ ಎದುರಾಳಿ ರಾಕ್ಷಸನಿರುತ್ತಾನೆ. ಆತನನ್ನು ವೀರ ಯುವಕ ಯುವತಿಯರು ಉಪಾಯದಿಂದ ಗೆಲ್ಲುತ್ತಾರೆ. ಜಾನಪದದಲ್ಲಿ ೧, ೨, ೩, ೫, ೭, ೧೨, ೧೬, ೨೧ ಇವೆಲ್ಲ ಹೆಚ್ಚು ಬಳಕೆಯ(ಶುಭ) ಸಂಖ್ಯೆಗಳು. ಅರಸನಿಗೆ ಮೂವರು ಮಕ್ಕಳಿದ್ದರೆ ಅವರಲ್ಲಿ ಕೊನೆಯವನು ಗೆಲ್ಲುತ್ತಾನೆ. ಉಳಿದವರು ಸೋಲುತ್ತಾರೆ. ಇವೆಲ್ಲ ಜಾನಪದ ರೂಢಿಗಳು. ಕತೆಗಳನ್ನು ಕೇಳಲು ಕುಳಿತವರೆಲ್ಲರೂ ಮನೆಯ ಅತ್ಯಂತ ಕಿರಿಯವರಾದುದರಿಂದ ಅವರಲ್ಲಿ ಸಾಹಸ, ಧೀರೋದ್ಧಾತ ಗುಣಗಳನ್ನು ತುಂಬುವುದು ಇದರ ಉದ್ದೇಶ. ಕತೆ ಕೇಳುವುದರಿಂದ ಮಕ್ಕಳಲ್ಲಿ ವೀರಾರಾಧನೆಯ ಭಾವನೆ ಬೆಳೆಯುತ್ತದೆ.

ಜನಪದ ಕತೆಗಳು ನಾಡಿನ ಸಂಸ್ಕೃತಿಯ ಪ್ರತೀಕಗಳು, ಸಾರ್ವಜನಿಕ ನ್ಯಾಯವನ್ನು, ಬಂಧುತ್ವವನ್ನು ಉಳಿಸಿಕೊಳ್ಳಲು ಇವು ಮಾದರಿಯಾಗಿರುತ್ತವೆ. ಜಾನಪದ ಧರ್ಮವನ್ನು ಮೀರಿ ಅವು ಎಂದೂ ಮುಂದೆ ಸಾಗುವುದಿಲ್ಲ. ಇವುಗಳಲ್ಲಿ ಬಹಳಷ್ಟು ಉತ್ತಮವಾದ ಮಾನವೀಯ ಮೌಲ್ಯಗಳು ಅಡಗಿರುತ್ತವೆ. ಪ್ರಾಣಿದಯೆ, ಸತ್ಯಸಂಧತೆ, ಪರೋಪಕಾರ, ಉಪಕಾರಸ್ಮರಣೆ, ತ್ಯಾಗ, ಪ್ರೀತಿ, ಬಲಿದಾನ, ಮಮತೆ ಇವೆಲ್ಲವುಗಳೇ ಹೆಚ್ಚಿನ ಕತೆಗಳ ಆಶಯಗಳ ಮೂಲ ದ್ರವ್ಯಗಳಾಗಿವೆ. ಜೊತೆಗೆ ಪವಾಡ, ಮಂತ್ರ, ಮಾಟಮಾಯದ ಕತೆಗಳೂ ಇರುತ್ತವೆ. ಆದರೆ ಅದರ ಕೆಟ್ಟ ಪರಿಣಾಮವನ್ನು ಕತೆಗಳೇ ಹೇಳುತ್ತವೆ.

ಈ ಕಥಾ ಸಂಕಲನದಲ್ಲಿ ೩೨ ಕತೆಗಳನ್ನು ಪೋಣಿಸಲಾಗಿದೆ. ಅವುಗಳಲ್ಲಿ ಸಂಕೀರ್ಣ, ಸರಳ ಹಾಗೂ ಮಕ್ಕಳ ಕತೆಗಳು ಸೇರಿವೆ. ಕತೆಗಳ ವಿಧ(type) ಒಂದು ರೀತಿ ಇದ್ದರೂ ಬೇರೆ ಬೇರೆ ಆಶಯ(motif)ಗಳನ್ನು ಒಳಗೊಂಡವುಗಳನ್ನು ಆಯ್ಕೆ ಮಾಡಿ ಕೊಳ್ಳಲಾಗಿದೆ. ಇವುಗಳಲ್ಲಿ ಕೆಲವು ಸಂಕೀರ್ಣ ಕತೆಗಳು ನನ್ನ ಬಾಲ್ಯದಲ್ಲಿ ನನ್ನ ತಂದೆ ಪಿ. ನಾರಾಯಣ ಆಚಾರ್ಯರಿಂದ ಕೇಳಿ ತಿಳಿದ ಕತೆಗಳು. ಇನ್ನು ಕೆಲವು ಸಂಕೀರ್ಣ ಕತೆಗಳು ನನ್ನ ಮನೆಯ ಪರಿಸರದ ನಿವಾಸಿ ಚಲ್ಲಮೇರ ಹೇಳಿದ ಕತೆಗಳು. ಅವರಿಬ್ಬರೂ ಈಗ ತೀರಿಕೊಂಡಿದ್ದಾರೆ. ಉಳಿದವುಗಳು ಇನ್ನಿತರ ಹಿರಿ-ಕಿರಿಯರ ಬಾಯಿಯಿಂದ ಕೇಳಿದ ಕತೆಗಳು. ಬಾಲ್ಯದಲ್ಲಿ ನೆಂಟರ ಮನೆಗೆ ಹೋದಾಗ ಅಲ್ಲಿ ಕೇಳಿ ನೆನಪಿನಲ್ಲಿ ಉಳಿಸಿಕೊಂಡ ಕತೆಗಳೂ ಈ ಸಂಕಲನದಲ್ಲಿ ಸೇರಿವೆ.

ಜನಪದ ಕತೆಗಳ ಸಂಗ್ರಹಕಾರ್ಯ ಮತ್ತು ಅಧ್ಯಯನ ನಡೆಸಿದವರಲ್ಲಿ ಹಿರಿಯ ಜಾನಪದ ವಿದ್ವಾಂಸರಾದ ಡಾ. ಜಿ.ಶಂ. ಪರಮಶಿವಯ್ಯ ಪ್ರಮುಖರು. ಡಾ. ಸಂಧ್ಯಾ ರೆಡ್ಡಿಯವರು ಜನಪದ ಕತೆಗಳ ಬಗೆಗೆ ಸಂಶೋಧನಾತ್ಮಕ ಅಧ್ಯಯನ ನಡೆಸಿದ್ದಾರೆ. ಪ್ರೊ. ಅಂಬಳಿಕೆ ಹಿರಿಯಣ್ಣ ಅವರು ಕತೆಗಳ ರಾಚನಿಕ ಅಧ್ಯಯನ ವಿಧಾನದ ಬಗೆಗೆ ಸಂಶೋಧನೆ ನಡೆಸಿದ್ದಾರೆ. ಉಡುಪಿಯ ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರವು ಬಹಳಷ್ಟು ತುಳು ಜನಪದ ಕತೆಗಳನ್ನು ಸಂಗ್ರಹಿಸಿ ದಾಖಲಿಸಿಕೊಂಡಿದೆ.

"Folk tales from India - 1991" ಎಂಬುದು ಜಗತ್ತಿನ ೨೨ ಭಾಷೆಗಳ ೧೧೦ ಜನಪದ ಕತೆಗಳನ್ನೊಳಗೊಂಡ ಒಂದು ಬೃಹತ್ ಕಥಾಕೋಶ, ಪ್ರೊ. ಎ.ಕೆ. ರಾಮಾನುಜನ್ ಸಂಪಾದಿಸಿದ ಈ ಕಥಾಕೋಶದಲ್ಲಿ ನಾನು ಹೇಳಿದ ಎರಡು ತುಳು ಕತೆಗಳೂ ಸೇರಿವೆ. ಜಾನಪದ ವಿದ್ವಾಂಸ ಎ.ಕೆ. ರಾಮಾನುಜನ್ ಕತೆಗಳನ್ನು ಪುರುಷಪ್ರಧಾನ ಕತೆಗಳು, ಸ್ತ್ರೀಪ್ರಧಾನ ಕತೆಗಳು ಮತ್ತು ಸಾಮಾನ್ಯ ಕತೆಗಳೆಂದು ಮೂರು ವಿಭಾಗ ಮಾಡುತ್ತಾರೆ. ತುಳುನಾಡಿನ ಜನಪದ ಕತೆಗಳಲ್ಲಿ ಪುರುಷಪ್ರಧಾನ ಕತೆಗಳೇ ಹೆಚ್ಚು. ಈ ಗ್ರಂಥದಲ್ಲಿ ಪುರುಷಪ್ರಧಾನ ಕತೆಗಳು ಹೆಚ್ಚಾಗಿದ್ದರೂ ಅತ್ತೆ ಸೊಸೆ, ಕಳ್ಳನನ್ನು ವರಿಸಿದ ರಾಜಕುಮಾರಿ, ಕೀಲುಕುದುರೆ ಸವಾರನನ್ನು ವರಿಸಿದ ರಾಜಕುಮಾರಿ, ಉದ್ದ ಕೂದಲಿನ ಮಹಾರಾಣಿ ಮುಂತಾದ ಕೆಲವು ಸ್ತ್ರೀಪ್ರಧಾನ

ಕತೆಗಳು ಸೇರಿಕೊಂಡಿವೆ. ಯುರೋಪಿನ ಕತೆಗಳಲ್ಲಿ ಯಕ್ಷಿಣಿಯರ ಕತೆಗಳೇ ಹೆಚ್ಚಾಗಿರುತ್ತವೆ. ಈ ಸಂಕಲನದಲ್ಲಿಯೂ ಅಂತಹ ಕೆಲವು ಕತೆಗಳಿವೆ. ಪ್ರಾಣಿ ಪಕ್ಷಿಗಳ ಕತೆಗಳೂ ಇವೆ. ಜನಪದ ಕತೆಗಳು ಬುದ್ಧಿಗೆ ಮದ್ದು ಕೊಡುತ್ತವೆ. ಸಂಸ್ಕೃತಿಯ ಸಂಕೇತವಾಗಿವೆ. ಮಾನವೀಯತೆಯನ್ನು ಬೆಳಗುತ್ತವೆ. ಬದುಕಿಗೆ ರೂಪಕಗಳಾಗುತ್ತವೆ. ಕತೆಗಾರ ಶೀಲ, ಅಶ್ಲೀಲಗಳೆಂಬ ಭೇದ ತೋರಿಸದೆ ಕತೆಗಳನ್ನು ಹೇಳುತ್ತಾ ಹೋಗುತ್ತಾನೆ. ಎಲ್ಲವನ್ನೂ ಸಮಾನವಾಗಿ ನೋಡುವ ದೃಷ್ಟಿ ಆತನದ್ದು. ಆದುದರಿಂದ ಇವು ಲೋಕದೃಷ್ಟಿಯ ಒಂದೊಂದು ಚಿತ್ತಾರಗಳೆನ್ನಲು ಅಡ್ಡಿಯಿಲ್ಲ.

ಈ ಗ್ರಂಥದ ಅಕ್ಷರ ಸಂಯೋಜನೆ ಮಾಡಿಕೊಟ್ಟ ಚಿರಾಗ್ ಕಂಪ್ಯೂಟರ್‌ನ ಡಾ. ಕಿಶೋರ್‌ಕುಮಾರ್ ರೈ ಶೇಣಿಯವರಿಗೆ, ಅಂದವಾಗಿ ಪುಟವಿನ್ಯಾಸ ಮಾಡಿದ ಸವಿತ ಗ್ರಾಫಿಕ್ಸ್‌ನ ಶ್ರೀ ಜೆ. ಬಸವರಾಜ ಅವರಿಗೆ, ರೇಖಾಚಿತ್ರ ಬಿಡಿಸಿಕೊಟ್ಟ ಖ್ಯಾತ ಚಿತ್ರ ಕಲಾವಿದ ಉಡುಪಿಯ ಪಿ.ಎನ್. ಆಚಾರ್ಯ ಅವರಿಗೆ, ಪ್ರಕಟಣೆಗೆ ಅನುವು ಮಾಡಿಕೊಟ್ಟ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಡಾ. ಸಿ.ಎ. ಸೋಮಶೇಖರಪ್ಪ ಮತ್ತು ಮೌಲ್ಯಮಾಪನ ಕುಲಸಚಿವರು, ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರು ಆದ ಡಾ. ಸ.ಚಿ. ರಮೇಶ್ ಅವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್

ಪುತ್ತೂರು
ದಿನಾಂಕ : ೧.೨.೨೦೧೩

ಕತೆ ಹೇಳುವೆ ಕೇಳಿ... ಹೂಂಗುಟ್ಟಿರಿ

೧

ಕಾಮಸಂದಗೆ

ಒಂದು ಊರು, ಆ ಊರಿಗೊಬ್ಬ ಅರಸ, ಆ ಅರಸನಿಗೆ ಮೂವರು ಮಕ್ಕಳು, ಮೂರು ಜನ ರಾಜಕುಮಾರರು ವಿದ್ಯಾಭ್ಯಾಸ ಮಾಡಿದರು. ಯುದ್ಧ ವಿದ್ಯೆ ಕಲಿತರು. ಆಗ ಮೇಲಿನ ಮಿರ್ಲೋಕ[೧]ದಿಂದ ನೂಲು ಹಾಕಿ ನೂಲಿನಾಟ, ಚೆಂಡು ಹಾಕಿ ಚೆಂಡಿನಾಟ ಆಡಬೇಕೆಂಬ ಸ್ಪರ್ಧೆಗೆ ಕರೆ ಬಂತು. ಸಣ್ಣ ರಾಜಕುಮಾರ ಸ್ಪರ್ಧೆಗೆ ಹೊರಟ. ಆಗ ಅಣ್ಣಂದಿರು ತಡೆದರು. ನೂಲಿನಾಟ ಆಡಿ ಕೈ ಮುರಿದುಕೊಳ್ಳಬೇಡ, ಚೆಂಡಿನಾಟ ಆಡಿ ಕಾಲು ಮುರಿದುಕೊಳ್ಳಬೇಡ. ಹೋಗಬೇಡವೆಂದು ತಡೆದರು. ಆದರೆ ಸಣ್ಣವ ಕೇಳಲಿಲ್ಲ. ಮಿರ್ಲೋಕಕ್ಕೆ ಹೋದ. ಸ್ಪರ್ಧೆಗಳಲ್ಲಿ ಭಾಗವಹಿಸಿದ. ಎಲ್ಲದರಲ್ಲೂ ಗೆದ್ದು ಬಂಗಾರದ ಇನಾಮು ಪಡೆದುಕೊಂಡು ಹಿಂತಿರುಗಿದ.

ಆರು ತಿಂಗಳು ಕಳೆಯಿತು. ಕಡಲ ಮೇಲೆ ಹರದಾರಿ[೨] ದೂರ ನಡೆದುಕೊಂಡು ಹೋಗುವ ಒಂದು ಸ್ಪರ್ಧೆ ಬಂತು. ಸ್ಪರ್ಧೆಗೆ ಸಣ್ಣ ರಾಜಕುಮಾರ ಹೊರಟ. ದೊಡ್ಡವರು ತಡೆದರು. "ಕಡಲಲ್ಲಿ ನಡೆಯಲು ಹೋಗಿ ನೀರಲ್ಲಿ ಬಿದ್ದು ಮುಳುಗಿ ಸಾಯಬೇಡ" ವೆಂದರು. ಸಣ್ಣ ರಾಜಕುಮಾರ ಅವರ ಮಾತು ಕೇಳಲಿಲ್ಲ. ಸ್ಪರ್ಧೆಗೆ ಹೊರಟ. ಕಡಲ ಮೇಲೆ ಹರದಾರಿ ಮೀರಿ ಮತ್ತೆ ನಾಲ್ಕು ಮಾರು ನಡೆದ. ಸ್ಪರ್ಧೆಯಲ್ಲಿ ಗೆದ್ದದ್ದಕ್ಕೆ ರತ್ನದ ಪದಕ ಉಡುಗೊರೆ ಸಿಕ್ಕಿತು.

ಮತ್ತೆ ಆರು ತಿಂಗಳು ಕಳೆಯಿತು. ಮತ್ತೊಂದು ಸುದ್ದಿ ಬಂತು. ರಾಮರಾಜ್ಯ ಪಟ್ಟದಲ್ಲಿ ಕಾಮಸಂದಗೆ ಎಂಬ ರಾಜಕುಮಾರಿ, ಅವಳನ್ನು ವರಿಸಲು ಹೋದವರೆಲ್ಲ ಸೋತು ಅವಳ ತೋಟಕ್ಕೆ ನೀರೆರೆಯುತ್ತಿದ್ದಾರೆ. ಅವಳನ್ನು ಈವರೆಗೆ ಯಾರೂ ಗೆದ್ದವರಿಲ್ಲ. ಆಕೆಯನ್ನು ಗೆಲ್ಲಲು ಸಣ್ಣ ರಾಜಕುಮಾರ ಹೊರಟ. ಆಗ ಅಣ್ಣಂದಿರು ತಡೆದರು "ನಿನಗಿಂತ ಮೊದಲು ನಾನು ಮದುವೆಯಾಗಬೇಕಾದವ, ಆದುದರಿಂದ ನಾನು ಹೋಗುತ್ತೇನೆ" ಎಂದ. ತಮ್ಮ ಮಾತನಾಡಲಿಲ್ಲ. ದೊಡ್ಡಣ್ಣ ಹೊರಟವನು ಹೋಗಿ ಹೋಗಿ ಕಾಮಸಂದಗೆಯ ಅರಮನೆ ತಲುಪಿದ. ಬಂಗಾರದ ಕಣಜಕ್ಕೆ ಬಂಗಾರ ಹಾಕಿದ. ಮುತ್ತಿನ ಕಣಜಕ್ಕೆ ಮುತ್ತು ಹಾಕಿದ. ನಾಣ್ಯದ ಕಣಜಕ್ಕೆ ನಾಣ್ಯ ಹಾಕಿದ. ಕೈಕಾಲು ತೊಳೆದು ಒಳಗೆ ಹೋಗಿ ಕುಳಿತಾಗ ಊಳಿಗದ ಆಳುಗಳು

ಬಂದು ತಿನ್ನಲು ವೀಳ್ಯ ಕೊಟ್ಟರು. "ವೀಳ್ಯ ತಿಂದ ಬಳಿಕ ಒಳಗೆ ಹೋಗಿ ಅಡುಗೆ ಅಗ್ರಸಾಲೆಯಲ್ಲಿ ಶಯನ ಮಂಚವಿದೆ. ಅಲ್ಲಿ ಹೋಗಿ ಕುಳಿತುಕೊಳ್ಳಿ" ಎಂದರು. ರಾಜಕುಮಾರ ಹಾಗೆ ಮಾಡಿದ. ಮಂಚದಲ್ಲಿ ಕುಳಿತ ತಕ್ಷಣ ಬಾಗಿಲುಗಳು ಹಾಕಲ್ಪಟ್ಟವು. ರಾಜಕುಮಾರನಿಗೆ ಕೂತಲ್ಲಿಗೇ ನಿದ್ದೆ ತೂಗಿತು. ಅಷ್ಟರಲ್ಲಿ ಕೋಣೆಯ ನಾಲ್ಕು ಮೂಲೆಯಲ್ಲಿದ್ದ ನಾಲ್ಕು ಬೊಂಬೆಗಳು ಓಡಿ ಬಂದು ರಾಜಕುಮಾರನ ಕೆನ್ನೆಗೆ ಪಟಪಟನೆ ಹೊಡೆಯಲಾರಂಭಿಸಿದವು. ಪೆಟ್ಟು ತಡೆಯಲಾರದೆ ರಾಜಕುಮಾರ ಬಾಗಿಲು ತೆಗೆದು ಓಡಲಾರಂಭಿಸಿದ. ಆಗ ಕಾಮಸಂದಗೆಯ ಆಳುಗಳು ಆತನನ್ನು ಹಿಡಿದು ತಲೆ ಬೋಳಿಸಿ ಹೂವಿನ ಕೊಪ್ಪಳಕ್ಕೆ ನೀರು ಹಾಕಲು ನೇಮಿಸಿದರು.

ಆರು ತಿಂಗಳು ಕಳೆಯಿತು. ಹೋದ ದೊಡ್ಡಣ್ಣ ಹಿಂತಿರುಗಿ ಬರಲಿಲ್ಲ. ನಾನೊಮ್ಮೆ ಹೋಗಿ ನೋಡಿ ಬರುತ್ತೇನೆ ಎಂದು ಎರಡನೆಯವನು ಹೊರಟ.

ಎರಡನೆಯ ರಾಜಕುಮಾರನಿಗೂ ಮೊದಲನೆಯವನದೇ ಗತಿಯಾಯಿತು. ಮತ್ತೆ ಆರು ತಿಂಗಳು ಕಳೆಯಿತು. ಹೋದ ಅಣ್ಣಂದಿರು ಇಬ್ಬರೂ ಬರಲಿಲ್ಲ. ನಾನೊಮ್ಮೆ ಹೋಗಿ ನೋಡುತ್ತೇನೆ ಎಂದು ಕಿರಿಯ ರಾಜಕುಮಾರ ಕುದುರೆ ಏರಿ ಹೊರಟ.

ಕಿರಿಯ ರಾಜಕುಮಾರ ಒಂದು ಮೈದಾನದಿಂದ ಹಾದು ಹೋಗುತ್ತಿದ್ದ. ಅಲ್ಲಿ ದನಕಾಯುವ ಹುಡುಗರನೇಕರು ದನ ಮೇಯಿಸುತ್ತಾ ಇದ್ದರು. ರಾಜಕುಮಾರ ಹೋಗುತ್ತಾ ಇದ್ದಾಗ ದಾರಿಯ ಬದಿಯ ಕಮರಿಯೊಂದರಿಂದ "ಅಯ್ಯಯ್ಯೋ ನನ್ನನ್ನು ರಕ್ಷಿಸಿ" ಎಂಬ ಬೊಬ್ಬೆಯೊಂದು ಕೇಳುತ್ತಿತ್ತು. ಒಂದು ಕಕ್ಕೆ ಚಾಂಡಾಲ ಹಕ್ಕಿ ಮತ್ತು ಗೋವಳ ಹುಡುಗರು ಸೇರಿ ಒಬ್ಬ ರಕ್ಕಸನನ್ನು ಕಮರಿಯೊಳಗೆ ಹಾಕಿದ್ದರು. ಕಮರಿಯೊಳಗಿಂದ ರಕ್ಕಸ 'ರಕ್ಷಿಸಿ' ಎಂದು ಬೊಬ್ಬಿಡುತ್ತಿದ್ದ. ರಾಜಕುಮಾರ ಕಮರಿಯ ಬಳಿಗೆ ಬಂದು ಇಣುಕಿ ನೋಡಿ "ನಿನ್ನನ್ನು ನಾನು ಬದುಕಿಸಿದರೆ ನನ್ನನ್ನು ನೀನು ಕೊಲ್ಲದೆ ಬಿಡಲಾರೆ, ಆದುದರಿಂದ ನಿನ್ನನ್ನು ಬದುಕಿಸುವ ಗೋಜಿಗೆ ನಾನು ಬರಲಾರೆ" ಎಂದ. ಆಗ ರಕ್ಕಸ "ನನ್ನನ್ನು ಉಳಿಸಿದರೆ ನಿನಗೇನಾದರೂ ನಾನು ಉಪಕಾರ ಮಾಡಬಲ್ಲೆ, ನನ್ನನ್ನು ಬಿಟ್ಟು ಹೋದರೆ ಮುಂದೆ ನನ್ನಂತಹ ಹದಿನಾರು ಮಂದಿ ರಕ್ಕಸರಿದ್ದಾರೆ. ಅವರು ನಿನ್ನನ್ನು ಜೀವಂತ ಬಿಡಲಾರರು" ಎಂದನು. ರಾಜಕುಮಾರನು ತನ್ನ ತಲೆಯ ರುಮಾಲು ಬಿಚ್ಚಿ ಕಮರಿಗೆ ಇಳಿಸಿದನು. ರುಮಾಲನ್ನು ಹಿಡಿದುಕೊಂಡು ರಕ್ಕಸ ಮೇಲೆ ಬಂದ.

"ನನಗೆ ಕುಡಿಯಲು ನೀರು ಬೇಕು" ಎಂದು ರಕ್ಕಸ ಬೊಬ್ಬಿಟ್ಟ. "ಇಲ್ಲಿ ಮೈದಾನದಲ್ಲಿ ನಿನಗೆ ಎಲ್ಲಿಂದ ನೀರು ಕೊಡುವುದು?" ಎಂದ ರಾಜಕುಮಾರ, "ಹಾಗಾದರೆ ನಿನ್ನ ಕುದುರೆಯನ್ನು ನನ್ನ ಕಾಲಿನ ರೋಮಕ್ಕೆ ಕಟ್ಟು, ನನ್ನ ಹೆಗಲ ಮೇಲೆ ಏರಿ ನೀನು ಕುಳಿತುಕೋ ನಾನು ನಡೆದುಕೊಂಡು ಹೋಗುತ್ತೇನೆ. ದೂರದಲ್ಲಿ ಎಲ್ಲಿಯಾದರೂ ನೀರಿದ್ದರೆ ನೋಡಿ ಹೇಳು" ಎಂದ ರಕ್ಕಸ. ರಾಜಕುಮಾರ ಹಾಗೆ ಮಾಡಿದ. ರಕ್ಕಸನು

ನಡೆದುಕೊಂಡು ಹೋದ. ಬಹಳ ದೂರ ನಡೆದ ಮೇಲೆ ರಕ್ಕಸ "ನೀರು ಎಲ್ಲಿಯಾದರೂ ಕಾಣುತ್ತದೆಯೇ?" ಎಂದು ಕೇಳಿದ. "ದೂರದಲ್ಲಿ ಒಂದು ಹೊಗೆಯ ಹಾಗೆ ಕಾಣುತ್ತದೆ" ಎಂದ ರಾಜಕುಮಾರ. ರಕ್ಕಸ ಮತ್ತಷ್ಟು ದೂರ ನಡೆದ ಬಳಿಕ ಮತ್ತೊಮ್ಮೆ ರಾಜಕುಮಾರ ನೊಡನೆ "ನೀರು ಕಾಣಿಸುತ್ತಿದೆಯೇ?" ಎಂದು ಕೇಳಿದ. "ದೂರದಲ್ಲಿ ಒಂದು ಹಳ್ಳದ ಹಾಗೆ ಕಾಣುತ್ತದೆ" ಎಂದ ರಾಜಕುಮಾರ. ರಕ್ಕಸ ಮತ್ತಷ್ಟು ದೂರ ನಡೆದ ಬಳಿಕ ಸಮುದ್ರ ಕಂಡು ಬಂತು. ಸಮುದ್ರದ ಬದಿಯಲ್ಲಿ ರಕ್ಕಸ ರಾಜಕುಮಾರನನ್ನು ಕೆಳಗಿಳಿಸಿ "ಒಂದು ಗಾಡಿ ಅವಲಕ್ಕಿ, ಒಂದು ಗಾಡಿ ಬೆಲ್ಲ, ತಾ" ಎಂದ. ರಾಜಕುಮಾರ ಪೇಟೆಗೆ ಓಡಿಹೋಗಿ ಒಂದು ಗಾಡಿ ಬೆಲ್ಲ. ಒಂದು ಗಾಡಿ ಅವಲಕ್ಕಿ ತಂದು ಕೊಟ್ಟ. ಹೊಯಿಗೆಯ ಮೇಲೆ ಅವಲಕ್ಕಿ ಬೆಲ್ಲ ಕಲಸಿ ರಕ್ಕಸ ತಿಂದು ಮುಗಿಸಿದ. ಅರ್ಧ ಸಮುದ್ರದ ನೀರು ಕುಡಿದ ಅವನ ಹಸಿವೆ ಬಾಯಾರಿಕೆ ತಣಿಯಿತು.

"ನಿನ್ನೊಂದಿಗೆ ನಾನು ಇದೇ ವೇಷದಲ್ಲಿ ಬಂದರೆ ನನ್ನನ್ನು ನೋಡಿ ನಿನ್ನ ಬಳಿಗೆ ಯಾರೂ ಸುಳಿಯಲಾರರು. ನಾನು ನೊಣದ ರೂಪ ತಾಳಿ ನಿನ್ನ ಮೇಲೆ ಕುಳಿತುಕೊಂಡು ಬರುತ್ತೇನೆ. ನೀನು ಕುದುರೆ ಮೇಲೆ ಹೋಗು" ಎಂದ ರಕ್ಕಸ. ರಾಜಕುಮಾರ ಕುದುರೆ ಏರಿದ. ರಕ್ಕಸ ನೊಣದ ರೂಪ ತಾಳಿ ರಾಜಕುಮಾರನ ಹೆಗಲ ಮೇಲೆ ಕುಳಿತುಕೊಂಡ. ದಾರಿಯಲ್ಲಿ ಹೋಗುವಾಗ ರಾಜಕುಮಾರ ಹತ್ತು ಬಾಳೆ ಹಣ್ಣು ಕೊಂಡುಕೊಂಡ. ಸ್ವಲ್ಪ ಮುಂದೆ ಹೋಗುವಾಗ ಒಂದು ಮನೆಯ ಅಂಗಳದಲ್ಲಿ ಕೆಲವು ಮಕ್ಕಳು ಆಡುತ್ತಿದ್ದರು. ರಾಜಕುಮಾರ ಅವರೆಲ್ಲರನ್ನೂ ಕರೆದು ಬಾಳೆಹಣ್ಣು ಕೊಟ್ಟ. "ಇದು ಯಾರ ಮನೆ? ಎಂದು ಕೇಳಿದ, ಇದು ಕಾಮಸಂದಗೆಯ ಬಡಗಿಯ ಮನೆ" ಎಂದು ಮಕ್ಕಳು ಉತ್ತರಿಸಿದರು. "ಹಾಗಾದರೆ ಬಡಗಿಯನ್ನು ಕರೆಯಿರಿ" ಎಂದ ರಾಜಕುಮಾರ. "ಅವರಿಗೆ ಬರಲು ಕಣ್ಣು ಕಾಣುವುದಿಲ್ಲ" ಎಂದರು ಮಕ್ಕಳು. "ಹಾಗಾದರೆ ಅವನ ಹೆಂಡತಿಯನ್ನು ಕರೆಯಿರಿ" ಎಂದ ರಾಜಕುಮಾರ, ಮಕ್ಕಳು ಓಡಿ ಹೋಗಿ ಬಡಗಿಯ ಹೆಂಡತಿಯೊಡನೆ ಹೇಳಿದರು. ಹೆಂಡತಿ ಬಡಗಿಯನ್ನು ಕರೆದುಕೊಂಡು ಬಂದಳು. ಕಾಮಸಂದಗೆಯ ಕೋಣೆಯ ಒಳಗಿರುವ ನಾಲ್ಕು ಗೊಂಬೆಗಳನ್ನು ನನ್ನ ಗಂಡ ಮಾಡಿ ಕೊಟ್ಟಿದ್ದ. 'ಇನ್ನು ಇಂತಹ ಗೊಂಬೆಗಳನ್ನು ಅವರು ಬೇರೆಯವರಿಗೆ ಮಾಡಿಕೊಡಬಾರದೆಂದು ಆಕೆ ಅವರ ಕಣ್ಣು ಕೀಳಿಸಿ ಅವರಿಗೆ ಅಶನಾರ್ಥ ಕೊಡುತ್ತಿದ್ದಾಳೆ' ಎಂದಳು ಬಡಗಿಯ ಮಡದಿ. "ಕಾಮಸಂದಗೆಯ ಅರಮನೆ ಪ್ರವೇಶಿಸುವ ಉಪಾಯ ಹೇಗೆ?" ಎಂದು ರಾಜಕುಮಾರ ಬಡಗಿಯನ್ನು ಪ್ರಶ್ನಿಸಿದ. ಬಡಗಿ ಹೇಳುವುದಿಲ್ಲ ಎಂದ. ರಾಜಕುಮಾರ ಒಂದು ಸಾವಿರ ರೂಪಾಯಿ ಕೊಟ್ಟ, "ಇದು ನನಗೆ ಒಂದು ತಿಂಗಳ ಎಲೆಯಡಿಕೆ ಖರ್ಚಿಗೆ ಬರಲಾರದು" ಎಂದ ಬಡಗಿ. ರಾಜಕುಮಾರ ಎರಡು ಸಾವಿರ ರೂಪಾಯಿ ಕೊಟ್ಟ. "ಇದು ನನ್ನ ಕಾಫಿ ಖರ್ಚಿಗೆ ಬರಲಾರದು" ಎಂದ ಬಡಗಿ. ರಾಜಕುಮಾರ ಐದು ಸಾವಿರ ರೂಪಾಯಿ ಕೊಟ್ಟ "ಇದು ನನಗೊಮ್ಮೆ ಪೇಟೆ ತಿರುಗಿ ಬರುವ ಖರ್ಚಿಗೆ ಸಾಲದು" ಎಂದ ಬಡಗಿ.

ಕೂಡಲೇ ರಕ್ಕಸ ತನ್ನ ನಿಜರೂಪ ತಾಳಿ ರಾಜಕುಮಾರನ ಹೆಗಲಿನಿಂದ ಹಾರಿ ಬಡಗಿಯ ಕುತ್ತಿಗೆಯನ್ನು ಹಿಡಿದುಕೊಂಡ. "ಹೇಳುತ್ತೇನೆ ಬಿಡು ಬಿಡು" ಎಂದು ಬಡಗಿ ಬೊಬ್ಬೆ ಹೊಡೆದ. ಕಾಮಸಂದಗೆಯ ಅರಮನೆಗೆ ಪ್ರವೇಶಿಸುವ ಗುಟ್ಟು ಹೇಳಿಕೊಟ್ಟ. ರಾಜಕುಮಾರ ಅಲ್ಲಿಂದ ಹೊರಟ. ದಾರಿಯಲ್ಲಿ ನಾಲ್ಕು ಕಿತ್ತಳೆ ಹಣ್ಣು, ಒಂದು ಎಮ್ಮೆ ಕರು, ಒಂದು ಕೋಳಿ ಮೊಟ್ಟೆ ಒಂದು ಕತ್ತರಿ, ಕೊಬ್ರಿ ಚೂರು ಇವಿಷ್ಟನ್ನು ಕೊಂಡುಕೊಂಡ.

ಕಾಮಸಂದಗೆಯ ಅರಮನೆ ಪ್ರವೇಶಿಸುವಾಗ ಅಲ್ಲಿ ಬಂಗಾರದ ಕಣಜವಿತ್ತು. ಅದಕ್ಕೆ ಬಂಗಾರ ಹಾಕಿದ. ಮುತ್ತಿನ ಕಣಜಕ್ಕೆ ಮುತ್ತು ಸುರಿದ. ನಾಣ್ಯದ ಕಣಜಕ್ಕೆ ನಾಣ್ಯ ಸುರಿದ, ಕೈಕಾಲು ತೊಳೆದು ಒಳಗೆ ಕುಳಿತಾಗ ದಾಸಿ ತಂದು ವೀಳ್ಯದೆಲೆ ಕೊಟ್ಟಳು. ವೀಳ್ಯದೆಲೆ ತಿಂದಾದ ಬಳಿಕ ಅಡುಗೆ ಅಗ್ರಸಾಲೆಯಲ್ಲಿ ಶಯನ ಮಂಚವಿದೆ. ಅಲ್ಲಿ ಹೋಗಿ ಮಲಗಿ ಎಂದಳು. ರಾಜಕುಮಾರ ಅಲ್ಲಿ ಹೋಗಿ ಮಂಚದ ಮೇಲೆ ಕುಳಿತುಕೊಂಡ. ತಲೆಯ ಮೇಲೆ ನಾಲ್ಕು ಕಿತ್ತಳೆ ಹಣ್ಣು ಇಟ್ಟುಕೊಂಡ. ಅಷ್ಟಾಗುವಾಗ ನಾಲ್ಕು ಮೂಲೆಗಳಿಂದ ನಾಲ್ಕು ಗೊಂಬೆಗಳು ಓಡಿ ಬಂದವು. ಅದಕ್ಕೆ ರಾಜಕುಮಾರನ ತಲೆ ಮೇಲೆ ಕಿತ್ತಲೆ ಹಣ್ಣು ಕಂಡಿತು. ಅದರಲ್ಲಿ ಒಂದೊಂದನ್ನು ಕಿತ್ತುಕೊಂಡು ಹೋಗಿ ಮೂಲೆಯಲ್ಲಿ ಕುಳಿತು ತಿನ್ನತೊಡಗಿದುವು. ತಿಂದು ಮುಗಿದ ಬಳಿಕ ರಾಜಕುಮಾರನ ತಲೆಯ ಹೇನು ನೋಡಿಕೊಂಡು ಅವನನ್ನು ಮಲಗಿಸಿ ನಿದ್ರಿಸಿದವು.

ಮರುದಿನ ಬೆಳಗಾಯಿತು. ದಾಸಿ ಬಂದು ಕರೆದುಕೊಂಡು ಹೋಗಿ ಇನ್ನೊಂದು ಕೋಣೆಯಲ್ಲಿ ಕುಳ್ಳಿರಿಸಿದಳು. "ಕಾಮಸಂದಗೆಯ ಅಂತಃಪುರಕ್ಕೆ ಹೋಗಲು ಏಳು ಬಾಗಿಲುಗಳಿವೆ. ಅದರಲ್ಲಿ ಮೂರು ಬಾಗಿಲನ್ನು ತೆಗೆದು ಒಳಗೆ ಹೋಗಬೇಕು" ಎಂದು ಹೇಳಿ ಮೂರು ಬಾಗಿಲುಗಳನ್ನು ತೆಗೆದುಬಿಟ್ಟಳು.

ರಾಜಕುಮಾರ ನಾಲ್ಕನೇ ಬಾಗಿಲನ್ನು ತೆರೆದಾಗ ಒಂದು ದೊಡ್ಡ ಚಿರತೆ ಇವನನ್ನು ತಿನ್ನಲು ಬಂತು. ಆಗ ರಾಜಕುಮಾರ ಒಂದು ಎಮ್ಮೆಕರುವನ್ನು ಬಿಟ್ಟ, ಚಿರತೆ ಎಮ್ಮೆ ಕರುವನ್ನು ಕಚ್ಚಿಕೊಂಡು ಹೋಯಿತು. ಐದನೇ ಬಾಗಿಲು ತೆರೆದ, ಒಂದು ದೊಡ್ಡ ನಾಯಿ ಬಾಯಿ ಬಿಟ್ಟುಕೊಂಡು ಬಂತು. ಅದಕ್ಕೆ ಕೊಬ್ರಿ ಚೂರು ಹಾಕಿದ, ನಾಯಿ ಅದನ್ನು ಕಚ್ಚಿಕೊಂಡು ಹೋಯಿತು. ರಾಜಕುಮಾರ ಆರನೇ ಬಾಗಿಲು ತೆರೆದ, ಒಂದು ಸರ್ಪ ಬುಸುಗುಟ್ಟುತ್ತಾ ಬಂತು. ರಾಜಕುಮಾರ ಅದಕ್ಕೊಂದು ಕೋಳಿಮೊಟ್ಟೆ ಇಟ್ಟ; ಸರ್ಪ ಮೊಟ್ಟೆ ಕಚ್ಚಿಕೊಂಡು ಹೋಯಿತು. ರಾಜಕುಮಾರ ಏಳನೇ ಬಾಗಿಲು ತೆರೆದ. ಒಂದು ಗಂಡ ಕತ್ತರಿ ಕರಕರ ಶಬ್ದ ಮಾಡುತ್ತಾ ಬಂತು. ಅದರ ಬಾಯಿಗೊಂದು ಕತ್ತರಿ ಜೋಡಿಸಿದ. ಅದನ್ನು ಕಚ್ಚಿಕೊಂಡು ಕೆಳಗೆ ಬಿತ್ತು. ರಾಜಕುಮಾರ ಒಳಗಿನ ಕೋಣೆಯಲ್ಲಿ ಹೋಗಿ ಕುಳಿತುಕೊಂಡ.

ಅಲ್ಲಿಗೆ ಯಾರೂ ಮಾತನಾಡಿಸಲು ಬಾರದೇ ಇರುವುದನ್ನು ನೋಡಿ "ಕಾಮಸಂದಗೆ ಎಂಬವಳು ಬಹಳ ದೊಡ್ಡಸ್ತಿಕೆಯವಳಂತೆ, ಅವಳ ಕೇಳಿ ಮೂರ್ಲೋಕದಲ್ಲೂ ಹಬ್ಬಿದೆ, ಇಲ್ಲಿ ನೋಡಿದರೆ ಮಾತನಾಡುವವರೇ ಇಲ್ಲ. ವೀಳ್ಯ ಕೊಡುವವರೂ ಇಲ್ಲ" ಎಂದನು.

ಕೂಡಲೇ ಕಾಮಸಂದಗೆಯ ಉಡುಪು ಧರಿಸಿಕೊಂಡು ಆಕೆಯ ದಾಸಿ ವೀಳ್ಯದ ತಟ್ಟೆ ರಾಜಕುಮಾರನ ಕೈಗೆ ಕೊಟ್ಟು ಪಕ್ಕದಲ್ಲಿ ಕುಳಿತುಕೊಂಡಳು. ರಾಜಕುಮಾರ "ಉಗುಳುವ ಪಾತ್ರೆ ಪೀಕದಾನಿ ಎಲ್ಲಿ" ಎಂದು ಕೇಳಿದ. ಓಡಿ ಹೋಗಿ ಪಾತ್ರೆ ತಂದು ಕೊಟ್ಟಳು, ಇವಳು ಕಾಮ ಸಂದಗೆಯಲ್ಲವೆಂದು ರಾಜಕುಮಾರನಿಗೆ ಗೊತ್ತಾಯಿತು. ಆಕೆಗೆ ಕೈಯೆತ್ತಿ ಮೂರು ಪೆಟ್ಟು ಕೊಟ್ಟು ಅವಳನ್ನು ಕಳುಹಿಸಿದ.

ಪುನಃ ಸ್ವಲ್ಪ ಹೊತ್ತು ಕಳೆಯುವಾಗ "ಕಾಮಸಂದಗೆಯ ಹೆಸರು ಮೂರ್ಲೋಕದಲ್ಲೂ ಹಾರುತ್ತದೆ, ಆದರೆ ಇಲ್ಲಿ ಬಂದರೆ ಮಾತಾಡುವವರಿಲ್ಲ" ಎಂದನು. ಕೂಡಲೇ ಇನ್ನೊಬ್ಬಳು ಕಾಮಸಂದಗೆಯಂತೆ ಉಡುಪು ಧರಿಸಿ ರಾಜಕುಮಾರನ ಬಳಿ ಬಂದು ಕೂತಳು, "ಕಾಮಸಂದಗೆ ಬಹಳ ದೊಡ್ಡಸ್ತಿಕೆಯವಳಂತೆ, ಇಲ್ಲಿ ಕಸ ಗುಡಿಸಲಿಕ್ಕೂ ಜನ ಇಲ್ಲ" ಎಂದ ಕೂಡಲೇ ದಾಸಿ ಹಿಡಿಸೂಡಿ ಹಿಡಿದು ಕಸಗುಡಿಸಿ ಮೂಲೆ ಸೇರಿಸಿ ರಾಜಕುಮಾರನ ಬಳಿ ಕೂತಳು. ರಾಜಕುಮಾರನಿಗೆ ಆಕೆ ದಾಸಿ ಎಂಬುದು ಗೊತ್ತಾಯಿತು. ಆಕೆಗೆ ಮೂರು ಪೆಟ್ಟು ಕೊಟ್ಟು ಓಡಿಸಿದ.

ದಾಸಿ ಹೋದ ಮೇಲೆ ಕಾಮಸಂದಗೆಯ ತಾಯಿ ಬಂದು "ಒಳಗೆ ಅಗ್ರಸಾಲೆಯಲ್ಲಿ ಎರಡು ಶಯನ ಮಂಚವಿಟ್ಟಿದೆ. ಒಂದು ಮಂಚದಿಂದ ಇನ್ನೊಂದು ಮಂಚಕ್ಕೆ ಮೂರು ಕೋಲು ದೂರವಿದೆ. ನೀನು ಅಷ್ಟೊಂದು ಪರಾಕ್ರಮಿ ರಾಜಕುಮಾರನಾದರೆ ಮಂಚವನ್ನು ಮುಟ್ಟದೆ ಒಂದಕ್ಕೊಂದು ತಾಗಿ ನಿಲ್ಲುವ ಹಾಗೆ ಮಾಡಬೇಕು" ಎಂದು ಹೇಳಿ ಹೋದಳು. ರಾಜಕುಮಾರ ಅಗ್ರಸಾಲೆ ಪ್ರವೇಶಿಸಿದ. ಅಲ್ಲಿ ಎರಡು ಮಂಚ ವಿಟ್ಟಿದ್ದರು. ಎರಡು ಮಂಚಗಳ ನಡುವೆ ಒಂದು ತೆರೆ ಬಿಟ್ಟಿದ್ದರು. ಒಂದು ಮಂಚದಲ್ಲಿ ಹೋಗಿ ರಾಜಕುಮಾರ ಮಲಗಿದ. ಇನ್ನೊಂದರಲ್ಲಿ ಕಾಮಸಂದಗೆ ಮಲಗಿದ್ದಳು.

ರಾಜಕುಮಾರ ಮಲಗಿಕೊಂಡು "ಸುಮ್ಮನೆ ಮಲಗಿಕೊಳ್ಳುವ ಬದಲು ಒಂದು ಕತೆಯಾದರೂ ಹೇಳುತ್ತಿದ್ದೆ, ಹೂಂಗುಟ್ಟುವವರು ಯಾರು ಇಲ್ಲವಲ್ಲಾ" ಎಂದ. ಆಗ ನೊಣದ ರೂಪದಲ್ಲಿದ್ದ ರಾಕ್ಷಸ, ತೆರೆಯ ಮೇಲೆ ಕುಳಿತುಕೊಂಡು "ನಾನು ಹೂಂ ಗುಟ್ಟುತ್ತೇನೆ" ಎಂದ, ರಾಜಕುಮಾರ ಕತೆ ಪ್ರಾರಂಭಿಸಿದ.

"ಒಂದು ಸಲ ಒಬ್ಬ ಕುಂಬಾರ, ಒಬ್ಬ ನೇಕಾರ, ಒಬ್ಬ ಅಕ್ಕಸಾಲಿಗ, ಒಬ್ಬ ಬ್ರಾಹ್ಮಣ ನಾಲ್ಕು ಜನ ಕೂಡಿಕೊಂಡು ಯಾತ್ರೆಗೆ ಹೊರಟರು. ರಾತ್ರಿ ಹೊತ್ತಿನಲ್ಲಿ ಕ್ರಮವಾಗಿ ಒಬ್ಬೊಬ್ಬರು ಎರಡೆರಡು ಜಾವ ಎಚ್ಚರಿಕೆ ಇರುತ್ತಿದ್ದರು. ಮೊದಲ ಜಾವ ಕುಂಬಾರ ಎಚ್ಚರಿಕೆ ಕುಳಿತಾಗ ಮಣ್ಣಿನಿಂದ ಒಂದು ಅಂದವಾದ ಹುಡುಗಿಯ ಬೊಂಬೆ ಮಾಡಿದ. ಎರಡನೇ ಜಾವ ಆದ ಕೂಡಲೇ ನೇಕಾರನನ್ನು ಎಬ್ಬಿಸಿ ಆತ ಮಲಗಿದ. ನೇಕಾರ ಎದ್ದು ಅಂದವಾದ ಸೀರೆ ರವಿಕೆ ಮಾಡಿ ಗೊಂಬೆಗೆ ತೊಡಿಸಿದ. ಆತ ಮಲಗುವಾಗ ಅಕ್ಕಸಾಲಿಗನನ್ನು ಎಬ್ಬಿಸಿ ಮಲಗಿದ. ಅಕ್ಕಸಾಲಿಗ ಎದ್ದು ತಾಳಿ ಮೂಗುತಿ ಮಾಡಿ ಗೊಂಬೆಗೆ ಹಾಕಿದ. ನಂತರ ಬ್ರಾಹ್ಮಣ ಎದ್ದ ಅಕ್ಕಸಾಲಿಗ ಮಲಗಿದ, ಬ್ರಾಹ್ಮಣ ಆ

ಗೊಂಬೆಗೆ ಜೀವ ಕಲೆ ಕೊಟ್ಟ. ಅಷ್ಟರಲ್ಲಿ ಬೆಳಗಾಯಿತು. ಎಲ್ಲರೂ ಹುಡುಗಿ ನನಗೆ ನನಗೆ ಎಂದು ಗಲಾಟೆ ಮಾಡಿಕೊಂಡರು. ಈಗ ನೀನು ಹೇಳು ತೆರೆಯೇ ಯಾರನ್ನು ಆ ಹುಡುಗಿ ಮದುವೆಯಾಗಬೇಕು?" ಎಂದ ರಾಜಕುಮಾರ, ಕಾಮಸಂದಗೆ ಸಿಟ್ಟಿನಲ್ಲಿ "ಅಕ್ಕಸಾಲಿಗನನ್ನು ಮದುವೆಯಾಗಬೇಕೆಂದು ನಿನಗೆ ಗೊತ್ತಾಗುವುದಿಲ್ಲವೇ?" ಎಂದು ತೆರೆಯನ್ನು ಫರ್ರನೆ ಹರಿದಳು. ಹರಿದ ರಭಸಕ್ಕೆ ಮಂಚ ಒಂದು ಕೋಲು ಮುಂದೆ ಹೋಯಿತು.

"ಸುಮ್ಮನೆ ಮಲಗುವ ಬದಲು ಹೂಂಗುಟ್ಟುವವರಿದ್ದರೆ ಒಂದು ಕತೆಯಾದರೂ ಹೇಳಬಹುದಿತ್ತು" ರಾಜಕುಮಾರ ಪುನಃ ಶುರುಮಾಡಿದ. "ನಾನು ಹೂಂಗುಟ್ಟುತ್ತೇನೆ" ಎಂದು ನೊಣದ ರೂಪದಲ್ಲಿದ್ದ ರಕ್ಕಸ ಕಾಮಸಂದಗೆಯ ರವಕೆಯ ಮೇಲೆ ಕುಳಿತು ಕೊಂಡು ಹೇಳಿದ. ರಾಜಕುಮಾರ ಕತೆ ಹೇಳಲು ಪ್ರಾರಂಭಿಸಿದ.

ಒಂದೂರಿನಲ್ಲಿ ಒಬ್ಬ ಅರಸ. ಆ ಅರಸನಿಗೆ ಒಂದು ಗಂಡು ಮಗ, ಇನ್ನೊಬ್ಬಳು ಹೆಣ್ಣು ಮಗಳು. ಮಗಳು ಪ್ರಾಯಕ್ಕೆ ಬಂದಳು. ತಂದೆ ಹುಡುಗನೊಬ್ಬನನ್ನು ನೋಡಿ ಪಗ್ಗು ತಿಂಗಳ ಹದಿನೆಂಟನೇ ದಿನಕ್ಕೆ ಲಗ್ನ ನಿಶ್ಚಯ ಮಾಡಿದ. ಇದು ಹುಡುಗಿಯ ತಾಯಿಗೂ ಅಣ್ಣನಿಗೂ ಗೊತ್ತಿರಲಿಲ್ಲ. ತಾಯಿ ಮತ್ತೊಬ್ಬ ಹುಡುಗನನ್ನು ನೋಡಿ ಪಗ್ಗು ಹದಿನೆಂಟಕ್ಕೆ ಲಗ್ನ ನಿಶ್ಚಯ ಮಾಡಿದಳು. ಅದು ಉಳಿದವರಿಗೆ ಗೊತ್ತಿರಲಿಲ್ಲ. ಅಣ್ಣನೂ ಒಬ್ಬ ಹುಡುಗನನ್ನು ನೋಡಿ ಅದೇ ದಿನ ಅದೇ ಹೊತ್ತಿಗೆ ಲಗ್ನ ನಿಶ್ಚಯಿಸಿದ; ಅದು ಉಳಿದವರಾರಿಗೂ ಗೊತ್ತಿರಲಿಲ್ಲ.

ಪಗ್ಗು ಹದಿನೆಂಟರ ದಿನ ಬಂತು. ಮದುವೆಗೆ ಅಟ್ಟಣೆ ಆಯಿತು. ಆರು ಮುಡಿ ಗದ್ದೆಗೆ ಚಪ್ಪರ, ಮೂರು ಮುಡಿ ಗದ್ದೆಗೆ ಪೆರಿಯ ಚಪ್ಪರ ಹಾಕಿಸಿದರು, ಕಬ್ಬಿನ ಕಂಬ ಹಾಕಿಸಿದರು. ಪಂಚೋಲೆ ವೀಳ್ಯದಲ್ಲಿ ಚಪ್ಪರ ನೀಟ ಹೊದಿಸಿದರು. ಮಂಡೋಲೆ ಎಲೆಯಲ್ಲಿ ಅಡ್ಡ ಹೊದಿಸಿದರು. ಬೆಲ್ಲದ ಸಾರಣೆ ಸುಣ್ಣದ ಗಾರೆ ಹಾಕಿಸಿದರು. ದೂರದ ಊರಿಗೆ ಓಲೆ, ಊರವರಿಗೆ ಡಂಗುರ ಸಾರಿಸಿದರು. ನೆರೆಕರೆಯವರಿಗೆ ವೀಳ್ಯ ಕೊಟ್ಟು ಹೇಳಿದರು. ನೆಂಟರು ಕೂಡಿದರು. ಚಪ್ಪರ ತುಂಬಿತು. ಅಷ್ಟು ಹೊತ್ತಿಗೆ ಮೂರು ಕಡೆಯಿಂದಲೂ ದಿಬ್ಬಣ ಬಂತು. ಈಗ ಹುಡುಗಿಗೆ ಸಂಗತಿ ಗೊತ್ತಾಯಿತು. ನನ್ನ ಮದುವೆಯಿಂದಾಗಿ ತಂದೆ ತಾಯಿ ಅಣ್ಣ ಜಗಳ ಮಾಡಿಕೊಳ್ಳುವುದು ಬೇಡವೆಂದು ಒಂದು ಉಪಾಯ ಮಾಡಿದಳು. ರಾತ್ರಿ ಹೊತ್ತು ಬೆಳಕು ಸಾಕಾಗುವುದಿಲ್ಲವೆಂದು ಅಂಗಳದಲ್ಲಿ ದೊಡ್ಡ ಕಟ್ಟಿಗೆ ರಾಶಿ ಹಾಕಿ ಬೆಂಕಿ ಕೊಡುವಂತೆ ಕೆಲಸದವರಿಗೆ ಹೇಳಿದಳು. ಕಟ್ಟಿಗೆಗೆ ಸರಿಯಾಗಿ ಬೆಂಕಿ ಹಿಡಿದಾಗ ಬೆಂಕಿಗೆ ಹಾರಿ ಪ್ರಾಣ ಬಿಟ್ಟಳು. ಮೂವರು ಮದುಮಗಂದಿರಲ್ಲಿ ಒಬ್ಬ ಅವಳೊಟ್ಟಿಗೇ ಹಾರಿ ಪ್ರಾಣ ಕಳೆದುಕೊಂಡ. ಇನ್ನೊಬ್ಬ ತಲೆಗೆ ಕೈ ಇಟ್ಟು ಬಾವಿದಂಡೆ ಮೇಲೆ ಕುಳಿತುಕೊಂಡ. ಮೂರನೆಯವ ಬದುಕಿಸಲು ಏನಾದರೂ ಉಪಾಯವಿದೆಯೋ ನೋಡೋಣವೆಂದು ಪಂಡಿತರಲ್ಲಿಗೆ ಹೊರಟ.

ಅಷ್ಟರಲ್ಲಿ ಎರಡನೆಯವನು "ನೀನು ಅಷ್ಟು ದೂರವಿರುವ ಪಂಡಿತರಲ್ಲಿ ಹೇಗೆ ಹೋಗಿ ಬರುತ್ತಿಯಾ? ನನ್ನಲ್ಲಿ ಒಂದು ಕಂಬಳಿ ತುಂಡಿದೆ. ಅದರಲ್ಲಿ ಕುಳಿತುಕೊ ಅದು ನಮ್ಮನ್ನು ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಪಂಡಿತರಲ್ಲಿ ಕೊಂಡೊಯ್ಯುತ್ತದೆ" ಎಂದು ಹೇಳಿ, ತನ್ನ ಕಂಬಳಿಯಲ್ಲಿ ಕುಳ್ಳಿರಿಸಿಕೊಂಡು "ಪಂಡಿತರಲ್ಲಿಗೆ ಜಾವ್‌ಕಂಬಳಿ" ಎಂದ. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಇಬ್ಬರೂ ಪಂಡಿತರ ಮನೆ ಬಾಗಿಲು ಸೇರಿದರು.

ಪಂಡಿತರಲ್ಲಿ ಹೋಗುವಾಗ ಪಂಡಿತರು ಅನ್ನಕ್ಕೆ ಎಸರಿಟ್ಟು ಊಟಕ್ಕೆ ಸಿದ್ಧತೆ ಮಾಡುತ್ತಿದ್ದರು. ಓಡಿಕೊಂಡು ಬಂದ ರಾಜಕುಮಾರರೊಡನೆ "ಸ್ವಲ್ಪ ಕುಳಿತುಕೊಳ್ಳಿ ನಿಮಗೊಂದು ಪದಾರ್ಥ ಮಾಡಿ ಊಟ ಬಡಿಸಿ ಬಿಡುತ್ತೇನೆ, ಉಂಡು ಹೋಗಿ" ಎಂದರು. ರಾಜಕುಮಾರ ಎಷ್ಟು ಬೇಡವೆಂದರೂ ಪಂಡಿತರು ಕೇಳಲಿಲ್ಲ. ಅಲ್ಲೊಂದು ಮಗು ಹರಿದಾಡಿಕೊಂಡು ಬಂತು. ಚಂದವಾದ ಮಗುವನ್ನು ಹಿಡಿದುಕೊಂಡು ಮಾಂಸ ಮಾಡಿ ಪದಾರ್ಥ ಮಾಡಿದರು. ಮಗುವಿನ ಮೂಳೆಗಳನ್ನು ಮೂಲೆಯಲ್ಲಿ ರಾಶಿ ಹಾಕಿದರು. ರಾಜಕುಮಾರನನ್ನು ಊಟಕ್ಕೆಬ್ಬಿಸಿದರು. ರಾಜಕುಮಾರ ಅದನ್ನು ನೋಡಿ ಊಟಕ್ಕೊಪ್ಪಲಿಲ್ಲ. "ಮಗುವನ್ನು ಬದುಕಿಸದ ಹೊರತು ನಾವು ಊಟ ಮಾಡುವುದಿಲ್ಲ" ವೆಂದ. ಕೂಡಲೇ ಪಂಡಿತರು ತೋಟಕ್ಕೆ ಹೋಗಿ ಒಂದು ಹಿಡಿ ಸೊಪ್ಪು ತಂದು ಅದನ್ನು ಮಗುವಿನ ಮೂಳೆಗಳ ಮೇಲೆ ಹಿಂಡಿದರು. ಮಗು ಮೊದಲಿನಂತೆ ಎದ್ದು ಕುಳಿತು ಹರಿದಾಡಿಕೊಂಡು ಬಂತು. ತಕ್ಷಣ ರಾಜಕುಮಾರ ಆ ಸೊಪ್ಪನ್ನು ಪಂಡಿತರ ಕೈಯಿಂದ ಎಳೆದುಕೊಂಡು ಕಂಬಳಿ ಏರಿದ. ಇಬ್ಬರೂ ಕಂಬಳಿ ಮೇಲೆ ನಿಂತುಕೊಂಡರು. ರಾಜಕುಮಾರ ಬಂದು ಮದುಮಗಳ ಚಿತೆಯ ಮೇಲೆ ಸೊಪ್ಪಿನ ರಸ ಹಿಂಡಿದ. ಸತ್ತು ಹೋದ ಮದುಮಗ ಮದುಮಗಳು ಎದ್ದು ನಿಂತರು. ಈಗ ಮೂವರು ಮದುಮಗಂದಿರೊಳಗೆ "ಯಾರು ಆಕೆಯನ್ನು ಮದುವೆಯಾಗಬೇಕು?" ಎಂದು ರಾಜಕುಮಾರ ರವಿಕೆಯೊಡನೆ ಕೇಳಿದ. "ಮದ್ದು ತಂದವನನ್ನು" ಎಂದಿತು ರವಿಕೆ. "ಮದ್ದು ತಂದವ ತಂದೆಗೆ ಸಮಾನ" ಎಂದ ರಾಜಕುಮಾರ, "ಜಾರು ಕಂಬಳಿಯನನ್ನು" ಎಂದಿತು ರವಿಕೆ. "ಚಿತೆಗೆ ಹಾರಿ ಹುಡುಗಿಯೊಂದಿಗೆ ಪ್ರಾಣ ಬಿಟ್ಟವನನ್ನು ಎಂದು ಹೇಳಲು ಗೊತ್ತಾಗುವುದಿಲ್ಲವೇ ನಿನಗೆ" ಎಂದು ಹೇಳಿ ಕಾಮಸಂದಗೆ ರವಿಕೆಯನ್ನು ಫರ್ರನೆ ಹರಿದಳು. ಹರಿದ ರಭಸಕ್ಕೆ ಮಂಚ ಒಂದು ಕೋಲು ಮುಂದೆ ಹೋಯಿತು.

"ಸುಮ್ಮನೆ ಕುಳಿತುಕೊಳ್ಳುವುದಕ್ಕಿಂತ ಹೂಂಗುಟ್ಟುವವರಿದ್ದರೆ ಒಂದು ಕತೆಯಾದರೂ ಹೇಳಬಹುದಿತ್ತು" ಎಂದು ರಾಜಕುಮಾರ ಪ್ರಾರಂಭಿಸಿದ. "ನಾನು ಹೂಂಗುಟ್ಟುತ್ತೇನೆ" ಎಂದು ನೊಣದ ರೂಪದಲ್ಲಿ ಕಾಮಸಂದಗೆಯ ಸೀರೆ ಮೇಲೆ ಕುಳಿತ ರಕ್ಕಸ ಉತ್ತರಿಸಿದ. ರಾಜಕುಮಾರ ಕತೆ ಪ್ರಾರಂಭಿಸಿದ.

ಒಬ್ಬ ರಾಜನಿಗೆ ಒಬ್ಬಳೇ ಮಗಳು. ಆಕೆ ಶಾಲೆಗೆ ಹೋಗುವ ಸಂದರ್ಭದಲ್ಲಿ ಮದುವೆಗೆ ಮೊದಲು ನಿಮ್ಮ ಕೈ ಮುಟ್ಟಿ ಹೋದೇನೆಂದು ಗುರುಗಳೊಡನೆ ಶಪಥ

ಹಾಕಿಕೊಂಡಳು. ಹುಡುಗಿ ಶಾಲೆ ಬಿಟ್ಟಳು. ಹುಡುಗಿಗೆ ಮದುವೆ ನಿಶ್ಚಯವಾಯಿತು. ಮಧ್ಯರಾತ್ರಿ ಮೂತ್ರಶಂಕೆಗೆಂದು ಹೇಳಿ ಮನೆಯಿಂದ ಹೊರಟಳು. ಗುರುವಿನ ಮನೆಯ ದಾರಿ ಹಿಡಿದಳು. ದಾರಿಯಲ್ಲಿ ಒಬ್ಬ ಕಳ್ಳ ಇದಿರಾದ "ನಿನ್ನ ಆಭರಣಗಳನ್ನೆಲ್ಲಾ ಕೊಡು" ಎಂದ "ನಾನು ಅತೀ ಅಗತ್ಯದ ಕೆಲಸದ ಮೇಲೆ ಹೋಗುತ್ತಿದ್ದೇನೆ, ಬರುವಾಗ ಬರುತ್ತೇನೆ" ಎಂದಳು. ಕಳ್ಳ ಒಪ್ಪಿಕೊಂಡ. ಸ್ವಲ್ಪ ಮುಂದೆ ಹೋಗುವಾಗ ಒಂದು ಹುಲಿ ಇದಿರಾಯಿತು. "ನಿನ್ನನ್ನು ಹಿಡಿದು ತಿನ್ನುತ್ತೇನೆ" ಎಂದಿತು "ನಾನೊಂದು ಅಗತ್ಯದ ಕೆಲಸದಲ್ಲಿ ಹೋಗುತ್ತಿದ್ದೇನೆ, ಬರುವಾಗ ಬರುತ್ತೇನೆ" ಎಂದಳು. ಹುಲಿ ಅದಕ್ಕೆ ಒಪ್ಪಿಕೊಂಡಿತು. ಸ್ವಲ್ಪ ಮುಂದೆ ಹೋಗುವಾಗ ಒಂದು ಸರ್ಪ ದಾರಿಗಡ್ಡ ಬಂದು "ನಿನ್ನನ್ನೀಗ ಕಚ್ಚಿ ಕೊಲ್ಲುತ್ತೇನೆ" ಎಂದಿತು. "ನಾನೀಗ ಬಹಳ ಅಗತ್ಯದ ಕೆಲಸದ ಮೇಲೆ ಹೋಗುತ್ತಿದ್ದೇನೆ, ಬರುವಾಗ ಬರುತ್ತೇನೆ" ಎಂದಳು. ಸರ್ಪ ಅದಕ್ಕೆ ಒಪ್ಪಿಕೊಂಡಿತು. ರಾಜಕುಮಾರಿ ಗುರುಗಳ ಮನೆಗೆ ಹೋಗಿ ಬಾಗಿಲು ತಟ್ಟಿದಳು. ಗುರುಗಳು ಕಳ್ಳರ ಹೆದರಿಕೆಯಿಂದ ಮೆಲ್ಲ ಕಿಟಕಿಯ ಬಾಗಿಲು ತೆರೆದರು. ಕೂಡಲೇ ರಾಜಕುಮಾರಿ ಗುರುಗಳ ಕೈ ಮುಟ್ಟಿ ಹಿಂತಿರುಗಿದಳು.

ರಾಜಕುಮಾರಿ ದಾರಿಯಲ್ಲಿ ಬರುವಾಗ ಸರ್ಪವನ್ನು 'ಕಚ್ಚು' ಎಂದಳು ಸರ್ಪವು "ನಿನ್ನ ಮುಖ ನೋಡಿ ನನಗೆರಡು ಕಾಡು ಕೋಳಿ ಮೊಟ್ಟೆಗಳು ಸಿಕ್ಕಿದುವು. ನನ್ನ ಹೊಟ್ಟೆ ತುಂಬಿತು" ಎಂದಿತು. ಹುಡುಗಿ ಮುಂದೆ ಬಂದು ಹುಲಿಯನ್ನು ಕರೆದಳು 'ತಿನ್ನು' ಎಂದಳು "ಬೇಡ ನಿನ್ನ ಮುಖ ನೋಡಿ ತಿನ್ನಲು ನನಗೊಂದು ಎಮ್ಮೆ ಕರು ಸಿಕ್ಕಿತು, ಹೊಟ್ಟೆ ತುಂಬಿತು ನೀನು ಹೋಗು" ಎಂದು ಹುಲಿ ಹೇಳಿತು. ರಾಜಕುಮಾರಿ ಮುಂದೆ ಹೋಗಿ ಕಳ್ಳನನ್ನು ಕರೆದು "ಆಭರಣಗಳನ್ನು ಕೊಂಡು ಹೋಗು" ಎಂದಳು. ಆಗ ಕಳ್ಳನು "ನೀನು ಹೋಗು, ನಿನ್ನ ಮುಖ ನೋಡಿದುದರಿಂದ ನನಗೊಂದು ದೊಡ್ಡ ಕೊಳ್ಳೆ ಸಿಕ್ಕಿದೆ" ಎಂದನು. ಹುಡುಗಿ ಮನೆಗೆ ಹಿಂತಿರುಗಿದಳು.

"ಆ ಹುಡುಗಿ ಯಾರ ಪುಣ್ಯದಲ್ಲಿ ಬದುಕಿ ಉಳಿದಳು? ತಂದೆಯ ಪುಣ್ಯದಿಂದಲೋ, ತಾಯಿಯ ಪುಣ್ಯದಿಂದಲೋ, ಅಲ್ಲ ಗಂಡನ ಪುಣ್ಯದಿಂದಲೋ, ಹೇಳು" ಎಂದು ರಾಜಕುಮಾರ ಸೀರೆಯೊಡನೆ ಕೇಳಿದನು. ಆಗ ಸೀರೆಯ ಮೇಲೆ ಕುಳಿತ ರಕ್ಕಸ "ತಂದೆಯ ಪುಣ್ಯದಿಂದ" ಎಂದ, ಕಾಮಸಂದಗೆಗೆ ಬಹಳ ಸಿಟ್ಟು ಬಂತು. "ಗಂಡನ ಪುಣ್ಯದಿಂದ ಎಂದು ಹೇಳುವಷ್ಟು ನಿನಗೆ ಗೊತ್ತಾಗುವುದಿಲ್ಲವೇ" ಎಂದು ಕಾಮಸಂದಗೆ ಸೀರೆಯನ್ನು ಫರ್ರನೆ ಹರಿದಳು. ಹರಿದ ರಭಸಕ್ಕೆ ಮಂಚ ಮಂಚಕ್ಕೆ ತಾಗಿಕೊಂಡಿತು.

ಕೂಡಲೇ ರಾಜಕುಮಾರ ಮಂಚದಿಂದ ಎದ್ದು ಹೊರಟು ಹೋದ. ಎಷ್ಟು ಕರೆದರೂ ಹಿಂತಿರುಗಿ ನೋಡಲೇ ಇಲ್ಲ. ಕಾಮಸಂದಗೆಗೆ ರಾಜಕುಮಾರನ ಚಿಂತೆ ಹಿಡಿಯಿತು. ತಾನು ಚಾಕರಿಯವರನ್ನು ಕೂಡಿಕೊಂಡು ರಾಜಕುಮಾರನ ಹುಡುಕಾಟಕ್ಕೆ ಹೊರಟಳು.

ಬಹಳ ಊರು ಸುತ್ತಿ ಕೊನೆಗೆ ಒಂದು ಎಳ್ಳಿನ ಗದ್ದೆ ಬದಿಯಿಂದ ನಡೆದು ಬರುವಾಗ ಒಬ್ಬ ವ್ಯಕ್ತಿ ಎಳ್ಳಿನ ಗದ್ದೆ ಕಾಯುತ್ತಿದ್ದ. ಆತನೇ ರಾಜಕುಮಾರನೆಂದು ಕಾಮಸಂದಗೆಗೆ ಸಂಶಯವಾಯಿತು. ಪರೀಕ್ಷಿಸಲೆಂದು ಆತನಿಗೆ ಒಂದು ಕಾಸು ಕೊಟ್ಟು "ಈ ಕಾಸಿಗೆ ಎಣ್ಣೆ, ಹಿಂಡಿ, ಮರ, ಎಲೆ ಕೊಡು" ಎಂದಳು. ಕೂಡಲೇ ಆತ ಒಂದು ಎಳ್ಳಿನ ಗಿಡ ಕಿತ್ತುಕೊಟ್ಟ ಅದಕ್ಕವಳು "ಎಳ್ಳೆಣ್ಣೆ ಎಲ್ಲಿದೆ?" ಎಂದು ಕೇಳಿದಳು. "ಎಣ್ಣೆ ಬೇರಿನಲ್ಲಿದೆ" ಎಂದ. ಕೂಡಲೇ ಅವಳಿಗೆ ಆತ ತನ್ನನ್ನು ಗೆದ್ದ ರಾಜಕುಮಾರನೆಂದು ತಿಳಿಯಿತು. ರಾಜಕುಮಾರನೊಡನೆ ಬರಬೇಕೆಂದು ಕಾಮಸಂದಗೆ ಅಂಗಲಾಚಿ ಬೇಡಿಕೊಂಡಳು. ರಾಜಕುಮಾರ ಸಿಟ್ಟಿನಲ್ಲಿ ಕಾಮಸಂದಗೆಯ ಕೆನ್ನೆಗೆ ನಾಲ್ಕು ಬಾರಿಸಿದ. ಆದರೂ ಆಕೆ ಹಿಂತಿರುಗಿ ಹೋಗಲಿಲ್ಲ. ಕೊನೆಗೆ ರಾಜಕುಮಾರ ಕಾಮಸಂದಗೆಯೊಂದಿಗೆ ಹೊರಟು ರಾಮರಾಜ್ಯ ಪಟ್ಟಣಕ್ಕೆ ಬಂದ. ಸೋತ ರಾಜಕುಮಾರರನ್ನೆಲ್ಲಾ ಬಿಡುಗಡೆಗೊಳಿಸಿದ. ಕಾಮಸಂದಗೆಯನ್ನು ಮದುವೆಯಾಗಿ ಸುಖವಾಗಿ ರಾಜ್ಯಭಾರ ಮಾಡ ತೊಡಗಿದ.

ಟಿಪ್ಪಣಿಗಳು

೧. ಮಿರ್ಲೋಕ – ಮೇಲಿನ ಲೋಕ
೨. ಹರದಾರಿ – ಅಳತೆಮಾನ, ೧½ ಮೈಲಿ
೩. ಕೊಪ್ಪಳ – ತೋಟ
೪. ಕಕ್ಕೆ – ಕಾಗೆ
೫. ರುಮಾಲು – ಮುಂಡಾಸು
೬. ಗಂಡ ಕತ್ತರಿ – ದೊಡ್ಡ ಕತ್ತರಿ
೭. ಪಗ್ಗು – ತುಳು ತಿಂಗಳ ಹೆಸರು
೮. ಪಂಚೋಲೆ – ಮುಂಡೋಲೆ– ವೀಳ್ಯದೆಲೆಯ ಎರಡು ಜಾತಿ

***

೨

ಸೂರ್ಯ - ಚಂದ್ರ

ಪಾಂಚಾಲವೆಂಬುದೊಂದು ದೇಶ. ಅದಕ್ಕೊಬ್ಬ ಅರಸ. ಅವನ ಅರಮನೆಯಲ್ಲಿ ಪಂಚಾಂಗ ಗುಂಡಯ್ಯನೆಂಬ ಜೋಯಿಸ. ಆತನಿಗೆ ಸೂರ್ಯಚಂದ್ರರೆಂಬ ಇಬ್ಬರು ಮಕ್ಕಳು. ಅವರು ಕೂಡ ಜೋತಿಷ್ಯ ಕಲಿತರು. ಅರಮನೆಯಲ್ಲಿ ತಮ್ಮ ವಿದ್ಯೆ ಪ್ರದರ್ಶಿಸಿದರು. ರಾಜನಿಗೆ ಸಂತೋಷವಾಯಿತು. ರಾಜ ಅವರಿಗೆ ಎರಡೆರಡು ಬಂಗಾರದ ಗಟ್ಟಿ ಬಳೆಗಳನ್ನು ಉಡುಗೊರೆಯಾಗಿತ್ತನು. ಉಡುಗೊರೆಗಳನ್ನು ಪಡೆದುಕೊಂಡ ಮಕ್ಕಳು ಅರಮನೆಯಿಂದ ಹೊರಟರು. ತಂದೆ ಅರಮನೆಯಲ್ಲಿಯೇ ಉಳಿದನು.

ದಾರಿಯಲ್ಲಿ ಬರುವಾಗ ಅವರಿಗೊಂದು ಸರೋವರ ಸಿಕ್ಕಿತು. ಬಿಸಿಲ ಝಳಕ್ಕೆ ಮೈ ಉರಿಯುತ್ತಿತ್ತು. ಸ್ನಾನ ತೀರಿಸಿಕೊಂಡೇ ಹೋಗೋಣವೆಂದು ಅಂಗಿ ಬಟ್ಟೆ ಕಳಚಿಟ್ಟು ಚಿನ್ನದ ಬಳೆಗಳನ್ನು ದಡದಲ್ಲಿಟ್ಟು ನೀರಿಗಿಳಿದರು. ನೀರಿಗಿಳಿದು ಈಜಲು ಶುರುಮಾಡಿದವರಿಗೆ ಹೊತ್ತು ಹೋದದ್ದೇ ಗೊತ್ತಾಗಲಿಲ್ಲ. ಬಹಳ ಹೊತ್ತಾದ ಮೇಲೆ ನೀರಿನಿಂದ ಮೇಲಕ್ಕೆ ಬಂದು ಅಂಗಿ ಬಟ್ಟೆ ಧರಿಸಿಕೊಂಡು ಚಿನ್ನದ ಬಳೆಗಳನ್ನು ಹುಡುಕುವಾಗ ಅವು ಮಾಯವಾಗಿದ್ದವು. ಬಳೆಗಳನ್ನು ಕಾಣದೆ ಯುವಕರು "ಅಯ್ಯೋ ನಾವು ಇನ್ನು ಹೇಗೆ ಮನೆಗೆ ಹೋಗುವುದು" ಎಂದು ಅಳುತ್ತಾ ಕೂತರು. ಆಗ ದೊಡ್ಡ ಆಮೆಯೊಂದು ಈಜುತ್ತಾ ದಡಕ್ಕೆ ಬಂದು "ಮಕ್ಕಳೇ, ನಿಮ್ಮ ಚಿನ್ನದ ಬಳೆಗಳನ್ನು ನಾನು ಅರಿಯದೆ ನುಂಗಿಬಿಟ್ಟಿದ್ದೇನೆ. ನುಂಗಿದ್ದನ್ನು ಕಾರಲು ಸಾಧ್ಯವಿಲ್ಲ. ನೀವು ನೆನೆದಾಗ ನಾನು ಸಹಾಯಕ್ಕೆ ಬರುತ್ತೇನೆ" ಎಂದು ಹೇಳಿ ಸರೋವರದೊಳಗೆ ಹೋಯಿತು.

ಮಕ್ಕಳು ಮನೆಗೆ ಬಂದರು. ನಡೆದ ಸಂಗತಿಯನ್ನು ತಾಯಿಯೊಡನೆ ಹೇಳಿದರು. ಆಗ ತಾಯಿಯು "ನೀವು ಚಿನ್ನದ ಬಳೆಗಳನ್ನು ಬಿಸಾಡಿದ ವಿಷಯ ನಿಮ್ಮ ತಂದೆಗೆ ಗೊತ್ತಾದರೆ ನಿಮ್ಮನ್ನು ನಿಮ್ಮ ತಂದೆ ಜೀವಸಹಿತ ಬಿಡಲಾರರು. ನೀವು ದೇಶಾಂತರ ಹೋಗುವುದೇ ಒಳ್ಳೆಯದು" ಎಂದಳು. ಮಕ್ಕಳಿಗೆ ಒಂದು ಅನ್ನದ ಬುತ್ತಿ, ಇನ್ನೊಂದು ಹಣದ ಬುತ್ತಿ ಕಟ್ಟಿ ಕೊಟ್ಟಳು. ಮಕ್ಕಳು ದೇಶಾಂತರ ಹೊರಟರು.

ಬಹಳ ದೂರ ನಡೆದಾಗ ಕತ್ತಲಾಗುತ್ತಾ ಬಂತು. ಅಲ್ಲೊಂದು ಅಶ್ವತ್ಥ ಮರವಿತ್ತು. ಆ ಮರದ ಬುಡದಲ್ಲೇ ರಾತ್ರಿ ಕಳೆಯೋಣವೆಂದು ಆಲೋಚಿಸಿದರು. ಬುಡದಲ್ಲಿ

ಮಲಗಿದರು. ಆ ಅಶ್ವತ್ಥ ಮರದಲ್ಲಿ ಒಂದು ಹಕ್ಕಿ ಕುಳಿತಿತ್ತು. ಸ್ವಲ್ಪ ಹೊತ್ತಿನಲ್ಲಿ ಬೇಡನೊಬ್ಬನು ಬಂದು ಆ ಹಕ್ಕಿಗೆ ಬಾಣ ಹೊಡೆದು ಉರುಳಿಸಿದನು. ಆ ಹಕ್ಕಿ ಸೂರ್ಯ ಚಂದ್ರರ ನಡುವೆ ಬಿತ್ತು. ಸೂರ್ಯನು ಅದನ್ನು ಅಡಗಿಸಿಟ್ಟುಕೊಂಡನು. ಬೇಡನು ಹಕ್ಕಿಗಾಗಿ ಹುಡುಕುತ್ತಾ ಅವನ ಬಳಿ ಬಂದು "ಇಲ್ಲಿ ಬಿದ್ದ ಹಕ್ಕಿಯೊಂದನ್ನು ನೀವು ನೋಡಿದಿರಾ?" ಎಂದು ಕೇಳಿದನು. ಆಗ ಸೂರ್ಯನು "ಆ ಹಕ್ಕಿಯ ವಿಶೇಷತೆ ಏನು?" ಎಂದು ಬೇಡನನ್ನು ಪ್ರಶ್ನಿಸಿದನು. ಅದಕ್ಕೆ ಬೇಡನು, "ಅದು ಸಾಮಾನ್ಯ ಹಕ್ಕಿಯಲ್ಲ, ಬಹಳ ವಿಶೇಷತೆ ಉಳ್ಳದ್ದು. ಅದರ ಅಟ್ಟೆ(ದೇಹ) ತಿಂದವನು ಅರಸ ನಾಗುತ್ತಾನೆ. ಮುಟ್ಟೆ(ತಲೆ) ತಿಂದವನು ಮುತ್ತು ಕಾರುತ್ತಾನೆ" ಎಂದನು. ಅದನ್ನು ಕೇಳಿ ಸೂರ್ಯನು ಹಕ್ಕಿಯನ್ನು ಮತ್ತಷ್ಟು ಅಡಗಿಸಿಟ್ಟುಕೊಂಡು 'ಅಯ್ಯೋ ಹಕ್ಕಿಯನ್ನು ನಾವು ಕಾಣೆವು, ನಾವು ಬ್ರಾಹ್ಮಣರು, ಮಾಂಸಾಹಾರಿಗಳಲ್ಲ' ಎಂದು ಹೇಳಿ ಬೇಡನನ್ನು ಕಳುಹಿಸಿಕೊಟ್ಟನು. ಬೇಡನು ನಿರಾಶೆಯಿಂದ ಹೊರಟು ಹೋದನು. ಬೇಡನು ಹೊರಟು ಹೋದ ಮೇಲೆ ಸೂರ್ಯಚಂದ್ರ ಅಕ್ಕಿ ಬೇಯಿಸಿ ಅಡುಗೆ ಮಾಡಿದರು. ಹಕ್ಕಿಯ ಪದಾರ್ಥ ಮಾಡಿದರು. ಮುಟ್ಟೆ(ತಲೆ)ಯನ್ನು ಸೂರ್ಯನು ತಿಂದ, ಅಟ್ಟೆ(ದೇಹ)ವನ್ನು ಚಂದ್ರನು ತಿಂದು ಊಟ ಮುಗಿಸಿ ಮಲಗಿದರು.

ಮರುದಿನ ಎದ್ದು ಪುನಃ ಪ್ರಯಾಣಕ್ಕೆ ಹೊರಟರು. ಆ ದಿನವೂ ಬಹುದೂರ ನಡೆದು ಕತ್ತಲಾಗುವ ಹೊತ್ತಿಗೆ ಒಬ್ಬ ಮುನಿಯ ಆಶ್ರಮಕ್ಕೆ ತಲುಪಿದರು. ಮುನಿಯ ಆಶ್ರಮದಲ್ಲಿ ಆ ರಾತ್ರಿ ಆಶ್ರಯ ಪಡೆದು ಮುಂಜಾನೆ ಎದ್ದು ಮುನಿಯ ಕಾಲಿಗೆ ಅಡ್ಡ ಬಿದ್ದರು. ಮುನಿಗೆ ಬಹಳ ಸಂತೋಷವಾಯಿತು. ಆತ ಒಂದು ಬಂಗಾರದ ಕಡ್ಡಿಗೆ ಇನ್ನೊಂದು ಬೆಳ್ಳಿಯ ಕಡ್ಡಿ ತೀಡಿದನು, ಒಂದೊಂದು ಬೆಳ್ಳಿ ಕುದುರೆ ಸೃಷ್ಟಿಯಾಯಿತು. ಮತ್ತೊಮ್ಮೆ ತೀಡಿದನು ಆಗ ಅವರಿಬ್ಬರಿಗೂ ಒಂದೊಂದು ಚಂದ್ರಾಯುಧ ಸೃಷ್ಟಿ ಯಾಯಿತು. ಅವುಗಳನ್ನು ಸೂರ್ಯ ಚಂದ್ರರಿಗೆ ಕೊಟ್ಟು "ನಿಮ್ಮ ಪ್ರಯಾಣ ಸುಗಮ ವಾಗಲಿ" ಎಂದು ಆಶೀರ್ವಾದ ಮಾಡಿ ಕಳುಹಿಸಿಕೊಟ್ಟನು.

ಸೂರ್ಯ ಚಂದ್ರ ಬೆಳ್ಳಿಯ ಕುದುರೆಯನ್ನೇರಿ ಚಂದ್ರಾಯುಧ ಧರಿಸಿ ಪ್ರಯಾಣಕ್ಕೆ ಹೊರಟರು. ಕುದುರೆ ವಾಯುವೇಗದಿಂದ ಓಡಿತು. ಬಹಳ ದೂರ ಹೋದ ಬಳಿಕ ಕತ್ತಲಾಗುತ್ತಾ ಬಂತು. ಒಂದು ಕಡೆ ತಂಗಿದರು. ಅಲ್ಲೊಂದು ಅಶ್ವತ್ಥ ಮರ. ಅಶ್ವತ್ಥ ಮರದ ಪಕ್ಕದಲ್ಲಿ ಒಂದು ಕೆರೆ. ಸೂರ್ಯ ಚಂದ್ರರು ಅಡುಗೆ ಮಾಡಿ ಊಟ ಮಾಡಿ ಮಲಗಿದರು. ಸೂರ್ಯನಿಗೆ ನಿದ್ರೆ ಬಂತು. ಚಂದ್ರನಿಗೆ ನಿದ್ದೆ ಬರಲಿಲ್ಲ. ಮಧ್ಯರಾತ್ರಿ ಕಳೆಯಿತು. ಅಷ್ಟರಲ್ಲಿ ಭಯಂಕರವಾದ ಒಂದು ಸರ್ಪವು ಮರದ ಬುಡಕ್ಕೆ ಬಂದು ಮರವನ್ನು ಸುತ್ತುಹಾಕಿ ಮರವನ್ನೇರತೊಡಗಿತು. ಆಗ ಮರದ ಮೇಲಿದ್ದ ಗಂಡ ಭೇರುಂಡ ಹಕ್ಕಿಗಳ ಮರಿಗಳು ಹೆದರಿಕೆಯಿಂದ ಚಿಲಿಪಿಲಿಗುಟ್ಟತೊಡಗಿದವು. ಚಂದ್ರನು ಚಂದ್ರಾಯುಧ ತೆಗೆದು ಹಾವನ್ನು ಕೊಚ್ಚಿ ಕೊಚ್ಚಿ ಹಾಕಿದನು. ಸರ್ಪ ತುಂಡು ತುಂಡಾಗಿ

ದೊಡ್ಡ ಕಟ್ಟಿಗೆಯ ರಾಶಿಯ ಹಾಗೆ ಒಂದು ಬದಿಗೆ ಬಿತ್ತು. ಸರ್ಪದ ಉಸುರಿನ ವಿಷದ ಗಾಳಿ ತಾಗಿ ಚಂದ್ರ ಸ್ಮೃತಿ ತಪ್ಪಿ ಇನ್ನೊಂದು ಬದಿಗೆ ಬಿದ್ದುಬಿಟ್ಟನು.

ರಾತ್ರಿ ಕಳೆದು ಬೆಳಗಾಯಿತು. ಸೂರ್ಯನಿಗೆ ಎಚ್ಚರಿಕೆಯಾಗಿ ನೋಡುವಾಗ ಚಂದ್ರ ಬಿದ್ದಿದ್ದ. ಆತನ ಪ್ರಾಣಪಕ್ಷಿ ಹಾರಿ ಹೋಗಿತ್ತು. ಸೂರ್ಯ ಬಹಳ ಬೇಸರದಿಂದ ಕುದುರೆಯೇರಿ ತನ್ನ ಪ್ರಯಾಣ ಮುಂದುವರಿಸಿದ. ಬಹಳ ದೂರ ಹೋದಾಗ ಅಲ್ಲೊಂದು ಮೈದಾನ ಸಿಕ್ಕಿತು. ಆ ಮೈದಾನದಲ್ಲಿ ಒಬ್ಬ ಕುದುರೆ ಸೆಟ್ಟಿ ಕುದುರೆ ಮೇಯಿಸುತ್ತಿದ್ದ. ಆತನಿಗೆ ಸೂರ್ಯನ ಕುದುರೆಯನ್ನು ನೋಡಿ ಬಹಳ ಖುಷಿಯಾಯಿತು. ಆತ ಸೂರ್ಯನನ್ನು ನಿಲ್ಲಿಸಿದ. ಕುದುರೆಯನ್ನು ಬೆಲೆಗೆ ಮಾರುವಂತೆ ಹೇಳಿದ. ಆದರೆ ಸೂರ್ಯ ಒಪ್ಪಲಿಲ್ಲ. ಸೆಟ್ಟಿಯು ಬಲಾತ್ಕಾರದಿಂದ ಸೂರ್ಯನನ್ನು ಹಿಡಿದು ಕುದುರೆಯನ್ನು ಲಾಯದಲ್ಲಿ ಹಾಕಿ, ಸೂರ್ಯನನ್ನು ಕುದುರೆ ಲಾಯದಲ್ಲಿ ಲದ್ದಿ ತೆಗೆಯುವ ಕೆಲಸಕ್ಕೆ ನೇಮಿಸಿದ.

ಬೆಳಗಾದಾಗ ಮೇವಿಗೆ ಹೋದ ಗಂಡಭೇರುಂಡ ಹಕ್ಕಿಗಳು ಗೂಡಿಗೆ ಹಿಂತಿರುಗಿದವು. ಮರಿಗಳು ಜೀವಂತವಾಗಿರುವುದನ್ನು ನೋಡಿ ಸಂತೋಷಪಟ್ಟವು. ಆಗ ಮರಿಗಳು "ನಮ್ಮನ್ನು ಸರ್ಪದಿಂದ ಬದುಕಿಸಿದವನು ಕೆಳಗೆ ಬಿದ್ದು ಸತ್ತಿದ್ದಾನೆ. ಅವನನ್ನು ಮೊದಲು ಬದುಕಿಸಿ" ಎಂದವು. ಕೂಡಲೇ ಗಂಡಭೇರುಂಡ ಹಕ್ಕಿಗಳು ದೇವಲೋಕಕ್ಕೆ ಹೋಗಿ ಸಂಜೀವಿನಿ ಕಡ್ಡಿಯನ್ನು ತಂದು ಚಂದ್ರನಿಗೆ ಮುಟ್ಟಿಸಿ ಚಂದ್ರನನ್ನು ಜೀವಗೊಳಿಸಿದವು. ಚಂದ್ರನು ನಿದ್ದೆ ತಿಳಿದೆದ್ದವನಂತೆ ಎದ್ದು ಕುಳಿತ. ಹಕ್ಕಿಗಳ ಸಂತೋಷಕ್ಕೆ ಪಾರವೇ ಇಲ್ಲ. ವಿಧ ವಿಧದ ಹಣ್ಣು ಹಂಪಲುಗಳನ್ನು ತಂದಿತ್ತು ಆತನ ಹೊಟ್ಟೆ ತುಂಬಿಸಿದವು. ಚಂದ್ರ ಕುದುರೆ ಏರಿ ನಿಧಾನವಾಗಿ ಮುಂದುವರಿದ. ಸ್ವಲ್ಪ ದೂರ ಹೋಗುವಾಗ ಒಂದು ಕಡೆ ಬಹಳಷ್ಟು ಜನ ನೆರೆದಿದ್ದರು. ಚಂದ್ರನೂ ಕುದುರೆ ಯಿಂದಿಳಿದು ಜನರ ಪಕ್ಕದಲ್ಲಿ ದೂರ ಹೋಗಿ ನಿಂತುಕೊಂಡನು.

ಆ ಊರಿನ ಅರಸ ತೀರಿ ಹೋಗಿದ್ದ. ಆತನಿಗೆ ಮಕ್ಕಳಿರಲಿಲ್ಲ. ಉತ್ತರಾಧಿಕಾರಿಯನ್ನು ಆರಿಸಲಿಕ್ಕಾಗಿ ಪಟ್ಟದಾನೆಯ ಕೈಯಲ್ಲಿ ಹೂಮಾಲೆ ಕೊಟ್ಟಿದ್ದರು. ಅದು ಯಾರ ಕುತ್ತಿಗೆಗೆ ಹೂಮಾಲೆ ಹಾಕುವುದೋ ಅವನನ್ನೇ ಆ ರಾಜ್ಯದ ಅರಸನನ್ನಾಗಿ ಆರಿಸುವುದಾಗಿ ಮಂತ್ರಿಗಳು ನಿರ್ಧರಿಸಿದ್ದರು. ಆನೆ ಸೊಂಡಿಲಲ್ಲಿ ಹೂಮಾಲೆ ಹಿಡಿದು ಸುತ್ತು ಬರುತ್ತಿದೆ. ಎಲ್ಲರೂ ಯಾರ ಕೊರಳಿಗೆ ಹಾಕುತ್ತದೋ ಎಂದು ನಿರೀಕ್ಷಿಸುತ್ತಿದ್ದಾರೆ. ಆನೆ ಸುತ್ತಿಸುತ್ತಿ ಕೊನೆಗೆ ಚಂದ್ರನ ಬಳಿಗೆ ಬಂದು ಆತನ ಕುತ್ತಿಗೆಗೆ ಹೂಮಾಲೆ ಹಾಕಿತು. ಚಂದ್ರನ ಕುತ್ತಿಗೆಗೆ ಹೂಮಾಲೆ ಹಾಕಿದ್ದು ಯಾರಿಗೂ ಸರಿಕಾಣಲಿಲ್ಲ. ಗುರ್ತಾರ್ಥ ಇಲ್ಲದವ ರಾಜನಾಗುವುದಾದರೂ ಹೇಗೆ? ಆತನನ್ನು ದೂಡಿಕೊಂಡು ಹೋಗಿ ದೂರ ನಿಲ್ಲಿಸಿ ಆನೆಯ ಸೊಂಡಿಲಲ್ಲಿ ಪುನಃ ಹೂ ಮಾಲೆ ಕೊಟ್ಟರು. ಪುನಃ ಆನೆ ಚಂದ್ರನ ಬಳಿ ಬಂದು ಆತನ ಕುತ್ತಿಗೆಗೇ ಹೂಮಾಲೆ ಹಾಕಿತು. ಚಂದ್ರನನ್ನೇ ಅರಸನೆಂದು ಎಲ್ಲರೂ ಒಪ್ಪಿಕೊಂಡರು. ಆತನಿಗೆ ಆ ಊರಿನ ಪಟ್ಟಾಭಿಷೇಕವಾಯಿತು.

ಸೂರ್ಯನನ್ನು ಕಟ್ಟಿಕೊಂಡೊಯ್ದ ಸೆಟ್ಟಿ ದೊಡ್ಡ ಒಂದು ಹಡಗು ಕಟ್ಟಿಸಿದ. ಹಡಗು ನೀರಿಗಿಳಿಸಿದರೆ ಸರ್ವಥಾ ಮುಂದೆ ಹೋಗುವುದಿಲ್ಲ. ಕೊನೆಗೆ ಜೋಯಿಸರಲ್ಲಿ ಹೋಗಿ ಪಂಚಾಂಗ ಇಡಿಸಿ ಕೇಳಿದಾಗ ಹಡಗಿಗೆ ನರಬಲಿ ಕೊಡಬೇಕೆಂದು ಕಂಡು ಬಂತು. ಸೆಟ್ಟಿ ಚಿಂತೆಯಲ್ಲಿ ಬಿದ್ದ. ಅನ್ನ ನೀರು ಬಿಟ್ಟು ಕವುಚಿ ಮಲಗಿದ. ಆಗ ಅವನ ಹೆಂಡತಿ ಬಂದು "ನರ ಬಲಿಗೆ ನೀವು ಯಾಕೆ ಚಿಂತೆ ಮಾಡುತ್ತಾ ಇದ್ದೀರಿ. ನಮ್ಮ ಆಳು ಅನಾಥ ಸೂರ್ಯನಿದ್ದನಲ್ಲಾ, ಅವನ ತಲೆ ಕಡಿದರಾಯಿತು. ಏಳಿ ಊಟ ಮಾಡಿ" ಎಂದಳು. ಸೆಟ್ಟಿಗೆ ಅದು ಸರಿ ಎಂದು ಕಂಡಿತು; ಸೆಟ್ಟಿ ಎದ್ದು ಊಟ ಮಾಡಿದ. ಮರುದಿನ ಮುಂಜಾನೆ ಎದ್ದು ಸ್ನಾನಾದಿಗಳನ್ನು ತೀರಿಸಿದ. ಹಡಗಿಗೆ ವ್ಯಾಪಾರದ ಸರಕುಗಳನ್ನು ತುಂಬಿಸಿದ. ಸೂರ್ಯನಿಗೂ ಒಳ್ಳೆಯ ಉಡುಪು ತೊಡುಪು ಕೊಟ್ಟು ಚೆನ್ನಾಗಿ ಊಟವನ್ನೆಲ್ಲಾ ಮಾಡಿಸಿ, ನಾವಿಬ್ಬರೇ ವ್ಯಾಪಾರಕ್ಕೆ ಹೋಗುವುದೆಂದು ಹೇಳಿ ಹಡಗಿಗೆ ಕರೆದೊಯ್ದ. ಸೂರ್ಯ ಮತ್ತು ಸೆಟ್ಟಿ ಹಡಗು ಏರಿದ್ದೇ ತಡ, ಹಡಗು ಯಾವ ತೊಂದರೆಯೂ ಇಲ್ಲದೆ ಸಮುದ್ರದಲ್ಲಿ ಸರಾಗವಾಗಿ ಮುಂದುವರಿಯಿತು. ಹಡಗಿನಲ್ಲಿ ಸೂರ್ಯ ಸೆಟ್ಟಿಯ ಹೊರತಾಗಿ ಇನ್ನ್ಯಾರಿಗೂ ಬರಲು ಸಾಧ್ಯವಾಗಲಿಲ್ಲ. ಸೂರ್ಯನ ಬಲಿ ಕೊಡುವ ಕಾರ್ಯ ನಿಂತು ಹೋಯಿತು.

ಬಹಳ ಪ್ರಯಾಣ ಬೆಳೆಸಿದ ನಂತರ ಒಂದು ಕಡೆ ಸಮುದ್ರದ ಬದಿಯಲ್ಲಿ ಹೋಗಿ ಹಡಗು ನಿಂತಿತು. ಅದೊಂದು ಬಂದರು. ಆ ಬಂದರಿನಲ್ಲಿ ಹಡಗು ನಿಲ್ಲಿಸಿ ಸೆಟ್ಟಿ ಮತ್ತು ಸೂರ್ಯ ಪೇಟೆಯಲ್ಲಿ ವ್ಯಾಪಾರ ನಡೆಸಿದರು. ಸೂರ್ಯ ಸೆಟ್ಟಿಗಿಂತ ಒಳ್ಳೆಯ ರೀತಿಯಲ್ಲಿ ವ್ಯಾಪಾರ ನಡೆಸಿದ. ಅವರಿಬ್ಬರೂ ಪೇಟೆಯಲ್ಲಿ ಒಂದು ಕಡೆ ಬಿಡಾರ ಹೂಡಿದರು. ಒಂದು ದಿನ ಸೂರ್ಯ ಬೆಳಗ್ಗೆ ತಿರುಗಾಟಕ್ಕೆ ಹೊರಟಿದ್ದ. ಒಂದು ಅರಮನೆಯ ಎದುರಿನಿಂದ ಹಾದು ಹೋಗುವಾಗ ಮಾರ್ಗದ ಮಧ್ಯದಿಂದ ಅತ್ತರಿನ ನೀರು ತೋಡಿನಂತೆ ಹರಿದು ಹೋಗುತ್ತಿತ್ತು. ಮಾರ್ಗದಲ್ಲಿ ಹೋಗುವವರೆಲ್ಲ ಕೆಲವರು ಆ ನೀರನ್ನು ಮೈಗೆ ಪೂಸಿಕೊಳ್ಳುತ್ತಿದ್ದರು. ಕೆಲವರು ಅದರಲ್ಲಿ ಮುಳುಗಿ ಸ್ನಾನವನ್ನೇ ಮಾಡಿ ಹೋಗುತ್ತಿದ್ದರು. ಸೂರ್ಯ ಅದನ್ನು ಎಳ್ಳಷ್ಟೂ ಮುಟ್ಟದೆ ತೋಡನ್ನು ಹಾರಿ ದಾಟಿ ಹೋದ. ಕೂಡಲೇ ಅರಮನೆಯ ದೂತರು ಬಂದು ಅವನನ್ನು ಅರಮನೆಗೆ ಹಿಡಿದುಕೊಂಡು ಹೋದರು. ಆ ಊರಿನ ರಾಜನಿಗೆ ಒಬ್ಬಳೇ ಮಗಳು. ಆಕೆ ದಿನ ನಿತ್ಯ ಅತ್ತರಿನಲ್ಲಿ ಸ್ನಾನ ಮಾಡುತ್ತಿದ್ದಳು. ಆಕೆಯ ಸ್ನಾನದ ನೀರು ಮಾರ್ಗ ಮಧ್ಯದಿಂದ ಹರಿದು ಹೋಗುತ್ತಿತ್ತು. ಅದನ್ನು ಮುಟ್ಟದೆ ಯಾರು ದಾಟಿ ಹೋಗುತ್ತಾರೋ ಅವನನ್ನೇ ಮದುವೆಯಾಗುವುದಾಗಿ ಶಪಥ ಹಾಕಿಕೊಂಡಿದ್ದಳು. ಆ ಪ್ರಕಾರ ಅರಸ ತನ್ನ ಮಗಳನ್ನು ಸೂರ್ಯನಿಗೆ ಮದುವೆ ಮಾಡಿಕೊಟ್ಟನು. ಮದುವೆಯಾಗಿ ನಾಲ್ಕು ದಿವಸ ಅಲ್ಲಿ ಸುಖವಾಗಿ ಕಾಲ ಕಳೆದನು. ಐದನೇ ದಿವಸ ಅಲ್ಲಿಂದ ಹೊರಡುವಾಗ "ನಾವು ವ್ಯಾಪಾರಕ್ಕಾಗಿ

ಬಂದವರು. ಊರಿನಿಂದ ಹೋಗುವಾಗ ನಿನ್ನನ್ನು ಕರೆದುಕೊಂಡು ಹೋಗುತ್ತೇವೆ" ಎಂದು ರಾಜಕುಮಾರಿಗೆ ಮಾತುಕೊಟ್ಟು ಅರಮನೆಯಿಂದ ಹೊರಟನು.

ಮತ್ತೊಂದು ದಿನ ಸೂರ್ಯನು ತಿರುಗಾಟಕ್ಕೆ ಹೊರಟ. ಒಂದು ಅರಮನೆಯ ಪಕ್ಕದಿಂದ ಹಾದು ಹೋಗುವಾಗ ಆ ಅರಮನೆಯ ದೂತರು ಡಂಗುರ ಸಾರುವುದು ಆತನಿಗೆ ಕೇಳಿತು. ಆ ರಾಜನಿಗೆ ಒಬ್ಬಳೇ ಮಗಳು. ಅರಮನೆಯ ಮುಂಭಾಗದಲ್ಲಿ ಕಟ್ಟಿದ ಕಣಜವನ್ನು ಮುತ್ತಿನಿಂದ ತುಂಬಿದವನಿಗೆ ತನ್ನ ಮಗಳನ್ನು ಕೊಡುವುದಾಗಿ ಡಂಗುರದವರು ಸಾರಿ ಹೇಳುತ್ತಿದ್ದರು. ಯಾರಿಂದಲೂ ಮುತ್ತಿನ ಕಣಜ ತುಂಬಿಸಲು ಸಾಧ್ಯವಾಗಿರಲಿಲ್ಲ. ಸೂರ್ಯ ನಕ್ಕಾಗಲೆಲ್ಲಾ ಬಾಯಿಂದ ಮುತ್ತು ಉದುರುತ್ತಿತ್ತು. ಸೂರ್ಯ ಅರಮನೆಗೆ ಹೊಕ್ಕ "ಎಲ್ಲಿದೆ ಕಣಜ? ಮುತ್ತು ತುಂಬಿಸುತ್ತೇನೆ" ಎಂದ. ಮುತ್ತಿನ ಕಣಜವನ್ನು ತೋರಿಸಿದರು. "ನೀನು ಬರಿಗೈಯಿಂದ ಬಂದವನು ಕಣಜಕ್ಕೆ ಏನು ತುಂಬಿಸುತ್ತೀ?" ಎಂದು ಹೇಳಿದರು. ಸೂರ್ಯ ಚೆನ್ನಾಗಿ ನಕ್ಕನು. ಮುತ್ತು ಉದುರಿತು. ಮತ್ತೂ ನಗಾಡಿದ. ಮತ್ತಷ್ಟು ಉದುರಿತು. ಕಣಜ ತುಂಬುವರೆಗೆ ನಗಾಡಿದ. ಕಣಜ ತುಂಬಿದೊಡನೆ ರಾಜಕುಮಾರಿ ಸೂರ್ಯನಿಗೆ ಹೂಮಾಲೆ ಹಾಕಿದಳು. ರಾಜಕುಮಾರಿಯೊಂದಿಗೆ ನಾಲ್ಕು ದಿವಸ ಕಳೆದು ಊರಿಗೆ ಹೋಗುವ ದಿನ ನಿನ್ನನ್ನು ಕರೆದೊಯ್ಯಲು ಬರುವುದಾಗಿ ಹೇಳಿ ಸೂರ್ಯ ತನ್ನ ಬಿಡಾರಕ್ಕೆ ಹಿಂತಿರುಗಿದನು.

ವ್ಯಾಪಾರವೆಲ್ಲ ಮುಗಿಯಿತು. ಬೇಕು ಬೇಕಾದ ಸಾಮಾನುಗಳನ್ನು ಖರೀದಿಸಿಕೊಂಡು ಹಡಗು ತುಂಬಿಸಿಯೂ ಆಯಿತು. ಊರಿಗೆ ಹೊರಡುವ ದಿನ ಬಂತು. ಸೂರ್ಯ ಇಬ್ಬರು ರಾಜಕುಮಾರಿಯರನ್ನು ಕರೆದುಕೊಂಡು ಬಂದ. ಆ ಚೆಲುವೆಯರನ್ನು ನೋಡಿ ಸೆಟ್ಟಿಗೆ ಬಹಳ ಅಸೂಯೆಯಾಯಿತು. ಹೇಗಾದರೂ ಮಾಡಿ ಸೂರ್ಯನನ್ನು ಕೊಲ್ಲಬೇಕೆಂದು ಬಗೆದ. ಹಡಗಿನಲ್ಲಿ ಕೆಲವು ದಿವಸ ಪ್ರಯಾಣಿಸಿದ ಬಳಿಕ ಒಂದು ದಿನ ಸೂರ್ಯ ಹಡಗಿನ ಬದಿಯಲ್ಲಿ ನಿಂತುಕೊಂಡಿರುವ ಸಮಯ ನೋಡಿ ಸೆಟ್ಟಿ ಆತನನ್ನು ಸಮುದ್ರಕ್ಕೆ ದೂಡಿ ಹಾಕಿದ. ಸೂರ್ಯ ಸಮುದ್ರಕ್ಕೆ ಬಿದ್ದುಬಿಟ್ಟ. ಹಡಗು ಮುಂದಕ್ಕೆ ಹೋಯಿತು. ಸೂರ್ಯ ಸಾಧ್ಯವಾದಷ್ಟು ಸಮುದ್ರದಲ್ಲಿ ಈಜಾಡಿದ. ಕೊನೆ ಕೊನೆಗೆ ಅವನಿಗೆ ಈಜಾಡಲು ಸಾಧ್ಯವಾಗಲಿಲ್ಲ. ಆಗ ಆತನಿಗೆ ಆಮೆಯ ನೆನಪಾಯಿತು. "ಆ ಆಮೆ ಚಿನ್ನದ ಬಳೆಗಳನ್ನು ನುಂಗದೆ ಇರುತ್ತಿದ್ದರೆ ನಮಗೆ ಈ ಸ್ಥಿತಿ ಬರುತ್ತಿರಲಿಲ್ಲ. ಆ ಆಮೆಯಾದರೂ ಈಗ ಸಹಾಯಕ್ಕೆ ಬರುತ್ತಿದ್ದರೆ" ಎಂದು ನೆನಸಿಕೊಂಡ. ಹಾಗೆ ನೆನೆದದ್ದೇ ತಡ ದೊಡ್ಡ ಹಲಗೆಯಂತಹ ಆಮೆಯೊಂದು ತೇಲುತ್ತಾ ಬಂತು. ಸೂರ್ಯ ಅದರ ಮೇಲೆ ಬಿದ್ದುಕೊಂಡ. ಆತನಿಗೆ ಸ್ಮೃತಿ ಬಂದಾಗ ಅತ ಸಮುದ್ರದ ಬದಿಯ ಹೊಯಿಗೆಯ ಮೇಲೆ ಬಿದ್ದಿದ್ದ. ಸೂರ್ಯ ಮೆಲ್ಲಗೆ ಎದ್ದು ನಡೆದುಕೊಂಡು ಒಬ್ಬ ಅಡಗೂಲಜ್ಜಿಯ ಮನೆಗೆ ಹೋದ. ಅಲ್ಲಿ ಗಂಜಿ ಬೇಡಿ ಊಟ ಮಾಡಿದ. ಆ ದಿನವಿಡೀ ನಿದ್ರೆ ಮಾಡಿದ. ಮರುದಿನ ಎದ್ದು "ಅಜ್ಜೀ ದಿನನಿತ್ಯ ನಿನಗೆ ಒಂದೊಂದು ಪಾವು ಮುತ್ತು ಕೊಡುತ್ತೇನೆ" ಅದನ್ನು

ಮಾರಿ ಬೇಕಾದಷ್ಟು ಅಕ್ಕಿ ಸಾಮಗ್ರಿ ತರಬೇಕು. ಇನ್ನು ನೀನು ಊಟಕ್ಕಾಗಿ ಬೇಡಲು ಹೋಗುವುದು ಬೇಡ ಎಂದ. ಅಜ್ಜಿ ಅದಕ್ಕೆ ಒಪ್ಪಿದಳು. ಸೂರ್ಯ ಒಮ್ಮೆ ನೆಗಾಡಿದರೆ ಸಾಕು, ಸಾಕಷ್ಟು ಮುತ್ತು ಉದುರಿ ಬೀಳುತ್ತಿತ್ತು. ಅಜ್ಜಿ ಅದನ್ನು ಮಾರಿ ಜೀವನ ಸಾಗಿಸುತ್ತಿದ್ದಳು.

ಆ ಊರಿನಲ್ಲಿ ಒಬ್ಬಳು ಸೂಳೆ ಇದ್ದಳು. ಆ ಸೂಳೆಗೊಬ್ಬಳು ಮಗಳು. ಅವಳಿಗೆ ದಿನನಿತ್ಯ ಅಜ್ಜಿ ಹೂ ಕಟ್ಟಿ ಕೊಡುತ್ತಿದ್ದಳು. ಒಂದು ದಿನ ಅಜ್ಜಿಯೊಂದಿಗೆ ಸೂರ್ಯ ಸೂಳೆಯ ಮನೆಗೆ ಹೋದ. ಮತ್ತೆ ಪ್ರತಿನಿತ್ಯ ಹೋಗತೊಡಗಿದ. ಸೂರ್ಯ ನಕ್ಕಾಗ ಮುತ್ತು ಉದುರುತ್ತದೆಂದು ಸೂಳೆಗೆ ಗೊತ್ತಾಯಿತು. ಸೂರ್ಯನಿಂದ ಆಕೆ ದಿನ ನಿತ್ಯ ನಗಾಡಿಸಿ ಸಾಕಷ್ಟು ಲಾಭ ಪಡೆಯುತ್ತಿದ್ದಳು. ಒಂದು ದಿನ ಸೂರ್ಯ ಸೂಳೆಯ ಮನೆಗೆ ತೆರಳುವಾಗ ದಾರಿಯಲ್ಲಿ ಒಬ್ಬ ಋಷಿಯನ್ನು ನೋಡಿದ, ಆ ಋಷಿಯ ಬಳಿಗೆ ಹೋಗಿ ನಮಸ್ಕಾರ ಮಾಡಿದ. ಋಷಿಯು ಸೂರ್ಯನ ಭಕ್ತಿಗೆ ಮೆಚ್ಚಿ ಎರಡು ವಸ್ತುಗಳನ್ನು ಆತನಿಗೆ ದಾನವಾಗಿ ಕೊಟ್ಟ. ಒಂದು ಜೊತೆ ಮೆಟ್ಟು, ಇನ್ನೊಂದು ದೊಣ್ಣೆ, ಆ ಮೆಟ್ಟನ್ನು ಹಾಕಿಕೊಂಡು ಎಲ್ಲಿಗೆ ಹೋಗಬೇಕೆಂದು ನೆನೆದರೂ ಆ ಸ್ಥಳಕ್ಕೆ ಮೆಟ್ಟು ಹಾರಿಕೊಂಡು ಹೋಗುತ್ತದೆ. ದೊಣ್ಣೆಯಿಂದ ಯಾರಿಗೆ ಹೊಡೆಯಬೇಕೆಂದು ಹೇಳಿದರೂ ದೊಣ್ಣೆ ಹೋಗಿ ಹೊಡೆಯುತ್ತದೆ. ಇವೆರಡನ್ನೂ ನೀನು ಸ್ವೀಕರಿಸಬೇಕು. ನನಗೆ ಸಾಯುವ ದಿನ ಹತ್ತಿರ ಬಂತು. ನಾನು ಸತ್ತ ಮೇಲೆ ನನಗೆ ಉತ್ತರಕ್ರಿಯೆ ನಡೆಸಬೇಕು ಎಂದು ಹೇಳಿದ. ಹೀಗೆ ಹೇಳಿ ಋಷಿಯು ಸತ್ತು ಹೋದನು. ಸೂರ್ಯನು ಋಷಿಯ ಉತ್ತರಕ್ರಿಯೆಗಳನ್ನು ತೀರಿಸಿದ.

ಸೂಳೆಗೆ ಋಷಿಯಿಂದ ಸಿಕ್ಕಿದ ಎಕ್ಕಡ ಮತ್ತು ದೊಣ್ಣೆಯ ವಿಚಾರ ತಿಳಿಯಿತು. ಒಂದು ದಿನ ಸೂಳೆಯು ಸೂರ್ಯನೊಡನೆ "ನನ್ನ ಮಗಳನ್ನು ನಿನಗೆ ಮದುವೆ ಮಾಡಿ ಕೊಡುವುದಾಗಿ ತೀರ್ಮಾನಿದ್ದೇನೆ. ಅದಕ್ಕಿಂತ ಮೊದಲು ಅವಳದೊಂದು ಹರಕೆ ಬಾಕಿ ಇದೆ. ಏಳು ಸಮುದ್ರದ ಆಚೆಗೆ ಒಂದು ದೇವಿ ಗುಡಿ ಇದೆ. ಆ ಗುಡಿಗೆ ಹೋಗಿ ಹಣ್ಣು ಕಾಯಿ ಮಾಡುವ ಒಂದು ಹರಕೆ ನನ್ನ ಮಗಳು ಹೇಳಿಕೊಂಡಿದ್ದಾಳೆ" ಎಂದಳು. "ಅದರ ಚಿಂತೆ ನಿಮಗ್ಯಾಕೆ? ಏಳು ಸಮುದ್ರದಾಚೆ ನಾಳೆಯೇ ಹೋಗೋಣ" ಎಂದ. ಮರುದಿನ ಬೆಳಗ್ಗೆ ಏಳು ಸಮುದ್ರದಾಚೆಯ ದೇವಿ ಗುಡಿಗೆ ಹೋಗಲು ಎಲ್ಲರೂ ಸಿದ್ಧರಾದರು. ಸೂರ್ಯ ಎಕ್ಕಡ ಹಾಕಿಕೊಂಡು ಸೂಳೆಯ ಕೈ ಹಿಡಿದ. ಸೂಳೆ ಮಗಳ ಕೈ ಹಿಡಿದು ಕೊಂಡಳು. ಸೂರ್ಯ ಇನ್ನೊಂದು ಕೈಯಲ್ಲಿ ತನ್ನ ದೊಣ್ಣೆಯನ್ನು ಹಿಡಿದುಕೊಂಡ. "ಏಳು ಸಮುದ್ರದಾಚೆಯ ಗುಡಿಗೆ ಹೋಗಲಿ" ಎಂದು ನೆನೆಸಿಕೊಂಡ, ಕಣ್ಣು ಮುಚ್ಚಿ ತೆರೆಯುವಾಗ ಇವರೆಲ್ಲರೂ ಏಳು ಸಮುದ್ರದಾಚೆಯ ಗುಡಿಯ ಬಳಿಯಲ್ಲಿ ನಿಂತಿದ್ದರು. ಇನ್ನು ಹಣ್ಣುಕಾಯಿ ಮಾಡಿಸಬೇಕು. ಎಕ್ಕಡವನ್ನು ಗುಡಿಯ ಒಳಗೆ ಕೊಂಡು ಹೋಗುವಂತಿಲ್ಲ. ಅದಕ್ಕಾಗಿ ಸೂಳೆ ಮತ್ತು ಸೂಳೆಯ ಮಗಳು. "ನಾವು

ಗುಡಿಯ ಹೊರಗಡೆ ನಿಲ್ಲುತ್ತೇವೆ ನೀನು ಒಳಗೆ ಹೋಗಿ ಹಣ್ಣು ಕಾಯಿ ಮಾಡಿಸಿಕೊಂಡು ಬಾ. ನೀನು ಬಂದ ಮೇಲೆ ನಾವು ಒಳಗೆ ಹೋಗುತ್ತೇವೆ. ಇಲ್ಲವಾದರೆ ಎಕ್ಕಡವನ್ನು ಯಾರಾದರೂ ಕೊಂಡು ಹೋದಾರು" ಎಂದರು. ಸೂರ್ಯ ಅದಕ್ಕೊಪ್ಪಿ ಹಣ್ಣುಕಾಯಿ ಮಾಡಲು ದೇವಾಲಯದ ಒಳಗೆ ಹೋದ. ಆತ ಹೊರಗೆ ಬರುವಾಗ ಅಲ್ಲಿ ಸೂಳೆಯ ಮಗಳು ಮತ್ತು ಸೂಳೆ ಇರಲಿಲ್ಲ. ಅವರು ಅದಾಗಲೇ ಊರು ಸೇರಿಯಾಗಿತ್ತು. ಸೂರ್ಯನಿಗೆ ಆಕಾಶ ಕಳಚಿ ಬಿದ್ದಂತಾಯಿತು. ಏನು ಮಾಡುವುದೆಂದು ತೋಚಲಿಲ್ಲ. ಆ ಊರಲ್ಲೆಲ್ಲಾ ದೊಣ್ಣೆ ಹಿಡಿದುಕೊಂಡು ಅಲೆದಾಡಿದ. ಕೊನೆಗೆ ಒಂದು ಬೆಟ್ಟದ ಬುಡದಲ್ಲಿ ಹೋಗಿ ಕುಳಿತುಕೊಂಡ. ಅಲ್ಲೊಂದು ದೊಡ್ಡ ಬಂಡೆ ಇತ್ತು. ಆ ಬಂಡೆಗೆ ತನ್ನ ದೊಣ್ಣೆಯಿಂದ ಒಂದು ಬಡಿದ. ಬಡಿದ ಕೂಡಲೇ ಬಂಡೆ ಎರಡು ಹೋಳಾಯಿತು. ಮಧ್ಯೆ ಒಂದು ದಾರಿ ಕಾಣಿಸಿ ಕೊಂಡಿತು. ಆ ದಾರಿಯಿಂದ ಸೂರ್ಯ ಒಳ ಪ್ರವೇಶಿಸಿದ.

ಒಳಗೆ ಇಳಿದು ನೋಡಿದಾಗ ಅಲ್ಲೊಂದು ದೊಡ್ಡ ಹೂವಿನ ತೋಟವಿತ್ತು. ಆ ತೋಟದ ಮಧ್ಯೆ ಒಂದು ಸುಂದರವಾದ ಅರಮನೆ ಇತ್ತು. ಮೆಲ್ಲಗೆ ನಡೆಯುತ್ತಾ ಹೋಗಿ ಸೂರ್ಯ ಅರಮನೆಗೆ ಪ್ರವೇಶಿಸಿದ. ಅಲ್ಲಿ ಒಬ್ಬಳು ಸುಂದರಿಯಾದ ರಾಜಕುಮಾರಿ ಇದ್ದಳು. ಅವಳು ಸೂರ್ಯನನ್ನು ಒಳಗೆ ಕರೆದು ಕುಳ್ಳಿರಿಸಿದಳು. ಕುಡಿಯಲು ಬಾಯಾರಿಕೆ ಕೊಟ್ಟಳು. ಊಟ ಮಾಡಿಸಿದಳು. ನಂತರ ಸೂರ್ಯನಿಗೆ ಒಂದು ಹೂವನ್ನು ಮೂಸಲು ಕೊಟ್ಟಳು. ಸೂರ್ಯ ಒಂದು ಹಲ್ಲಿಯ ರೂಪ ತಾಳಿದ. ಹಲ್ಲಿಯನ್ನು ಗೋಡೆಯ ಮೇಲೆ ಬಿಟ್ಟಳು.

ಸ್ವಲ್ಪ ಹೊತ್ತಿನಲ್ಲಿ ಒಬ್ಬ ರಕ್ಕಸ ಅರಮನೆಗೆ ಬಂದ. ರಕ್ಕಸನಿಗೆ ಊಟ ಬಡಿಸಿ ಹಾಸಿಗೆ ಹಾಸಿ ಮಲಗಿದಳು. ಆತ ಗೊರಕೆ ಹೊಡೆದು ನಿದ್ದೆ ಮಾಡಿ ಸಂಜೆ ಹೊತ್ತಿಗೆ ಎದ್ದು ಹೋದ. ಆತ ಹೋದ ತಕ್ಷಣ ತೋಟದಿಂದ ಇನ್ನೊಂದು ಜಾತಿಯ ಹೂವನ್ನು ತಂದು ಹಲ್ಲಿಗೆ ಮೂಸಿಸಿದಳು. ಹಲ್ಲಿ ಸೂರ್ಯನಾದ, ನಂತರ ಸೂರ್ಯನೊಡನೆ ತನ್ನ ಕಥೆಯನ್ನು ಹೇಳಿಕೊಂಡಳು. ಆಕೆ ಒಬ್ಬ ರಾಜಕುಮಾರಿ. ಅವಳನ್ನು ಕದ್ದು ತಂದು ಆ ರಕ್ಕಸ ತನ್ನ ಅರಮನೆಯೊಳಗೆ ಇಟ್ಟುಕೊಂಡಿದ್ದ. ರಾಜಕುಮಾರಿ ಮತ್ತು ಸೂರ್ಯ ಅರಮನೆಯಲ್ಲಿ ಕೆಲವು ದಿವಸಗಳನ್ನು ಕಳೆದರು. ರಕ್ಕಸನು ಬರುವ ಸಮಯಕ್ಕೆ ಸೂರ್ಯನನ್ನು ಹಲ್ಲಿಯನ್ನಾಗಿ ಮಾಡಿ ಗೋಡೆ ಮೇಲೆ ಬಿಡುತ್ತಿದ್ದಳು. ರಕ್ಕಸನು ಹೋದ ತಕ್ಷಣ ಹಲ್ಲಿಯನ್ನು ಮನುಷ್ಯನನ್ನಾಗಿ ಮಾಡುತ್ತಿದ್ದಳು.

ಒಂದು ದಿನ ಸೂರ್ಯ ರಾಜಕುಮಾರಿಯೊಡನೆ ಹೇಳಿದ. "ನಾವು ಇದೇ ರೀತಿಯಲ್ಲಿ ಎಷ್ಟು ದಿನ ಕದ್ದು ಜೀವನ ನಡೆಸುವುದು, ಆ ರಕ್ಕಸನನ್ನು ಕೊಲ್ಲುವ ಉಪಾಯ ಮಾಡೋಣ, ಆತನ ಜೀವ ಎಲ್ಲಿದೆ ಎಂಬುದನ್ನು ನೀನು ಮೊದಲು ತಿಳಿ" ಎಂದನು. ಆ ದಿನ ರಕ್ಕಸ ಬಂದು ಊಟಕ್ಕೆ ಕುಳಿತಾಗ ರಾಜಕುಮಾರಿ ಗೋಳೆಂದು ಅತ್ತಳು. ರಕ್ಕಸನಿಗೆ ಆಶ್ಚರ್ಯವಾಯಿತು. "ಯಾತಕ್ಕಾಗಿ ಅಳುತ್ತಿ" ಎಂದನು. "ನೀವು ನನ್ನೊಬ್ಬಳನ್ನೇ

ಬಿಟ್ಟು ಬಹಳ ದೂರ ಹೋಗುತ್ತೀರಿ ನಿಮ್ಮನ್ನು ಯಾರಾದರೂ ಕೊಂದುಬಿಟ್ಟರೆ ನನಗೆ ಗತಿ ಯಾರು?" ಎಂದಳು. ಆ ರಕ್ಕಸನು ನಕ್ಕು "ನನ್ನನ್ನು ಕೊಲ್ಲಲು ನನ್ನ ಜೀವ ಅಷ್ಟು ಸುಲಭದಲ್ಲಿಲ್ಲ, ಈ ತೋಟದಾಚೆ ಒಂದು ಗುಡ್ಡವಿದೆ. ಆ ಗುಡ್ಡದ ಮೇಲೆ ಒಂದು ಕೆರೆ ಇದೆ. ಆ ಕೆರೆಯ ಮಧ್ಯೆ ಒಂದು ಮರದ ಪೆಟ್ಟಿಗೆ ಇದೆ. ಆ ಪೆಟ್ಟಿಗೆಯೊಳಗೊಂದು ಗಿಳಿ ಇದೆ. ಆ ಗಿಳಿಯ ದೇಹದಲ್ಲಿ ನನ್ನ ಜೀವವಿದೆ" ಎಂದ. ಆಗ ರಾಜಕುಮಾರಿ "ಹಾಗಾದರೆ ನನಗಿನ್ನು ಹೆದರಿಕೆ ಇಲ್ಲ, ನಾನಿನ್ನು ಆರಾಮವಾಗಿ ಬದುಕಬಹುದು" ಎಂದಳು.

ಮರುದಿವಸ ರಕ್ಕಸ ಹೊರಟು ಹೋದ ಕೂಡಲೇ ಸೂರ್ಯ ಮತ್ತು ರಾಜಕುಮಾರಿ ಗುಡ್ಡ ಸೇರಿದರು. ಇಬ್ಬರೂ ಸೇರಿ ಕೆರೆಯ ನೀರು ಬತ್ತಿಸಿದರು. ಕೆರೆಯ ಮಧ್ಯೆ ಅವರಿಗೆ ಪೆಟ್ಟಿಗೆ ಸಿಕ್ಕಿತು. ಪೆಟ್ಟಿಗೆಯನ್ನೊಡೆದು ಗಿಳಿಯನ್ನು ಹಿಡಿದರು. ಆಗ ರಕ್ಕಸನಿಗೆ ಜ್ವರ ಬರಲು ಪ್ರಾರಂಭವಾಯಿತು. ರಕ್ಕಸ ಓಡಿಕೊಂಡು ಬರತೊಡಗಿದ. ಆಗ ಗಿಳಿಯ ಒಂದು ಕಾಲನ್ನು ತುಂಡು ಮಾಡಿದರು. ರಕ್ಕಸನ ಒಂದು ಕಾಲು ತುಂಡಾಯಿತು. ಒಂದು ಕಾಲಿನಲ್ಲಿ ಕುಂಟುತ್ತಾ ಬಂದ. ಆಗ ಗಿಳಿಯ ಎರಡನೆ ಕಾಲನ್ನು ತುಂಡು ಮಾಡಿದರು. ರಕ್ಕಸನ ಎರಡೂ ಕಾಲೂ ತುಂಡಾಯಿತು. ರಕ್ಕಸ ಹೊರಳಾಡಿಕೊಂಡು ಬಂದ. ಹತ್ತಿರ ಮುಟ್ಟುವಾಗ ಗಿಳಿಯ ಗೋಣು ಮುರಿದರು, ರಕ್ಕಸ ಸತ್ತುಹೋದ.

ಸೂರ್ಯ ರಾಜಕುಮಾರಿಯೊಡನೆ ಅರಮನೆಯಲ್ಲಿ ಸುಖವಾಗಿದ್ದ. ಒಂದು ದಿನ ರಾಜಕುಮಾರಿ ನದಿ ನೀರಿನಲ್ಲಿ ಸ್ನಾನ ಮಾಡುತ್ತಿದ್ದಾಗ ಅವಳ ಕಾಲಿನ ಕಾಲಂದುಗೆ* ಯೊಂದು ಬಿದ್ದು ನೀರಿನಲ್ಲಿ ಕೊಚ್ಚಿಕೊಂಡು ಹೋಯಿತು. ಅದು ಹೋಗಿ ಹೋಗಿ ಚಂದ್ರನ ರಾಜ್ಯಕ್ಕೆ ಮುಟ್ಟಿತು. ಅದು ಒಬ್ಬ ಬೆಸ್ತನಿಗೆ ಸಿಕ್ಕಿತು. ಅದನ್ನಾತ ರಾಜನಿಗೆ ಒಪ್ಪಿಸಿದ. ಆ ಕಾಲಂದುಗೆಯನ್ನು ಕಂಡು ಮೋಹಗೊಂಡು ಚಂದ್ರ ಈ ಕಾಲಂದುಗೆಯನ್ನು ಧರಿಸುವ ಹುಡುಗಿಯನ್ನು ತಂದು ಕೊಟ್ಟವರಿಗೆ ಅರ್ಧ ರಾಜ್ಯ ಕೊಡುತ್ತೇನೆಂದು ಡಂಗುರ ಸಾರಿಸಿದ.

ಆ ಡಂಗುರ ಕೇಳಿ ಸೂಳೆ ರಾಜನ ಬಳಿಗೆ ಬಂದು "ನಾನು ಆ ಹುಡುಗಿಯನ್ನು ತಂದು ಕೊಡುತ್ತೇನೆ" ಎಂದಳು. ಚಂದ್ರ ಅವಳಿಗೆ ಕಾಲಂದುಗೆಯನ್ನು ಒಪ್ಪಿಸಿದ. ಅದನ್ನು ಕೈಯಲ್ಲಿ ಹಿಡಿದುಕೊಂಡು ಸೂಳೆಯು "ಸೂರ್ಯನಿಂದ ಸಿಕ್ಕಿದ ಎಕ್ಕಡ ಧರಿಸಿಕೊಂಡು ಕಾಲಂದುಗೆ ಬಂದಲ್ಲಿಗೇ ಹೋಗಿ ಎಕ್ಕಡ ನಿಲ್ಲಲಿ" ಎಂದಳು. ಎಕ್ಕಡ ಅವಳನ್ನು ಹಾರಿಸಿಕೊಂಡು ಹೋಗಿ ನದಿಯ ದಡದಲ್ಲಿ ನಿಲ್ಲಿಸಿತು. ಸೂಳೆ ಎಕ್ಕಡವನ್ನು ಅಲ್ಲೇ ಬಿಟ್ಟು ಅರಮನೆಗೆ ಬಂದಳು. ಆಗ ಮಧ್ಯಾಹ್ನದ ಹೊತ್ತು; ಸೂರ್ಯ ಊಟ ಮಾಡಿ ಮಲಗಿ ನಿದ್ರೆ ಮಾಡುತ್ತಿದ್ದ. ಸೂಳೆ ರಾಜಕುಮಾರಿಯೊಡನೆ ಮಾತುಕತೆ ನಡೆಸಿ "ಅಮ್ಮ ನನಗೆ ನಿಮ್ಮ ತೋಟವನ್ನೆಲ್ಲಾ ಒಮ್ಮೆ ತೋರಿಸು" ಎಂದಳು. ರಾಜಕುಮಾರಿ ಸೂಳೆಯನ್ನು ತೋಟದಲ್ಲೆಲ್ಲಾ ಸುತ್ತಾಡಿಸಿ ಕೊನೆಗೆ ನದಿಯ ದಡಕ್ಕೆ ಬಂದಳು. ಅಲ್ಲಿ

ತಾನು ಮೊದಲು ಬಿಟ್ಟು ಹೋದ ಎಕ್ಕಡವಿತ್ತು. "ಹೋ ಇದ್ಯಾರ ಎಕ್ಕಡ, ಬಹಳ ಚಂದವಾಗಿದೆ" ಎಂದು ಸೂಳೆ ಎಕ್ಕಡವನ್ನು ಕಾಲಲ್ಲಿ ಧರಿಸಿ ರಾಜಕುಮಾರಿಯ ಕೈ ಹಿಡಿದುಕೊಂಡು "ಚಂದ್ರನ ಅರಮನೆ ಸೇರಲಿ" ಎಂದಳು. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಅವರು ಚಂದ್ರನ ಅರಮನೆಯಲ್ಲಿದ್ದರು. ಸೂರ್ಯ ಎಚ್ಚರಗೊಂಡು ನೋಡುವಾಗ ಅಲ್ಲಿ ಯಾರು ಇರಲಿಲ್ಲ. ರಾಜಕುಮಾರಿಯನ್ನು ಅಲ್ಲಿ ಇಲ್ಲಿ ಹುಡುಕಾಡಿದ. ಎಲ್ಲಿ ಹುಡುಕಿದರೂ ಆಕೆ ಕಾಣದಾದಳು. ಹೀಗೆ ಒಂದೆರಡು ದಿನ ಚಿಂತೆಯಲ್ಲಿ ಕಳೆದ. ಕೊನೆಗೆ ತೋಟದಿಂದ ಒಂದು ಹೂವನ್ನು ಕೊಯ್ದು ಮೂಸಿದ. ಆ ಹೂವನ್ನು ಮೂಸಿದ ಕೂಡಲೇ ಅವನು ಗಿಳಿಯಾದ. ಮತ್ತೆ ಮತ್ತೊಂದು ಹೂವನ್ನು ಮೂಸಿದಾಗ ಆತ ಮನುಷ್ಯನಾದ. ಸೂರ್ಯ ಹೂವನ್ನು ಮೂಸಿ ಗಿಳಿಯಾಗಿ ಒಂದೆರಡು ಹೂಗಳನ್ನು ಕೊಕ್ಕಿನಲ್ಲಿ ಕಿತ್ತು ಕಾಲಿನಲ್ಲಿ ಹಿಡಿದುಕೊಂಡು ಗುಹೆಯಿಂದ ಹೊರಗೆ ಹಾರಿದ.

ಆಕಾಶದಲ್ಲಿ ಹಾರುತ್ತಾ ಬೇರೆ ಬೇರೆ ರಾಜ್ಯಗಳಲ್ಲಿ ರಾಜಕುಮಾರಿಯನ್ನು ಹುಡುಕಿದ. ಎಲ್ಲಿಯೂ ಸಿಗಲಿಲ್ಲ. ಕೊನೆಗೆ ಚಂದ್ರನ ರಾಜ್ಯಕ್ಕೆ ಬಂದ. ಅವನ ಅಂತಃಪುರ ಪ್ರವೇಶ ಮಾಡಿ ನೋಡಿದಾಗ ಅಲ್ಲಿ ರಾಜಕುಮಾರಿ ಮತ್ತೆ ತಾನು ಪರದೇಶದಿಂದ ಮದುವೆಯಾಗಿ ತಂದ ಇಬ್ಬರು ಹುಡುಗಿಯರು ಹೀಗೆ ಮೂವರೂ ಒಂದೇ ಕಡೆ ಗೃಹಬಂಧನ ದಲ್ಲಿರುವುದು ತಿಳಿಯಿತು. ಗಿಳಿ ಅಂತಃಪುರ ಪ್ರವೇಶಿಸಿದೊಡನೆ ರಾಜಕುಮಾರಿಗೆ ಅವನ ಗುರುತು ಸಿಕ್ಕಿತು. ಆತ ಮನುಷ್ಯನಾಗುವ ಹೂವನ್ನು ಮೂಸಿದ. ಈಗ ಎಲ್ಲರಿಗೂ ಅವನ ಗುರುತು ಸಿಕ್ಕಿತು. ಸೆಟ್ಟಿ ಹುಡುಗಿಯರನ್ನು ತಂದು ತನ್ನ ಅರಸನಾದ ಚಂದ್ರನಿಗೆ ಅವರನ್ನು ಒಪ್ಪಿಸಿದ್ದ. ಚಂದ್ರ ಅವರನ್ನು ಮದುವೆಯಾಗಲು ಸಿದ್ಧತೆ ನಡೆಸಿದಾಗ ಆ ಹುಡುಗಿಯರು "ನಮಗೆ ಮದುವೆಗೆ ಮೊದಲು ಮೂರು ತಿಂಗಳ ಒಂದು ವ್ರತವಿದೆ, ಅದು ಕಳೆದುಕೊಳ್ಳಬೇಕು" ಎಂದಿದ್ದರು. ಅದಕ್ಕೆ ಒಪ್ಪಿ ಚಂದ್ರ ಅವರನ್ನು ಗೃಹಬಂಧನದಲ್ಲಿಟ್ಟಿದ್ದ.

"ನಾಳೆಗೆ ನಮ್ಮ ವಾಯಿದೆ ಮುಗಿಯುತ್ತದೆ, ನಾಡದು ಮದುವೆಗೆ ಏರ್ಪಾಡಾಗಿದೆ. ಏನು ಮಾಡಬೇಕು ನಾವು?" ಎಂದು ರಾಜಕುಮಾರಿಯರು ಕೇಳಿದರು. ಆಗ ಸೂರ್ಯನು "ಯಾರು ಸೂರ್ಯ-ಚಂದ್ರರ ಕತೆಯನ್ನು ಪೂರ್ತಿಯಾಗಿ ಹೇಳುತ್ತಾರೋ ಅವರನ್ನೇ ನಾವು ಮದುವೆಯಾಗುವುದೆಂದು ಹೇಳಿಬಿಡಿ, ಆ ಮೇಲೆ ನಾನು ನೋಡಿಕೊಳ್ಳುತ್ತೇನೆ" ಎಂದು ಹೇಳಿ ಸೂರ್ಯ ಹೊರಟು ಹೋದ.


ಅರಸನ ಮದುವೆ ಏರ್ಪಾಡು ನಡೆಯಿತು. ಆರು ಮುಡಿ ಅಂಗಣಕ್ಕೆ ಚಪ್ಪರ ಮೂರು ಮುಡಿ ಗದ್ದೆಗೆ ಪೆರಿಯ ಚಪ್ಪರ ಹಾಕಲಾಗಿತ್ತು. ದೂರದ ಅರಸರಿಗೆ ಓಲೆ, ಊರಿನವರಿಗೆ ಡಂಗುರ ಸಾರಲಾಗಿತ್ತು. ಅತಿಥಿಗಳೆಲ್ಲ ಬಂದಿದ್ದರು. ಎಲ್ಲರೂ ಬಂದು ಕುಳಿತ ಬಳಿಕ ಮೂವರು ರಾಜಕುಮಾರಿಯರನ್ನು ಸಿಂಗಾರ ಮಾಡಿ ಮಂಟಪಕ್ಕೆ ಕರೆ ತರಲಾಯಿತು. ಆಗ ರಾಣಿಯರು ಒಟ್ಟಾಗಿ "ಯಾರು ಸೂರ್ಯ ಚಂದ್ರರ ಕತೆಯನ್ನು

ಸಂಪೂರ್ಣವಾಗಿ ಹೇಳುತ್ತಾರೋ ಅವರನ್ನೇ ನಾವು ಮದುವೆಯಾಗುವುದಾಗಿ ಹೇಳಿದರು. ಚಂದ್ರ ಎದ್ದು ನಿಂತು ಕತೆ ಪ್ರಾರಂಭಿಸಿದ. ಚಂದ್ರ ರಾಜನಾಗುವಲ್ಲಿವರೆಗಿನ ಕತೆ ಹೇಳಿ ನಿಲ್ಲಿಸಿದ. "ಮುಂದೆ ಸೂರ್ಯ ಏನಾದ?" ಎಂದು ರಾಜಕುಮಾರಿಯರು ಕೇಳಿದರು. ಚಂದ್ರ ಉತ್ತರಿಸದಾದ, ಆಗ ಸಭೆಯಲ್ಲಿ ಕುಳಿತ ಸೂರ್ಯನು ಎದ್ದು ನಿಂತು ಕತೆಯನ್ನು ಪೂರ್ತಿಗೊಳಿಸಿ ನಾನೇ ಸೂರ್ಯ ಎಂದು ಬಿಟ್ಟ. ಚಂದ್ರ ಸಂತೋಷದಿಂದ ಓಡಿ ಬಂದು ಅಣ್ಣನನ್ನು ಅಪ್ಪಿಕೊಂಡು ಸಿಂಹಾಸನದಲ್ಲಿ ಕುಳ್ಳಿರಿಸಿದ. ಮೂವರು ರಾಜಕುಮಾರಿಯರನ್ನು ಆತನಿಗೆ ಮದುವೆ ಮಾಡಿಸಿದ. ತಾನು ಮಂತ್ರಿಯ ಪಟ್ಟದಲ್ಲಿ ಕುಳಿತುಕೊಂಡ.

ನಂತರ ಸೆಟ್ಟಿಯ ತಲೆ ಕಡಿಸಲಾಯಿತು. ಸೂಳೆಯನ್ನು ಎರಡು ಹೋಳು ಮಾಡಿ ಹೆಬ್ಬಾಗಿಲಿಗೆ ತೋರಣ ಕಟ್ಟಲಾಯಿತು. ಸೂರ್ಯಚಂದ್ರರು ಸುಖವಾಗಿ ರಾಜ್ಯಭಾರ ಮಾಡುತ್ತಿದ್ದರು.

ಟಿಪ್ಪಣಿಗಳು

೧. ತೋಡು – ಹಳ್ಳ
೨. ಅತ್ತರು – ಪರಿಮಳ ದ್ರವ್ಯ
೩. ಮೆಟ್ಟು – ಎಕ್ಕಡ
೪. ಹಣ್ಣುಕಾಯಿ – ಕಾಯಿ ಒಡೆಯುವುದು
೫. ಕಾಲಂದುಗೆ – ಕಾಲಿನ ಆಭರಣ



೩

ಮಂತ್ರದ ಮಾವು

ಒಂದೂರು, ಆ ಊರಿನಲ್ಲಿ ಒಬ್ಬ ಅರಸ. ಅರಸನಿಗೆ ಇಬ್ಬರು ರಾಣಿಯರು. ಒಬ್ಬಳು ವೆಂಕಟ ಪುತ್ಥಳಿ, ಇನ್ನೊಬ್ಬಳು ನಾಗ ಪುತ್ಥಳಿ. ಅವರಿಗೆ ಆರಗೆ ಬಾರಗೆ ಎಂಬ ಇಬ್ಬರು ಚಾಕರಿಯವರು. ಕೊಲ್ಲವ ಕೋಸವ ಎಂಬ ಇಬ್ಬರು ಊಳಿಗದವರು. ಅರಸನಿಗೆ ಮಕ್ಕಳಿರಲಿಲ್ಲ. ಹೆಂಡತಿಯರು ಹೆರಲಿಲ್ಲ. ಕೆಲಸದವರೂ ಹೆರಲಿಲ್ಲ. ಪಟ್ಟದಾನೆ ಮರಿ ಹಾಕಲಿಲ್ಲ. ಪಟ್ಟದ ಕುದುರೆ ಮರಿ ಹಾಕಲಿಲ್ಲ. ದನ ಕರು ಹಾಕಲಿಲ್ಲ. ಅರಸ ಚಿಂತಿಸಿದ. ನಾರಾಯಣ ದೇವರಲ್ಲಿ ವರ ಕೇಳಲು ಹೊರಟ. ಬಹಳ ದೂರ ನಡೆದ. ನಡೆ ನಡೆದು ಕಾಲಿನ ಸಿಪ್ಪೆಯೆಲ್ಲಾ ಹರಿದು ಹೋಯಿತು. ರಕ್ತ ಒಸರಿತು. ಅಷ್ಟರಲ್ಲಿ ನಾರಾಯಣ ದೇವರು ಒಬ್ಬ ಬ್ರಾಹ್ಮಣನ ವೇಷದಲ್ಲಿ ಬಂದರು. ನೀನು ಎಲ್ಲಿಗೆ ಹೋಗುವವ ಏನು ಸಂಗತಿ ಎಂದು ವಿಚಾರಿಸಿದರು. ಅರಸ ತನ್ನ ಸಂಗತಿ ಹೇಳಿದ. ಬ್ರಾಹ್ಮಣ ಬಿಂದಿಗೆ ನೀರು ದರ್ಬೆ ಕೋಲು ಕೊಟ್ಟು "ಇಲ್ಲಿಂದ ಹರದಾರಿ ದೂರ ಹೋಗು. ಅಲ್ಲೊಂದು ಕೊಕ್ಕೋಡಿ ಕೋರೋಡಿ ಎಂಬ ಮಾವಿನ ಮರವಿದೆ. ಆ ಮಾವಿನ ಮರಕ್ಕೆ ಬಿಂದಿಗೆ ನೀರು ಹೊಯಿದು ದರ್ಬೆ ಕೋಲಿನಿಂದ ಪೂಸಿದರೆ ಒಂದು ಮಾವಿನ ಹಣ್ಣು ಉದುರುತ್ತದೆ. ಅದನ್ನು ಕೊಂಡು ಹೋಗಿ ಎಲ್ಲರಿಗೂ ಹಂಚಿಕೊಂಡು. ಎಲ್ಲರೂ ಗರ್ಭ ತಾಳುತ್ತಾರೆ" ಎಂದನು. ಅರಸನು ಹಾಗೆ ಮಾಡಿದ. ಮಾವಿನ ಹಣ್ಣು ದೊರಕಿತು. ಅದನ್ನು ತಂದು ದೊಡ್ಡ ರಾಣಿಯೊಡನೆ ಕೊಟ್ಟು "ಎಲ್ಲರೂ ಹಂಚಿ ತಿನ್ನಿರಿ" ಎಂದ. ದೊಡ್ಡ ರಾಣಿ ಮಾವಿನ ಹಣ್ಣನ್ನು ಇಡಿಯಾಗಿ ತಿಂದು ಗೊರಟನ್ನು ಬಿಸಾಡಿದಳು. ಆ ಗೊರಟನ್ನು ಹೆಕ್ಕಿ ತಂದು ಸಣ್ಣ ರಾಣಿ ನಾಗಪುತ್ಥಳಿ ಒಡೆದು ಅದರ ಅಂಡಿ¹ಯನ್ನು ಎಣ್ಣೆಯಲ್ಲಿ ಕಾಯಿಸಿ ತಿಂದಳು. ಕೆಲವು ದಿವಸ ಕಳೆಯಿತು. ದೊಡ್ಡ ರಾಣಿ ಗರ್ಭಿಣಿಯಾಗಲಿಲ್ಲ. ಸಣ್ಣವಳು ನಾಗಪುತ್ಥಳಿ ಗರ್ಭಿಣಿಯಾದಳು. ಅರಸನಿಗೆ ಸಂತೋಷವಾಯಿತು. ಅಷ್ಟರಲ್ಲಿ ಅರಸನಿಗೆ ದಂಡು² ಬಂತು. ದಂಡಿಗೆ ಹೊರಟ. ಅರಸ ಹೇಳಿದ "ಒಂದೂವರೆ ವರ್ಷದ ದಂಡನ್ನು ಒಂದು ವರ್ಷದಲ್ಲಿ ಮುಗಿಸುತ್ತೇನೆ. ಆರು ತಿಂಗಳದ್ದನ್ನು ಮೂರು ತಿಂಗಳಲ್ಲಿ ಮುಗಿಸಿ ಬರುತ್ತೇನೆ, ನಾನು ತುರ್ತಾಗಿ ಬರಬೇಕಾದರೆ ಕಂಚಿನ ಕಂಬಕ್ಕೆ ಬಡಿಯಿರಿ" ಎಂದು

ಹೇಳಿ ಹೊರಟು ಹೋದ. ಹೋಗಿ ಆರು ತಿಂಗಳಾದರೂ ರಾಜ ಬರಲಿಲ್ಲ. ರಾಣಿಗೆ ರಾಜನನ್ನು ಕಾಣುವ ಚಿಂತೆಯಾಯಿತು. ಕಂಚಿನ ಕಂಬಕ್ಕೆ ಬಾರಿಸಿದಳು. ರಾಜನಿಗೆ ಸ್ವಪ್ನ ಬಿತ್ತು. ರಾಣಿಗೆ ಏನೋ ಕಷ್ಟ ಬಂತೆಂದು ಭಾವಿಸಿ ಕುದುರೆಯನ್ನೇರಿ ಓಡಿ ಬಂದ. ಬರುವಾಗ ಸಣ್ಣ ರಾಣಿ ಅಂಗಳದಲ್ಲಿ ಕುಳಿತು ಬಿಸಿಲು ಕಾಯಿಸುತ್ತಿದ್ದಳು. ಅದನ್ನು ನೋಡಿ ರಾಜನಿಗೆ ಸಿಟ್ಟು ಬಂತು. ನೀನು ಕಷ್ಟ ಬಂದಾಗ ಕಂಚಿನ ಕಂಬಕ್ಕೆ ಬಾರಿಸಬೇಕೆಂದು ಹೇಳಿದರೆ ಸುಖದಲ್ಲಿರುವಾಗಲೇ ಬಾರಿಸಿದೆಯಲ್ಲಾ ಇನ್ನು ನಾನು ನೀನು ಹೆತ್ತರೂ ಬರುವುದಿಲ್ಲ. ಸತ್ತರೂ ಬರುವುದಿಲ್ಲವೆಂದು ಹೇಳಿ ಹೊರಟು ಹೋದನು.

ಚಿಕ್ಕ ರಾಣಿಗೆ ಕೆಲವು ದಿವಸಗಳ ನಂತರ ಹೆರಿಗೆ ನೋವು ಬಂತು. ಹೆರಿಗೆ ನೋವು ಬಂದಾಗ ಏನು ಮಾಡಬೇಕೆಂದು ಕೆಲಸದವರೊಡನೆ ಕೇಳಿದಳು. ಅದಕ್ಕವರು "ಅಟ್ಟಕ್ಕೆ ಏಣಿ ಇಡು. ಸೊಂಟಕ್ಕೆ ಕಡಿಯುವ ಕಲ್ಲಿನ ಕರುವನ್ನು ಕಟ್ಟು, ಮೆಣಸು ಅರೆದು ಬಟ್ಟೆಯಲ್ಲಿ ಹಾಕಿ ಕಣ್ಣಿಗೆ ಕಟ್ಟು ಕೆಳಗೆ ಮೇಲೆ ಹೋಗು ಆಗ ಮಗು ಬೀಳುತ್ತದೆ" ಎಂದರು. ಏನೂ ಅರಿಯದ ಅವಳು ಹಾಗೆ ಮಾಡಿದಳು. ಅವಳಿ ಮಕ್ಕಳನ್ನು ಹೆತ್ತಳು. ಒಂದು ಗಂಡು ಮತ್ತು ಒಂದು ಹೆಣ್ಣು. ಇದನ್ನು ತಿಳಿದ ಹಿರಿಯ ರಾಣಿ ಕೆಲಸದವರಲ್ಲಿ ಹೇಳಿ ಆಕೆ ಕಣ್ಣಿನ ಬಟ್ಟೆ ಬಿಚ್ಚುವ ಮೊದಲು ಆ ಮಕ್ಕಳನ್ನು ಕೊಂಡುಹೋಗಿ ಹಟ್ಟಿಯ ಗೊಬ್ಬರದ ಅಡಿಯಲ್ಲಿ ಹಾಕಿಸಿದಳು. ಏಣಿಯಡಿಯಲ್ಲಿ ಎರಡು ನಾಯಿ ಮರಿಗಳನ್ನು ಹಾಕಿಸಿದಳು. ರಾಣಿ ಕಣ್ಣು ತೆರೆದಾಗ ಅವಳ ಅಡಿಯಲ್ಲಿ ಎರಡು ನಾಯಿ ಮರಿಗಳಿದ್ದವು. ಆಕೆಗೆ ಬಹಳ ಬೇಸರವಾಯಿತು. ರಾಜನಿಗೆ ರಾಣಿ ನಾಯಿ ಮರಿಗಳನ್ನು ಹೆತ್ತಿರುವುದಾಗಿ ಓಲೆ ಹೋಯಿತು. ಆ ನಾಯಿ ಮರಿಗಳನ್ನು ಕೊಂದು ಬಿಡಿ ರಾಣಿಯನ್ನು ಹೂವಿನ ತೋಟಕ್ಕೆ ನೀರು ಹಾಕಲು ನೇಮಿಸಿ ಎಂದು ಅರಸನ ಉತ್ತರ ಬಂತು.

ಗೊಬ್ಬರದಲ್ಲಿ ಮಕ್ಕಳನ್ನು ಹಾಕಿದ್ದನ್ನು ದನವೊಂದು ನೋಡಿತು. ಅದು ಪ್ರತಿ ನಿತ್ಯ ಹಾಲು ಕರೆಯುವಾಗ ಒಂದು ಬಿಂದಿಗೆ ಹಾಲು ತುಂಬಿದ ಕೂಡಲೇ ಕಾಲಿನಲ್ಲಿ ಮೆಟ್ಟಿ ಹಾಕುತ್ತಿತ್ತು. ಆ ಹಾಲು ಮಕ್ಕಳ ಬಾಯಿಗೆ ಹೋಗಿ ಬೀಳುತ್ತಿತ್ತು. ಮಕ್ಕಳು ಅದನ್ನು ಕುಡಿದು ಬೆಳೆಯುತ್ತಿದ್ದರು. ಕೆಲವು ದಿವಸಗಳಾದ ಮೇಲೆ ದೊಡ್ಡ ರಾಣಿ ಮಕ್ಕಳು ಹೇಗಿದ್ದಾರೆಂದು ನೋಡಿ ಬರಲು ಕೆಲಸದವರನ್ನು ಕಳುಹಿಸಿದಳು. ಕೆಲಸದವರು ನೋಡುವಾಗ ಮಕ್ಕಳು ಸ್ವಲ್ಪ ದೊಡ್ಡದಾಗಿದ್ದರು. ಆ ಮಕ್ಕಳನ್ನು ಕೊಂಡೊಯ್ದು ಕೇಂಜವ ಹಕ್ಕಿಗಳ ಗೂಡಿನ ಬಳಿ ಹಾಕಿ ಬನ್ನಿ. ಅವು ಕುಕ್ಕಿ ತಿನ್ನಲಿ ಎಂದಳು ದೊಡ್ಡ ರಾಣಿ. ಕೆಲಸದವರು ಹಾಗೆ ಮಾಡಿದರು. ಹಕ್ಕಿಗಳಿಗೆ ಎರಡು ಮರಿಗಳಿದ್ದವು. ಆ ಮರಿಗಳಿಗೆ ಕಾಳು ಕೊಡುವಾಗ ಉದುರಿದುದೆಲ್ಲಾ ಈ ಮಕ್ಕಳ ಬಾಯಿಗೆ ಬೀಳುತ್ತಿತ್ತು. ಅದನ್ನು ತಿಂದು ಮಕ್ಕಳು ದೊಡ್ಡವರಾದರು. ಕೆಲವು ದಿವಸಗಳ ನಂತರ ಹಿರಿಯ ರಾಣಿಯ ಕೆಲಸದವರು ಮಕ್ಕಳನ್ನು ಬಂದು ನೋಡಿದರು. ಮಕ್ಕಳು ಬೆಳೆದಿದ್ದಾರೆ

ಎಂದು ತಮ್ಮ ಒಡತಿಗೆ ಬಂದು ವರದಿ ಒಪ್ಪಿಸಿದರು. ಹಿರಿಯ ರಾಣಿ ಒಂದು ಪೆಟ್ಟಿಗೆ ಮಾಡಿಸಿದಳು. ಅದರಲ್ಲಿ ಈ ಎರಡು ಮಕ್ಕಳನ್ನು ಹಾಕಿ ಹೊಳೆಯಲ್ಲಿ ತೇಲಿಸಿಬಿಟ್ಟಳು.

ಒಂದು ಊರಿನಲ್ಲಿ ಒಬ್ಬ ಮುದುಕನಿದ್ದ. ಅವನಿಗೆ ಮಕ್ಕಳು ಮರಿಗಳು ಇರಲಿಲ್ಲ. ಬಹಳ ವರ್ಷವಾಯಿತು. ಇನ್ನು ಬದುಕಿ ಪ್ರಯೋಜನವಿಲ್ಲವೆಂದು ಹೊಳೆಯ ನೀರಿಗೆ ಹಾರಿ ಪ್ರಾಣ ಬಿಡಲು ಹೋದ. ಅಷ್ಟರಲ್ಲಿ ಪೆಟ್ಟಿಗೆ ತೇಲಿಕೊಂಡು ಬಂತು. ಪೆಟ್ಟಿಗೆ ನೋಡಿ ಅವನಿಗೆ ಸಾಯುವ ಮನಸ್ಸು ಬದಲಾಯಿತು. ಪೆಟ್ಟಿಗೆಯನ್ನು ಹಿಡಿದುಕೊಂಡು ಮನೆಗೆ ಹೋಗಿ ಬಾಯಿ ತೆರೆದನು. ಅದರಲ್ಲಿದ್ದ ಎರಡು ಮಕ್ಕಳನ್ನು ನೋಡಿ ಅವನಿಗೆ ಬಹಳ ಸಂತೋಷವಾಯಿತು. ಮಕ್ಕಳನ್ನು ಸಾಕಿ ಬೆಳೆಸಿದನು. ಮಕ್ಕಳು ಬೆಳೆದು ದೊಡ್ಡ ವರಾದರು. ಮುದುಕನಿಗೆ ಸಾಯುವ ಕಾಲ ಬಂತು. ಸಾಯುವ ಕಾಲದಲ್ಲಿ ಅವನು ಮಕ್ಕಳಿಗೆ ಮೂರು ಕಲ್ಲುಗಳನ್ನು ಮಂತ್ರಿಸಿ ಕೊಟ್ಟು "ಈ ಕಲ್ಲು ಮಂತ್ರದ ಕಲ್ಲು, ಏನು ಬೇಕೆಂದು ನೆನೆದುಕೊಂಡು ಈ ಕಲ್ಲುಗಳನ್ನು ಬಿಸಾಡಿದರೂ ನೀವು ನೆನೆದುದೆಲ್ಲಾ ಆಗುತ್ತದೆ" ಎಂದು ಹೇಳಿ ಸತ್ತು ಹೋದನು.

ರಾಜಕುಮಾರ ಆ ಮುದುಕನ ಉತ್ತರಕ್ರಿಯೆ ತೀರಿಸಿ ತಂಗಿಯನ್ನು ಕರೆದುಕೊಂಡು ಹೊರಟನು. ಬಹಳ ದೂರ ನಡೆದು ಆ ಊರಿನ ಅರಸರ ಅರಮನೆಯ ಎದುರು ಮುಟ್ಟಿದನು. ಅದು ಅವನ ತಂದೆಯ ಅರಮನೆ. ಆ ಅರಮನೆಯ ಎದುರು ವಿಶಾಲ ಮೈದಾನವಿತ್ತು. ಆ ಮೈದಾನದಲ್ಲಿ ಒಂದು ಸುಂದರ ಅರಮನೆಯಾಗಬೇಕೆಂದು ಒಂದು ಕಲ್ಲು ಬಿಸಾಡಿದ. ಒಂದು ಅರಮನೆಯಾಯಿತು. ಅರಮನೆಗೆ ಬೇಕಾದ ಆಳು, ಕಾಳು, ಧನ, ಧಾನ್ಯವಾಗಬೇಕೆಂದು ಇನ್ನೊಂದು ಕಲ್ಲು ಬಿಸಾಡಿದ. ಅದೂ ಆಯಿತು. ತನಗೆ ತನ್ನ ತಂಗಿಗೆ ಉಡುಪು, ಕುದುರೆ, ಚಂದ್ರಾಯುಧ, ಚಿನ್ನಾಭರಣಗಳಾಗ ಬೇಕೆಂದು ಮೂರನೇ ಕಲ್ಲು ಬಿಸಾಡಿದ. ಅದು ಕೂಡ ಆಯಿತು.

ರಾಜಕುಮಾರ ಪ್ರತಿದಿನ ಎದ್ದು ಕುದುರೆ ಮೇಲೆ ಕುಳಿತು ಸಂಚಾರಕ್ಕೆ ಹೋಗಿ ಬರುತ್ತಿದ್ದನು. ಅದನ್ನು ಹಿರಿಯ ರಾಣಿಯ ಕೆಲಸದವರು ನೋಡಿ ರಾಣಿಗೆ ತಿಳಿಸಿದರು. ರಾಣಿಗೆ ಅದು ಕಿರಿಯ ರಾಣಿಯ ಮಗನೆಂಬ ಸಂಶಯ ಬಂತು. ಕೆಲಸದವಳು ಒಡತಿಯೊಡನೆ "ಅವನನ್ನು ಹೇಗಾದರು ಕೊಂದು ಬರುತ್ತೇನೆ" ಎಂದಳು. ರಾಣಿ ಅವಳಿಗೆ ಒಂದು ಸಾವಿರ ರೂಪಾಯಿ ಕೊಟ್ಟು ಕಳುಹಿಸಿದಳು. ಕೆಲಸದವಳು ಭಿಕ್ಷುಕಿಯಂತೆ ವೇಷ ಹಾಕಿಕೊಂಡು ರಾಜಕುಮಾರನ ಅರಮನೆಗೆ ಬಂದಳು. "ಯಾರಮ್ಮಾ ತಾಯಿ ಭಿಕ್ಷೆ ಕೊಡಿ" ಎಂದಳು. "ಇಲ್ಲಿ ಮೈದಾನ ಇರುವಾಗ ಯಾರೂ ಭಿಕ್ಷೆಗೆ ಬರುತ್ತಿರಲಿಲ್ಲ. ಈಗ ಬೇಡುವವರು ಭಿಕ್ಷುಕರು ಎಷ್ಟೋ ಜನ ಬರುತ್ತಾರೆ" ಎಂದು ಹೇಳಿಕೊಂಡು ಒಳಗೆ ಹೋಗಿ ರಾಜಕುಮಾರನ ತಂಗಿ ಒಂದು ಸೇರು ಅಕ್ಕಿ, ಒಂದು ತೆಂಗಿನಕಾಯಿ, ಒಂದು ಸೌತೆ, ಒಂದು ಪಾವಲಿ* ತಂದುಕೊಟ್ಟಳು. ಅದನ್ನು ಪಡೆದುಕೊಂಡು ಆ ಮುದುಕಿ "ನೋಡಮ್ಮಾ ನಿಮ್ಮ ಅರಮನೆಗೆ ತಾಮ್ರದ ಹೊದಿಕೆ ಹಾಕಿದೆ. ನಿನ್ನ

ಅಣ್ಣನಲ್ಲಿ ಹೇಳಿ ಬೆಳ್ಳಿ ಹೊದಿಕೆ ಹಾಕಿಸು" ಎಂದಳು, "ಬೆಳ್ಳಿ ಹೊದಿಕೆ ಎಲ್ಲಿ ಸಿಗುತ್ತದೆ" ಎಂದು ಹುಡುಗಿ ಕೇಳಿದಳು. ಏಳು ಸಮುದ್ರದ ಆಚೆ ದಾಟಿ ಹೋಗಬೇಕು, ಅಲ್ಲಿ ಏಳು ಜನ ರಾಕ್ಷಸರಿದ್ದಾರೆ. ಅವರಲ್ಲಿ ಕೇಳಿ ತರಬಹುದೆಂದು ಹೇಳಿ ಹೊರಟು ಹೋದಳು.

ರಾಜಕುಮಾರ ಸಂಜೆ ಹೊತ್ತಿಗೆ ಮನೆಗೆ ಬಂದ. ಚಿಂತೆಯಲ್ಲಿರುವ ತಂಗಿಯನ್ನು ನೋಡಿ "ಏನು ಚಿಂತೆ" ಎಂದು ಕೇಳಿದ. ಆಗ ರಾಜಕುಮಾರಿ ಭಿಕ್ಷುಕಿ ಹೇಳಿದ ಸಂಗತಿ ಹೇಳಿದಳು. "ಅದಕ್ಕೆ ಯಾಕೆ ಚಿಂತೆ, ಇವತ್ತು ಊಟ ಮಾಡು, ನಾಳೆ ಹೋಗಿ ತರೋಣ" ಎಂದು ಸಮಾಧಾನಪಡಿಸಿದ. ತಂಗಿಯನ್ನು ಸ್ನಾನ ಮಾಡಿಸಿದ. ಊಟ ಮಾಡಿಸಿ ಮಲಗಿಸಿದ. ತಾನು ಕೂಡ ಊಟ ಮಾಡಿ ಮಲಗಿದ. ಮರುದಿನ ಎದ್ದು ಚಂದ್ರಾಯುಧ ಹಿಡಿದುಕೊಂಡು ಬೆಳ್ಳಿ ಕುದುರೆ ಏರಿ ಹೊರಟ. ಸಮುದ್ರದ ಬದಿಗೆ ಬಂದು ಸಮುದ್ರದ ನೀರಿಗೆ ಚಂದ್ರಾಯುಧ ಮುಟ್ಟಿಸಿ ಏಳು ಸಮುದ್ರ ಏಳು ಕೆರೆಗಳಂತಾಗಲಿ ಎಂದ. ಹಾಗೆ ಆಯಿತು. ಏಳು ಸಮುದ್ರಗಳನ್ನು, ಏಳು ಕೆರೆಗಳನ್ನು ದಾಟಿದಂತೆ ದಾಟಿದ. ಆಚೆ ಕರೆಯಲ್ಲಿ ಏಳು ರಕ್ಕಸರು ಏಳು ಕೋರ್ಜಿ ಅಕ್ಕಿಯನ್ನು ಕಡಾಯಿ*ಯಲ್ಲಿ ಹಾಕಿ ಬೇಯಿಸಲು ಇಟ್ಟು ಮಲಗಿ ನಿದ್ದೆ ಮಾಡುತ್ತಿದ್ದರು. ರಾಜಕುಮಾರ ಅವರನ್ನು ಎಬ್ಬಿಸಿದ. ನಿನಗೆ ಏನು ಬೇಕೆಂದು ಕೇಳಿದರು "ನನ್ನ ಅರಮನೆಗೆ ಬೆಳ್ಳಿಯ ಛಾವಣಿ ಆಗಬೇಕು" ಎಂದ. ಹಾಗಾದರೆ ಏಳು ಕೋರ್ಜಿ ಅಕ್ಕಿ ಬೇಯುವ ಅಕ್ಕಿಯ ಕಡಾಯಿಯನ್ನು ಕೆಳಗಿಡು. ಆ ಮೇಲೆ ಬೆಳ್ಳಿ ಕೊಡುತ್ತೇವೆ" ಎಂದರು. ಕಡಾಯಿಯನ್ನು ಚಂದ್ರಾಯುಧದಲ್ಲಿ ಮುಟ್ಟಿ "ಏಳು ಕೋರ್ಜಿ ಅಕ್ಕಿ ಏಳು ಸೇರು ಅಕ್ಕಿಯಷ್ಟು ಹಗುರವಾಗಲಿ" ಎಂದ, ಹಾಗೆ ಆಯಿತು. "ಹೋಗಿ ನೋಡು ನಿನ್ನ ಅರಮನೆ ಬೆಳ್ಳಿಯ ಅರಮನೆಯಾಗಿದೆ" ಎಂದರು. ರಾಜಕುಮಾರ ಬಂದು ನೋಡುವಾಗ ಅರಮನೆ ಬೆಳ್ಳಿಯ ಅರಮನೆಯಾಗಿತ್ತು. ಕೆಲವು ದಿನಗಳು ಕಳೆದ ಮೇಲೆ ಹಿರಿಯ ರಾಣಿಯ ಇನ್ನೊಬ್ಬಳು ದಾಸಿ ಬಂದು ರಾಣಿಯೊಡನೆ "ನನಗೆ ಒಂದು ಸಾವಿರ ರೂಪಾಯಿ ಕೊಡಿ. ನಾನು ರಾಜಕುಮಾರನನ್ನು ಕೊಂದು ಬರುತ್ತೇನೆ" ಎಂದಳು. ರಾಣಿ ಒಂದು ಸಾವಿರ ರೂಪಾಯಿ ತೆಗೆದುಕೊಟ್ಟಳು. ದಾಸಿ ಭಿಕ್ಷುಕಿಯ ವೇಷ ಧರಿಸಿಕೊಂಡು ರಾಜಕುಮಾರನ ಮನೆಗೆ ಹೋಗಿ "ಯಾರಮ್ಮ, ಭಿಕ್ಷೆ ಕೊಡಿ" ಅಂದಳು. "ಇಲ್ಲಿ ಮೈದಾನ ಇರುವಾಗ ಯಾವ ಭಿಕ್ಷುಕರೂ ಬರುತ್ತಿರಲಿಲ್ಲ. ಈಗ ಭಿಕ್ಷುಕರ ಕಾಟ ಹೆಚ್ಚಾಗಿದೆ" ಎಂದು ಒಳಗೆ ಹೋಗಿ ಒಂದು ಸೇರು ಅಕ್ಕಿ, ಒಂದು ತೆಂಗಿನಕಾಯಿ, ಒಂದು ಪಾವಲಿ, ಒಂದು ಸೌತೆಕಾಯಿ ತಂದುಕೊಟ್ಟಳು. "ಏನಮ್ಮ ನೀವು ಇಷ್ಟು ಶ್ರೀಮಂತರಾಗಿ ಮಾಡಿಗೆ ಬೆಳ್ಳಿ ತಗಡು ಹೊದಿಸಿದ್ದೀರಲ್ಲಾ" ಎಂದು ಕೇಳಿದಳು. "ಚಿನ್ನದ ತಗಡು ಎಲ್ಲಿ ಸಿಗುತ್ತದೆ?" ಎಂದು ರಾಜಕುಮಾರಿ ಪ್ರಶ್ನಿಸಿದಳು. "ಹದಿನಾರು ಕಡಲಿನಾಚೆ ಹದಿನಾರು ರಕ್ಕಸರಿದ್ದಾರೆ. ಅವರಲ್ಲಿ ಕೇಳಿದರೆ ಚಿನ್ನದ ತಗಡು ಕೊಡುತ್ತಾರಲ್ಲ. ನಿನ್ನ ಅಣ್ಣನಲ್ಲಿ ಹೇಳು" ಎಂದು ಹೇಳಿ ಭಿಕ್ಷುಕಿ ಹೊರಟು ಹೋದಳು.

ರಾಜಕುಮಾರ ಬರುವಾಗ ತಂಗಿ ಚಿಂತೆಯಲ್ಲಿದ್ದಳು. "ಯಾಕೆ ತಂಗಿ ಚಿಂತೆಯಲ್ಲಿದ್ದಿ" ಎಂದು ಅಣ್ಣ ಕೇಳಿದ. ಆಗ ರಾಜಕುಮಾರಿ ನಡೆದ ಸಂಗತಿ ಹೇಳಿದಳು. "ಅಷ್ಟೇ ತಾನೇ, ನಾಳೆ ನೋಡೋಣ. ಈಗ ನೀನು ಎದ್ದು ಊಟ ಮಾಡು" ಎಂದು ತಂಗಿಯನ್ನು ಸ್ನಾನ ಮಾಡಿಸಿ. ಊಟ ಮಾಡಿಸಿ ಮಲಗಿಸಿದ. ತಾನೂ ಊಟ ಮಾಡಿ ನಿದ್ದೆ ಮಾಡಿದ.

ಮರುದಿನ ಎದ್ದು ಬೆಳ್ಳಿ ಕುದುರೆ ಏರಿ, ಚಂದ್ರಾಯುಧ ಧರಿಸಿ ಹೊರಟ. ಸಮುದ್ರದ ಬದಿಗೆ ಬಂದು ಸಮುದ್ರದ ನೀರನ್ನು ಚಂದ್ರಾಯುಧದಲ್ಲಿ ಮುಟ್ಟಿ "ಹದಿನಾರು ಸಮುದ್ರ ಹದಿನಾರು ಕೆರೆಯಂತಾಗಲಿ" ಎಂದ. ಹಾಗೆ ಆಯಿತು. ಹದಿನಾರು ಕೆರೆ ದಾಟಿ ಹೋದ. ಅಲ್ಲಿ ಹದಿನಾರು ರಕ್ಕಸರು ಹದಿನಾರು ಕೋರ್ಜಿ ಅಕ್ಕಿಯನ್ನು ಒಂದು ಕೊಪ್ಪರಿಗೆಯಲ್ಲಿ ಬೇಯಲು ಹಾಕಿ ಮಲಗಿ ನಿದ್ರಿಸಿದ್ದರು. ಅವರನ್ನು ಎಬ್ಬಿಸಿ "ನನ್ನ ಮನೆಗೆ ಚಿನ್ನದ ತಗಡು ಬೇಕು" ಎಂದ. "ನಿನಗೆ ಚಿನ್ನದ ತಗಡನ್ನು ಕೊಡಬಹುದು. ಆದರೆ ಮೊದಲು ಕೊಪ್ಪರಿಗೆಯಲ್ಲಿದ್ದ ಅನ್ನವನ್ನು ಕೆಳಗಿಡು" ಎಂದರು. "ಹದಿನಾರು ಕೋರ್ಜಿ ಅಕ್ಕಿಯ ಅನ್ನ ಹದಿನಾರು ಸೇರು ಅಕ್ಕಿಯ ಅನ್ನದಷ್ಟು ಹಗುರವಾಗಲಿ" ಎಂದು ಹೇಳಿ ಕೊಪ್ಪರಿಗೆಗೆ ಚಂದ್ರಾಯುಧ ಮುಟ್ಟಿಸಿದ. ಹಾಗೇ ಆಯಿತು. ಕೊಪ್ಪರಿಗೆ ಯನ್ನು ಕೆಳಗಿಟ್ಟ. ರಕ್ಕಸರು "ಹೋಗಿ ನೋಡು, ನಿನ್ನರಮನೆ ಚಿನ್ನದ ಅರಮನೆಯಾಗಿದೆ" ಎಂದರು. ರಾಜಕುಮಾರ ಮನೆಗೆ ಬಂದು ನೋಡುವಾಗ ಅರಮನೆ ಚಿನ್ನದ್ದಾಗಿತ್ತು.

ದೊಡ್ಡ ರಾಣಿಯ ಮೂರನೇ ದಾಸಿ ಒಂದು ದಿನ "ಮಹಾರಾಣಿ ರಾಜಕುಮಾರನನ್ನು ನಾನು ಕೊಲ್ಲುತ್ತೇನೆ, ನನಗೆ ಒಂದು ಸಾವಿರ ರೂಪಾಯಿ ಕೊಡಿ" ಎಂದಳು. ರಾಣಿ ಒಂದು ಸಾವಿರ ರೂಪಾಯಿ ಕೊಟ್ಟಳು. ಕೆಲಸದವಳು ಭಿಕ್ಷುಕಿಯ ವೇಷ ಹಾಕಿಕೊಂಡು ರಾಜಕುಮಾರಿಯ ಬಳಿಗೆ ಹೋಗಿ ಭಿಕ್ಷೆ ಬೇಡಿದಳು. "ಮೈದಾನ ಇರುವಾಗ ಭಿಕ್ಷೆ ಕೇಳುವವರಿಲ್ಲ. ಅರಮನೆಯಾಗುವಾಗ ಎಷ್ಟು ಮಂದಿ ಭಿಕ್ಷುಕರಿದ್ದಾರೆ" ಎಂದುಕೊಂಡು ಒಳಗೆ ಹೋಗಿ ಒಂದು ಸೇರು ಅಕ್ಕಿ, ತೆಂಗಿನಕಾಯಿ, ಪಾವಲಿ, ಸೌತೆಕಾಯಿ ತಂದು ಕೊಟ್ಟಳು. "ಈ ಮನೆಗೆ ಒಂದು ಹೆಣ್ಣು, ನಿನಗೊಂದು ಅತ್ತಿಗೆ ಬಾರದಿದ್ದರೆ ಮನೆಗೆ ಶೋಭೆಯೇ ಇಲ್ಲ" ಎಂದಳು ಭಿಕ್ಷುಕಿ. ಆಗ "ಅಣ್ಣನಿಗೆ ಸರಿಯಾದ ಹುಡುಗಿ ಸಿಗಬೇಕಲ್ಲಾ" ಎಂದು ರಾಜಕುಮಾರಿ ಹೇಳಿದಳು. "ಸಿಗದೆ ಏನು, ಮೇಲೆ ಮಿರ್ಲೋಕದಲ್ಲಿ ಮದರ್ೂರು ಮದರ್್ ಸಿಂಗಿ ಇದ್ದಾಳೆ, ಅವಳು ನಿನ್ನಣ್ಣನಿಗೆ ಒಪ್ಪುವ ಹುಡುಗಿ" ಎಂದು ಹೇಳಿ ಹೊರಟು ಹೋದಳು.

ರಾಜಕುಮಾರ ಸಂಜೆ ಅರಮನೆಗೆ ಹಿಂತಿರುಗಿದಾಗ ರಾಜಕುಮಾರಿ ಚಿಂತೆಯಲ್ಲಿದ್ದಳು. "ಯಾಕೆ ಚಿಂತೆಯಲ್ಲಿದ್ದಿ ತಂಗಿ?" ಎಂದು ಅಣ್ಣ ಕೇಳಿದ. ತಂಗಿ ನಡೆದ ಸಂಗತಿ ಹೇಳಿದಳು, "ಅದಕ್ಯಾಕೆ ಚಿಂತೆ, ನಾಳೆಯೇ ಹೋಗೋಣ" ಎಂದು ತಂಗಿಯನ್ನು ಸ್ನಾನಮಾಡಿಸಿ, ಊಟ ಮಾಡಿಸಿ, ಮಲಗಿಸಿ ನಿದ್ರಿಸಿದ.

ಮರುದಿನ ಎದ್ದು ಮಿರ್ಲೋಕಕ್ಕೆ ಹೋದ. ಅಲ್ಲಿ ಮದರ್ೂರು ಮದರ್್ ಸಿಂಗಿಯ ಅರಮನೆ ಹುಡುಕಿದ. ಅವಳನ್ನು ಕಂಡು ನಿನ್ನನ್ನು ನಾನು ಮದುವೆಯಾಗುವುದಾಗಿ

ಹೇಳಿದ. "ಹೋಗಿ ತಂದೆಯನ್ನು ಕೇಳು" ಎಂದಳು ಸಿಂಗಿ. ನೇರವಾಗಿ ಹೋಗಿ ಸಿಂಗಿಯ ತಂದೆಯ ಕಾಲು ಹಿಡಿದು "ಆಶೀರ್ವಾದ ಮಾಡಿ ಮಾವಯ್ಯ" ಎಂದ. ಮರ್ದ್ ಸಿಂಗಿಯ ತಂದೆ ರಾಜಕುಮಾರನನ್ನು ಕಾಲಿನಿಂದ ತುಳಿದು ದೂರಕ್ಕೆ ನೂಕಿದ. ಇವನ ತಲೆ ಕಡಿಯಿರಿ, ಕೊಂಡು ಹೋಗಿ ಎಂದು ಆಳುಗಳಿಗೆ ಹೇಳಿದ. ಸಿಪಾಯಿಗಳು ರಾಜಕುಮಾರನನ್ನು ಎಳೆದುಕೊಂಡು ಹೋದರು. ಆಗ ಅವರೆದುರು ಸಿಂಗಿ ಸಿಕ್ಕಿದಳು. ಸಿಪಾಯಿಗಳಿಂದ ಅವನನ್ನು ಬಿಡಿಸಿ ತಂದೆಯ ಎದುರಿಗೆ ತಂದು ನಿಲ್ಲಿಸಿ. "ನನಗೊಪ್ಪುವ ಹುಡುಗನನ್ನು ನಾನು ಮದುವೆಯಾದರೆ ನಿನ್ನ ಅಡ್ಡಿ ಯಾಕೆ?" ಎಂದು ತಂದೆಯನ್ನು ಪ್ರಶ್ನಿಸಿದಳು. ತಂದೆ "ನನ್ನ ಅಡ್ಡಿ ಇಲ್ಲ ಮಗಾ" ಎಂದ. ರಾಜಕುಮಾರ ಸಿಂಗಿಯನ್ನು ಮದುವೆಯಾಗಿ ತನ್ನರಮನೆಗೆ ಕರೆದುಕೊಂಡು ಬಂದ.

ತನ್ನ ಅರಮನೆಯಲ್ಲಿ ಒಂದು ದೊಡ್ಡ ಸಮಾರಾಧನೆ ಮಾಡಿಸಿದ. ಸಮಾರಾಧನೆಗೆ ಎಲ್ಲರನ್ನೂ ಬರಹೇಳಿದ. ಸಭೆಯಲ್ಲಿ ಕೂಡಿದ ಜನರೊಡನೆ ತನ್ನ ಹುಟ್ಟಿನ ಕತೆಯನ್ನು ಹೇಳಿದ. ಆ ಕತೆ ಕೇಳಿ ಅರಸ ಎದ್ದು ಬಂದು ಮಕ್ಕಳನ್ನು ಬಿಗಿದಪ್ಪಿಕೊಂಡ, ತನ್ನ ದೊಡ್ಡ ರಾಣಿ ಮತ್ತು ಪರಿವಾರದವರ ತಲೆ ಕಡಿಸಿದ. ಚಿಕ್ಕ ರಾಣಿಯನ್ನು ಮನೆಗೆ ಕರೆಸಿಕೊಂಡು ಮಕ್ಕಳೊಡನೆ ಚಿನ್ನದ ಅರಮನೆಯಲ್ಲಿ ಸುಖವಾಗಿದ್ದ.

ಟಿಪ್ಪಣಿಗಳು

೧. ಅಂಡಿ – ಗೊರಟಿನೊಳಗಿನ ತಿರುಳು
೨. ದಂಡು – ಸೇನೆಗೆ ಕರೆ
೩. ಕೇಂಜವ ಹಕ್ಕಿ – ದೊಡ್ಡ ಜಾತಿಯ ಒಂದು ಕಾಲ್ಪನಿಕ ಹಕ್ಕಿ
೪. ಪಾವಲಿ – ೨೫ ಪೈಸೆ
೫. ಕಡಾಯಿ – ನಾಣ್ಯ, ಕೊಪ್ಪರಿಗೆ



೪

ತೋಳ ಸಾಕಿದ ಹೆಣ್ಣು

ಒಂದು ಊರಿನಲ್ಲಿ ಒಬ್ಬ ಕುಂಬಾರನಿದ್ದ. ಅವನು ತನ್ನ ಮಡದಿಯನ್ನು ಕೂಡಿಕೊಂಡು ಮಡಿಕೆ ತಯಾರಿಗಾಗಿ ಮಣ್ಣು ತರಲು ಹೋದನು. ಕುಂಬಾರನ ಮಡದಿ ಗರ್ಭಿಣಿಯಾಗಿದ್ದಳು. ಮಣ್ಣು ತರಲು ಹೋದಲ್ಲಿ ಆಕೆ ಹೆತ್ತಳು. "ಹೆತ್ತ ಹೆಣ್ಣು ಮಗುವನ್ನು ಏನು ಮಾಡೋಣ ಮಡಿಲಲ್ಲಿ ಕಟ್ಟಿ ಕೊಳ್ಳುತ್ತೇನೆ" ಎಂದಳು ಮಡದಿ. "ಮಡಿಲಲ್ಲಿ ಅದನ್ನು ಕಟ್ಟಿಕೊಳ್ಳುವ ಬದಲು ಒಂದು ಹಿಡಿ ಮಣ್ಣು ಕಟ್ಟಿಕೊಂಡರೆ ಒಂದು ಊಟದ ಬಟ್ಟಲು (ಪಲ್ಲಯಿ)[೧] ಆದರೂ ತಯಾರಿಸಬಹುದು ಎಂದ ಕುಂಬಾರ. "ಹಾಗಾದರೆ ಸೆರಗಿನಲ್ಲಿ ಕಟ್ಟಿಕೊಳ್ಳುತ್ತೇನೆ" ಎಂದಳು ಪತ್ನಿ, "ಅದರ ಬದಲು ಒಂದು ಹಿಡಿ ಮಣ್ಣು ಕಟ್ಟಿಕೊಂಡರೆ ಒಂದು ಸಾರು ಹಾಕುವ ಪಾತ್ರೆ (ಗದ್ದವು)[೨] ಆದರೂ ಆಗಬಹುದು" ಎಂದ ಗಂಡ. ಕುಂಬಾರನ ಮಡದಿ ಮಗುವನ್ನು ಬಿದಿರ ಮೆಳೆಗೆ ಬಿಸುಟು ಮಣ್ಣು ಹೊತ್ತುಕೊಂಡು ಗಂಡನೊಂದಿಗೆ ಮನೆಗೆ ನಡೆದಳು.

ಬಿದಿರ ಮೆಳೆಗೆ ಬಿದ್ದ ಮಗು ಅಳುವುದಕ್ಕೆ ಪ್ರಾರಂಭಿಸಿತು. ಆಗ ಆ ಕಡೆ ಮೇವಿಗಾಗಿ ಏಳು ತೋಳಗಳು ಬಂದವು. ಮಗು ಆಳುವುದನ್ನು ಕೇಳಿದ ಸಣ್ಣ ತೋಳ, "ಅಣ್ಣಂದಿರಾ, ಒಂದು ಮಗು ಅಳುವುದು ಕೇಳಿಸುತ್ತದೆ. ಅದನ್ನು ಹೋಗಿ ತಂದು ನಾವು ಸಾಕೋಣ. ಮಗು ಗಂಡಾದರೆ ತಮ್ಮ, ಹೆಣ್ಣಾದರೆ ತಂಗಿ" ಎಂದಿತು. ತೋಳಗಳು ಒಪ್ಪಿಕೊಂಡವು. ಮಗುವನ್ನು ತಂದು ಗುಹೆಯಲ್ಲಿಟ್ಟು ಸಾಕತೊಡಗಿದವು.

ಮಗು ಬೆಳೆದು ದೊಡ್ಡದಾಯಿತು. ಹುಡುಗಿ ಬೆಳೆದಳು. ಬೆಳೆದ ತಂಗಿಯನ್ನು ನೋಡಿ ಸಣ್ಣ ತೋಳ "ಅಣ್ಣಂದಿರಾ, ನಮ್ಮ ತಂಗಿಯನ್ನು ಸಿಂಗಾರ ಮಾಡಬೇಕು, ತಲೆ ಕೂದಲಿಗೆ ಮುತ್ತು ಪೋಣಿಸಬೇಕು. ಹೋಗಿ ಮುತ್ತು ಸಂಗ್ರಹಿಸಿ ತರೋಣ" ಎಂದಿತು. ಎಲ್ಲಾ ತೋಳಗಳು ಒಪ್ಪಿಕೊಂಡವು. ಮುತ್ತು ತರಲು ಹೊರಟವು, ಹೊರಡುವಾಗ "ತಂಗಿ ಯಾರು ಕರೆದರೂ ಮಾತನಾಡಬೇಡ. ಯಾವ ಮಾಂಸ ಬೇಕಾದರೂ ಸುಟ್ಟು ತಿನ್ನು, ಹಂದಿಮಾಂಸ ಮಾತ್ರ ಸುಡಬೇಡ" ಎಂದು ಹೇಳಿ ಗುಹೆಯ ಬಾಗಿಲು ಮುಚ್ಚಿ ಮುತ್ತು ತರಲು ಹೊರಟು ಹೋದವು.

ಹೀಗೆ ಕೆಲವು ದಿವಸ ಕಳೆಯಿತು. ಒಂದು ದಿವಸ ಹುಡುಗಿಗೆ ಹಂದಿ ಮಾಂಸ ತಿನ್ನುವ ಮನಸ್ಸಾಯಿತು. ಒಲೆಗೆ ಒಂದು ತುಂಡು ಹಂದಿಮಾಂಸ ಹಾಕಿದಳು. ಹಂದಿಯ

ಕೊಬ್ಬಿನಿಂದ ಬೆಂಕಿ ನಂದಿ ಹೋಯಿತು. ಈ ಹುಡುಗಿ ಬೆಕ್ಕನ್ನು ಕರೆದು "ಬೆಕ್ಕೇ ಬೆಕ್ಕೇ ಬೆಂಕಿ ನಂದಿ ಹೋಯಿತಲ್ಲಾ. ಈಗೇನು ಮಾಡೋಣ? ಎಲ್ಲಿಯಾದರೂ ಬೆಂಕಿ ಕಾಣಿಸುವುದೇ ನೋಡು" ಎಂದಳು. ಬೆಕ್ಕು ಗುಹೆಯ ಮೇಲ್ಗಡೆ ಹತ್ತಿ ನೋಡಿತು. ದೂರದಲ್ಲಿ ಅದಕ್ಕೆ ಸೂಜಿಯಷ್ಟು ಬೆಂಕಿ ಕಂಡಿತು.

ಬೆಂಕಿ ತರಲು ಹುಡುಗಿ ಬೆಕ್ಕಿನೊಂದಿಗೆ ಹೊರಟಳು. ನಡೆದು ನಡೆದು ಬೆಂಕಿ ಕಾಣುವ ಮನೆಗೆ ಬಂದಳು. ಅದೊಂದು ರಕ್ಕಸಿಯ ಮನೆ. ರಕ್ಕಸಿಯೊಡನೆ ಬೆಂಕಿ ಕೇಳಿದಳು. ರಕ್ಕಸಿಗೆ ಹುಡುಗಿಯನ್ನು ನೋಡಿದ ಕೂಡಲೇ ಆಕೆಯನ್ನು ತಿನ್ನುವ ಆಸೆಯಾಯಿತು. ಹೇಗಾದರೂ ಮಾಡಿ ಅವಳನ್ನು ಮುಗಿಸಬೇಕೆಂದು ಬಗೆದಳು. "ನೀನು ರಾತ್ರಿ ಯಾಕೆ ನಿನ್ನ ಮನೆಗೆ ಹೋಗುತ್ತಿ? ಬೆಂಕಿ ಕೊಡುತ್ತೇನೆ. ನಾಳೆ ಬೆಳಗ್ಗೆ ಹೋಗಬಹುದು" ಎಂದಳು. ಹುಡುಗಿ ಒಪ್ಪಿ ಮಲಗಿಕೊಂಡಳು. ಹುಡುಗಿಗೆ ನಿದ್ದೆ ಬಂತೆಂದು ಬಗೆದು ರಕ್ಕಸಿ ಕತ್ತಿ ಮಸೆಯಲು ಪ್ರಾರಂಭಿಸಿದಳು. ಬೆಕ್ಕಿಗೆ ಮಾತ್ರ ನಿದ್ದೆ ಬರಲಿಲ್ಲ. ಬೆಕ್ಕು "ಕೊರು ಕೊರು ಎಂತಜ್ಜೀ ನನಗೆ ನಿದ್ದೆ ಬರುವುದಿಲ್ಲ. ನಮ್ಮಕ್ಕ ಆದರೆ ಅಕ್ಕಿ ಹುರಿದು ಕೊಬ್ರಿ ಬೆರೆಸಿ ಕೊಡುತ್ತಿದ್ದಳು. ಅದನ್ನು ತಿಂದು ನಿದ್ದೆ ಮಾಡುತ್ತಿದ್ದೆ" ಎಂದಿತು. ಅಜ್ಜಿ ಅಕ್ಕಿ ಹುರಿದು ಕೊಬ್ರಿ ಬೆರೆಸಿ ಬೆಕ್ಕಿಗೆ ಕೊಟ್ಟಳು. ಅದನ್ನು ತಿಂದು ಬೆಕ್ಕು ಮಲಗಿತು. ಬೆಕ್ಕಿಗೆ ನಿದ್ರೆ ಬಂತೆಂದು ಬಗೆದು ಅಜ್ಜಿ ಪುನಃ ಕತ್ತಿ ಮಸೆಯಲು ಪ್ರಾರಂಭಿಸಿದಳು. ಬೆಕ್ಕಿಗೆ ನಿದ್ರೆ ಬಂದಿರಲಿಲ್ಲ. ಸ್ವಲ್ಪ ಹೊತ್ತಾದ ನಂತರ ಬೆಕ್ಕು ಕೇಳಿತು "ಕೊರು ಕೊರು ಎಂತದಜ್ಜೀ ನಿದ್ದೆ ಬರುವುದಿಲ್ಲ. ನಮ್ಮಕ್ಕ ಆದ್ರೆ ಕೋಳಿ ಕೊಂದು ಪದಾರ್ಥ ಮಾಡುತ್ತಿದ್ದಳು. ರೊಟ್ಟಿ ಮಾಡಿ ಕೊಡುತ್ತಿದ್ದಳು. ಅದನ್ನು ತಿಂದು ನಿದ್ದೆ ಮಾಡುತ್ತಿದ್ದೆ" ಎಂದಿತು. ಅಜ್ಜಿ ಕೋಳಿ ಕೊಂದು ಪದಾರ್ಥ[1] ಮಾಡಿದಳು. ಅಕ್ಕಿ ಕಡೆದು ರೊಟ್ಟಿ ಮಾಡಿದಳು. ಕೋಳಿ ರೊಟ್ಟಿ ತಿಂದಾದ ಮೇಲೆ ಹುಡುಗಿಯನ್ನು ಕರೆದು ಎಚ್ಚರಿಸಿತು. ಹುಡುಗಿಯೂ ಕೋಳಿ ರೊಟ್ಟಿ ತಿಂದಳು. ಆಗ ಬೆಳಗಾಯಿತು.

"ಬೆಳಗಾಯಿತಜ್ಜಿ, ಬೆಂಕಿ ಕೊಡು ನಾವಿನ್ನು ಬರುತ್ತೇವೆ" ಎಂದಳು ಹುಡುಗಿ. "ಬೆಂಕಿ ಕೊಡುತ್ತೇನೆ. ನನ್ನ ಹಂಡೆಗೆ ನೀರು ತುಂಬಿಸಿ ಕೊಡು" ಎಂದು ಒಂದು ಸಾವಿರ ತೂತಿನ ಕೊಡಪಾನ ತಂದುಕೊಟ್ಟಳು ಮುದುಕಿ. ಹುಡುಗಿ ಕೊಡವನ್ನು ಹಿಡಿದುಕೊಂಡು ಹೋಗಿ ಬಾವಿಗಿಳಿಸಿ ಮೇಲಕ್ಕೆತ್ತುವಾಗ ನೀರೆಲ್ಲಾ ಖಾಲಿಯಾಗುತ್ತಿತ್ತು. ಹುಡುಗಿ ನೀರು ಸೇದಲಾಗದೆ ಅಳುತ್ತಾ ಕುಳಿತಳು. ಆಗ ಬಾವಿಯೊಳಗಿದ್ದ ಕಪ್ಪೆಗಳೆಲ್ಲಾ ಕೂಡಿ "ಅಳಬೇಡಕ್ಕಾ ನಾವು ನಿನಗೆ ಸಹಾಯ ಮಾಡುತ್ತೇವೆ. ಕೊಡವನ್ನು ಇಳಿಸು" ಎಂದವು. ಹುಡುಗಿ ಬಾವಿಗೆ ಕೊಡವನ್ನು ಇಳಿಸಿದಳು. ಕಪ್ಪೆಗಳೆಲ್ಲ ಬಂದು ಕೊಡದ ತೂತಿನಲ್ಲಿ ಕುಳಿತುಕೊಂಡವು. ಹುಡುಗಿ ಹಂಡೆಗೆ ನೀರು ತುಂಬಿಸಿದಳು. "ಬೆಂಕಿ ಕೊಡಜ್ಜೀ ನಾವಿನ್ನು ಹೋಗುತ್ತೇವೆ" ಎಂದಳು. ಆಗ ಅಜ್ಜಿ ನನ್ನ ಒಂದು ಕರಿ ಬಟ್ಟೆ ಒಗೆದು ಬಿಳಿ ಮಾಡಿ ಕೊಟ್ಟು ಹೋಗು ಎಂದು ಒಂದು ಕರಿ ಬಟ್ಟೆಯನ್ನು ಕೊಟ್ಟಳು.

ಹುಡುಗಿ ಅದನ್ನೆತ್ತಿಕೊಂಡು ನದಿಯ ದಡಕ್ಕೆ ಹೋಗಿ ಅಳುತ್ತಾ ಕುಳಿತಳು. ಆಗ ಅಲ್ಲಿ ಹಾರಾಡುತ್ತಿದ್ದ ಬಿಳಿಯ ಕೊಕ್ಕರೆಗಳೆಲ್ಲಾ ಹತ್ತಿರ ಬಂದು "ಅಳಬೇಡಕ್ಕ ಆ ಬಟ್ಟೆ ಚೂರಿಗೆ ನಮ್ಮ ಪುಕ್ಕಗಳನ್ನು ಕಿತ್ತು ಪೋಣಿಸಿ ಬಿಡು. ಬಟ್ಟೆ ಬಿಳಿ ಕಾಣುತ್ತದೆ' ಎಂದವು. ಹುಡುಗಿ ಹಾಗೆ ಮಾಡಿ ಬಟ್ಟೆಯನ್ನು ಒಣಗಲು ಹಾಕಿ ಅಜ್ಜಿಯೊಡನೆ "ನಾವು ಹೋಗುತ್ತೇವಜ್ಜಿ ಬೆಂಕಿ ಕೊಡು" ಎಂದಳು.

ಅಜ್ಜಿ ಬೆಂಕಿ ಕೊಟ್ಟಳು. ಆಕೆಗೆ ದಾರಿಯಲ್ಲಿ ಹೋಗುವಾಗ ತಿಂದುಕೊಂಡು ಹೋಗಲು ಹುರಿದ ಹುರುಳಿ ಮತ್ತು ಅರಳನ್ನು ಕೊಟ್ಟು "ಹುರುಳಿಯನ್ನು ತಿಂದುಕೊಂಡು ಹೋಗು. ಅರಳನ್ನು ಚೆಲ್ಲುತ್ತಾ ಹೋಗು" ಎಂದಳು. ಹುಡುಗಿ ಹಾಗೆ ಮಾಡುತ್ತಾ ದಾರಿ ನಡೆದಳು. ಹಿಂದಿನಿಂದ ಬಂದ ಬೆಕ್ಕು ಅರಳನ್ನು ಹೆಕ್ಕಿ ತಿನ್ನುತ್ತಾ ಬಂತು.

ಮಧ್ಯಾಹ್ನದ ಹೊತ್ತಿಗೆ ಅಜ್ಜಿಯ ಮಗ ಮನೆಗೆ ಹಿಂತಿರುಗಿದ ಬರುವಾಗಲೇ ನರಹುಳ ವಾಸನೆ ಬರುತ್ತದೆ. "ಎಲ್ಲಿದೆ ನರಮಾಂಸ" ಎಂದು ಕೇಳಿದ "ಮಗಾ ಒಬ್ಬಳು ಹುಡುಗಿ ಬಂದಿದ್ದಳು. ಈಗ ತಾನೇ ಹೊರಟು ಹೋದಳು. ನೀನು ವಾಸನೆ ತೆಗೆದುಕೊಂಡು ಆಕೆಯನ್ನು ಹಿಂಬಾಲಿಸು" ಎಂದಳು. ರಕ್ಕಸಿಯ ಮಗ ವಾಸನೆಯ ಬಲದಿಂದ ಹುಡುಗಿ ಹೋದ ಜಾಡನ್ನು ಅರಸಿಕೊಂಡು ಹುಡುಗಿಯ ಗುಹೆಯ ಬಳಿಗೆ ಹೋದನು. ಆಗ ಆ ಗುಹೆಯ ಬಾಗಿಲು ಹಾಕಿತ್ತು. "ಏಳು ಜನ ಮುತ್ತಿಗೆ ಹೋದವರು ಬಂದರು. ಮಗಳೆ ಬಾಗಿಲು ತೆಗಿ" ಎಂದ ರಕ್ಕಸ. ಆಗ ಒಂದು ಬಾಳೆ ಹೇಳಿತು. "ಏಳು ಜನ ಮುತ್ತಿಗೆ ಹೋದವರು ಬರಲಿಲ್ಲ ಮಗಳೇ ಬಾಗಿಲು ತೆರೆಯಬೇಡ" ರಕ್ಕಸ ಬಾಳೆಯನ್ನು ಕಡಿದು ಹಾಕಿದ. ರಕ್ಕಸ ಮನೆ ಬಾಗಿಲಲ್ಲೇ ಕಾದು ಕುಳಿತ. ಪುನಃ "ಏಳು ಜನ ಅಣ್ಣಂದಿರು ಬಂದರು ಮಗಳೇ ಬಾಗಿಲ ತೆಗಿ" ಎಂದ ರಕ್ಕಸ. ಆಗ "ಬಾಗಿಲು ತೆಗೀಬೇಡ, ಅಣ್ಣಂದಿರು ಬರಲಿಲ್ಲ" ಎಂದಿತು ಹಲಸಿನ ಮರ. ರಕ್ಕಸ ಸಿಟ್ಟಿನಿಂದ ಹಲಸಿನ ಮರವನ್ನು ಕಡಿದು ಹಾಕಿದ. ಮತ್ತೊಮ್ಮೆ ರಕ್ಕಸ ಹುಡುಗಿಯನ್ನು ಬಾಗಿಲು ತೆರೆಯುವಂತೆ ಕೇಳಿಕೊಂಡ. ಆಗ ಸಮುದ್ರ "ಇಲ್ಲ ಇಲ್ಲ ಬಾಗಿಲು ತೆಗಿಬೇಡ" ಎಂದಿತು. ಕೋಪದಲ್ಲಿ ರಕ್ಕಸ ಸಮುದ್ರದ ನೀರನ್ನೇ ಕುಡಿದುಬಿಟ್ಟ. ಪುನಃ ಹುಡುಗಿಯೊಡನೆ ಬಾಗಿಲು ತೆಗೆಯುವಂತೆ ಕೇಳಿಕೊಂಡ. ಆಗ ಕಾಗೆಯೊಂದು ಬಾಗಿಲು ತೆಗೀಬೇಡ ಎಂದಿತು. ರಕ್ಕಸ ಕಾಗೆಯನ್ನು ಹಿಡಿಯಲು ಹೋದ ಕಾಗೆ ಹಾರಿ ಹೋಯಿತು. ರಕ್ಕಸನ ಕೈಗೆ ಸಿಗದೆ ಗುಹೆಯ ಸುತ್ತ ಹಾರಾಡುತ್ತಾ "ಬಾಗಿಲು ತೆಗೀಬೇಡ, ಬಾಗಿಲು ತೆಗಿಬೇಡ" ಎಂದು ಕೂಗಾಡುತ್ತಿತ್ತು.

ಅಷ್ಟರಲ್ಲಿ ಮುತ್ತು ತರಲು ಹೋದ ತೋಳಗಳು ಗುಹೆಗೆ ಹಿಂತಿರುಗಿದವು. ತೋಳಗಳು ತಂಗಿಯನ್ನು ಕರೆದು ಬಾಗಿಲು ತೆರೆಯುವಂತೆ ಹೇಳಿದರು. ಆಗ ಕಾಗೆಯು ಕೂಡ "ಅಣ್ಣಂದಿರು ಬಂದ್ರು ಬಾಗಿಲು ತೆರೆ ಬಾಗಿಲು ತೆರೆ" ಎಂದಿತು. ಹುಡುಗಿ ಬಾಗಿಲು

ತೆರೆದಳು. ತೋಳಗಳು ಒಳಗೆ ಹೊಕ್ಕವು. ಅಣ್ಣಂದಿರು ಹಸಿದಿದ್ದಾರೆ. ಅಡುಗೆ ಬೇಗನೆ ಮಾಡೋಣವೆಂದು ಕಟ್ಟಿಗೆ ಕೊಂಡೊಯ್ಯಲು ಹುಡುಗಿ ಹೊರಬಂದಳು. ಹುಡುಗಿ ಹೊರಬಂದು ಒಳಗೆ ಹೋಗುವಷ್ಟರಲ್ಲಿ ರಕ್ಕಸ ಗುಹೆಯ ಬಾಗಿಲಲ್ಲಿ ವಿಷದ ಹಲ್ಲೊಂದನ್ನು ಹೂತಿಟ್ಟ. ಹುಡುಗಿ ಒಳಗೆ ಹೋಗುವಾಗ ಅದು ಆಕೆಯ ಕಾಲಿಗೆ ತಾಗಿ ಸ್ಮೃತಿ ತಪ್ಪಿ ಬಿದ್ದು ಬಿಟ್ಟಳು. ಆಗ ತೋಳಗಳು ಕಾಡಿಗೆ ಓಡಿ ಹೋಗಿ ಸೊಪ್ಪು ಮದ್ದು ತಂದು ತಂಗಿಯನ್ನು ಬದುಕಿಸಿದವು. ರಕ್ಕಸ ಬಾಳೆಯ ತೋಟದಲ್ಲಿ ಅಡಗಿ ಕುಳಿತಿದ್ದ. ಅವನನ್ನು ಹುಡುಕಿ ತೋಳಗಳು ಸೀಳು ಸೀಳು ಮಾಡಿ ತಿಂದುಬಿಟ್ಟವು.

ಮತ್ತೆ ಕೆಲವು ದಿನಗಳು ಕಳೆಯುವಾಗ ಆ ಊರಿನ ರಾಜಕುಮಾರ ಆ ಕಾಡಿಗೆ ಬೇಟೆಗೆ ಬಂದ. ರಾಜಕುಮಾರ ಬೇಟೆ ಮಾಡುವಾಗ ಒಂದು ತೋಳ ಅಕಸ್ಮಾತ್ ಬಲೆಯಲ್ಲಿ ಸಿಕ್ಕಿಕೊಂಡಿತು. ತೋಳ ಸಿಕ್ಕಿಕೊಂಡದ್ದು ನೋಡಿ ಉಳಿದ ತೋಳಗಳು ಕೂಗಿಕೊಂಡು ಬಂದು ತಂಗಿಗೆ ಸುದ್ದಿ ತಿಳಿಸಿದರು. ಆಗ ಆ ಹುಡುಗಿ ರಾಜಕುಮಾರನನ್ನು ಹುಡುಕಿಕೊಂಡು ಅವನ ಬಳಿಗೆ ಬಂದಳು. ತನ್ನ ಅಣ್ಣನನ್ನು ಬಿಟ್ಟುಬಿಡುವಂತೆ ಹೇಳಿದಳು. "ನೀನು ನನ್ನನ್ನು ಮದುವೆಯಾಗುವುದಾದರೆ ನಿನ್ನ ಅಣ್ಣನನ್ನು ಬಿಡುತ್ತೇನೆ" ಎಂದ ರಾಜಕುಮಾರ. ಹುಡುಗಿ ಅದಕ್ಕೆ ಒಪ್ಪಿಕೊಂಡು ರಾಜಕುಮಾರನನ್ನು ಮದುವೆಯಾಗಿ ಸುಖವಾಗಿದ್ದಳು. ರಾಜಕುಮಾರ ಏಳು ತೋಳಗಳನ್ನು ತನ್ನ ಅರಮನೆಯ ಕಾವಲಿಗೆ ನೇಮಿಸಿಕೊಂಡನು.

ಟಿಪ್ಪಣಿಗಳು

೧. ಪಲ್ಲಯಿ – ಮಣ್ಣಿನ ಬಟ್ಟಲು
೨. ಗದ್ದವು – ಮಣ್ಣಿನ ಪಿಂಗಾಣಿ (ಗಿನ್ನಲ್)
೩. ಪದಾರ್ಥ – ಸಾರು
೪. ಅರಳು – ಹೊದ್ಲು

***

೫

ಮೂರು ಕುದುರೆಗಳು

ಒಂದು ಊರು. ಆ ಊರಿಗೊಬ್ಬ ಅರಸ. ಅರಸನಿಗೆ ಮೂರು ಜನ ಮಕ್ಕಳು. ಒಂದು ದಿನ ಅರಸನ ಮಡದಿ ಮಕ್ಕಳನ್ನು ಕರೆದು "ಮಕ್ಕಳೇ ಊರಿಡೀ ಹೂತೋಟವಿದೆ. ನಮ್ಮ ಅರಮನೆಗೆ ಹೂತೋಟವಿಲ್ಲ. ನೀವೊಂದು ಹೂತೋಟ ಮಾಡಿ" ಎಂದಳು. ಮೂವರು ಮಕ್ಕಳು ಕೂಡಿ ಹೂವಿನ ತೋಟ ಮಾಡಿದರು. ಗಿಡಗಳೆಲ್ಲ ಬೆಳೆದು ಹೂ ಬಿಡುವ ಕಾಲ ಬಂತು. ರಾತ್ರಿ ಹೊತ್ತಿನಲ್ಲಿ ಎಲ್ಲಿಂದಲೋ ಕುದುರೆಗಳು ಬಂದು ತೋಟದ ಗಿಡಗಳನ್ನು ತಿಂದು ಹೋಗಲು ಪ್ರಾರಂಭಿಸಿದುವು. ತಾಯಿಗೆ ಅದನ್ನು ನೋಡಿ ಚಿಂತೆಯಾಯಿತು. "ನೀವು ಹೂತೋಟ ಮಾಡಿ ನನ್ನ ತಲೆಗೊಂದು ಹೂ ಇಡುವ ಭಾಗ್ಯ ಬರಲಿಲ್ಲವಲ್ಲಾ" ಎಂದು ದುಃಖಿಸಿದಳು. ಅದನ್ನು ದೊಡ್ಡ ಮಗನು ನೋಡಿ "ನಾನು ಈ ರಾತ್ರಿ ಹೂವಿನ ತೋಟ ಕಾಯುತ್ತೇನಮ್ಮ" ಎಂದ. "ಆಗಲಿ ಮಗಾ ನಿನಗೆ ರಾತ್ರಿ ಹೊತ್ತಿನಲ್ಲಿ ತಿನ್ನಲು ಹುರುಳಿ ಮತ್ತು ಅಕ್ಕಿ ಹುರಿದು ಕೊಡುತ್ತೇನೆ" ಎಂದಳು. ದೊಡ್ಡ ಮಗ ಹುರಿದ ಅಕ್ಕಿ ಮತ್ತು ಹುರುಳಿ ಹಿಡಿದುಕೊಂಡು ತೋಟಕ್ಕೆ ಹೋದ. ಅದು ತಿಂದು ಮುಗಿಯುವಾಗ ಅವನಿಗೆ ಚೆನ್ನಾಗಿ ನಿದ್ರೆ ಬಂತು. ಬೆಳಗಾಗಿ ಎದ್ದು ನೋಡುವಾಗ ತೋಟ ಪೂರಾ ಖಾಲಿಯಾಗಿತ್ತು. ಮರುದಿವಸ ಎರಡನೇ ಮಗ ತೋಟದ ಕಾವಲಿಗೆ ಹೊರಟ. ಅವನೂ ಕೂಡ ಹುರಿದ ಹುರುಳಿ ಅಕ್ಕಿ ಕಟ್ಟಿಕೊಂಡ. ಅದನ್ನು ಕೂತು ಮುಗಿಸುವಷ್ಟರಲ್ಲಿ ಅವನಿಗೆ ನಿದ್ದೆ ಬಂತು. ಎಚ್ಚರಿಕೆ ಯಾಗುವಾಗ ತೋಟ ಪೂರಾ ಖಾಲಿಯಾಗಿತ್ತು.

ಮೂರನೇ ದಿವಸ ಸಣ್ಣ ಮಗ ಬಂದು. "ಅಮ್ಮಾ, ಈ ದಿನ ತೋಟದ ಕಾವಲಿಗೆ ನಾನು ಹೋಗುತ್ತೇನೆ" ಎಂದ. "ನಿನ್ನ ಅಣ್ಣಂದಿರು ಕಾದು ಕೂತುಕೊಂಡಾಯಿತು. ಇನ್ನು ನೀನೊಬ್ಬ ಬಾಕಿ, ಹೋಗು ಎಂದು ಹುರುಳಿ ಮತ್ತು ಅಕ್ಕಿ ಕಾಳು ಹುರಿದುಕೊಟ್ಟಳು. ಸಣ್ಣ ಮಗನು ಒಂದು ಲಿಂಬೆ ಹುಳಿ, ಒಂದು ಚೂರಿ, ಒಂದು ಚಾಟಿ ಹಿಡಿದುಕೊಂಡು ಕಾವಲಿಗೆ ಹೊರಟ.

ಮೂರನೇ ಮಗ ತೋಟಕ್ಕೆ ಕಾವಲು ಕೂತ. ಹುರಿದ ಹುರುಳಿ ಅಕ್ಕಿ ತಿಂದು ಮುಗಿಸಿದ. ಅಷ್ಟರಲ್ಲಿ ನಿದ್ದೆ ಬರಲು ಪ್ರಾರಂಭವಾಯಿತು. ಕೂಡಲೇ ಚೂರಿ ತೆಗೆದು

ಕೈ ಬೆರಳಿಗೆ ಗಾಯ ಮಾಡಿಕೊಂಡು ಹುಳಿರಸ ಹಿಂಡಿದ. ಅವನಿಗೆ ರಾತ್ರಿ ಇಡೀ ನಿದ್ದೆ ಬರಲಿಲ್ಲ. ಮಧ್ಯರಾತ್ರಿಯಾಯಿತು. ಮೇಲಿನ ಮಿರ್ಲೋಕದಿಂದ ಒಂದು ಬೊಳ್ಳಿ[೧] ಕುದುರೆ ತೋಟಕ್ಕೆ ಇಳಿದು ಬಂತು. ಅದರ ಬೆಳಕಿನಲ್ಲಿ ಇಡೀ ಲೋಕವೇ ಬೆಳ್ಳಗಾಯಿತು. ಕುದುರೆ ಬಂದು ಹೂವಿನ ಗಿಡಕ್ಕೆ ಬಾಯಿ ಹಾಕಿತು. ಮೆಲ್ಲ ಹಿಂದಿನಿಂದ ಹೋಗಿ ಬಾಲದಲ್ಲಿ ಹಿಡಿದುಕೊಂಡು ಚಾಟಿಯಲ್ಲಿ ಮೂರು ಪೆಟ್ಟುಕೊಟ್ಟ. "ದಮ್ಮಯ್ಯ ಇನ್ನು ಮುಂದೆ ಬರುವುದಿಲ್ಲ. ನನ್ನನ್ನು ಬಿಟ್ಟುಬಿಡು" ಎಂದಿತು. ಇನ್ನು ಮೂರು ಪೆಟ್ಟು ಕೊಟ್ಟ. ನೀನು ನೆನೆಸಿದಾಗ ಬಂದು ನಾನು ಸಹಾಯ ಮಾಡುತ್ತೇನೆ ಬಿಟ್ಟುಬಿಡು ಎಂದಿತು. ಕುದುರೆಯನ್ನು ಬಿಟ್ಟ. ಪುನಃ ಹೋಗಿ ತನ್ನ ಸ್ಥಾನದಲ್ಲಿ ಕುಳಿತುಕೊಂಡ. ಒಂದು ಜಾವ ಕಳೆಯುವಾಗ ಮತ್ತೊಮ್ಮೆ ಜಗ್ ಎಂದಾಯಿತು. ಲೋಕವೆಲ್ಲ ಕೆಂಪಗಾಯಿತು. ಮೇಲಿನ ಮಿರ್ಲೋಕದಿಂದ ಒಂದು ಮಯಿರ[೨] ಕುದುರೆ ಇಳಿದು ತೋಟಕ್ಕೆ ಬಂತು. ಮೆಲ್ಲ ಹೋಗಿ ಅದರ ಬಾಲದಲ್ಲಿ ಹಿಡಿದು ಚಾಟಿಯಲ್ಲಿ ಮೂರು ಪೆಟ್ಟು ಕೊಟ್ಟ. "ನೀನು ನೆನೆಸಿದಾಗ ಬಂದು ಸಹಾಯ ಮಾಡುತ್ತೇನೆ. ಬಿಟ್ಟು ಬಿಡು" ಎಂದಿತು. ರಾಜಕುಮಾರ ಕುದುರೆಯನ್ನು ಬಿಟ್ಟು ತನ್ನ ಸ್ಥಾನದಲ್ಲಿ ಬಂದು ಕುಳಿತುಕೊಂಡ. ಮತ್ತೆ ಒಂದು ಜಾವ ಕಳೆಯಿತು. ಮೋಡ ಕವಿದ ಹಾಗೆ ಲೋಕವನ್ನು ಕತ್ತಲೆ ಆವರಿಸಿತು. ಮೇಲಿನ ಮಿರ್ಲೋಕದಿಂದ ಒಂದು ಕಾರಿ[೩] ಕುದುರೆ ಇಳಿದು ಬಂತು. ಹೂವಿನ ಗಿಡಕ್ಕೆ ಬಾಯಿ ಹಾಕುವುದರ ಒಳಗೆ ರಾಜಕುಮಾರ ಹೋಗಿ ಅದರ ಬಾಲದಲ್ಲಿ ಹಿಡಿದುಕೊಂಡ. ಚಾಟಿಯಲ್ಲಿ ಮೂರು ಪೆಟ್ಟುಕೊಟ್ಟ. "ದಮ್ಮಯ್ಯ ನನ್ನನ್ನು ಬಿಟ್ಟು ಬಿಡು" ಎಂದಿತು. ಪುನಃ ಮೂರು ಪೆಟ್ಟು ಕೊಟ್ಟ. "ನೀನು ನೆನೆದಾಗ ನಾನು ಬಂದು ಸಹಾಯ ಮಾಡುತ್ತೇನೆ. ನನ್ನನ್ನು ಬಿಟ್ಟು ಬಿಡು" ಎಂದಿತು. ಕುದುರೆಯನ್ನು ರಾಜಕುಮಾರ ಬಿಟ್ಟ. ಅಷ್ಟರಲ್ಲಿ ಬೆಳಗಾಯಿತು.

ಹೂವಿನ ತೋಟಕ್ಕೆ ಮತ್ತೆ ಕುದುರೆಗಳು ಬರಲಿಲ್ಲ. ಹೂವಿನ ತೋಟ ಹುಲುಸಾಗಿ ಬೆಳೆಯಿತು. ಇಡೀ ಅರಮನೆಯ ಶೋಭೆಯೇ ಹೆಚ್ಚಾಯಿತು. ಅದನ್ನು ನೋಡಿ ತಾಯಿಗೆ ಬಹಳ ಸಂತೋಷವಾಯಿತು. ಮಗನನ್ನು ಮನಃಪೂರ್ತಿ ಕೊಂಡಾಡಿದಳು. ಆಗ ಅಣ್ಣಂದಿರಿಗೆ ಸಿಟ್ಟು ಬಂತು. ಸಿಟ್ಟಿನಲ್ಲಿ ಅವರು ದೇಶಾಂತರ ಹೊರಟರು. ತಮ್ಮನೂ ಕೂಡ ಅವರೊಂದಿಗೆ ಹೊರಟ. ಏನು ಮಾಡಿದರೂ ಅವ ನಿಲ್ಲಲಿಲ್ಲ. ಅಣ್ಣಂದಿರು ಅವನಿಗೆ ಹೊಡೆದರು, ಬಡಿದರು. ಆದರೂ ಅವ ಕೇಳಲಿಲ್ಲ. ಕೊನೆಗೆ ಎರಡನೆಯವ "ಸಾಯಲಿ ಬಿಡು. ಬರಲಿ ಅವ ನಮ್ಮೊಂದಿಗಿರಲಿ" ಎಂದ. ಮೂವರೂ ನಡೆದು ನಡೆದು ಕತ್ತಲಾಗುವಾಗ ಒಂದು ಅಡುಗೂಲಜ್ಜಿ ಮನೆ ಸೇರಿದರು. ಅಲ್ಲಿ ಊಟ ಮಾಡಿ ರಾತ್ರಿ ಮಲಗುವಾಗ ಹಿರಿಯ ರಾಜಕುಮಾರ "ಈ ಊರಿನ ಸ್ಥಿತಿಗತಿ ಏನಜ್ಜಿ?" ಎಂದು ಕೇಳಿದ. ಆಗ ಅಜ್ಜಿಯು "ಹಾಗೋ ಮಗ ಈ ಊರಿನಲ್ಲಿ ಒಬ್ಬಳು ರಾಜಕುಮಾರಿ ಇದ್ದಾಳೆ. ಬಹಳ ಚೆಲುವೆ. ಆಕೆ ಮೇಲುಪ್ಪರಿಗೆಯಲ್ಲಿ ಗವಾಕ್ಷಿ ಬಳಿ

ಕುಳಿತು ಗವಾಕ್ಷಿಯಿಂದ ತನ್ನ ಒಂದು ಮೊಲೆ ಹೊರಗೆ ಹಾಕುತ್ತಾಳೆ. ಎದುರು ರಸ್ತೆಯಿಂದ ಹಾದು ಹೋಗುವ ಯಾವ ಗಂಡಸು ಅವಳ ಮೊಲೆ ತೊಟ್ಟಿಗೆ ಲಿಂಬೆ ಹಣ್ಣಿನಲ್ಲಿ ಗುರಿ ಇಟ್ಟು ಹೊಡೆಯುತ್ತಾನೋ ಅವನನ್ನೇ ಮದುವೆಯಾಗುವುದೆಂದು ಪ್ರತಿಜ್ಞೆ ಮಾಡಿಕೊಂಡಿದ್ದಾಳೆ" ಎಂದಳು. ಹಾಗಾದರೆ ನಾವು ಕೂಡ ನಾಳೆ ಪ್ರಯತ್ನ ಮಾಡಬೇಕೆಂದು ಹೇಳಿ ಆ ರಾತ್ರಿ ಮಲಗಿದರು.

ಮರುದಿವಸ ಬೆಳಗ್ಗೆ ಎದ್ದು ಇಬ್ಬರೂ ಅರಮನೆ ಕಡೆಗೆ ಹೊರಟರು. ಆಗ ಸಣ್ಣವನೂ ಅವರೊಂದಿಗೆ ಹೊರಟ. ನೀನು ಬರಬೇಡವೆಂದು ತಡೆದರೂ ಆತ ಕೇಳಲಿಲ್ಲ. ಕೊನೆಗೆ ಅವನನ್ನು ಒಂದು ಕೋಣೆಯಲ್ಲಿ ಕಟ್ಟಿ ಹಾಕಿ ಇವರು ಹೋದರು. ಸ್ವಲ್ಪ ಹೊತ್ತಿನ ನಂತರ ಅಜ್ಜಿಯೊಡನೆ ದಮ್ಮಯ್ಯ ಹಾಕಿ ಕಿರಿಯವ ಹಗ್ಗ ಬಿಚ್ಚಿಸಿಕೊಂಡ. ಮನೆಯ ಹಿಂಬದಿಗೆ ಹೋಗಿ ಬೊಳ್ಳಿ ಕುದುರೆಯನ್ನು ನೆನೆದ. ಬೊಳ್ಳಿ ಕುದುರೆ ಬಂತು. ನನಗೆ ರಾಜಕುಮಾರನ ಉಡುಗೆ ತೊಡುಗೆ ಬೇಕು ಎಂದ. ಕೂಡಲೇ ಅದು ಸಿದ್ಧವಾಯಿತು. ಉಡುಪು ಧರಿಸಿಕೊಂಡ. ಕೈಯಲ್ಲೊಂದು ಲಿಂಬೆ ಹುಳಿ ಹಿಡಿದುಕೊಂಡು ಅರಮನೆಯ ಎದುರು ಕುದುರೆ ಓಡಿಸಿದ. ಆಗ ಅಲ್ಲಿ ಸಾವಿರಾರು ಜನರು ನೆರೆದಿದ್ದರು. ಯಾರಿಂದಲೂ ಗುರಿ ಇಟ್ಟು ಹೊಡೆಯಲು ಸಾಧ್ಯವಾಗದೆ ಪೇಚಾಡುತ್ತಿದ್ದರು. ಸಣ್ಣ ರಾಜಕುಮಾರ ಮಿಂಚಿನ ವೇಗದಲ್ಲಿ ಕುದುರೆಯನ್ನೇರಿ ಹೋಗಿ ಗುರಿ ಇಟ್ಟು ಹೊಡೆದು ಅಲ್ಲಿ ನಿಲ್ಲದೆ ಕುದುರೆ ಓಡಿಸಿ ಹೋಗಿಬಿಟ್ಟ. ಅಜ್ಜಿಯ ಮನೆಗೆ ಬಂದು ಕುದುರೆಯನ್ನು ಮಾಯವಾಗುವಂತೆ ಹೇಳಿ ತನ್ನನ್ನು ಮೊದಲಿನಂತೆ ಕಟ್ಟಿ ಹಾಕಲು ಹೇಳಿದ. ಅಜ್ಜಿ ಹಾಗೆ ಮಾಡಿದಳು. ಅಣ್ಣಂದಿರು ಸಂಜೆಗೆ ಹಿಂತಿರುಗಿದರು. "ಏನಾಯಿತು? ಯಾರು ಗೆದ್ದರು?" ಎಂದು ತಮ್ಮ ಕೇಳಿದ. "ಯಾರೋ ಒಬ್ಬ ಬೆಳ್ಳಿ ಕುದುರೆ ಮೇಲೆ ಕುಳಿತು ಬಂದ ರಾಜಕುಮಾರ ಗುರಿ ಇಟ್ಟು ಹೊಡೆದು ಹೋದ" ಎಂದರು.

ಮರುದಿನ ಇಬ್ಬರು ಅಣ್ಣಂದಿರು ತಮ್ಮನನ್ನು ಕಟ್ಟಿ ಹಾಕಿ ಹೊರಟರು. ಸ್ವಲ್ಪ ಹೊತ್ತಿನ ನಂತರ ಅಜ್ಜಿಯೊಡನೆ ಅಂಗಲಾಚಿ ಬಿಡಿಸುವಂತೆ ಕಿರಿಯವ ಬೇಡಿಕೊಂಡ. ಅಜ್ಜಿ ಹಗ್ಗ ಬಿಡಿಸಿದಳು. ಸಣ್ಣ ರಾಜಕುಮಾರ ಮನೆಯ ಹಿಂಬದಿಗೆ ಹೋಗಿ ಮಯಿರ ಕುದುರೆಯನ್ನು ನೆನೆದ. ಕುದುರೆ ಬಂತು. ತನಗೆ ರಾಜಕುಮಾರನ ಉಡುಪು, ಚಂದ್ರಾಯುಧ, ಲಿಂಬೆ ಹುಳಿಬೇಕೆಂದ, ಎಲ್ಲವೂ ಸಿದ್ಧವಾಯಿತು. ಕುದುರೆ ಏರಿ ಮಿಂಚಿನ ವೇಗದಲ್ಲಿ ಹೋಗಿ ಹುಳಿಯನ್ನು ಗುರಿಯಿಟ್ಟು ಬಿಸಾಡಿದ. ಕುದುರೆಯನ್ನು ದೌಡಾಯಿಸಿದ, ರಾಜಕುಮಾರಿ ಹಿಡಿದುಕೊಳ್ಳಿ ಹಿಡಿದುಕೊಳ್ಳಿ ಎಂದು ಬೊಬ್ಬಿಡುತ್ತಿದ್ದಂತೆ ರಾಜಕುಮಾರ ಬಹಳ ದೂರ ಹೋಗಿಯಾಗಿತ್ತು. ಆ ದಿನವೂ ಅಣ್ಣಂದಿರು ಸಂಜೆ ಹೊತ್ತಿಗೆ ಬಂದರು. ಸಣ್ಣ ರಾಜಕುಮಾರ ಅದರ ಮೊದಲೇ ಅಜ್ಜಿ ಮನೆಗೆ ಬಂದು ಕಟ್ಟಿಸಿಕೊಂಡಾಗಿತ್ತು. ಅಣ್ಣಂದಿರೊಡನೆ ಅಜ್ಜಿ "ಈ ದಿನ ಯಾರು ಗೆದ್ದರು ಮಗಾ ಎಂದು ಕೇಳಿದರು. ಈ ದಿನವೂ ಯಾರೋ ಕುದುರೆ ಮೇಲೆ ಬಂದಿದ್ದ. ಲಿಂಬೆ ಹುಳಿ ಗುರಿಯಿಟ್ಟು ಬಿಸಾಡಿ ಹೋದ" ಎಂದರು.

ಮೂರನೇ ದಿವಸವೂ ಕೂಡ ಅಣ್ಣಂದಿರು ತಮ್ಮನನ್ನು ಕಟ್ಟಿ ಹಾಕಿ ಅರಮನೆಗೆ ಹೊರಟರು. ಅವರು ಹೊರಟು ಹೋದ ಕೂಡಲೇ ಅಜ್ಜಿ ತಮ್ಮನೊಡನೆ ಬಿಡಿಸುವಂತೆ ಅಂಗಲಾಚಿ ಬೇಡಿ ಬಿಡಿಸಿಕೊಂಡು ಮನೆಯ ಹಿಂಬದಿಗೆ ಹೋಗಿ ಕಾರಿಯ ಕುದುರೆಯನ್ನು ಜ್ಞಾಪಿಸಿಕೊಂಡ. ಕೂಡಲೇ ಕುದುರೆ ಹಾಜರಾಯಿತು. ತನಗೆ ಬೇಕಾದ ರಾಜಕುಮಾರನ ಉಡುಪು, ಆಯುಧ, ಲಿಂಬೆಹುಳಿಗಳನ್ನು ಪಡೆದುಕೊಂಡು ಕುದುರೆ ಏರಿ ಅರಮನೆಯ ಕಡೆ ಓಡಿಸಿದ. ವೇಗವಾಗಿ ಕುದುರೆ ಮೇಲೆ ಹೋಗುತ್ತಿರುವಾಗಲೇ ಲಿಂಬೆಹುಳಿ ಗುರಿಯಿಟ್ಟು ಬಿಸಾಡಿದ. ಲಿಂಬೆಹುಳಿ ತಾಗಿದ ಕೂಡಲೇ ರಾಜಕುಮಾರಿ ದೂತರನ್ನು ಅಟ್ಟಿ ಅವನನ್ನು ಹಿಡಿಯುವಂತೆ ಹೇಳಿದಳು. ದೂತರು ಅವನನ್ನು ಹಿಡಿಯಲು ಓಡಿದರು. ಆದರೆ ಅವನು ಸಿಗಲಿಲ್ಲ. ಅವನ ಒಂದು ಕಾಲಿನ ಎಕ್ಕಡ ಮಾತ್ರ ಬಿದ್ದು ಹೋಯಿತು. ರಾಜಕುಮಾರಿ ಅದನ್ನು ತರಿಸಿಕೊಂಡಳು. ಸಣ್ಣ ರಾಜಕುಮಾರ ಅಜ್ಜಿ ಮನೆಗೆ ಹಿಂತಿರುಗಿ ಮೊದಲಿನಂತೆ ಹಗ್ಗದಲ್ಲಿ ಕಟ್ಟಿಸಿಕೊಂಡ. ಸಂಜೆ ಹೊತ್ತಿಗೆ ಅಣ್ಣಂದಿರು ಮನೆಗೆ ಹಿಂತಿರುಗಿದರು. "ಈ ದಿನ ಏನಾಯ್ತು ಮಗಾ?" ಎಂದು ಅಜ್ಜಿ ಕೇಳಿದಳು. "ಈ ದಿನವೂ ಯಾರೋ ಒಬ್ಬ ಬಂದು ಹುಳಿ ಬಿಸಾಡಿ ಹೋದ" ಎಂದಷ್ಟೇ ಉತ್ತರಿಸಿ ಸುಮ್ಮಗಾದರು.

ರಾಜಕುಮಾರಿ ಒಂದು ದೊಡ್ಡ ಸಮಾರಾಧನೆ ನಡೆಸಿದಳು. ಆ ಸಮಾರಾಧನೆಗೆ ಊರಲ್ಲಿ ಇರುವವರೆಲ್ಲರೂ ಬರಬೇಕೆಂದು ಕಡ್ಡಾಯ ಆಜ್ಞೆ ಮಾಡಿದಳು. ಅಣ್ಣಂದಿರು ಸಮಾರಾಧನೆಗೆ ಹೊರಟರು. ಅಜ್ಜಿ ಮತ್ತು ಸಣ್ಣ ರಾಜಕುಮಾರ ಕೂಡ ಸಮಾರಾಧನೆಗೆ ಹೋಗಿ ಒಂದು ಮೂಲೆಯಲ್ಲಿ ಕುಳಿತುಕೊಂಡರು. ರಾಜಕುಮಾರಿ ಎಕ್ಕಡ ಹಿಡಿದುಕೊಂಡು ಯಾರ ಕಾಲಿಗೆ ಸರಿಯಾಗುತ್ತದೆಂದು ನೋಡುತ್ತಾ ಬಂದಳು. ಅದು ಯಾರ ಕಾಲಿಗೂ ಸರಿಹೊಂದಲಿಲ್ಲ. ಕೊನೆಗೆ ಅದು ಅಜ್ಜಿಯ ಹತ್ತಿರ ಕುಳಿತ ಸಣ್ಣ ತಮ್ಮನ ಕಾಲಿಗೆ ಸರಿ ಹೋಯಿತು. ಕೂಡಲೇ ಆತನನ್ನು ರಾಜಕುಮಾರಿ ಹಿಡಿದುಕೊಂಡು ಹೋಗಿ ಲಗ್ನಕ್ಕೆ ನಿಶ್ಚೈಸಿದಳು. ಆಗ ಆತನ ಅಣ್ಣಂದಿರು ಅಡ್ಡ ತಡೆದು ಗುರಿಯಿಟ್ಟು ಲಿಂಬೆಹುಳಿ ಬಿಸಾಡಿದವನು ಆತನಲ್ಲವೆಂದೇ ವಾದಿಸಿದರು. ಆತನನ್ನು ಮದುವೆಯಾಗುವ ಮೊದಲು ಪರೀಕ್ಷೆ ಮಾಡಿ ನೋಡಬೇಕೆಂದರು.

ಆ ಊರಿನಲ್ಲಿ ಒಬ್ಬ ಭಯಂಕರ ರಕ್ಕಸನಿದ್ದ. ಅವನು ಸಿಕ್ಕಿದವರನ್ನೆಲ್ಲಾ ಕೊಂದು ತಿನ್ನುತ್ತಿದ್ದ. ಅವನ ಬಳಿ ಹೋಗಲು ಎಲ್ಲರೂ ಹೆದರುತ್ತಿದ್ದರು. ಆ ರಕ್ಕಸನ ಕಾಲಿನ ಎಕ್ಕಡ ತರಬೇಕೆಂದು ರಾಜಕುಮಾರಿ ತಮ್ಮನಿಗೆ ಆಜ್ಞೆ ಮಾಡಿದಳು.

ಸಣ್ಣ ರಾಜಕುಮಾರ ರಕ್ಕಸನ ಬಳಿಗೆ ಹೊರಟು ಅವನ ಮನೆಯ ಬದಿಯಲ್ಲಿ ಅಡಗಿ ಕುಳಿತ. ರಕ್ಕಸ ಮನೆಗೆ ಬಂದು ತನ್ನ ಕುದುರೆಯನ್ನು ಕಟ್ಟಿ ಹಾಕಿದ. ಎಕ್ಕಡವನ್ನು ಮೆಟ್ಟಲಲ್ಲಿಟ್ಟು ಒಳಗೆ ಹೋದ. ಅಷ್ಟು ಹೊತ್ತಿಗೆ ಸಣ್ಣ ರಾಜಕುಮಾರ ಮೆಲ್ಲಗೆ ಹೋಗಿ ಎಕ್ಕಡಕ್ಕೆ ಕೈ ಹಾಕಿದ. ಅಷ್ಟಾಗುವಾಗ ಕುದುರೆ ಕೆನೆಯಿತು. ಸಣ್ಣ ರಾಜಕುಮಾರ ಫಕ್ಕನೆ

ಅಡಗಿ ಕುಳಿತ. ರಕ್ಕಸ ಒಮ್ಮೆ ಹೊರಗೆ ಬಂದು ನೋಡಿ ಒಳಗೆ ಹೋದ. ಆತ ಪುನಃ ಹೋಗಿ ಎಕ್ಕಡಕ್ಕೆ ಕೈ ಹಾಕಿದ. ಕುದುರೆ ಪುನಃ ಕೆನೆಯಿತು. ಹೊರಗೆ ಬಂದು ನೋಡಿದ. ಕುದುರೆಗೆರಡು ಚಾಟಿಯಲ್ಲಿ ಹೊಡೆದು ಒಳಗೆ ಹೋದ. ಆತ ಒಳಗೆ ಹೋದೊಡನೆ ಸಣ್ಣ ರಾಜಕುಮಾರ ಎಕ್ಕಡವನ್ನು ಕದ್ದು ಕೊಂಡೊಯ್ದು. ಈ ಸಲ ಕುದುರೆ ಕೆನೆಯಲಿಲ್ಲ. ರಕ್ಕಸನ ಎಕ್ಕಡ ತಂದು ಕೊಟ್ಟಾಗ ಅದು ಸಾಲದು ರಕ್ಕಸನ ಕುದುರೆಯನ್ನು ತರಬೇಕೆಂದು ರಾಜಕುಮಾರಿ ಆಜ್ಞೆ ಮಾಡಿದಳು. ರಕ್ಕಸನ ಕುದುರೆ ತರಲು ಸಣ್ಣ ರಾಜಕುಮಾರ ಹೋಗಿ ಮನೆಯ ಬದಿಯ ಮರೆಯಲ್ಲಿ ಕುಳಿತುಕೊಂಡ. ರಕ್ಕಸ ಕುದುರೆ ಮೇಲೆ ಕುಳಿತುಕೊಂಡು ಬಂದ. ಕುದುರೆಯನ್ನು ಕಟ್ಟಿ ಹಾಕಿ ಒಳಗೆ ಹೋದ. ಕೂಡಲೇ ಸಣ್ಣ ರಾಜಕುಮಾರ ಕುದುರೆ ಬಳಿಗೆ ಹೋಗಿ ಕುದುರೆಯ ಬಾಯಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಒಂದು ಕಟ್ಟ ಹಾಕಿದ. ನಂತರ ಹಗ್ಗ ಬಿಚ್ಚಿ ಅದನ್ನೇರಿಕೊಂಡು ಅರಮನೆಗೆ ಹಿಂತಿರುಗಿದ. ಕುದುರೆ ತಂದದ್ದು ಸಾಲದು ರಕ್ಕಸನ ಕಂಬಳಿ ತರಬೇಕು ಎಂದು ರಾಜಕುಮಾರಿ ಆಜ್ಞೆ ಮಾಡಿದಳು. ಸಣ್ಣ ರಾಜಕುಮಾರ ಕಂಬಳಿ ತರಲು ಹೊರಟ. ರಕ್ಕಸನ ಮನೆಯ ಬದಿಯ ಮರೆಯಲ್ಲಿ ನಿಂತುಕೊಂಡ. ರಕ್ಕಸ ಮನೆಗೆ ಬಂದು ಊಟ ಮಾಡಿ ಮಲಗಿದ. ರಾಜಕುಮಾರ ಮೆಲ್ಲಗೆ ಮನೆಯೊಳಗೆ ಸೇರಿಕೊಂಡ. ರಕ್ಕಸನ ತಲೆಯಡಿಯಿಂದ ಕಂಬಳಿ ಜಾರಿಸಿದ. ರಕ್ಕಸ ರಾಜಕುಮಾರನ ಕೈಯನ್ನು ಹಿಡಿದುಕೊಂಡ. ಅವನನ್ನು ಒಂದು ಕೋಣೆಯೊಳಗೆ ಹಾಕಿ ಚಿಲಕ ಸಿಕ್ಕಿಸಿದ. ತಾನು ಹೊರಗಡೆ ಹೋಗಿ ಬರುವುದಾಗಿಯೂ, ಬರುವಾಗ ಈತನನ್ನು ಪದಾರ್ಥ ಮಾಡಿ ಇಡಬೇಕೆಂದೂ ಹೆಂಡತಿಯೊಡನೆ ಹೇಳಿ ಹೊರಟು ಹೋದ.

ರಕ್ಕಸನ ಹೆಂಡತಿ ಎಣ್ಣೆ ಕಡಾಯಿ ಒಲೆಯಲ್ಲಿಟ್ಟಳು. ಒಲೆ ಉರಿಸಲು ಕಟ್ಟಿಗೆ ಇರಲಿಲ್ಲ. ಅವಳು ಮುದುಕಿ, ಅವಳಿಗೆ ಕಟ್ಟಿಗೆ ತರಲು ಕೂಡುವುದಿಲ್ಲ. ಕಟ್ಟಿಗೆ ನಾನು ತಂದುಕೊಡುತ್ತೇನೆ ಎಂದ ರಾಜಕುಮಾರ. ರಕ್ಕಸಿ ಅವನನ್ನು ಕಟ್ಟಿಗೆ ತರಲು ಬಿಟ್ಟಳು. ಕೊಡಲಿ ತೆಗೆದುಕೊಂಡು ಒಂದು ಮರದ ತುಂಡನ್ನು ಜೋರಾಗಿ ಸೀಳಿ ಸೀಳಿ ಹಾಕಿದ. ರಕ್ಕಸಿ ಕಟ್ಟಿಗೆ ಬಗ್ಗಿ ಬಗ್ಗಿ ಹೆಕ್ಕುತ್ತಿದ್ದಳು. ಹೆಕ್ಕಿಕೊಂಡು ಆಕೆ ಹತ್ತಿರ ಬಂದಾಗ ಕೊಡಲಿಯಿಂದ ಅವಳ ಕುತ್ತಿಗೆಗೆ ಒಂದು ಗಡಿ ಹಾಕಿದ. ರಕ್ಕಸಿ ಸತ್ತು ಹೋದಳು. ರಕ್ಕಸನ ಕಂಬಳಿ ಹಿಡಿದುಕೊಂಡು ರಾಜಕುಮಾರ ಅರಮನೆಗೆ ಹಿಂತಿರುಗಿದ. ರಕ್ಕಸನ ಕಂಬಳಿ ತಂದರೆ ಸಾಲದು ರಕ್ಕಸನನ್ನೇ ಕೊಲ್ಲಬೇಕೆಂದು ರಾಜಕುಮಾರಿ ಆಜ್ಞೆ ಮಾಡಿದಳು.

ರಾಜಕುಮಾರ ಒಬ್ಬ ಬಡಗಿಯ ಬಳಿ ಹೋಗಿ ಒಂದು ಪಂಜರ ಮಾಡಿದ. ಅದಕ್ಕೆ ಎರಡು ಬಾಗಿಲು ಮಾಡಿಸಿದ, ನಾಲ್ಕು ಚಕ್ರ ಇರಿಸಿದ. ಆ ಪಂಜರದ ಬಂಡಿಯನ್ನು ಎಳೆದು ತಂದು ರಕ್ಕಸನ ಮನೆ ಮುಂದೆ ನಿಲ್ಲಿಸಿ ರಕ್ಕಸನನ್ನು ಕರೆದ. ರಕ್ಕಸನು ಬಂಡಿಯ ಹತ್ತಿರ ಬಂದ ಕೂಡಲೆ ರಾಜಕುಮಾರ ಪಂಜರದ ಒಳಗೆ ನುಗ್ಗಿದ.

ಅವನು ನುಗ್ಗಿದ ಕೂಡಲೇ ರಾಜಕುಮಾರ ಪಂಜರದ ಇನ್ನೊಂದು ಬಾಗಿಲಿನಿಂದ ಹೊರಗೆ ಬಂದು ಅದರ ಎರಡು ಬಾಗಿಲುಗಳನ್ನು ಬಂದ್ ಮಾಡಿಬಿಟ್ಟ. ರಕ್ಕಸ ಬೋನಿನೊಳಗೆ ಬಿದ್ದ ಗಾಡಿಯನ್ನು ಎಳೆದುಕೊಂಡು ಹೋಗಿ ಅರಮನೆಯ ಎದುರು ನಿಲ್ಲಿಸಿದ. ರಕ್ಕಸನನ್ನು ನೋಡಿ ಎಲ್ಲರೂ ಹೆದರಿ ಓಡತೊಡಗಿದರು. ಕೊನೆಗೆ ಉದ್ದದ ಕಬ್ಬಿಣದ ಸಲಾಕೆ ಹಿಡಿದು ರಕ್ಕಸನನ್ನು ಹೊಡೆದು ಹೊಡೆದು ಕೊಂದುಹಾಕಿದ. ಸಣ್ಣ ರಾಜಕುಮಾರನ ಸಾಹಸವನ್ನು ಎಲ್ಲರೂ ಮೆಚ್ಚಿಕೊಂಡರು.

ರಾಜಕುಮಾರಿಯೊಂದಿಗೆ ಸಣ್ಣ ರಾಜಕುಮಾರನ ವಿವಾಹವಾಯಿತು. ಆತ ಸುಖವಾಗಿದ್ದ.

ಟಿಪ್ಪಣಿಗಳು

೧. ಬೊಳ್ಳಿ – ಬಿಳಿ
೨. ಮಯಿರ – ಕೆಂಪು
೩. ಕಾರಿ – ಕಪ್ಪು



೬

ಮಹಾಶೇಷನ ಮಗಳು

ಒಂದು ಊರು; ಆ ಊರಿಗೊಬ್ಬ ಅರಸ. ಅರಸನಿಗೊಬ್ಬ ಮಗ. ಪ್ರಧಾನಿಗೊಬ್ಬ ಮಗ. ಇಬ್ಬರು ಸಮವಯಸ್ಕರು. ಇಬ್ಬರೂ ಕೂಡಿ ಬೆಳೆದರು. ಗೆಳೆಯರಾದರು. ವಿದ್ಯೆ ಬುದ್ಧಿ ಕಲಿತರು. ನಂತರ ದೇಶಾಟನೆ ಹೋಗಿ ಬರಲು ಆಲೋಚಿಸಿದರು. ಇಬ್ಬರೂ ತಮ್ಮ ತಮ್ಮ ತಂದೆಯ ಬಳಿಗೆ ಬಂದು ಅನುಮತಿ ಕೇಳಿದರು. ಹಿರಿಯರು ಇದಕ್ಕೆ ಮೊದಲು ಸಮ್ಮತಿ ನೀಡಲಿಲ್ಲ. ಇಷ್ಟು ಸಣ್ಣ ಪ್ರಾಯದಲ್ಲಿ ಎಂತಹ ದೇಶಾಟನೆ ಎಂದು ಗದರಿಸಿ ಬಿಟ್ಟರು. ಕುಮಾರರು ಬಿಡಲಿಲ್ಲ. ಹಟ ಹಿಡಿದು ಹೊರಟೇಬಿಟ್ಟರು. ಇಬ್ಬರಿಗೂ ಅರಮನೆಯಿಂದ ತಾಯಂದಿರು ಒಂದೊಂದು ಬುತ್ತಿ ಕಟ್ಟಿಕೊಟ್ಟರು. ಒಂದು ಅನ್ನದ ಬುತ್ತಿ, ಇನ್ನೊಂದು ಹಣದ ಬುತ್ತಿ.

ಬುತ್ತಿ ಹಿಡಿದು ಇಬ್ಬರೂ ಪ್ರಯಾಣಕ್ಕೆ ಹೊರಟರು. ಬಹಳ ದೂರ ಹೋದ ಮೇಲೆ ಕತ್ತಲಾಯಿತು. ಅಲ್ಲಿ ಒಂದು ಮರದಡಿಯಲ್ಲಿ ಕುಳಿತು ಬುತ್ತಿ ಬಿಚ್ಚಿ ಊಟ ಮಾಡಿದರು. ಕೆರೆಯ ನೀರು ಕುಡಿದು ಮಲಗಿದರು. ರಾಜಕುಮಾರನಿಗೆ ಮಲಗಿದ ಕೂಡಲೇ ನಿದ್ದೆ ಬಂತು. ಮಂತ್ರಿಯ ಮಗನಿಗೆ ನಿದ್ದೆ ಬರಲಿಲ್ಲ. ಮಧ್ಯರಾತ್ರಿಯಾಯಿತು. ಅಷ್ಟು ಹೊತ್ತಿಗೆ ಅಲ್ಲಿಗೊಂದು ಮಹಾಶೇಷ ಸರ್ಪ ಬಂತು. ತನ್ನ ಬಾಯಲ್ಲಿದ್ದ ಮಾಣಿಕ್ಯದ ಹರಳನ್ನು ನೆಲದ ಮೇಲಿಟ್ಟಿತು. ಅದರ ಬೆಳಕು ನಾಲ್ಕು ಕಡೆಗೂ ಹಬ್ಬಿತ್ತು. ಆ ಬೆಳಕಿನಲ್ಲಿ ಮಹಾಶೇಷ ತನ್ನ ಮೇವು ನಡೆಸಿತು. ಮೇವು ಮುಗಿದ ಮೇಲೆ ಮಾಣಿಕ್ಯವನ್ನು ಕಚ್ಚಿಕೊಂಡು ಹೋಯಿತು. ಮಂತ್ರಿಯ ಮಗ ಇದನ್ನೆಲ್ಲಾ ಬೆರಗಾಗಿ ನೋಡುತ್ತಾ ಇದ್ದ. ನಂತರ ಮಲಗಿ ನಿದ್ದೆ ಮಾಡಿದ.

ಮರುದಿನ ಬೆಳಗಾಯಿತು. ರಾಜಕುಮಾರ ಎದ್ದ. ಪ್ರಯಾಣಕ್ಕೆ ಸಿದ್ಧತೆ ನಡೆಸಿದ. ಆಗ ಮಂತ್ರಿ ಕುಮಾರನು ತಡೆದು "ಈ ದಿನ ಇಲ್ಲೇ ಇರುವ, ನಾಳೆ ಇಲ್ಲಿಂದ ಹೊರಡೋಣ" ಎಂದ. ರಾಜಕುಮಾರ ಅದಕ್ಕೆ ಒಪ್ಪಿದ. ಆ ದಿನ ರಾಜಕುಮಾರನನ್ನು ಅಲ್ಲೇ ಕುಳ್ಳಿರಿಸಿ ಪ್ರಧಾನಿಯ ಮಗ ಪೇಟೆಗೆ ಹೊರಟ. ಪೇಟೆಯಲ್ಲಿ ಒಬ್ಬ ಕಮ್ಮಾರನ ಬಳಿಗೆ ಹೋದ ಅಲ್ಲಿ ಒಂದು ಕತ್ತರಿಗೆ ಬೆಲೆ ಮಾಡಿದ. ಕಮ್ಮಾರ ಆ ಕತ್ತರಿಗೆ ಸಾವಿರ ರೂಪಾಯಿ ಬೆಲೆ ಹೇಳಿದ. ಹಾಗಾದರೆ ಈ ಕತ್ತರಿಯ ವಿಶೇಷತೆ ಏನೆಂದು

ಕಮ್ಮಾರನೊಡನೆ ಪ್ರಧಾನಿಯ ಮಗ ಹೇಳಿದ. ಆಗ ಕಮ್ಮಾರ "ಇದು ಗಂಡ ಕತ್ತರಿ. ಇದರ ಪ್ರಭಾವವನ್ನು ನೋಡಿ" ಎಂದು ನೆಲದ ಮೇಲಿಟ್ಟ. ಕತ್ತರಿಯ ಮೇಲೊಂದು ನೊಣ ಕುಳಿತುಕೊಂಡಿತು. ಕಚಕ್ ಕಚಕ್ ನೊಣ ಮೂರು ತುಂಡಾಗಿ ಬಿತ್ತು. ಪ್ರಧಾನಿಯ ಮಗ ಕಮ್ಮಾರನಿಗೆ ಸಾವಿರ ರೂಪಾಯಿ ಕೊಟ್ಟು ಕತ್ತರಿ ಕೊಂಡುಕೊಂಡ. ಪೇಟೆಯಿಂದ ಅಕ್ಕಿ ಸಾಮಗ್ರಿ ಖರೀದಿಸಿಕೊಂಡು ವಸತಿಗೆ ಹಿಂತಿರುಗಿದ.

ಆ ದಿನ ಅಡುಗೆ ಮಾಡಿ ಊಟ ಮಾಡಿದರು. ರಾತ್ರಿ ಊಟ ಮಾಡಿ ಮಲಗಿದರು. ರಾಜಕುಮಾರ ಮಲಗಿ ನಿದ್ರೆ ಮಾಡಿದ. ಪ್ರಧಾನಿಯ ಮಗನಿಗೆ ನಿದ್ದೆ ಬರಲಿಲ್ಲ. ಮಧ್ಯರಾತ್ರಿಯಾಯಿತು. ಮಹಾಶೇಷ ಮೇವಿಗಾಗಿ ಬಂತು. ಮಾಣಿಕ್ಯದ ಹರಳನ್ನು ಹೊರ ತೆಗೆದು ಇಟ್ಟು ಮೇವಿಗೆ ಹೊರಟು ಹೋಯಿತು. ಸ್ವಲ್ಪ ಹೊತ್ತಾಗುವಾಗ ಪ್ರಧಾನಿಯ ಮಗ ಮೆಲ್ಲ ಹೋಗಿ ಮಾಣಿಕ್ಯದ ಕಲ್ಲನ್ನು ಗಂಡ ಕತ್ತರಿಯ ಮೇಲಿಟ್ಟು ಬಂದ ಮಹಾಶೇಷನಿಗೆ ಮಾಣಿಕ್ಯದ ಕಲ್ಲನ್ನು ಯಾರೋ ಮುಟ್ಟಿದರೆಂದು ತಿಳಿಯಿತು. ಓಡಿಕೊಂಡು ಬಂತು. ಕತ್ತರಿಯ ಮೇಲೆ ಬಂದದ್ದೇ ತಡ, ಕಚಕ್ ಕಚಕ್ ಸರ್ಪ ಮೂರು ತುಂಡಾಗಿ ಬಿತ್ತು. ಪ್ರಧಾನಿಯ ಮಗ ಹಾವು ಸತ್ತ ಮೇಲೆ ಕತ್ತರಿಯನ್ನೂ, ಮಾಣಿಕ್ಯದ ಹರಳನ್ನೂ ಬಟ್ಟೆಯ ಗಂಟಿನಲ್ಲಿ ಕಟ್ಟಿ ಅಡಗಿಸಿಟ್ಟುಕೊಂಡ. ಮಲಗಿ ನಿದ್ದೆ ಮಾಡಿದ.

ಮರುದಿನ ಇಬ್ಬರೂ ಎದ್ದರು. ಮುಖ ತೊಳೆದು ಫಲಹಾರ ತೀರಿಸಿ ಪ್ರಯಾಣಕ್ಕೆ ಹೊರಟರು. ಬಹಳ ದೂರ ಹೋದಾಗ ಅಲ್ಲೊಂದು ನದಿ ಸಿಕ್ಕಿತು. ನದಿ ತುಂಬಿ ಹರಿಯುತ್ತಿತ್ತು. ದಾಟಲು ಕಷ್ಟ. ಪ್ರಧಾನಿಯ ಮಗ ರಾಜಕುಮಾರನೊಡನೆ ಕೆಳ ಬದಿಯಲ್ಲಿ ನದಿ ದಾಟಲು ಅನುಕೂಲವಿದೆಯೋ ನೋಡು ಎಂದು ಕೆಳ ಪಾರ್ಶ್ವಕ್ಕೆ ಕಳುಹಿಸಿ ತಾನು ಮೇಲಿನ ಪಾರ್ಶ್ವಕ್ಕೆ ಹೋದ. ನದಿಯ ನೀರಿನಲ್ಲಿ ಮಾಣಿಕ್ಯದ ಕಲ್ಲನ್ನು ಹಿಡಿದು "ನದಿಯ ನೀರು ಎರಡು ಸೀಳಾಗಿ ನಮಗೆ ದಾಟಿ ಹೋಗಲು ಮಾರ್ಗ ಉಂಟಾಗಲಿ" ಎಂದ. ನದಿಯ ನೀರು ಎರಡು ಹೋಳಾಯಿತು. ಅರಸು ಮಗನನ್ನು ಕರೆದ. ಇಬ್ಬರೂ ನದಿ ದಾಟಿದರು.

ನದಿಯ ಆಚೆಗೆ ಒಂದು ಬಂಗಾರದ ಮನೆ ಕಾಣಿಸಿತು. ಅದು ಮಹಾಶೇಷನ ಮನೆ. ಆ ಮನೆಯ ಬಾಗಿಲಿಗೆ ಹೋದರು. ಅಲ್ಲಿ ಒಬ್ಬಳು ಹೆಣ್ಣು ಮಗಳಿದ್ದಳು. ಅವಳು ಇವರನ್ನು ಒಳಗೆ ಕರೆದಳು. ಕುಡಿಯಲು ಹಾಲು ಕೊಟ್ಟು "ನೀವು ಯಾರು?" ಎಲ್ಲಿಂದ ಬಂದವರು? ಎಂದು ಕೇಳಿದಳು. ಪ್ರಧಾನಿಯ ಮಗ ಎಲ್ಲವನ್ನೂ ವಿವರಿಸಿದ. ಮಹಾಶೇಷನನ್ನು ಕೊಂದುದಾಗಿ ಹೇಳಿದ. ಆ ಹುಡುಗಿ ತನ್ನ ತಂದೆ ಸತ್ತ ಸುದ್ದಿ ಕೇಳಿ ಅತ್ತಳು. ಇನ್ನು ನನಗೆ ಯಾರು ಗತಿ ಎಂದು ಗೋಳಾಡಿದಳು. ಆಗ ಪ್ರಧಾನಿಯ ಮಗನು "ನೀನು ಹೆದರಬೇಡ ನಿನ್ನನ್ನು ನಮ್ಮ ರಾಜಕುಮಾರ ಮದುವೆಯಾಗುತ್ತಾನೆ. ನೀನು ರಾಣಿಯಾಗಿ ಅರಮನೆಯಲ್ಲಿ ಇರಬಹುದು" ಎಂದನು. ಮಹಾಶೇಷನ ಮಗಳಿಗೆ

ಸಮಾಧಾನವಾಯಿತು. "ನಾನು ಊರಿಗೆ ಹೋಗಿ ರಾಜನೊಡನೆ ಹೇಳಿ ದಿಬ್ಬಣ ತೆಗೆದುಕೊಂಡು ಬರುತ್ತೇನೆ" ಎಂದು ಅರಸು ಮಗನನ್ನು ಅಲ್ಲೇ ನಿಲ್ಲಿಸಿ ಪ್ರಧಾನಿ ಮಗ ಊರಿಗೆ ಹೊರಟು ಹೋದ.

ಮಹಾಶೇಷನ ಮಗಳು ಸಂಜೆ ಹೊತ್ತಿಗೆ ಅರಸು ಮಗನೊಡನೆ ವಿಹಾರಕ್ಕೆ ಹೊರಟಳು. ಬಂಗಾರದ ಪಾದುಕೆ ಧರಿಸಿಕೊಂಡು ಅರಸನ ಮಗನ ಕೈ ಹಿಡಿದು ನದಿಯ ನೀರಿನ ಮೇಲೆ ನಡೆದುಕೊಂಡು ಹೋದಳು. ಪವಾಡದ ಪಾದುಕೆ ಧರಿಸಿದ್ದರಿಂದ ಅದು ಅವಳಿಗೆ ಸಾಧ್ಯವಾಯಿತು. ನದಿ ದಾಟಿ ವನ ಪ್ರದೇಶಕ್ಕೆ ಬಂದರು. ಅಲ್ಲಿ ಒಂದು ಮರದ ಬಾಗಿದ ರೆಂಬೆಗೆ ಬಂಗಾರದ ಉಯ್ಯಾಲೆ ಕಟ್ಟಿದ್ದರು. ಉಯ್ಯಾಲೆಯಲ್ಲಿ ಇಬ್ಬರೂ ಕುಳಿತು ತೂಗಿದರು. ಆಟ ಆಡಿದರು.

ಆ ಊರಿನ ಅರಸ ಬೇಟೆಗೆ ಬಂದವನು ಉಯ್ಯಾಲೆಯಲ್ಲಿ ತೂಗುವ ಕನ್ಯೆಯನ್ನು ನೋಡಿದನು. ಅವಳ ಮೇಲೆ ಆರಸನಿಗೆ ಮನಸ್ಸಾಯಿತು. ಆಕೆಯನ್ನು ಹಿಡಿಯಲು ಹೋದನು. ಆಕೆ ಕೂಡಲೇ ರಾಜಕುಮಾರನ ಕೈ ಹಿಡಿದುಕೊಂಡು ನದಿ ದಾಟಿ ಓಡಿ ಹೋದಳು. ಆಕೆ ಅವಸರದಲ್ಲಿ ನದಿ ದಾಟುವಾಗ ಒಂದು ಪಾದುಕೆ ಬಿದ್ದು ಹೋಯಿತು. ಅದನ್ನು ಅರಸ ಎತ್ತಿಕೊಂಡನು. ತನ್ನ ಅರಮನೆಗೆ ಅದನ್ನು ಕೊಂಡೊಯ್ದು "ಈ ಪಾದುಕೆ ಧರಿಸುವ ಹೆಣ್ಣನ್ನು ಹುಡುಕಿ ತಂದವರಿಗೆ ತನ್ನ ಏಳನೇ ಭೂಮಿಯಲ್ಲಿ ಒಂದನೇ ಭೂಮಿ ಕೊಡುತ್ತೇನೆ. ಏಳು ಹಟ್ಟಿ ಆಕಳುಗಳಲ್ಲಿ ಒಂದು ಹಟ್ಟಿಯ ಆಕಳುಗಳನ್ನು ಕೊಡುತ್ತೇನೆ" ಎಂದು ಡಂಗುರ ಸಾರಿಸಿದ. ಅದನ್ನು ಊರಿನ ಒಬ್ಬಳು ಮುದುಕಿ ಕೇಳಿಸಿಕೊಂಡು ರಾಜನ ಬಳಿಗೆ ಬಂದಳು. "ನಾನು ಹುಡುಗಿಯನ್ನು ಹಿಡಿದು ಕೊಡುತ್ತೇನೆ" ಎಂದು ರಾಜನೊಡನೆ ಹೇಳಿ ಅವನನ್ನು ಒಂದು ನಿಶ್ಚಿತ ದಿನದಂದು ವನಪ್ರದೇಶಕ್ಕೆ ಬರಹೇಳಿದಳು.

ಮಹಾಶೇಷನ ಮಗಳು ನಿತ್ಯದಂತೆ ವನ ಪ್ರದೇಶಕ್ಕೆ ವಿಹಾರಕ್ಕಾಗಿ ನದಿ ದಾಟಿ ಬಂದಳು. ಮುದುಕಿ ಸಮಯ ಸಾಧಿಸಿ ಅವಳ ಬಳಿಗೆ ಹೋಗಿ "ಅಮ್ಮಾ ನಾನು ಅನಾಥೆ ನನಗೆ ಯಾರೂ ಗತಿ ಇಲ್ಲ, ನೀವು ಹೇಳಿದ ಕೆಲಸ ಮಾಡುತ್ತೇನೆ, ನನ್ನನ್ನು ಕೆಲಸಕ್ಕೆ ನೇಮಿಸಿಕೊಳ್ಳಿ" ಎಂದು ಅಂಗಲಾಚಿ ಬೇಡಿಕೊಂಡಳು. ಮಹಾಶೇಷನ ಮಗಳಿಗೆ ಮುದುಕಿಯ ಮೇಲೆ ಕರುಣೆ ಬಂತು. ಮುದುಕಿಯನ್ನು ಅರಮನೆಗೆ ಕರೆದುಕೊಂಡು ಹೋಗಿ ಕೆಲಸಕ್ಕೆ ನೇಮಿಸಿಕೊಂಡಳು.

ಊರಿನ ಅರಸನಿಗೆ ಹೇಳಿದ ಗಡುವಿನ[೨] ದಿನ ಬಂತು. ಆ ದಿನ ಮುದುಕಿ ಅಕ್ಕಿ ಅರೆದು ದೋಸೆ ಮಾಡಿದಳು. ಒಂದು ದೋಸೆಗೆ ಸ್ವಲ್ಪ ಅಫೀಮನ್ನು ಬೆರೆಸಿದಳು. ದೋಸೆಗಳನ್ನು ಕಟ್ಟಿಕೊಂಡು ಮಹಾಶೇಷನ ಮಗಳು ವನ ವಿಹಾರಕ್ಕೆ ತೆರಳುವ ಹೊತ್ತು ಕಾದು ಕುಳಿತಳು.

ಸಂಜೆ ಹೊತ್ತಿಗೆ ಮಹಾಶೇಷನ ಮಗಳು ಅರಸು ಮಗನೊಂದಿಗೆ ವನ ವಿಹಾರಕ್ಕೆ ಹೊರಟಳು. ಆಗ ಮುದುಕಿ ತಾನೂ ಅವರೊಂದಿಗೆ ಬರುತ್ತೇನೆಂದು ಒತ್ತಾಯಿಸಿದಳು. ಮಹಾಶೇಷನ ಕುಮಾರಿ ಮುದುಕಿಯನ್ನು ಕರೆದುಕೊಂಡು ಹೋದಳು.

ಉಯ್ಯಾಲೆಯಲ್ಲಿ ಕುಳಿತು ತೂಗುವ ಹೊತ್ತಿಗೆ ಮೆಲ್ಲಗೆ ಮುದುಕಿ ದೋಸೆಯ ಗಂಟು ಬಿಚ್ಚಿದಳು. ಅಫೀಮು ಹಾಕಿದ ದೋಸೆಯನ್ನು ಅರಸು ಮಗನಿಗೂ ಉಳಿದುದನ್ನು ಮಹಾಶೇಷನ ಮಗಳಿಗೂ ಕೊಟ್ಟಳು. ಅರಸು ಮಗ ದೋಸೆ ತಿಂದೊಡನೆ ತಲೆ ತಿರುಗಿಸಿ ಸ್ಮೃತಿ ತಪ್ಪಿ ಬಿದ್ದುಬಿಟ್ಟನು. ಸಮಯ ಕಾದು ಕುಳಿತ ಊರಿನ ಅರಸ ಮಹಾಶೇಷನ ಮಗಳನ್ನು ಅಪಹರಿಸಿಕೊಂಡೊಯ್ದನು. ಮುದುಕಿಯು ಅವನನ್ನು ಹಿಂಬಾಲಿಸಿದಳು.

ಊರಿಗೆ ಹೋದ ಪ್ರಧಾನಿಯ ಮಗ ದಿಬ್ಬಣಸಹಿತ ಹೊಳೆ ದಾಟಿ ಬಂದಾಗ ಇಲ್ಲಿ ಮಹಾಶೇಷನ ಮಗಳು ಇಲ್ಲ. ಅರಸುಮಗನೂ ಇಲ್ಲ. ಅರಮನೆಯೇ ಮಾಯವಾಗಿ ಹೋಗಿತ್ತು. ಅರಸನಿಗೆ ಸಿಟ್ಟು ಬಂತು. ಸಿಟ್ಟಿನಲ್ಲಿ ಏನಿದು ಮೋಸ, ನನ್ನ ಮಗನನ್ನು ಕೊಂದು, ನಮ್ಮನ್ನೂ ಮೋಸಪಡಿಸಲು ಇಲ್ಲಿ ತಂದಿರುವೆಯಾ? ಎಂದು ಪ್ರಧಾನಿ ಮಗನ ಕೆನ್ನೆಗೆರಡು ಬಾರಿಸಿದನು. ಪ್ರಧಾನಿ ಮಗನಿಗೆ ಬಿಸಿಯಾಯಿತು. "ಮಹಾರಾಜ ನನ್ನದು ತಪ್ಪಾಯಿತು. ಇನ್ನೆರಡು ತಿಂಗಳಲ್ಲಿ ನಿಮ್ಮ ಮಗನನ್ನು ಎಲ್ಲಿದ್ದರೂ ತಂದೊಪ್ಪಿಸುತ್ತೇನೆ. ಅರುವತ್ತನೇ ದಿನವೂ ನಾವು ಬಾರದೇ ಹೋದರೆ ನಾವಿಬ್ಬರೂ ಸತ್ತು ಹೋಗಿದ್ದೇವೆಂದೇ ತಿಳಿದುಕೊಳ್ಳಿ" ಎಂದು ಭಾಷೆ ಕೊಟ್ಟನು. ಮಹಾರಾಜನನ್ನೂ ಅವನ ಪರಿವಾರವನ್ನೂ ಕಳುಹಿಸಿಕೊಟ್ಟನು.

ಪ್ರಧಾನಿಯ ಮಗ ಹೊಳೆದಾಟಿ ಅರಸು ಮಗನನ್ನು ಹುಡುಕುತ್ತಾ ಹೊಳೆಯ ಬದಿಯಲ್ಲೇ ನಡೆದನು. ಬಹಳ ದಿನ ನಡೆದಾಗ ಒಂದು ಕಡೆ ಅರಸು ಮಗ ಎಣ್ಣೆಗಾಣ ತಿರುಗಿಸುವುದನ್ನು ನೋಡಿದನು. ಆತನನ್ನು ಕರೆದುಕೊಂಡು ಪ್ರಧಾನಿ ಮಗ ಮಹಾಶೇಷನ ಮಗಳನ್ನು ಹುಡುಕಿಕೊಂಡು ಹೊರಟನು.

ಬಹಳ ದೂರ ಹೋದ ಮೇಲೆ ದಾರಿಯಲ್ಲೊಂದು ಆಶ್ರಮ ಸಿಕ್ಕಿತು. ಆಶ್ರಮದ ಋಷಿ ತೀರಿ ಹೋಗಿದ್ದನು. ಅವನಿಗೆ ಮೂರು ಜನ ಶಿಷ್ಯರಿದ್ದರು. ಋಷಿಯೊಡನೆ ಮೂರು ಸಾಮಗ್ರಿಗಳು ಇದ್ದವು. ಒಂದು ಜಾವೋ ಕಂಬಳಿ, ಇನ್ನೊಂದು ಹಣದ ಬುರುಡೆ ಮತ್ತೊಂದು ಬಿಲ್ಲುಬಾಣ ಈ ಮೂರು ವಸ್ತುಗಳು ತನಗೆ ಬೇಕು, ತನಗೆ ಬೇಕೆಂದು ಜಗಳ ಮಾಡುತ್ತಿದ್ದರು. ಅವರ ನ್ಯಾಯವನ್ನು ತೀರ್ಮಾನ ಮಾಡಲು ಅಂಗೈ ಬಳೆ, ಮುಂಗೈ ಸರಪಳಿ ಇಟ್ಟವರಿಗೆ ಯಾರಿಗೂ ಸಾಧ್ಯವಾಗಲಿಲ್ಲ.

ಪ್ರಧಾನಿಯ ಮಗ ನ್ಯಾಯ ತೀರ್ಮಾನ ಮಾಡುವುದಾಗಿ ಹೇಳಿದನು. "ನಾನು ಈ ಬಿಲ್ಲು ತೆಗೆದು ಒಂದು ಬಾಣ ಬಿಡುತ್ತೇನೆ. ಆ ಬಾಣವನ್ನು ಯಾರು ಮೊದಲು ಹೆಕ್ಕಿಕೊಂಡು ಬರುತ್ತಾರೋ ಅವರಿಗೆ ಕೇಳಿದ ವಸ್ತುವನ್ನು ಕೊಡುತ್ತೇನೆ. ನಂತರ

ಬಂದವನಿಗೆ ಉಳಿದುದರಲ್ಲಿ ಒಂದನ್ನು ಕೊಡುತ್ತೇನೆ" ಎಂದನು. ಶಿಷ್ಯರು ಒಪ್ಪಿಕೊಂಡರು. ಪ್ರಧಾನಿಯ ಮಗ ಬಿಲ್ಲನ್ನೆತ್ತಿ ಒಂದು ಬಾಣ ಬಿಟ್ಟನು. ಆ ಬಾಣ ಏಳು ಸಮುದ್ರದಾಚೆಗೆ ಬಿತ್ತು. ಹೆಕ್ಕಿಕೊಂಡು ಬರಲು ಶಿಷ್ಯರು ಓಡಿದರು. ಪ್ರಧಾನಿ ಮಗ ಮತ್ತು ಅರಸು ಮಗ ಕಂಬಳಿ, ಬುರುಡೆ ಹಿಡಿದುಕೊಂಡು ಹೊರಟರು. ನಡೆದೂ ನಡೆದೂ ಇಬ್ಬರೂ ಒಂದು ಪೇಟೆಗೆ ತಲುಪಿದರು. ಪೇಟೆಯಲ್ಲೊಂದು ಬಿಡಾರ ಪಡೆದು ಅರಸು ಮಗನನ್ನು ಅಲ್ಲಿ ಕುಳ್ಳಿರಿಸಿ ಪ್ರಧಾನಿ ಮಗ ಪೇಟೆ ತಿರುಗಲು ಹೋದನು. ಪೇಟೆಯಲ್ಲೊಬ್ಬ ಶ್ರೀಮಂತ ಹೆಂಗಸು; ಆಕೆಗೊಬ್ಬ ಸುಂದರಿ ಹುಡುಗಿ. ಅವಳು ಮನೆಯ ಮುಂದೆ ಒಂದು ಕಣಜ ಇಟ್ಟಿದ್ದಳು. ಆ ಕಣಜವನ್ನು ಯಾರು ಹಣದಿಂದ ತುಂಬುತ್ತಾರೋ ಅವರಿಗೆ ನನ್ನ ಮಗಳನ್ನು ಕೊಡುವುದೆಂದು ಆ ಹೆಂಗಸು ಡಂಗುರ ಸಾರಿದ್ದಳು. ಮಂತ್ರಿಯ ಮಗ ಅಲ್ಲಿಗೆ ಹೋದ. ಬುರುಡೆಯನ್ನು ಕಣಜಕ್ಕೆ ಕವುಚಿ ಹಿಡಿದ. ಬುರುಡೆಯಿಂದ ಹಣ ಬೀಳುತ್ತಾ ಇತ್ತು. ಹೊತ್ತು ಮಧ್ಯಾಹ್ನ ಆಗುವಾಗ ಕಣಜ ತುಂಬಿತು. ಶ್ರೀಮಂತ ಹೆಂಗಸು ಮಗಳನ್ನು ಪ್ರಧಾನಿ ಮಗನಿಗೆ ಧಾರೆ ಎರೆದು ಕೊಟ್ಟಳು. ಕೆಲವು ದಿವಸ ಮಂತ್ರಿಯ ಮಗ ಅಲ್ಲೇ ತಂಗಿದ. ನಂತರ ಹೆಂಡತಿಯನ್ನು ಕರೆದುಕೊಂಡು ಹೋಗುವುದಾಗಿ ಅತ್ತೆಯೊಡನೆ ಕೇಳಿದ. ಆಗ ಅತ್ತೆಯು "ಅವಳನ್ನು ಕರೆದುಕೊಂಡು ಹೋಗಬೇಕಾದರೆ ಒಂದು ಹರಕೆ ಇದೆ. ಉಪ್ಪಿನಂಗಡಿ ಸಂಗಮ ತೀರ್ಥದಲ್ಲಿ ಸ್ನಾನ ಮಾಡಿ ಅಲ್ಲಿನ ದೇವಿಯ ದರ್ಶನ ಮಾಡಿ ಬರಬೇಕು. ಆ ಮೇಲೆ ನೀನು ಕರೆದುಕೊಂಡು ಹೋಗಬಹುದು" ಎಂದಳು. "ಅದಕ್ಕೇನಂತೆ ಈಗಲೇ ಹೋಗಿ ಬರುತ್ತೇವೆ" ಎಂದು ಹೆಂಡತಿಯನ್ನು ಹೊರಡಿಸಿದನು. ಜಾವೊ ಕಂಬಳಿಯಲ್ಲಿ ಇಬ್ಬರೂ ಕುಳಿತರು. "ಉಪ್ಪಿನಂಗಡಿ ದೇವಸ್ಥಾನಕ್ಕೆ ಜಾವೊ ಕಂಬಳಿ" ಎಂದ ಪ್ರಧಾನಿ ಕುಮಾರ. ಹೇಳಿದ್ದೇ ತಡ ಕಣ್ಣು ಮುಚ್ಚಿ ತೆರೆಯುವಾಗ ಅವರಿಬ್ಬರೂ ಉಪ್ಪಿನಂಗಡಿ ದೇವಸ್ಥಾನದ ಬಳಿ ಇದ್ದರು. "ಇಬ್ಬರೂ ಸ್ನಾನ ಮಾಡಲು ಇಳಿದರೆ ಈ ನಮ್ಮ ಸಾಮಗ್ರಿಗಳನ್ನು ಯಾರಾದರೂ ಕದ್ದುಕೊಂಡು ಹೋದಾರು. ಅದಕ್ಕಾಗಿ ನೀವು ಸ್ನಾನ ಮಾಡಿ ಬನ್ನಿ. ನಾನು ಇಲ್ಲಿ ನಿಂತಿರುತ್ತೇನೆ" ಎಂದಳು ಆತನ ಮಡದಿ. ಮಂತ್ರಿಕುಮಾರ ಅದಕ್ಕೆ ಒಪ್ಪಿಕೊಂಡು ಜಾವೊ ಕಂಬಳಿ, ಹಣದ ಬುರುಡೆಯನ್ನು, ಅವನ ಅಂಗಿ ವಸ್ತ್ರಗಳನ್ನೂ ಅವಳ ಕೈಗೆ ಕೊಟ್ಟು ಸ್ನಾನಕ್ಕಿಳಿದನು. ಅಷ್ಟರಲ್ಲಿ ಆತನ ಪತ್ನಿ ಜಾವೊ ಕಂಬಳಿಯಲ್ಲಿ ಕುಳಿತು ತನ್ನ ಮನೆಗೇ ಜಾವೊ ಕಂಬಳಿ ಎಂದಳು.

ನದಿಯಿಂದ ಮೇಲೆ ಬರುವಾಗ ಹೆಂಡತಿ ಇಲ್ಲ "ಅಯ್ಯೋ ಇನ್ನೇನು ಮಾಡಲಿ" ಎಂದು ಕೂಗಾಡಿದ. ಅಷ್ಟಾಗುವಾಗ ಇಬ್ಬರು ಜಲಕನ್ಯೆಯರು ನೀರಿನಿಂದ ಎದ್ದು ಬಂದರು. ಪ್ರಧಾನಿಯ ಮಗನಿಗೆ ದುಸ್ತು ಅಲಂಕಾರ ಮಾಡಿದರು. ಕರೆದುಕೊಂಡು ತಮ್ಮ ಅರಮನೆಗೆ ನಡೆದರು. ಅವರ ಅರಮನೆ ಬಹಳ ಸುಂದರವಾಗಿತ್ತು. ಬೇರೆ ಬೇರೆ ಹಣ್ಣಿನ ತೋಟಗಳಿದ್ದವು. "ನೀನು ಯಾವ ಹಣ್ಣನ್ನು ಬೇಕಾದರೂ ತಿನ್ನಬಹುದು.

ಆದರೆ ಆ ಮರದ ಹಣ್ಣನ್ನು ಮಾತ್ರ ತಿನ್ನಬೇಡ" ಎಂದು ಹೇಳಿ ಜಲಕನ್ಯೆಯರು ಅರಮನೆಯೊಳಗೆ ಹೋದರು.

ಪ್ರಧಾನಿಯ ಮಗ ತೋಟದಲ್ಲೆಲ್ಲಾ ತಿರುಗಾಡಿದ. ಒಂದು ಮರದ ಹಣ್ಣನ್ನು ಮಾತ್ರ ಯಾಕೆ ತಿನ್ನಬಾರದು ಎಂದು ಜಲಕನ್ಯೆಯರು ಹೇಳಿದರು ಅದು ಆತನಿಗೆ ಕುತೂಹಲವುಂಟು ಮಾಡಿತು. ನೋಡಿಯೇ ಬಿಡೋಣ ಎಂದು ಆ ಮರದಿಂದ ಒಂದು ಹಣ್ಣನ್ನು ಕೊಯಿದು ತಿಂದು ಬಿಟ್ಟ. ತಿಂದದ್ದೇ ತಡ ಆತ ಮಂಗನ ರೂಪ ತಾಳಿದನು.

ಜಲಕನ್ಯೆಯರು ಅರಮನೆಯಿಂದ ಹೊರಗೆ ಬಂದಾಗ ಪ್ರಧಾನಿಯ ಮಗ ಮಂಗವಾಗಿ ಮರದ ಮೇಲಿದ್ದ ಮಂಗನನ್ನು ಕಲ್ಲು ಹೊಡೆದು ಜಲಕನ್ಯೆಯರು ಇನ್ನೊಂದು ಮರಕ್ಕೆ ಓಡಿಸಿದರು. ಮಂಗ ಆಚೆ ಮರಕ್ಕೆ ಹೋಗಿ ಅಲ್ಲಿಂದ ಒಂದು ಹಣ್ಣು ತಿಂದ. ಕೂಡಲೇ ನಿಜರೂಪ ತಾಳಿ ಮರದಿಂದ ಕೆಳಗಿಳಿದು ಬಂದ. ತಾನು ತನ್ನ ಊರಿಗೆ ಹೋಗುತ್ತೇನೆ ಎಂದು ಹೊರಟ. ಆಗ ಜಲಕನ್ಯೆಯರು "ನಾವು ಕೂಡ ನಿನ್ನೊಂದಿಗೆ ಬರುತ್ತೇವೆ" ಎಂದರು. "ನೀವು ನಿಜರೂಪದಲ್ಲಿ ನನ್ನೊಂದಿಗೆ ಬಂದರೆ ನನ್ನನ್ನು ಕೊಂದು ನಿಮ್ಮನ್ನು ಯಾರಾದರೂ ಅಪಹರಿಸಿಕೊಂಡು ಹೋದಾರು. ಅದಕ್ಕಾಗಿ ನೀವು ಹಣ್ಣು ತಿಂದು ಮಂಗನ ರೂಪ ತಾಳಿರಿ" ಎಂದ. ಜಲಕನ್ಯೆಯರು ಹಾಗೆ ಮಾಡಿ ಮಂಗಗಳಾದರು. ಪ್ರಧಾನಿ ಮಗ ತೋಟದ ಎರಡು ಮರಗಳಿಂದಲೂ ಸಾಕಷ್ಟು ಹಣ್ಣುಗಳನ್ನು ಕೊಯಿದು ಕೊಂಡು ಚೀಲದಲ್ಲಿ ತುಂಬಿಸಿಕೊಂಡ. ಮಂಗಗಳನ್ನು ಹೆಗಲಿಗೇರಿಸಿಕೊಂಡು ತನ್ನನ್ನು ಮೋಸಗೊಳಿಸಿದ ಹೆಂಗಸಿನ ಮನೆಗೆ ಹೊರಟ.

ನಡೆದು ನಡೆದು ನೇರವಾಗಿ ಪೇಟೆಯ ಶ್ರೀಮಂತ ಹೆಂಗಸಿನ ಮನೆಗೆ ಬಂದ. ತಾಯಿ ಮಗಳು ಕಟ್ಟುಕತೆ ಹೇಳಿ ಪ್ರಧಾನಿ ಮಗನನ್ನು ಸಮಜಾಯಿಸಿದರು. ಅವರಿಬ್ಬರಿಗೂ ತಿನ್ನಲು ಒಂದೊಂದು ಹಣ್ಣು ಕೊಟ್ಟ. ಸಂತೋಷದಿಂದ ತಾಯಿ ಮಗಳು ತಿಂದರು. ಕೂಡಲೇ ಮಂಗಗಳಾದರು. ಆ ಮಂಗಗಳ ಸೊಂಟಕ್ಕೆ ಹಗ್ಗ ಹಾಕಿ ಹಿಡಿದುಕೊಂಡು ಜಾವೊ ಕಂಬಳಿ ಮತ್ತು ಹಣದ ಬುರುಡೆಯನ್ನು ಮನೆಯಲ್ಲಿ ಹುಡುಕಿ ಹಿಡಿದುಕೊಂಡ. ನಾಲ್ಕು ಮಂಗಗಳೊಂದಿಗೆ ಅರಸುಮಗನ ಬಿಡಾರಕ್ಕೆ ನಡೆದ. ಅರಸುಮಗನೊಡನೆ ನಡೆದ ವಿಚಾರವೆಲ್ಲವನ್ನು ತಿಳಿಸಿದ.

ನಂತರ ಅರಸುಮಗ ಪ್ರಧಾನಿಯ ಮಗ ಜೊತೆಗೂಡಿ ನಾಲ್ಕು ಮಂಗಗಳೊಡಗೂಡಿ ಜಾವೊ ಕಂಬಳಿಯಲ್ಲಿ ಕುಳಿತರು "ಬಂಗಾರದ ಪಾದುಕೆ ಧರಿಸಿದ ಮಹಾಶೇಷನ ಮಗಳಿದ್ದಲ್ಲಿಗೆ ಜಾವೊ ಕಂಬಳಿ" ಎಂದ ಪ್ರಧಾನಿ ಮಗ. ಎಲ್ಲರೂ ಅರಮನೆ ಎದುರು ಬಂದು ತಲುಪಿದರು. ಅರಸುಮಗ ಮತ್ತು ಮಂಗಗಳನ್ನು ಅಲ್ಲೇ ನಿಲ್ಲಿಸಿ ಮಂತ್ರಿ ಮಗನೊಬ್ಬನೇ ಹಣ್ಣಿನ ಬುಟ್ಟಿ ಹೊತ್ತುಕೊಂಡು ಅರಮನೆಯೊಳಗೆ ಹೋದ.

ಅರಸನ ಮೇಲುಪ್ಪರಿಗೆಯಲ್ಲಿ ಮಹಾಶೇಷನ ಮಗಳಿದ್ದಳು. ಎಷ್ಟೆಷ್ಟು ಹೇಳಿದರೂ ಅರಸನನ್ನು ಮದ್ವೆಯಾಗಲು ಆಕೆ ಒಪ್ಪಿರಲಿಲ್ಲ. ಪ್ರಧಾನಿಯ ಮಗ ಹಣ್ಣು ಮಾರುವವನ

ವೇಷ ಧರಿಸಿ ಹಣ್ಣಿನ ಬುಟ್ಟಿ ಹೊತ್ತುಕೊಂಡು ಅರಸನ ಅರಮನೆಯ ಉಪ್ಪರಿಗೆ ಏರಿ ಬಂದ. ಅಲ್ಲಿ ಕುಳಿತಿದ್ದ ಅರಸ, ಮಹಾಶೇಷನ ಮಗಳು ಮತ್ತು ಮುದುಕಿ ಮೂವರಿಗೂ ಒಂದೊಂದು ವಿಶೇಷ ಹಣ್ಣುಗಳನ್ನು ಕೊಯ್ದು ಕೊಟ್ಟ. ಮೂವರೂ ಹಣ್ಣುಗಳನ್ನು ತಿಂದರು. ಮೂವರೂ ಮಂಗಗಳಾದರು.

ಈ ಮೂರು ಮಂಗಗಳಲ್ಲಿ ಎರಡರ ಸೊಂಟಕ್ಕೆ ಹಗ್ಗ ಹಾಕಿ ಅರಸು ಕುಮಾರ ಹಿಡಿದುಕೊಂಡ. ಮಂಗನರೂಪ ತಾಳಿದ ಮಹಾಶೇಷನ ಮಗಳನ್ನು ಹೆಗಲ ಮೇಲೇರಿಸಿಕೊಂಡ. ಹಾಗೆಯೇ ಪ್ರಧಾನಿ ಮಗನೂ ತಾಯಿ ಮಗಳಿಬ್ಬರ ಸೊಂಟಕ್ಕೆ ಹಗ್ಗ ಹಾಕಿ ಹಿಡಿದುಕೊಂಡ ಮಂಗನ ರೂಪಿನಲ್ಲಿದ್ದ ಜಲಕನ್ಯೆಯರನ್ನು ಹೆಗಲಿಗೇರಿಸಿ ಕೊಂಡ.

ಎಲ್ಲರೂ ಕೂಡಿಕೊಂಡು ಹೊರಟರು. ಅರಸು ಕುಮಾರ ಪ್ರಧಾನಿ ಮಗ ತಾನು ಅರಮನೆ ತಲುಪಿದರು. ಮಂಗಗಳನ್ನು ಕರೆತಂದ ಮಕ್ಕಳನ್ನು ಕಂಡು ಅರಸ ಗದರಿಸಿದ. ಕೂಡಲೇ ಪ್ರಧಾನಿ ಮಗ ಎಲ್ಲಾ ಮಂಗಗಳಿಗೂ ಒಂದೊಂದು ಹಣ್ಣು ತಿನ್ನಲು ಕೊಟ್ಟ. ಎಲ್ಲರೂ ತಿಂದು ನಿಜರೂಪ ತಾಳಿದರು. ಶೇಷಕುಮಾರಿಯನ್ನು ಅರಸುಮಗ ಮದುವೆಯಾದ. ಜಲಕನ್ಯೆಯರನ್ನು ಪ್ರಧಾನಿಮಗ ಮದುವೆಯಾದ. ಉಳಿದವರನ್ನು ಅರಮನೆಯಲ್ಲಿ ಕೆಲಸಕ್ಕೆ ನೇಮಿಸಲಾಯಿತು. ರಾಜಕುಮಾರ, ಪ್ರಧಾನಿ ಕುಮಾರ ತಮ್ಮ ಹೆಂಡತಿಯರೊಂದಿಗೆ ಸೌಖ್ಯದಲ್ಲಿದ್ದರು.

ಟಿಪ್ಪಣಿ

೧. ಗಡು – ಅವಧಿ



೭

ಒಡೆಯನನ್ನುಳಿಸಿದ ಎತ್ತು

ಒಂದು ಊರಿನಲ್ಲಿ ಒಬ್ಬ ಅರಸನಿದ್ದ. ಅವನಿಗೆ ಇಬ್ಬರು ಮಕ್ಕಳು. ಒಬ್ಬನಿಗೆ ಮದುವೆಯಾಯಿತು; ಇನ್ನೊಬ್ಬನಿಗೆ ಆಗಿರಲಿಲ್ಲ. ಒಂದು ವರ್ಷದಲ್ಲಿ ತಾಯಿ ತೀರಿಹೋದಳು. ತಾಯಿಯ ಬೊಜ್ಜ ಕಳೆದು ಇನ್ನೊಂದು ವರ್ಷವಾಗಬೇಕಾದರೆ ತಂದೆ ತೀರಿಹೋದ. ಶತ್ರುಗಳು ರಾಜ್ಯವನ್ನು ಆಕ್ರಮಣ ಮಾಡಿದರು. ಅಣ್ಣತಮ್ಮರಿಗೆ ಗತಿ ಇಲ್ಲದಂತಾಯಿತು. ಒಂದು ದಿನ ಅಣ್ಣ ತಮ್ಮನೊಡನೆ ಎಲ್ಲಿಗಾದ್ರೂ ದೇಶಾಂತರ ಹೋಗೋಣವೆಂದು ಹೇಳಿದ. ಅವರ ಜೊತೆಯಲ್ಲಿ ಇದ್ದ ಆಸ್ತಿ ಎಂದರೆ ಒಂದು ಎತ್ತು ಮಾತ್ರ. ಆ ಎತ್ತನ್ನು ಹೊಡೆದುಕೊಂಡು ಅಣ್ಣ, ತಮ್ಮ ಮತ್ತು ಅಣ್ಣನ ಹೆಂಡತಿ ಹೊರಟರು.

ಬಹಳ ದೂರ ನಡೆದ ಮೇಲೆ ಅವರಿಗೆ ಅಲ್ಲೊಂದು ದೊಡ್ಡ ಅರಮನೆ ಸಿಕ್ಕಿತು. ಅರಸನನ್ನು ಅಣ್ಣ ತಮ್ಮಂದಿರು ಭೇಟಿಯಾದರು. "ನಿಮಗೆ ಏನುಬೇಕು?" ಎಂದು ಅವರೊಡನೆ ಅರಸ ಕೇಳಿದ. "ನಮಗೆ ಉಳಕೊಳ್ಳಲು ಒಂದು ಬಿಡಾರಬೇಕು. ದುಡಿಯಲು ಕೆಲಸ ಬೇಕು" ಎಂದು ಅಣ್ಣತಮ್ಮರು ಹೇಳಿದರು. ಅರಸ ಮನೆ ಕಟ್ಟಿಸಿಕೊಟ್ಟ. ನೀವು ದಿನ ನಿತ್ಯ ನಮ್ಮಲ್ಲಿಗೇ ಕೆಲಸಕ್ಕೆ ಬರಬಹುದೆಂದು ಹೇಳಿದ. ಅಣ್ಣ ಮತ್ತು ಅತ್ತಿಗೆ ಕೆಲಸಕ್ಕೆ ಹೋಗುತ್ತಿದ್ದರು. ತಮ್ಮ ಕೆಲಸಕ್ಕೆ ಹೋಗುತ್ತಿರಲಿಲ್ಲ. ಅವನು ಗುಡ್ಡ ಅಗೆದು ಗದ್ದೆ[೧] ಮಾಡಿದ. ದಿನನಿತ್ಯ ಅಗೆದು ಅಗೆದು ಒಂದು ಸಣ್ಣ ಗದ್ದೆ ಆಯಿತು. ಅರಸನೊಡನೆ ಕೇಳಿ ಒಂದು ಸೇರು ಭತ್ತ ತಂದ. ಬಿತ್ತಿದ್ದ ಆ ವರ್ಷ ಹತ್ತು ಮುಡಿ[೨] ಭತ್ತ ಸಿಕ್ಕಿತು. ಮರುವರ್ಷ ಅಗೆದು ಗದ್ದೆ ದೊಡ್ಡದು ಮಾಡಿದ, ಎರಡು ಸೇರು ಭತ್ತ ಬಿತ್ತಿದ. ಇಪ್ಪತ್ತು ಮುಡಿ ಭತ್ತ ಸಿಕ್ಕಿತು. ಅಣ್ಣ ಹೇಳಿದ "ನಮಗೆ ದುಡಿದು ತಂದ ಅಕ್ಕಿ ಊಟಕ್ಕೆ ಸಾಕಾಗುವುದಿಲ್ಲ, ಹೆಚ್ಚು ಬೇಸಾಯ ಮಾಡೋಣ. ನಮ್ಮ ಗೆಂದನಿಗೊಂದು ಜೊತೆ ಮಾಡೋಣ. ನಾನು ಭತ್ತ ಮಾರಿ ಬಂದ ಹಣವನ್ನು ಕೊಂಡು ಹೋಗಿ ಕುಲ್ಕುಂದ[೩]ದಿಂದ ಒಂದು ಎತ್ತು ತರುತ್ತೇನೆ" ತಮ್ಮ ಅದಕ್ಕೆ ಒಪ್ಪಿದ.

ಮರುದಿನ ಭತ್ತ ಮಾರಿ ಹಣವನ್ನು ಹಿಡಿದುಕೊಂಡು ಅಣ್ಣ ಸುಬ್ರಹ್ಮಣ್ಯಕ್ಕೆ ಹೊರಟ. ಆ ದಿನ ಕತ್ತಲಾಯಿತು. ಅತ್ತಿಗೆ ಊಟಕ್ಕೆ ಕರೆದಳು. ಅಣ್ಣ ಕುಳಿತುಕೊಳ್ಳುವಲ್ಲಿ ಮಣೆ

ಇಟ್ಟಳು. ತಮ್ಮ ಅಲ್ಲಿ ಕುಳಿತುಕೊಳ್ಳಲಿಲ್ಲ, ತನ್ನ ಸ್ಥಳದಲ್ಲೆ ಊಟಕ್ಕೆ ಕುಳಿತ. ಅಣ್ಣನ ಬಟ್ಟಲು ತಂದಿಟ್ಟಳು. ಅಣ್ಣನ ಬಟ್ಟಲಲ್ಲಿ ತಮ್ಮ ಊಟ ಮಾಡಲಿಲ್ಲ. ತನ್ನ ಬಟ್ಟಲಲ್ಲೇ ಮಾಡಿದ. ಊಟ ಆಯಿತು. ಅಣ್ಣ ಮಲಗುವಲ್ಲಿ ತಮ್ಮನಿಗೆ ಚಾಪೆ ಹಾಕಿದಳು. ತಮ್ಮ ಅಲ್ಲಿ ಮಲಗದೆ ತಾನು ಯಾವಾಗಲೂ ಮಲಗುವಲ್ಲಿಯೇ ಹೋಗಿ ಮಲಗಿಕೊಂಡ. ಅಣ್ಣನ ಹೆಂಡತಿ ತಮ್ಮನ ಬಳಿಯಲ್ಲೇ ಬಂದು ಮಲಗಿಕೊಂಡಳು. ತಮ್ಮ ಅಲ್ಲಿಂದ ಎದ್ದು ಹೋದ. ಅತ್ತಿಗೆ ಅವನನ್ನೇ ಹಿಂಬಾಲಿಸಿಕೊಂಡು ಹೋದಳು. ಕೊನೆಗೆ ತಮ್ಮನು ಗೆಂದ[೧] ಎತ್ತಿನ ಅಡಿಯಲ್ಲಿ ಹೋಗಿ ಮಲಗಿಕೊಂಡ. ಅಲ್ಲಿಗೆ ಹೋಗಲು ಅತ್ತಿಗೆಗೆ ಹೆದರಿಕೆಯಾಯಿತು. ಮರುದಿನ ಅಣ್ಣ ಕುಲ್ಕುಂದದಿಂದ ಎತ್ತನ್ನು ಹೊಡೆದುಕೊಂಡು ಬಂದ. ತಮ್ಮ ಎತ್ತುಗಳನ್ನು ಹೊಡೆದುಕೊಂಡು ಹೋಗಿ ಗದ್ದೆ ಉಳಲು ಪ್ರಾರಂಭಿಸಿದ.

ಅಣ್ಣ ಎತ್ತು ಹೊಡೆದುಕೊಂಡು ಬರುವಷ್ಟರಲ್ಲಿ ಅಣ್ಣನ ಹೆಂಡತಿ ಬಳೆಗಳನ್ನು ಕಲ್ಲಲ್ಲಿ ಗುದ್ದಿ ಹುಡಿ ಮಾಡಿಕೊಂಡಳು. ಮೂಗಿನ ಮೂಗುತಿ, ತಾಳಿ ಕಂಠಿಗಳನ್ನು ಮುರಿದು ಬಿಸಾಡಿದಳು. ಒಳಗೆ ಕೂತು ಬಾಗಿಲು ಹಾಕಿಕೊಂಡಳು. ಅಣ್ಣ ಬಂದು ಎಷ್ಟು ಕರೆದರೂ ಬಾಗಿಲು ತೆರೆಯಲಿಲ್ಲ. ಕೊನೆಗೆ ಆತ ತನ್ನ ತಲೆಯ ರುಮಾಲು ಬಿಚ್ಚಿ, ಪಕ್ಕಾಸಿಗೆ ಕಟ್ಟಿ ಗೋಡೆಯ ಮೇಲಿಂದ ಒಳಗೆ ಹಾರಿದ. ಹೆಂಡತಿ ಬಾಗಿಲು ತೆರೆದಳು. "ಏನಿದು ಅನಾಹುತ?" ಎಂದು ಗಂಡ ಕೇಳಿದ. "ಎಲ್ಲಾ ನಿಮ್ಮ ತಮ್ಮನ ಉಪದ್ರ, ನನ್ನನ್ನು ಬಲಾತ್ಕಾರ ಮಾಡಿದ" ಎಂದು ದೂರಿತ್ತಳು. ಅಣ್ಣನಿಗೆ ಸಿಟ್ಟು ಬಂತು. ಮಧ್ಯಾಹ್ನ ಆಯಿತು. ಗದ್ದೆ ಕೆಲಸಕ್ಕೆ ಹೋದ ತಮ್ಮನಿಗೆ ಬುತ್ತಿಕೊಂಡು ಹೋಗಬೇಕು ಬುತ್ತಿಯಲ್ಲಿ ಸಮಪಾಲು ಕೂದಲು ಕಲ್ಲು ಬೆರೆಸಿದ. ಬುತ್ತಿ ಹಿಡಿದುಕೊಂಡು ಗದ್ದೆಯ ಬದಿಗೆ ಹೋದ. ಗದ್ದೆಯಲ್ಲಿ ಉಳುವ ತಮ್ಮ ಎತ್ತುಗಳನ್ನು ನಿಲ್ಲಿಸಿ ಊಟಕ್ಕೆ ಬಂದು ಬುತ್ತಿ ಬಿಚ್ಚಿದ. ಅದರಲ್ಲಿ ತುಂಬ ಕಲ್ಲು ಕೂದಲು. "ಏನಿದು ಊಟದಲ್ಲಿ ಇಷ್ಟು ಕಲ್ಲು ಕೂದಲು?" ಎಂದು ತಮ್ಮ ಪ್ರಶ್ನಿಸಿದ. "ಇದಕ್ಕಿಂತ ಹೆಚ್ಚು ನೀನು ಇಟ್ಟುಕೊಂಡವಳು ಕಟ್ಟಿಕೊಡಬೇಕಷ್ಟೆ" ಎಂದು ಹೇಳಿ ಅಣ್ಣ ಕತ್ತಿ ತೆಗೆದು ತಮ್ಮನಿಗೆ ಒಂದು ಗಡಿ[೨] ಹಾಕಿದ. ತಮ್ಮನ ರುಂಡ ಮುಂಡ ಬೇರಾಯಿತು. ಅದನ್ನು ಕೊಂಡು ಹೋಗಿ ಒಂದು ಬತ್ತಿ ಹೋದ ಕೆರೆಗೆ ಹಾಕಿದ. ನಂತರ ಉಳಲು ಹೋದ. ಎತ್ತುಗಳು ಉಳುಮೆಗೆ ಬಿಡಲೇ ಇಲ್ಲ. ಆಚೆ ಈಚೆ ಎಳೆದಾಡತೊಡಗಿದವು. ಎತ್ತುಗಳನ್ನು ಗದ್ದೆಯಲ್ಲೇ ಬಿಟ್ಟು ಅಣ್ಣ ಮನೆಗೆ ಹೋದ.

ಅಣ್ಣ ಮನೆಗೆ ಹೋದಾಗ ಗದ್ದೆಯಲ್ಲಿ ಕಟ್ಟಿದ ಎತ್ತುಗಳು ಒಂದನ್ನೊಂದು ಎಳೆದಾಡಿಕೊಂಡು ಹಗ್ಗ ಬಿಚ್ಚಿಕೊಂಡವು. ಕೆರೆಗೆ ಇಳಿದು ತಮ್ಮನ ರುಂಡ ಮುಂಡಗಳನ್ನು ಮೇಲಕ್ಕೆ ತಂದು ಜೋಡಿಸಿಟ್ಟವು. ಗೆಂದ ಎತ್ತು ಇನ್ನೊಂದರೊಡನೆ "ನಾನು ನಾರಾಯಣ ದೇವರಲ್ಲಿ ಹೋಗಿ ನಮ್ಮ ಯಜಮಾನನ್ನು ಬದುಕಿಸಲು ವರ ಕೇಳಿಕೊಂಡು ಬರುತ್ತೇನೆ. ಅಲ್ಲಿವರೆಗೆ ನೀನು ಅವನ ದೇಹವನ್ನು ಕಾದುಕೊಂಡಿರಬೇಕು, ಒಂದು ಇರುವೆ, ನೊಣ ಮುಟ್ಟದ ಹಾಗೆ ನೊಡಿಕೊಳ್ಳಬೇಕು" ಎಂದು ಹೇಳಿ ಹೊರಟಿತು.

ಹೋಗುವಾಗ ದಾರಿಯಲ್ಲಿ ಒಂದು ಅರಮನೆ ಸಿಕ್ಕಿತು. ಆ ಅರಮನೆಯ ಅರಸನಿಗೆ ಒಬ್ಬಳೇ ಮಗಳು. ಅವಳಿಗೆ ಇಪ್ಪತ್ತನಾಲ್ಕು ವರ್ಷ ಪ್ರಾಯ. ಅವಳು ಕವುಚಿ ಮಲಗಿ ಉಸಿರು ಬಿಟ್ಟರೆ ಅವಳ ಮೂಗಿನ ಉಸಿರಾಟಕ್ಕೆ ಒಂದು ಗಾವುದ ಮಣ್ಣು ನೆಲದಿಂದ ಹಾರಿ ಹೋಗುತ್ತದೆ. ಅಂಗಾತ ಮಲಗಿ ಉಸಿರಾಡಿದರೆ ಮಾಡಿಗೆ ಹೊದಿಸಿದ ಹುಲ್ಲು ಒಂದು ಗಾವುದ[೬] ಮೇಲೆ ಹಾರಿ ಹೋಗುತ್ತದೆ. ಅರಸ ಎತ್ತನ್ನು ನೋಡಿ ನೀನು ಎಲ್ಲಿಗೆ ಹೋಗುವವನೆಂದು ವಿಚಾರಿಸಿದ. ಎತ್ತು ತನ್ನ ಯಜಮಾನನ್ನು ಬದುಕಿಸಲು ವರ ಕೇಳಲು ನಾರಾಯಣ ದೇವರಲ್ಲಿ ಹೋಗುವುದಾಗಿ ಹೇಳಿತು. ಹಾಗಾದರೆ ನನ್ನ ಮಗಳಿಗೂ ಒಂದು ವರವನ್ನು ಕೇಳಿಕೋ ಎಂದ. ಎತ್ತು ಅದಕ್ಕೊಪ್ಪಿ ಪಯಣ ಮುಂದುವರಿಸಿತು.

ಸ್ವಲ್ಪ ದೂರ ಹೋಗುವಾಗ ದಾರಿಗಡ್ಡ ಮಲಗಿದ ಒಂದು ಸರ್ಪ ಸಿಕ್ಕಿತು. ಆ ಸರ್ಪಕ್ಕೆ ವರ್ಷದಲ್ಲಿ ಮುನ್ನೂರ ಅರುವತ್ತೈದು ದಿವಸವೂ ಶೀತ–ನೆಗಡಿ ತಪ್ಪುವುದಿಲ್ಲ. ಸರ್ಪ ಎತ್ತಿನೊಡನೆ ಎಲ್ಲಿಗೆ ಹೋಗುವುದೆಂದು ವಿಚಾರಿಸಿತು. ಎತ್ತು ತನ್ನ ಸಂಗತಿ ಹೇಳಿದಾಗ "ನಾರಾಯಣ ದೇವರೊಡನೆ ನನಗೂ ಒಂದು ವರವನ್ನು ಕೇಳಿಕೋ" ಎಂದಿತು ಸರ್ಪ. ಸರ್ಪದ ಮಾತಿಗೆ ಒಪ್ಪಿಕೊಂಡು ಎತ್ತು ಪಯಣ ಮುಂದುವರಿಸಿತು. ಸ್ವಲ್ಪ ದೂರ ಹೋಗುವಾಗ ಅದಕ್ಕೆ ತನ್ನೆಲ್ಲಾ ಎಲೆಗಳನ್ನು ಉದುರಿಸಿಕೊಂಡು ಬೋಳಾಗಿ ನಿಂತ ಒಂದು ನೆಲ್ಲಿ ಮರ ಸಿಕ್ಕಿತು. ನೆಲ್ಲಿಮರವು ಎತ್ತಿನೊಡನೆ "ನೀನು ಎಲ್ಲಿಗೆ ಹೋಗುತ್ತಿರುವೆ?" ಎಂದು ಪ್ರಶ್ನಿಸಿತು. ಅದಕ್ಕೆ ಆ ಎತ್ತು "ನನ್ನ ಯಜಮಾನ ಸತ್ತು ಬಿದ್ದಿದ್ದಾನೆ. ಅವನನ್ನು ಬದುಕಿಸುವ ವರ ಕೇಳಲು ನಾರಾಯಣ ದೇವರಲ್ಲಿ ಹೋಗುತ್ತಿದ್ದೇನೆ" ಎಂದಿತು. "ಹಾಗಾದರೆ ನನಗೂ ಒಂದು ವರ ಕೇಳಿಕೋ. ನಾನು ಹಲವು ವರ್ಷಗಳಿಂದ ಚಿಗುರದೆ ಹೀಗೇನೇ ಬೋಳಾಗಿದ್ದೇನೆ" ಎಂದಿತು. ಅದಕ್ಕೊಪ್ಪಿ ಕೊಂಡು ಎತ್ತು ಮುಂದುವರಿಯಿತು.

ನಡೆದು ನಡೆದು ಎತ್ತು ಮೇಲಿನ ಮಿರ್ಲೋಕಕ್ಕೆ[೭] ಮುಟ್ಟಿತು. ನಾರಾಯಣ ದೇವರ ಅರಮನೆ ಮುಟ್ಟಿತು. ಆಗ ನಾರಾಯಣ ದೇವರು ಪೂಜೆಗೆ ಹೊರಟಿದ್ದರು. ಎತ್ತು ದಾರಿಗಡ್ಡ ಮಲಗಿಬಿಟ್ಟಿತು. ಎತ್ತನ್ನು ನಾರಾಯಣ ದೇವರು ಎಬ್ಬಿಸಿದರು. ಅದು ಏಳಲಿಲ್ಲ. ಹುಲ್ಲು ಕೊಟ್ಟರೂ ಏಳಲಿಲ್ಲ. ನೀರು ಕೊಟ್ಟರೂ ಕುಡಿಯಲಿಲ್ಲ.

"ಏನು ಕತೆ ಏನಾಗಬೇಕು, ನಿನಗೆ?" ಎಂದು ನಾರಾಯಣ ದೇವರು ಪ್ರಶ್ನಿಸಿದರು. ಆಗ ಎತ್ತು ತನ್ನ ಕತೆ ಹೇಳಿತು. ತನ್ನ ಯಜಮಾನನನ್ನು ರಕ್ಷಿಸಬೇಕೆಂದು ಬೇಡಿಕೊಂಡಿತು. ನಾರಾಯಣ ದೇವರು ಗಿಂಡಿಯಲ್ಲಿ ನೀರು ತಂದುಕೊಟ್ಟರು. ದರ್ಬೆ[೮]ಯ ಕೋಲು ತಂದುಕೊಟ್ಟರು. "ಈ ನೀರನ್ನು ನಿನ್ನ ಯಜಮಾನನಿಗೆ ಸಿಂಪಡಿಸಿ ದರ್ಬೆ ಕೋಲಿನಿಂದ ಮೂರು ಸಲ ತಲೆಯಿಂದ ಕಾಲಿನವರೆಗೆ ಪೂಸು" ಎಂದರು. ಎತ್ತು ರಾಜಕುಮಾರಿ,

ಸರ್ಪ ಮತ್ತು ನೆಲ್ಲಿಮರದ ಸಂಗತಿಗಳನ್ನು ಕೇಳಿ ಅವರಿಗೂ ಸರಿಯಾದ ಪರಿಹಾರಗಳನ್ನು ಪಡೆದುಕೊಂಡು ಊರಿಗೆ ಹೊರಟಿತು.

ದಾರಿಯಲ್ಲಿ ಬರುವಾಗ ಮೊದಲಿಗೆ ನೆಲ್ಲಿಮರ ಸಿಕ್ಕಿತು. ತನಗೇನಾದರೂ ಪರಿಹಾರ ವಿದೆಯೇ ಎಂದು ಎತ್ತನ್ನು ಪ್ರಶ್ನಿಸಿತು. ಆಗ ಎತ್ತು "ನಿನ್ನ ಬುಡದಲ್ಲಿ ಒಂದು ಹೊನ್ನಿನ ಕೊಪ್ಪರಿಗೆ ಇದೆಯಂತೆ, ಅದನ್ನು ಯಾರಿಗಾದರೂ ದಾನ ಮಾಡಿದರೆ ನಿನ್ನ ಎಲೆ ಉದುರಲಾರದು" ಎಂದಿತು ಎತ್ತು. ಕೂಡಲೇ ಮರವು ಹೊರಳಿ ಬಿದ್ದು "ನನ್ನ ಬುಡದಲ್ಲಿರುವ ಕೊಪ್ಪರಿಗೆಯನ್ನು ನೀನೇ ಪಡೆದುಕೋ" ಎಂದಿತು. ಅದನ್ನು ಪಡೆದುಕೊಳ್ಳಲು ನನ್ನ ಯಜಮಾನನಲ್ಲಿ ಹೇಳುತ್ತೇನೆ ಎಂದು ಎತ್ತು ಅಲ್ಲಿಂದ ಹೊರಟಿತು.

ಎತ್ತು ಮುಂದೆ ಬಂದಾಗ ಸರ್ಪವು ದಾರಿ ಕಾಯುತ್ತಿತ್ತು. ನನ್ನ ರೋಗಕ್ಕೆ ಏನು ಔಷಧಿ ಎಂದು ಎತ್ತಿನೊಡನೆ ಕೇಳಿತು. ಆಗ ಎತ್ತು ನಿನ್ನ ಬಾಯಿಯಲ್ಲೊಂದು ಮಾಣಿಕ್ಯದ ಕಲ್ಲು ಇದೆಯಂತೆ ಅದನ್ನು ಯಾರಿಗಾದರೂ ದಾನ ಮಾಡಿದರೆ ನಿನ್ನ ರೋಗ ನಿಲ್ಲುತ್ತದಂತೆ ಎಂದು ಹೇಳಿತು. ಅದಕ್ಕೆ ಸರ್ಪವು ಯಾರ್‍ಯಾರಿಗೆ ಯಾಕೆ ದಾನ ಮಾಡಲಿ? ನಿನಗೇ ಕೊಟ್ಟುಬಿಡುತ್ತೇನೆ ಎಂದಿತು. "ಹಾಗಾದರೆ ನಾನು ನನ್ನ ಯಜಮಾನನನ್ನು ಕರೆದುಕೊಂಡು ಬರುತ್ತೇನೆ, ಕಾದಿರು" ಎಂದು ಹೇಳಿ ಅಲ್ಲಿಂದ ಹೊರಟಿತು.

ಎತ್ತು ಅರಮನೆಗೆ ಬಂದಾಗ ಅರಸ ಎತ್ತಿನ ದಾರಿ ಕಾಯುತ್ತಿದ್ದ. "ನಿನ್ನ ಮಗಳನ್ನು ಮದುವೆ ಮಾಡಿಕೊಟ್ಟರೆ ಮಗಳಿಗೆ ಸೌಖ್ಯವಾಗುತ್ತದಂತೆ" ಎಂದಿತು. ಹಾಗಾದರೆ ಆಕೆಯನ್ನು ನಿನಗೆ ಮದ್ವೆ ಮಾಡಿಕೊಡುತ್ತೇನೆ ಎಂದ ಅರಸ. "ಬೇಡ ಸ್ವಲ್ಪ ಹೊತ್ತು ಕಾದಿರು, ನನ್ನ ಯಜಮಾನನ್ನು ಕರೆತರುತ್ತೇನೆ" ಎಂದು ಹೇಳಿ ಎತ್ತು ಪಯಣ ಮುಂದುವರಿಸಿತು.

ಎತ್ತು ಗದ್ದೆಗೆ ಬಂದು ಅಲ್ಲಿ ಮಲಗಿದ್ದ ಯಜಮಾನನ ಹೆಣದ ಮೇಲೆ ಗಿಂಡಿ ನೀರು ಸಿಂಪಡಿಸಿ ದರ್ಬೆ ಕೋಲಿನಿಂದ ಮೂರು ಸಲ ಪೂಸಿತು. ಆಗ ಯಜಮಾನ ಜೀವ ತಳೆದು ಎದ್ದು ನಿಂತ. ಯಜಮಾನ ತಮ್ಮ ಎತ್ತುಗಳೊಂದಿಗೆ ಅರಮನೆಗೆ ಹೋದ. ರಾಜಕುಮಾರಿಯನ್ನು ಮದುವೆಯಾದ. ಆಕೆಯ ಉಸಿರಾಟ ಸಣ್ಣದಾಯಿತು. ಅಲ್ಲಿಂದ ಮುಂದೆ ಹೋಗಿ ಸರ್ಪದಿಂದ ಮಾಣಿಕ್ಯದ ಹರಳನ್ನು ದಾನವಾಗಿ ಪಡೆದ. ಸರ್ಪದ ಶೀತ ರೋಗ ನಿಂತಿತು. ನಂತರ ನೆಲ್ಲಿ ಮರದ ಬುಡಕ್ಕೆ ಹೋಗಿ ಕೊಪ್ಪರಿಗೆ ಹೊನ್ನನ್ನು ಮರದಿಂದ ದಾನವಾಗಿ ಪಡೆದುಕೊಂಡ. ಮರ ತಕ್ಷಣ ಚಿಗುರಿತು.


ರೈತನ ತಮ್ಮ ತನ್ನ ಮಾವನಿಂದ ಅರ್ಧರಾಜ್ಯವನ್ನು ಪಡೆದ. ನೆಲ್ಲಿಮರದ ಬುಡದಲ್ಲಿ ಸಿಕ್ಕಿದ ನಿಧಿಯನ್ನು ಬಳಸಿ ಚಿನ್ನದಂತಹ ಅರಮನೆಯನ್ನು ಕಟ್ಟಿಸಿದ. ತನ್ನ ಗೆಂದ ಎತ್ತು ಮತ್ತು ಅದರ ಜೊತೆಯ ವಾಸಕ್ಕೆ ಪ್ರತ್ಯೇಕ ಮನೆಯನ್ನು ಕಟ್ಟಿಸಿಕೊಟ್ಟು ಅವುಗಳಿಗೆ ಬೇಕುಬೇಕಾದ ಸೌಲಭ್ಯಗಳನ್ನು ಒದಗಿಸಿದ. ಸರ್ಪದ ಬಾಯಲ್ಲಿ ಸಿಕ್ಕಿದ ಮಾಣಿಕ್ಯದ

ಕಲ್ಲು ಆತನಿಗೆ ಬೇಕಾದ ವಸ್ತುಗಳನ್ನೆಲ್ಲಾ ಈಡೇರಿಸುತ್ತಿತ್ತು. ಹೀಗೆ ರೈತ ಸುಖವಾಗಿ ರಾಜಕುಮಾರನಾಗಿ ಮೆರೆಯುತ್ತಿದ್ದ. ಅವನ ಅಣ್ಣ ಮತ್ತು ಅತ್ತಿಗೆ ಎಂದಿನಂತೆ ಕೂಲಿಕೆಲಸಕ್ಕೆ ಹೋಗುತ್ತಿದ್ದರು.

ಒಂದು ದಿನ ರಾಜಕುಮಾರ ತನ್ನ ಮಡದಿಯನ್ನು ಕರೆದುಕೊಂಡು ಅಣ್ಣನ ಮನೆಗೆ ಹೋದ. ಒಳ್ಳೆಯ ರೀತಿಯಲ್ಲಿ ಮಾತಾಡಿ "ನೀವು ನಮ್ಮ ಅರಮನೆಗೆ ಬನ್ನಿ" ಎಂದು ಕರೆದ. ಅಣ್ಣ ಅತ್ತಿಗೆಗೆ ತಾವು ಮಾಡಿದ ತಪ್ಪಿನ ಅರಿವಾಯಿತು. ತಮ್ಮ ತಪ್ಪನ್ನು ಕ್ಷಮಿಸುವಂತೆ ಅವರು ತಮ್ಮನಲ್ಲಿ ಬೇಡಿಕೊಂಡರು. "ನಾನು ನಿಮ್ಮ ಎಲ್ಲಾ ತಪ್ಪುಗಳನ್ನು ಕ್ಷಮಿಸಿದ್ದೇನೆ. ನೀವು ನಮ್ಮ ಅರಮನೆಗೆ ಬಂದು ಸುಖವಾಗಿರಿ" ಎಂದ ತಮ್ಮನ ಮಾತಿಗೆ ಒಪ್ಪಿ ಅಣ್ಣ ಮತ್ತು ಅತ್ತಿಗೆ ಅರಮನೆಗೆ ಬಂದರು. ಎಲ್ಲರೂ ಸುಖವಾಗಿದ್ದರು.

ಟಿಪ್ಪಣಿಗಳು

೧. ಗದ್ದೆ – ನೀರು ನಿಲ್ಲುವ ಭತ್ತದ ಹೊಲ
೨. ಮುಡಿ – ಅಳತೆಮಾನ, ೪೨ ಸೇರು
೩. ಕುಲ್ಕುಂದ – ಜಾನುವಾರು ಜಾತ್ರೆ ನಡೆಯುವ ಸುಬ್ರಹ್ಮಣ್ಯ ಪಕ್ಕದ ಊರು.
೪. ಗೆಂದ – ಕೇಸರಿ ಬಣ್ಣ
೫. ಗಡಿ – ಕತ್ತಿಯ ಹೊಡೆತ, ಗಾಯ
೬. ಗಾವುದ – ದೂರದ ಅಳತೆಮಾನ, ೧೬ ಮೈಲಿ
೭. ಮೀರ್ಲೋಕ – ಮೇಲಿನ ಲೋಕ
೮. ದರ್ಬೆ – ಒಂದು ಜಾತಿಯ ಹುಲ್ಲು



೮

ಅಪ್ಪ ಬಯಸಿದ ಮಗಳು

ಒಬ್ಬ ಅರಸ, ಅರಸನಿಗೆ ಒಬ್ಬಳೇ ಮಗಳು. ಒಂದು ದಿನ ಬೆಳಗ್ಗೆ ಅರಸ ಗದ್ದೆಗೆ ನೀರು ಕಟ್ಟಿ ಅರಮನೆಗೆ ಮರಳುವಾಗ ಮೇಲುಪ್ಪರಿಗೆಯಲ್ಲಿ ನಿಂತುಕೊಂಡು ಮಗಳು ರವಿಕೆ ಕೊಂಡಿ ಹಾಕುತ್ತಿದ್ದಳು. ಆಗ ಅವಳ ಮೊಲೆಗಳನ್ನು ನೋಡಿ ಅರಸ ಮರುಳಾದ. ಅರಮನೆಗೆ ಬಂದು ರಾಣಿಯೊಡನೆ "ತಾನು ನೆಟ್ಟದ್ದನ್ನು ತಾನೇ ತಿನ್ನಬಹುದೋ" ಎಂದು ಕೇಳಿದ. "ಹೋ ತಿನ್ನಬಹುದು" ಎಂದಳು ಪತ್ನಿ. ಮಂತ್ರಿಗಳೊಡನೆ ಅದೇ ಪ್ರಶ್ನೆಯನ್ನು ಕೇಳಿದ. ಮಂತ್ರಿಗಳು ಕೂಡ ತಿನ್ನಬಹುದು ಎಂದರು. ಅರಸ ಮದುವೆಗೆ ನಿಶ್ಚಯ ಮಾಡಿದ. ದೂರದ ಊರಿಗೆ ಓಲೆ ಕಳುಹಿಸಿದ. ಊರಿನ ಜನರಿಗೆ ಡಂಗುರ ಸಾರಿಸಿದ. ನೆರೆಕರೆಯವರಿಗೆ ವೀಳ್ಯ ಕೊಟ್ಟು ಹೇಳಿಸಿದ, ಮದುವೆ ದಿನ ಬಂತು. ಮದುವೆಗೆ ಊರ-ಪರವೂರ ಜನರೆಲ್ಲ ಬಂದು ಕೂಡಿದರು. ಮದುಮಗನ ಸಿಂಗಾರವಾಯಿತು. ಮದುಮಗಳು ಯಾರೆಂದು ಯಾರಿಗೂ ಗೊತ್ತಿಲ್ಲ.

ರಾಜನ ಮಗಳಿಗೆ ಸಂಶಯ ಮೂಡಿತು. ತಾನೊಂದು ದೊಡ್ಡ ಮರದ ಪೆಟ್ಟಿಗೆ ಮಾಡಿಸಿದಳು. ಮೇಲುಪ್ಪರಿಗೆಯ ಕೋಣೆಯ ಮೂಲೆಯೊಂದರಲ್ಲಿ ಅದನ್ನಿಡಿಸಿದಳು. ಅದರೊಳಗೆ ತಾನು ಹೋಗಿ ಅಡಗಿ ಕುಳಿತುಕೊಂಡಳು. ರಾಜ ತನ್ನ ಸಿಂಗಾರವಾದ ಬಳಿಕ ರಾಜಕುಮಾರಿಯನ್ನು ಸಿಂಗಾರ ಮಾಡಿಕೊಂಡು ಬರುವಂತೆ ದಾಸಿಯರಿಗೆ ಹೇಳಿದ. ಆದರೆ ದಾಸಿಯರು ಮೇಲುಪ್ಪರಿಗೆಯಲ್ಲಿ ಹುಡುಕುವಾಗ ರಾಜಕುಮಾರಿ ಇಲ್ಲ. ಎಲ್ಲಿ ಹುಡುಕಿದರೂ ರಾಜಕುಮಾರಿ ಸಿಗಲಿಲ್ಲ. ರಾಜ ನಿರಾಶನಾದ. ಊಟಕ್ಕೆ ಬಂದವರೆಲ್ಲ ಊಟ ಮಾಡಿ ಹೋದರು. ಮದುವೆ ನಿಂತು ಹೋಯಿತು.

ನಾಲ್ಕೈದು ದಿವಸ ಕಳೆಯಿತು. ಅರಸ ಮಗಳನ್ನು ಎಲ್ಲಾ ಕಡೆ ಹುಡುಕಿಸಿದ. ಎಲ್ಲಿ ಹುಡುಕಿದರೂ ಆಕೆ ಸಿಗಲಿಲ್ಲ. ಮಗಳು ಇಲ್ಲದ ಮೇಲೆ ಮಗಳ ಪೆಟ್ಟಿಗೆಯಿಂದೇನು ಪ್ರಯೋಜನ? ಅದನ್ನು ಕಂಡಾಗಲೆಲ್ಲ ಮಗಳ ನೆನಪಾಗಿ ದುಃಖ ಉಕ್ಕಿ ಬರುತ್ತದೆ. ರಾಣಿ ಪೆಟ್ಟಿಗೆಯನ್ನು ತೆಗೆದು ಹೊಳೆಗೆ ಬಿಸಾಡಿಸಿದಳು. ಪೆಟ್ಟಿಗೆ ಹೊಳೆ ನೀರಿನಲ್ಲಿ ತೇಲುತ್ತ ತೇಲುತ್ತಾ ಹೋಗಿ ಮತ್ತೊಂದು ಊರಿಗೆ ತಲುಪಿತು. ಆ ಊರಿನ ರಾಜ ಮತ್ತು ಮಂತ್ರಿ ಸಂಜೆ ಹೊತ್ತು ಹೊಳೆ ಬದಿಯ ಹೊಯಿಗೆಯಲ್ಲಿ ಆಟ ಆಡುತ್ತಿದ್ದರು.

ಆಗ ಪೆಟ್ಟಿಗೆ ಹೊಳೆ ನೀರಿನಲ್ಲಿ ತೇಲಿಕೊಂಡು ಬಂತು. ಪ್ರಧಾನಿ ಅದನ್ನು ಕಂಡು ಹಿಡಿಯಲು ಹೋದ. ಅದು ದೂರ ದೂರ ಹೋಯಿತು. ಅರಸ ಅದನ್ನು ಹಿಡಿಯಲು ಹೋದಾಗ ಅದು ಹತ್ತಿರ ಬಂತು. ಆತ ಅದನ್ನು ಹೊರಿಸಿಕೊಂಡು ಹೋಗಿ ಉಪ್ಪರಿಗೆ ಯಲ್ಲಿ ತಾನು ಮಲಗುವ ಕೋಣೆಯಲ್ಲಿರಿಸಿದ.

ರಾಜನಿಗೆ ಆತನ ತಾಯಿ ಪ್ರತಿ ರಾತ್ರಿ ಎರಡು ಕುಡ್ತೆ ಹಾಲು ಮತ್ತು ಎರಡು ಚೀಪು[೧] ಬಾಳೆಹಣ್ಣು ತಂದಿಡುತ್ತಿದ್ದಳು. ರಾತ್ರಿ ಹಾಲು ಕುಡಿದು ಹಣ್ಣು ತಿಂದು ರಾಜ ಮಲಗುತ್ತಿದ್ದ. ಪೆಟ್ಟಿಗೆ ತಂದ ದಿನದಿಂದ ರಾಜನಿಗೆ ರಾತ್ರಿ ಕುಡಿಯಲು ಸಿಗುತ್ತಿದ್ದುದು ಒಂದೇ ಕುಡ್ತೆ ಹಾಲು, ಒಂದೇ ಚೀಪು ಬಾಳೆಹಣ್ಣು. ಒಂದು ದಿನ ರಾಜ ತಾಯಿಯೊಡನೆ "ಏಕಮ್ಮಾ, ಈಗೀಗ ನನಗೆ ಹಾಲು-ಹಣ್ಣು ಕಡಿಮೆ ಮಾಡುತ್ತೀ?" ಎಂದು ಕೇಳಿದ "ಇಲ್ಲ ಮಗಾ ನಾನು ಯಾವಾಗಿನಷ್ಟೇ ತಂದಿಡುತ್ತಿದ್ದೇನೆ" ಎಂದಳು ತಾಯಿ. ಆ ದಿನ ರಾತ್ರಿ ತಾಯಿ ಹಾಲು-ಹಣ್ಣು ತಂದು ಇಟ್ಟ ಕೂಡಲೇ ಕೋಣೆಯಲ್ಲಿ ಏನು ಕತೆ ನಡೆಯುತ್ತದೆಂದು ಅರಸ ಅಡಗಿ ಕುಳಿತು ನೋಡಿದ. ಸ್ವಲ್ಪ ಹೊತ್ತಾಯಿತು, ಪೆಟ್ಟಿಗೆಯಿಂದ ಹುಡುಗಿ ಹೊರಗೆ ಬಂದಳು. ಒಂದು ಕುಡ್ತೆ ಹಾಲು ಕುಡಿದು ಒಂದು ಚೀಪು ಬಾಳೆಹಣ್ಣು ತಿಂದಳು. ಮತ್ತೆ ಪೆಟ್ಟಿಗೆಗೆ ಪ್ರವೇಶಿಸಲು ಹೊರಟಾಗ ರಾಜ ಆಕೆಯ ಕೈ ಹಿಡಿದು ನಿಲ್ಲಿಸಿದ. "ಯಾರು ನೀನು? ನಿನ್ನ ಸಂಗತಿ ಏನು?" ಎಂದು ಕೇಳಿದ. ರಾಜಕುಮಾರಿ ತನ್ನ ಕತೆಯನ್ನೆಲ್ಲಾ ಹೇಳಿದಳು. ಅಂದಿನಿಂದ ರಾಜ ತನ್ನ ಹೆಚ್ಚಿನ ಹೊತ್ತನ್ನು ಅರಮನೆಯಲ್ಲೇ ಕಳೆಯುತ್ತಿದ್ದ. ತನಗೆ ಮೊದಲಿದ್ದ ಹೆಣ್ಣು ಸಂಗಾತಿಯರನ್ನೆಲ್ಲ ಬಿಟ್ಟುಬಿಟ್ಟ. ಅಷ್ಟರಲ್ಲಿ ಅರಸನಿಗೆ ದಂಡಿಗೆ[೨] ಕರೆಬಂತು, ರಾಜ ದಂಡಿಗೆ ಹೊರಟು ಹೋದ. ಹೋಗುವ ಸಂದರ್ಭದಲ್ಲಿ ತಾಯಿಯೊಡನೆ "ನೀನು ದಿನನಿತ್ಯ ನನ್ನ ಕೋಣೆಯಲ್ಲಿ ಹಾಲು ಹಣ್ಣು ಇಡುವುದನ್ನು ಮರೆಯಬೇಡ" ಎಂದು ಹೇಳಿ ಹೋದ.

ಅರಸನು ರಾತ್ರಿ ಹೊತ್ತು ಪೆಟ್ಟಿಗೆಯ ಬಾಗಿಲು ತೆಗೆದು ಹೆಣ್ಣನ್ನು ಹೊರಡಿಸುವುದನ್ನು ಅರಸನ ಕೆಲಸದ ದಾಸಿಯೊಬ್ಬಳು ನೋಡಿದ್ದಳು. ಆ ಸುದ್ದಿಯನ್ನು ಅರಸನ ಸೂಳೆಗೆ ಆಕೆ ತಿಳಿಸಿದಳು. ರಾಜನೇಕೆ ಈ ದಿನಗಳಲ್ಲಿ ತನ್ನ ಬೀಡಿಗೆ ಬರುವುದನ್ನು ಕಡಿಮೆ ಮಾಡಿದ್ದಾನೆ ಎಂಬ ಅರಿವು ಅವಳಿಗಾಯಿತು. ಸೂಳೆ ಈ ಸುದ್ದಿ ಕೇಳಿ ಹೇಗಾದರೂ ಮಾಡಿ ದಂಡಿನಿಂದ ರಾಜ ಬರುವ ಮೊದಲು ಆ ಹೆಣ್ಣನ್ನು ಕೊಲ್ಲಬೇಕೆಂದು ಬಗೆದಳು. ರಾಜಮಾತೆಯ ಬಳಿಗೆ ಹೋಗಿ ಅರಸರ ಉಪ್ಪರಿಗೆಯಲ್ಲಿರುವ ಪೆಟ್ಟಿಗೆಯನ್ನು ತನಗೆ ಕೊಡಬೇಕೆಂದು ಕೇಳಿದಳು. ಮಹಾರಾಣಿ ಅದನ್ನು ಕೊಡಲೊಪ್ಪಲಿಲ್ಲ. ಬೇಡಿ ಕಾಡಿ ಹೇಗಾದರೂ ಮಾಡಿ ರಾಣಿಯಿಂದ ಪೆಟ್ಟಿಗೆಯನ್ನು ಪಡೆದು ಮನೆಗೆ ಕೊಂಡು ಹೋದಳು. ಮನೆಯಲ್ಲಿ ಪೆಟ್ಟಿಗೆಯನ್ನು ಮೆಟ್ಟಿ ಬಿಚ್ಚಿಸಿದಳು. ಹುಡುಗಿ ಹೊರಬಂದಳು. ರಾಜಕುಮಾರಿ ಯನ್ನು ಹಿಡಿದು ಅವಳ ಕೈ ಕಡಿದು ಕೆಸುವಿನ ಸಾಲಿನಲ್ಲಿ ಹೂಳಿಡಿಸಿದಳು. ಕಾಲು ಕಡಿದು ಗೊಬ್ಬರದ ರಾಶಿಯಲ್ಲಿ ಹೂಳಿಡಿಸಿದಳು. ಮೊಲೆಗಳನ್ನು ಕಡಿದು ಭತ್ತದ

ಹೊಟ್ಟಿನ ರಾಶಿಯಲ್ಲಿ ಹೂಳಿಡಿಸಿದಳು. ಕಣ್ಣುಗಳನ್ನು ಕಿತ್ತು ತೆಗೆದು ಉಪ್ಪಿನಕಾಯಿಯ ಭರಣಿಯಲ್ಲಿ ಹಾಕಿಟ್ಟಳು. ದೇಹವನ್ನು ಒಂದು ಕಮರಿಯಲ್ಲಿ ಹಾಕಿದಳು.

ಕಮರಿಯಲ್ಲಿ ಬಿದ್ದು ರಾಜಕುಮಾರಿ ನರಳುತ್ತಿದ್ದಳು. ಆಗ ಆ ದಾರಿಯಿಂದ ಒಬ್ಬಳು ಅಡುಗೂಲಜ್ಜಿ ಬರುತ್ತಿದ್ದಳು. ಅವಳು ರಾಜಕುಮಾರಿಯ ದೇಹವನ್ನು ನೋಡಿ ಎತ್ತಿಕೊಂಡು ತನ್ನ ಮನೆಗೆ ಹೋದಳು. ರಾಜಕುಮಾರಿ ಮರುದಿನ ಅಜ್ಜಿಯನ್ನು ಕರೆದು "ಅಜ್ಜೀ ಅಜ್ಜೀ, ಸೂಳೆಯ ಮನೆಯ ಉಪ್ಪಿನಕಾಯಿ ಭರಣಿಯಲ್ಲಿ ನನ್ನ ಕಣ್ಣುಗಳಿವೆ, ತೆಗೆದುಕೊಂಡು ಬಾ" ಎಂದಳು. ಅಜ್ಜಿ ಸೂಳೆಯ ಮನೆಗೆ ಹೋಗಿ "ಅಮ್ಮ ನನಗೆ ಸ್ವಲ್ಪ ಉಪ್ಪಿನಕಾಯಿ ಕೊಡಿ" ಎಂದಳು. "ಹೋಗು ಭರಣಿಯಿಂದ ತೆಗೆದುಕೋ" ಎಂದಳು ಸೂಳೆ. ಅಜ್ಜಿ ಉಪ್ಪಿನಕಾಯಿ ಭರಣಿಗೆ ಕೈ ಹಾಕಿ ಕಣ್ಣುಗಳನ್ನು ತೆಗೆದುಕೊಂಡು ಬಂದಳು. ರಾಜಕುಮಾರಿಯ ಕಣ್ಣ ಹೊಂಡಕ್ಕೆ ಜೋಡಿಸಿದಳು. ರಾಜಕುಮಾರಿಯ ಕಣ್ಣು ಮೊದಲಿನಂತಾಯಿತು. ಮರುದಿನ ರಾಜಕುಮಾರಿ ಅಜ್ಜಿಯನ್ನು ಕರೆದು "ಅಜ್ಜೀ ಸೂಳೆಯ ಮನೆಯ ಕೆಸುವಿನ ಸಾಲಿನಲ್ಲಿ ನನ್ನ ಕೈಗಳಿವೆ, ತೆಗೆದುಕೊಂಡು ಬಾರಜ್ಜಿ" ಎಂದಳು. ಅಜ್ಜಿ ಸೂಳೆಯ ಬಳಿಗೆ ಹೋಗಿ "ನನಗೆ ಒಂದು ಕಾಲು[1] ಕೆಸು ಕೊಡಿಯಮ್ಮ" ಎಂದು ಕೇಳಿದಳು. "ಸಾಲಿನಿಂದ ಕಡಿದು ತೆಗೆದುಕೋ ಅಜ್ಜಿ" ಎಂದಳು ಸೂಳೆ. ಅಜ್ಜಿ ಕೆಸುವಿನ ಸಾಲಿಗೆ ಹೋಗಿ ಕೈಗಳನ್ನು ಹುಡುಕಿ ತೆಗೆದುಕೊಂಡು ಹೋಗಿ ರಾಜಕುಮಾರಿಗೆ ಜೋಡಿಸಿದಳು. ರಾಜಕುಮಾರಿಯ ಕೈಗಳು ಮೊದಲಿ ನಂತಾದವು. ಮರುದಿನ ಎದ್ದು ರಾಜಕುಮಾರಿ ಅಜ್ಜಿಯೊಡನೆ "ಸೂಳೆಯ ಹಟ್ಟಿಯ ಬದಿಯ ಗೊಬ್ಬರದ ರಾಶಿಯಲ್ಲಿ ನನ್ನ ಕಾಲುಗಳಿವೆ, ತೆಗೆದುಕೊಂಡು ಬಾ" ಎಂದಳು. ಅಜ್ಜಿ ಸೂಳೆಯ ಬಳಿಗೆ ಹೋಗಿ "ಅಮ್ಮಾ ನಾನೊಂದು ಸೌತೆಬೀಜ ಹಾಕಿದ್ದೇನೆ, ಅದು ಬೆಳೆದು ಗಿಡವಾಗಿದೆ. ಅದರ ಬುಡಕ್ಕಿಡಲು ಒಂದು ಹೊರೆ ಗೊಬ್ಬರ ಕೊಡಿ" ಎಂದಳು. "ಬೇಕಾದಷ್ಟು ತೆಗೆದುಕೊಂಡು ಹೋಗಜ್ಜಿ" ಎಂದಳು ಸೂಳೆ. ಅಜ್ಜಿ ಗೊಬ್ಬರದ ಹೊಂಡದಿಂದ ಕಾಲುಗಳನ್ನು ಹೆಕ್ಕಿಕೊಂಡು ಹೋಗಿ ರಾಜಕುಮಾರಿಗೆ ಜೋಡಿಸಿದಳು. ರಾಜಕುಮಾರಿಯ ಕಾಲುಗಳು ಸರಿಯಾಗಿ ಕೂಡಿಕೊಂಡವು. ಮರುದಿನ ರಾಜಕುಮಾರಿ ಅಜ್ಜಿಯನ್ನು ಕರೆದು "ಈ ದಿನ ಸೂಳೆಯ ಭತ್ತದ ಹೊಟ್ಟಿನ ರಾಶಿಯಿಂದ ನನ್ನ ಎರಡು ಮೊಲೆಗಳನ್ನು ತೆಗೆದುಕೊಂಡು ಬಾ ಅಜ್ಜಿ' ಎಂದಳು, ಅಜ್ಜಿ ಸೂಳೆಯ ಬಳಿಗೆ ಹೋಗಿ "ನನ್ನ ಹೊಸ ಮಡಕೆಗಳನ್ನು ಕಪ್ಪು ಮಾಡಲು ಸ್ವಲ್ಪ ಭತ್ತದ ಹೊಟ್ಟು ಬೇಕು" ಎಂದಳು. ಸೂಳೆಯು "ಬೇಕಾದಷ್ಟು ತೆಗೆದುಕೊಂಡು ಹೋಗು" ಎಂದಳು. ಅಜ್ಜಿಯು ಭತ್ತದ ಹೊಟ್ಟಿನ ರಾಶಿಯಿಂದ ರಾಜಕುಮಾರಿಯ ಮೊಲೆಗಳನ್ನೆತ್ತಿಕೊಂಡು ಬಂದು ರಾಜಕುಮಾರಿಯ ಎದೆಗೆ ಜೋಡಿಸಿದಳು. ಈಗ ರಾಜಕುಮಾರಿ ಮೊದಲಿನಂತೆ ಸುರೂಪಿಯಾದ ಹುಡುಗಿಯಾದಳು.

ದಂಡಿಗೆ ಹೋದ ರಾಜ ದಂಡು ಮುಗಿದು ಊರಿಗೆ ಹಿಂತಿರುಗಿದ. ಅರಮನೆಗೆ ಬರುವಾಗ ಉಪ್ಪರಿಗೆಯಲ್ಲಿ ಪೆಟ್ಟಿಗೆ ಇಲ್ಲ., "ಅಮ್ಮಾ ಉಪ್ಪರಿಗೆಯಲ್ಲಿದ್ದ ಪೆಟ್ಟಿಗೆಯನ್ನು ಏನು ಮಾಡಿರುವಿರಿ?" ಎಂದು ಕೇಳಿದ. "ಅದನ್ನು ಸೂಳೆ ಬೇಡಿ ಕೊಂಡೊಯ್ದಿದ್ದಾಳೆ" ಎಂದು ತಾಯಿ ಹೇಳಿದಳು. ಅರಸ ಸೂಳೆಮನೆಗೆ ಓಡಿದ; "ಎಲ್ಲಿದೆ ನನ್ನ ಮರದ ಪೆಟ್ಟಿಗೆ" ಎಂದು ಸೂಳೆಯೊಡನೆ ಕೇಳಿದ. "ಅದನ್ನು ಹೊಳೆಗೆ ಬಿಸಾಡಿದ್ದೇನೆ" ಎಂದಳು. ರಾಜಕುಮಾರ ಬೇಸರದಿಂದ ತಲೆಗೆ ಕೈ ಇಟ್ಟುಕೊಂಡು ಅರಮನೆಗೆ ಹಿಂತಿರುಗಿದ.

ಕೆಲವು ದಿವಸಗಳಾದ ಮೇಲೆ ರಾಜಕುಮಾರಿ ಅಜ್ಜಿಯೊಡನೆ ಹೇಳಿ ಒಂದು ದೊಡ್ಡ ಸಮಾರಾಧನೆ ಮಾಡಿಸಿದಳು. ಊರ, ಪರಊರ ಗಣ್ಯರೆಲ್ಲರಿಗೂ ಹೇಳಿಕೆ⁴ ಕೊಡಿಸಿದಳು. ಬಡವಿ ಅಜ್ಜಿ ಸಮಾರಾಧನೆ ಹೇಗೆ ಮಾಡಿಸುವಳು ಎಂದು ಎಲ್ಲರೂ ಆಶ್ಚರ್ಯಪಟ್ಟರು. ರಾಜನೂ ಕೂಡ ಮುದುಕಿಯ ಸಮಾರಾಧನೆ ನೋಡಬೇಕೆಂದು ಮುದುಕಿಯ ಮನೆಗೆ ಬಂದ. ವಿಶಾಲವಾದ ಚಪ್ಪರದಲ್ಲಿ ಸಮಾರಾಧನೆಗೆ ಬಂದ ಎಲ್ಲರೂ ಕುಳಿತುಕೊಂಡರು. ಆಗ ರಾಜಕುಮಾರಿ ಒಂದು ತಂಬೂರಿಯನ್ನು ಹಿಡಿದು ಕೊಂಡು ಬಂದು ಮಧ್ಯದ ವೇದಿಕೆಯ ಮೇಲೆ ಕುಳಿತು ತಂಬೂರಿ ಬಾರಿಸಿ ಹಾಡ ತೊಡಗಿದಳು. ತನ್ನ ಜೀವನ ಕತೆಯನ್ನು ಪದ್ಯ ರೂಪದಲ್ಲಿ ಹಾಡಿದಳು. ಆಗ ರಾಜನಿಗೆ ಈಕೆ ಪೆಟ್ಟಿಗೆಯಿಂದ ಬಂದ ಹುಡುಗಿ ಎಂದು ನಿರ್ಧಾರವಾಯಿತು. ಆತ ಹೋಗಿ ರಾಜಕುಮಾರಿಯ ಕೈ ಹಿಡಿದುಕೊಂಡ. ಅದೇ ಚಪ್ಪರದಲ್ಲಿ ರಾಜ-ರಾಜಕುಮಾರಿಯ ವಿವಾಹ ವಿಜೃಂಭಣೆಯಿಂದ ನೆರವೇರಿತು. ಸೂಳೆಯನ್ನು ಗಲ್ಲಿಗೇರಿಸಲಾಯಿತು.

ಟಿಪ್ಪಣಿಗಳು

೧. ಚೀಪು – ಪನ್ನೆ
೨. ದಂಡು – ಯುದ್ಧ
೩. ಕಾಲು – ದಂಟು
೪. ಹೇಳಿಕೆ – ಆಮಂತ್ರಣ

***

೯

ರಾಜಕುಮಾರಿಯ ಕೋಡುಗಳು

ಒಂದು ಊರಿನಲ್ಲಿ ಒಬ್ಬ ರೈತನಿದ್ದ. ಆ ರೈತನಿಗೆ ಇಬ್ಬರು ಗಂಡು ಮಕ್ಕಳ ಹೊರತು ಬೇರೆ ಯಾರೂ ಇರಲಿಲ್ಲ. ರೈತ ಸಾಯುವಾಗ ಅವರಿಬ್ಬರನ್ನೂ ಕರೆದು "ಮಕ್ಕಳೇ ನಾನು ನಿಮಗಾಗಿ ಏನನ್ನೂ ಮಾಡಿಲ್ಲ. ಆದರೆ ನಿಮಗೆ ಬೇಕಾದುದನ್ನು ಮಾಡಿಸಿಕೊಳ್ಳುವ ಮೂರು ವಸ್ತುಗಳು ಮಾತ್ರ ನನ್ನಲ್ಲಿವೆ. ಒಂದು ಚೀಲ. ಈ ಚೀಲದಲ್ಲಿ ಯಾವಾಗ ಕೈ ಹಾಕಿದರೂ ಐವತ್ತು ಚಿನ್ನದ ನಾಣ್ಯಗಳು ಸಿಗುತ್ತವೆ. ಇನ್ನೊಂದು ತುಂಡು ಕಂಬಳಿ. ಈ ಕಂಬಳಿ ಮೇಲೆ ಕುಳಿತು ಯಾವ ಸ್ಥಳಕ್ಕೆ ಹೋಗಬೇಕೆಂದು ಬಯಸಿದರೂ ಅಲ್ಲಿಗೆ ಅದು ಕರೆದೊಯ್ಯುತ್ತದೆ. ಮತ್ತೊಂದು ಟೊಪ್ಪಿ. ಈ ಟೊಪ್ಪಿಯನ್ನು ತಲೆಗೆ ಹಾಕಿಕೊಂಡರೆ ಆತ ಯಾರ ಕಣ್ಣಿಗೂ ಕಾಣುವುದಿಲ್ಲ. ಇವಿಷ್ಟು ನನ್ನ ಆಸ್ತಿ" ಎಂದು ಆತ ಹೇಳಿ ಸತ್ತು ಹೋದ. ಇಬ್ಬರು ಮಕ್ಕಳು ಸೇರಿ ಸತ್ತುಹೋದ ತಂದೆಗೆ ಉತ್ತರಕ್ರಿಯೆ ನಡೆಸಿದರು. ಎಲ್ಲ ಕಾರ್ಯಗಳು ಮುಗಿದ ಮೇಲೆ ಈರ್ವರೂ ಮೊದಲಿನಂತೆ ಹೊಲಕ್ಕೆ ಹೋಗಿ ದುಡಿಯಲು ಪ್ರಾರಂಭಿಸಿದರು. ಇಬ್ಬರು ಮಕ್ಕಳಲ್ಲಿ ಯಾರೊಬ್ಬರೂ ತಂದೆ ಬಿಟ್ಟು ಹೋದ ಆಸ್ತಿಯನ್ನು ಪಾಲು ಮಾಡಿಕೊಳ್ಳಲು ಮುಂದಾಗಲಿಲ್ಲ.

ಆ ಊರಿನಲ್ಲಿ ಒಬ್ಬ ರಾಜ. ಆ ರಾಜ ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ಬಾವಿ ತೋಡಿಸಿದ. ಎಷ್ಟು ತೋಡಿದರೂ ಅದರಲ್ಲಿ ನೀರು ಬರಲಿಲ್ಲ. ಆ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿದ. ಅವನಿಗೊಂದು ಆಲೋಚನೆ ಬಂತು. ಆತನಿಗೆ ಒಬ್ಬಳೇ ಮಗಳು. ಆ ಬಾವಿಯಲ್ಲಿ ಚಿನ್ನದ ನಾಣ್ಯಗಳನ್ನು ತುಂಬಿಸಿದವರಿಗೆ ತನ್ನ ಮಗಳನ್ನು ಧಾರೆಯೆರೆದು ಕೊಡುವುದಾಗಿ ಬಾವಿಯ ಬಳಿ ದೊಡ್ಡ ಹಲಗೆಯಲ್ಲಿ ಬರೆಸಿ ಹಾಕಿದ.

ರೈತನ ಸಣ್ಣ ಮಗ ಒಂದು ದಿನ ಆ ದಾರಿಯಾಗಿ ಬಂದು ಹಲಗೆಯ ಬರಹ ಓದಿದ. ಕೂಡಲೆ ಅವನಿಗೆ ಹಣದ ಚೀಲದ ನೆನಪಾಯಿತು. ಮನೆಗೆ ಓಡಿದ. ತನಗೆ ಹಣದ ಚೀಲ ಕೊಡುವಂತೆ ಅಣ್ಣನನ್ನು ಕೇಳಿದ. ಪ್ರಾರಂಭದಲ್ಲಿ ಅಣ್ಣ ಹಣದ ಚೀಲ ಕೊಡಲು ಒಪ್ಪಲಿಲ್ಲ. ರಾಜಕುಮಾರಿಯನ್ನು ವರಿಸುವ ಹುಚ್ಚು ನಿನಗೆ ಬೇಡವೆಂದು ಬುದ್ಧಿವಾದ ಹೇಳಿದ. ಸಣ್ಣವನು ಒತ್ತಾಯ ಮಾಡಿದ ಮೇಲೆ ಅಣ್ಣ ಚೀಲ ಕೊಟ್ಟ. ತಮ್ಮ ಚೀಲ ಹಿಡಿದುಕೊಂಡು ಬಂದು ಬಾವಿಗೆ ಚೀಲದಿಂದ ಚಿನ್ನದ ನಾಣ್ಯ

ಸುರಿಯತೊಡಗಿದ. ಮೇಲುಪ್ಪರಿಗೆಯಲ್ಲಿ ಕುಳಿತು ರಾಜಕುಮಾರಿ ಇದನ್ನು ನೋಡುತ್ತಿದ್ದಳು. ಆಕೆಗೆ ರೈತ ಹುಡುಗನನ್ನು ವರಿಸುವ ಮನಸ್ಸಿರಲಿಲ್ಲ. ಅದಕ್ಕಾಗಿ ಅವನನ್ನು ಕರೆತರುವಂತೆ ದೂತರನ್ನು ಕಳುಹಿಸಿದಳು. ರೈತನ ಮಗ ಬಂದ, ರಾಜಕುಮಾರಿ ಆದರದಿಂದ ಸ್ವಾಗತಿಸಿದಳು. ರೈತನ ಮಗ "ಇನ್ನೇನು ಬಾವಿ ಮುಕ್ಕಾಲಂಶ ತುಂಬಿದೆ. ಅದನ್ನು ಪೂರ್ತಿ ಮಾಡಿ ಬರುತ್ತೇನೆ" ಎಂದ. "ಅಯ್ಯೋ ಅದೀಗ ನಿಮಗೆ ಎಷ್ಟರ ಕೆಲಸ. ನಿಧಾನದಲ್ಲಿ ನಾಳೆ ಮಾಡಿದರಾಯಿತು. ನಿಮ್ಮ ಸಾಹಸಕ್ಕೆ ಮೆಚ್ಚಿದೆ. ಈ ದಿನ ನನ್ನ ಸನ್ಮಾನ ಸ್ವೀಕರಿಸಿ, ನಾಳೆ ಮದುವೆಯ ಏರ್ಪಾಡು ಮಾಡೋಣ" ಎಂದಳು ರಾಜಕುಮಾರಿ, ರೈತನಮಗ ಅದಕ್ಕೊಪ್ಪಿದ.

ರೈತನ ಮಗನಿಗೆ ಭಾರೀ ಸನ್ಮಾನವಾಯಿತು. ಆ ದಿನ ಅರಮನೆಯಲ್ಲೆ ನಿಲ್ಲಬೇಕೆಂದು ಒತ್ತಾಯಿಸಿದಳು. ರಾತ್ರಿ ಉಂಡು ಮಲಗಿದವನಿಗೆ ಜೋರಾಗಿ ನಿದ್ರೆ ಬಂತು. ಅದೇ ಹೊತ್ತಿನಲ್ಲಿ ರಾಜಕುಮಾರಿ ಆತನ ಹಣದ ಚೀಲವನ್ನು ಅಪಹರಿಸಿದಳು.

ಮರುದಿನ ಬೆಳಗ್ಗೆ ರೈತನ ಮಗನಿಗೆ ಎಷ್ಟು ಹುಡುಕಿದರೂ ಹಣದ ಚೀಲ ಸಿಗಲಿಲ್ಲ. ರಾಜಕುಮಾರಿ ಬಾವಿಯನ್ನು ತುಂಬಿಸುವಂತೆ ಹೇಳಿದಳು. ಹಣದ ಚೀಲವಿಲ್ಲದೆ ಹೇಗೆ ಬಾವಿಯನ್ನು ತುಂಬಿಸಲು ಸಾಧ್ಯ. ರೈತನ ಮಗ ಪೆಚ್ಚು ಮೋರೆ ಹಾಕಿಕೊಂಡು ಮನೆಗೆ ಹೋದ.

ಈ ಸಲ ನನಗೆ ಮಾಯದ ಟೊಪ್ಪಿ ಕೊಡಬೇಕೆಂದು ರೈತನ ಮಗ ಅಣ್ಣನನ್ನು ಕೇಳಿದ. ಅಣ್ಣ ಕೊಡಲೊಪ್ಪಲಿಲ್ಲ. ಕೊನೆಗೆ ಜಗಳಾಡಿ ಕುಲಾವಿ^ಯನ್ನು ಪಡೆದುಕೊಂಡು ಪುನಃ ಅರಮನೆಗೆ ಹೊರಟ.

ರಾತ್ರಿಯಾದೊಡನೆ ರೈತನ ಮಗ ಟೊಪ್ಪಿ ಧರಿಸಿ ಮೆಲ್ಲನೆ ಅಂತಃಪುರ ಪ್ರವೇಶಿಸಿದ. ರಾಜಕುಮಾರಿ ಹಣದ ಚೀಲವನ್ನು ತಲೆಯಡಿಯಲ್ಲಿಟ್ಟುಕೊಂಡು ನಿದ್ರೆ ಮಾಡುತ್ತಿದ್ದಳು. ರೈತನ ಮಗ ಮೆಲ್ಲನೆ ಚೀಲವನ್ನೆಳೆದ. ರಾಜಕುಮಾರಿಗೆ ಎಚ್ಚರವಾಯಿತು. ಕೈ ಬೀಸಿದಳು ಟೊಪ್ಪಿ ಅವಳ ಕೈಗೆ ಸಿಕ್ಕಿತು. ತಕ್ಷಣ ರೈತನ ಮಗ ಕಾಣಿಸಿಕೊಂಡ. "ಕಳ್ಳಾ ಕಳ್ಳಾ" ಎಂದು ಬೊಬ್ಬೆ ಹಾಕಿದಳು. ದೂತರು ಬಂದು ಚೆನ್ನಾಗಿ ಹೊಡೆದು ಹೊರಗೆ ಹಾಕಿದರು. ಮಾಯದ ಕುಲಾವಿಯೂ ಆಕೆಯ ಕೈಗೆ ಸೇರಿತು. ರೈತನ ಮಗ ಮನೆ ಸೇರಿದ.

ಇನ್ನು ಉಳಿದಿರುವುದು ಒಂದೇ-ಕಂಬಳಿ, ಅದನ್ನು ಕೇಳಿದರೆ ಅಣ್ಣ ಕೊಡಲಾರ ನೆಂದು ಗೊತ್ತು. ಅದಕ್ಕಾಗಿ ಅದನ್ನು ಮನೆಯಿಂದ ಅಣ್ಣನಿಗೆ ಗೊತ್ತಾಗದಂತೆ ಕದ್ದ. ಮರುದಿನ ಪೇಟೆಗೆ ಬಂದ. ತರತರದ ಬಳೆಗಳನ್ನು ಖರೀದಿಸಿದ. ಬಳೆಗಾರನ ವೇಷ ಧರಿಸಿಕೊಂಡು ಕಂಬಳಿಯೊಂದಿಗೆ ಅರಮನೆಗೆ ನಡೆದ.

ಅರಮನೆಯ ದಾಸಿಯರು ಬಳೆಗಾರನನ್ನು ನೋಡಿದರು. ಅಂತಃಪುರಕ್ಕೆ ಕರೆದರು. ಬಳೆಗಾರನು ರಾಜಕುಮಾರಿಯನ್ನು ಕರೆದು ಕಂಬಳಿ ಹಾಸಿ ಕುಳ್ಳಿರಿಸಿ ಬಳೆತೊಡಿಸಲು ಪ್ರಾರಂಭಿಸಿದ. ಮನಸ್ಸಿನಲ್ಲಿ "ನಮ್ಮಿಬ್ಬರನ್ನು ನಾಡಿನ ದೊಡ್ಡ ಕಾಡಿಗೆ ಕೊಂಡೊಯ್ದು

ಬಿಡು" ಎಂದು ನೆನೆಸಿಕೊಂಡ. ಮರುಕ್ಷಣವೆ ಕಂಬಳಿಯೊಂದಿಗೆ ರಾಜಕುಮಾರಿ ಸಮೇತ ರೈತನ ಮಗ ಮಾಯವಾದ.

ಕಾಡಿನ ಮಧ್ಯೆ ಹೋಗಿ ಕಂಬಳಿ ಇಳಿಯಿತು. ರಾಜಕುಮಾರಿ ರೈತನ ಮಗನಲ್ಲಿ ಕೃತಕ ಪ್ರೀತಿ ತೋರಿಸಲು ಪ್ರಾರಂಭಿಸಿದಳು. ರೈತನ ಮಗ ಅದನ್ನು ನಂಬಿಬಿಟ್ಟ. ಸ್ವಲ್ಪ ಹೊತ್ತು ಅಲ್ಲಿ ವಿಶ್ರಾಂತಿ ತೆಗೆದುಕೊಂಡರು. ಅಷ್ಟರಲ್ಲೆ ರಾಜಕುಮಾರಿ "ಬಾಯಾರಿಕೆ, ಬಾಯಾರಿಕೆ ನೀರು, ನೀರು" ಎಂದು ತಲೆ ತಿರುಗಿ ಬಿದ್ದಳು. ರೈತನ ಮಗ ನೀರು ಹುಡುಕಿ ತರಲು ಓಡಿದ.

ಆತ ನೀರು ತಂದಾಗ ಅಲ್ಲಿ ರಾಜಕುಮಾರಿ ಇರಲಿಲ್ಲ. ಆಕೆ ಕಂಬಳಿಯಲ್ಲಿ ಕುಳಿತು ತನ್ನರಮನೆ ಸೇರಿದ್ದಳು. ಇದ್ದ ಒಂದು ಕಂಬಳಿಯೂ ಹೋಯಿತು. ಇನ್ನೇಕೆ ನಾನು ಊರಿಗೆ ಹೋಗುವುದು, ಕಾಡಿನಲ್ಲೇ ಇರುತ್ತೇನೆ. ಹುಲಿ ಕರಡಿಯಾದರೂ ನನ್ನನ್ನು ತಿನ್ನಲಿ ಎಂದು ಕಾಡಿನಲ್ಲೆ ಅಲೆದಾಡತೊಡಗಿದ.

ತಿರುಗಾಡಿ ಬಹಳ ಹೊತ್ತಾದ ಮೇಲೆ ಅವನಿಗೆ ಒಂದು ಬಾಳೆ ತೋಟ ಕಾಣಿಸಿತು. ತೋಟದಲ್ಲಿ ಹಣ್ಣಾದ ಬಾಳೆ ಗೊನೆಗಳನ್ನು ಕಂಡು ಬಾಯಲ್ಲಿ ನೀರೂರಿತು. ಹೋಗಿ ಎರಡು ಬಾಳೆ ಹಣ್ಣುಗಳನ್ನು ಕಿತ್ತು ಗಬಗಬನೆ ತಿಂದ. ಅವನ ಹೊಟ್ಟೆ ತುಂಬಿತು. ಆಯಾಸದಿಂದ ಅಲ್ಲೆ ಮಲಗಿದ. ಎದ್ದು ನೋಡುವಾಗ ಆತನ ತಲೆ ಮೇಲೆ ಎರಡು ಕೋಡು ಗಳು ಮೂಡಿದ್ದವು ಅಯ್ಯೋ ಈ ಕಷ್ಟದಲ್ಲಿ ಕುರೂಪ ಬೇರೆ ಬಂತೇ ಎಂದು ಅಳತೊಡಗಿದ. ಅಷ್ಟರಲ್ಲಿ ಅಲ್ಲಿಗೆ ಒಂದು ಮಂಗಗಳ ಗುಂಪು ಬಂದಿತು. ಮಂಗಗಳು ಎರಡೆರಡು ಬಾಳೆಹಣ್ಣುಗಳನ್ನು ತಿಂದವು. ಅವುಗಳಿಗೆ ಎರಡೆರಡು ಕೋಡುಗಳು ಮೂಡಿದವು. ಕೂಡಲೇ ಅವು ಪಕ್ಕದ ತೋಟಕ್ಕೆ ಹೋಗಿ ಎರಡೆರಡು ಬಾಳೆಹಣ್ಣುಗಳನ್ನು ತಿಂದವು. ಅಷ್ಟರಲ್ಲಿ ಅವುಗಳ ಕೋಡುಗಳು ಉದುರಿಹೋದವು. ರೈತನ ಮಗನಿಗೆ ಬಹಳ ಸಂತೋಷವಾಯಿತು. ಪಕ್ಕದ ತೋಟಕ್ಕೆ ಹೋಗಿ ಅವನು ಎರಡು ಹಣ್ಣು ತಿಂದ. ಆತನ ಕೋಡುಗಳು ಉದುರಿದವು. ಎರಡು ತೋಟಗಳಿಂದಲೂ ಸಾಕಷ್ಟು ಹಣ್ಣುಗಳನ್ನು ಆತ ಕಿತ್ತುಕೊಂಡು ಊರಿಗೆ ಹಿಂತಿರುಗಿದ.

ಮಾರನೇ ದಿನ ಆತ ಒಬ್ಬ ಹಣ್ಣು ಮಾರುವವನ ವೇಷತೊಟ್ಟುಕೊಂಡು ತಲೆಯಲ್ಲಿ ಹಣ್ಣಿನ ಬುಟ್ಟಿ ಹೊತ್ತು ಅರಮನೆಗೆ ಬಂದ. ರಾಜನಿಗೆ ಹಣ್ಣುಗಳನ್ನು ನೋಡಿ ಸಂತೋಷವಾಯಿತು. ಆಸ್ಥಾನದಲ್ಲಿರುವವರಿಗೆಲ್ಲರಿಗೂ ರಾಜ ಒಂದೊಂದು ಹಣ್ಣು ಕೊಟ್ಟ. ತನ್ನ ಮುದ್ದಿನ ಮಗಳಿಗೆ ಎರಡು ಹಣ್ಣು ಕೊಟ್ಟ. ಎಲ್ಲರೂ ಬಹಳ ಸಂತೋಷ ದಿಂದ ಹಣ್ಣು ತಿಂದರು. ನಿಧಾನವಾಗಿ ಎಲ್ಲರಿಗೂ ಒಂದೊಂದು ಕೋಡು ಬೆಳೆಯಲು ಪ್ರಾರಂಭವಾಯಿತು. ರಾಜಕುಮಾರಿಗೆ ಎರಡು ಕೋಡು ಬೆಳೆಯಿತು. ತಕ್ಷಣ ಹಣ್ಣಿನ ವ್ಯಾಪಾರಿಗಾಗಿ ರಾಜ ಹುಡುಕಿಸಿದ. ಅಷ್ಟರಲ್ಲಿ ಆತ ಪರಾರಿಯಾಗಿದ್ದ. ಕೋಡುಗಳನ್ನು ಉದುರಿಸಲು ಬಹಳಷ್ಟು ವೈದ್ಯರನ್ನು ಕರೆಸಿದ. ಯಾವ ವೈದ್ಯರಿಂದಲೂ ಕೋಡನ್ನು

ಉದುರಿಸಲು ಸಾಧ್ಯವಾಗಲಿಲ್ಲ. ರಾಜ ಚಿಂತೆಗೊಳಗಾದ. ಕೋಡನ್ನು ಉದುರಿಸಿದಾತನಿಗೆ ತನ್ನ ಮಗಳನ್ನೂ ಅರ್ಧರಾಜ್ಯವನ್ನೂ ಕೊಡುವುದಾಗಿ ಡಂಗುರ ಸಾರಿಸಿದ. ಹೀಗೆ ಕೆಲವು ದಿವಸ ಕಳೆಯಿತು. ರೈತನ ಮಗ ಪಂಡಿತನ ವೇಷಧರಿಸಿ ಬಂದ. ಆಸ್ಥಾನ ದಲ್ಲಿದ್ದವರ ಕೋಡುಗಳನ್ನೆಲ್ಲಾ ಪರೀಕ್ಷಿಸಿದ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂಬಂತೆ ಬಾಳೆಹಣ್ಣಿಗೆ ಬಾಳೆಹಣ್ಣೇ ಔಷಧ ಎಂದು ಎಲ್ಲರಿಗೂ ಒಂದೊಂದು ಬಾಳೆಹಣ್ಣನು ಮಂತ್ರಿಸಿ ಕೊಟ್ಟ ಅದನ್ನು ತಿಂದ ಎಲ್ಲರ ಕೋಡುಗಳೂ ಉದುರಿದವು. ರಾಜಕುಮಾರಿಗೆ ಎರಡು ಕೋಡುಗಳು ಬಂದಿರುವುದರಿಂದ ಅವಳಿಗೆ ಬೇರೆ ರೀತಿಯ ಚಿಕಿತ್ಸೆಯಾಗಬೇಕೆಂದು ಅಂತಃಪುರಕ್ಕೆ ಕರೆದುಕೊಂಡು ಹೋದ. ಅಂತಃಪುರದಿಂದ ದಾಸಿಯರೆನ್ನೆಲ್ಲಾ ಹೊರಗೆ ಕಳುಹಿಸಿ ಕದವಿಕ್ಕಿ ರಾಜಕುಮಾರಿಯನ್ನು ಚೆನ್ನಾಗಿ ಥಳಿಸಿದ. ತನ್ನ ಹಣದ ಚೀಲ, ಮಾಯದ ಟೊಪ್ಪಿ, ಕಂಬಳಿಯನ್ನು ವಶಪಡಿಸಿಕೊಂಡ. ರಾಜಕುಮಾರಿ ತಾನು ಮಾಡಿದ ತಪ್ಪಿಗಾಗಿ ರೈತನ ಮಗನೊಡನೆ ಕ್ಷಮೆ ಯಾಚಿಸಿ ಕೊಂಡಳು. ನಂತರ ಆಕೆಗೆ ತಿನ್ನಲು ಬಾಳೆಹಣ್ಣುಗಳನ್ನು ಕೊಟ್ಟ. ರಾಜಕುಮಾರಿಯ ಕೋಡುಗಳು ಉದುರಿಹೋದವು.

ರಾಜಕುಮಾರಿಯ ಕೋಡುಗಳು ಉದುರಿಬಿದ್ದವೆಂದು ತಿಳಿದ ರಾಜನಿಗೆ ಬಹಳ ಸಂತೋಷವಾಯಿತು. ತನ್ನ ಮಗಳನ್ನು ಆತನಿಗೆ ಮದುವೆ ಮಾಡಿಕೊಟ್ಟು ಅರ್ಧ ರಾಜ್ಯವನ್ನೂ ನೀಡಿ ಆತನನ್ನು ಅದಕ್ಕೆ ರಾಜನಾಗಿ ಮಾಡಿದ. ರೈತನ ಮಗ ರಾಜಕುಮಾರಿ ಯೊಂದಿಗೆ ತನಗೆ ಸಿಕ್ಕಿದ ಅರ್ಧರಾಜ್ಯವನ್ನು ಆಳಿಕೊಂಡು ಸಂತೋಷವಾಗಿದ್ದ.

ಟಿಪ್ಪಣಿಗಳು

೧. ಕುಲಾವಿ – ಟೊಪ್ಪಿ
೨. ಕೋಡು – ಕೊಂಬು



೧೦

ಸೋರೆಕಾಯಿ ಕುಮಾರ

ಒಂದೂರಿನಲ್ಲಿ ಒಬ್ಬ ಅರಸ, ಅರಸನ ಹೆಂಡತಿ ಗರ್ಭಿಣಿಯಾದಳು. ನಿನಗೆ ಯಾವುದರ ಮೇಲೆ ಆಸೆ ಇದೆ ಎಂದು ಅರಸನು ಕೇಳಿದ. ಆಕೆ 'ನನಗೆ ಸೋರೆಕಾಯಿ ಪಾಯಸ ತಿನ್ನಬೇಕೆಂದು ಆಸೆ ಇದೆ" ಎಂದಳು. ರಾಜ ರಾಣಿಗೆ ಸೋರೆಕಾಯಿ ತರಿಸಿಕೊಟ್ಟ. ಸೋರೆಕಾಯಿ ಪಾಯಸ ತಿಂದ ರಾಣಿ ತಿಂಗಳು ಪೂರ್ತಿಯಾಗುವಾಗ ಒಂದು ಸೋರೆಕಾಯಿಯನ್ನೇ ಹೆತ್ತಳು. ಸೋರೆಕಾಯಿಯನ್ನು ತೆಗೆದು ಅಟ್ಟದಲ್ಲಿ[೧] ಹಾಕಿದರು. ಅದರ ಕಡೆಗೆ ಯಾರೂ ಗಮನ ಕೊಡಲಿಲ್ಲ. ಅಟ್ಟದಲ್ಲಿದ್ದ ಸೋರೆಕಾಯಿ ಅದರಷ್ಟಕ್ಕೇ ಬೆಳೆಯುತ್ತಾ ಹೋಯಿತು. ವರ್ಷ ಹದಿನೆಂಟು ಕಳೆದು ಹೋಯಿತು. ಒಂದು ದಿನ ಅಟ್ಟದಿಂದ "ಅಮ್ಮಾ ನನಗೆ ಮದುವೆ ಮಾಡಿಸಿ" ಎಂಬ ಶಬ್ದ ಕೇಳಿತು. ಫಕ್ಕನೆ ಆಕೆಗೆ ತನ್ನ ಸೋರೆಕಾಯಿ ಕುಮಾರ ಮಗನ ನೆನಪಾಯಿತು. ತಾಯಿ ತನ್ನ ಮಗನಿಗೆ ಹುಡುಗಿ ಹುಡುಕಿಕೊಂಡು ಹೋದಳು. ಸೋರೆಕಾಯಿಗೆ ಹುಡುಗಿ ಕೊಡಲು ಯಾರೊಬ್ಬರೂ ಒಪ್ಪಿಕೊಳ್ಳಲಿಲ್ಲ. ಕೊನೆಗೆ ಒಬ್ಬ ಕಡು ಬಡವನ ಮನೆಗೆ ಹೋದಳು. ಆ ಬಡವನಿಗೆ ಏಳು ಜನ ಹೆಣ್ಣು ಮಕ್ಕಳು. ರಾಣಿ ಅಲ್ಲಿಗೆ ಹೋಗುವಾಗ ಆ ಏಳು ಜನರೂ ದಣಿಗಳ ಮನೆಯ ಭತ್ತ ಕುಟ್ಟುತ್ತಿದ್ದರು. ಅವರಿಗೆ ತನ್ನ ರಾಣಿ ಮುದ್ರೆಯುಂಗುರ ತೋರಿಸಿ "ನಾನು ಈ ಊರಿನ ರಾಣಿ. ನನಗೊಬ್ಬ ಸೋರೆಕಾಯಿ ಮಗನಿದ್ದಾನೆ. ಅವನನ್ನು ಮದ್ವೆಯಾಗಲು ಬಯಸುವವರು ಬಂದು ನನ್ನ ಮುದ್ರೆಯುಂಗುರ ಸ್ವೀಕರಿಸಿ" ಎಂದಳು. ಅಷ್ಟರಲ್ಲಿ ನಿಮ್ಮ ಸೋರೆಕಾಯಿ ಮಗನನ್ನು ನಾವು ಮದ್ವೆಯಾಗುವುದಿಲ್ಲವೆಂದು ತಿರಸ್ಕರಿಸಿ ಒಬ್ಬೊಬ್ಬರಾಗಿ ಒನಕೆ[೨] ಬಿಸಾಡಿ ಹೋಗಿಬಿಟ್ಟರು. ಆರು ಜನರೂ ಹೋದರು. ಕೊನೆಗೊಬ್ಬಳು ಉಳಿದವಳು ತಿಮ್ಮು. ಆಕೆ ಬಂದು ಮುದ್ರೆಯುಂಗುರ ಇಟ್ಟುಕೊಂಡಳು. ಮದುವೆ ನಿಶ್ಚಿತವಾಯಿತು. ತಿಮ್ಮುನ ಗಂಡ ಸೋರೆಕಾಯಿ ಎಂದು ಎಲ್ಲಾ ಅಕ್ಕಂದಿರು ತಮಾಷೆ ಮಾಡಲು ಪ್ರಾರಂಭಿಸಿದರು. ತಿಮ್ಮು ಅವರ ಮಾತಿಗೆ ಸೊಪ್ಪು ಹಾಕಲಿಲ್ಲ. ಸೊರೆಕಾಯಿಯೊಂದಿಗೆ ಮದ್ವೆಯಾಗಿ ಬಿಟ್ಟಳು. ಮದ್ವೆಯಾಗಿ ತಿಮ್ಮುನೊಂದಿಗೆ ಸೋರೆಕಾಯಿ ಕುಮಾರ ಅತ್ತೆಮನೆಗೆ ಹೊರಳಾಡಿಕೊಂಡು ಬಂದ. ಅತ್ತೆಮನೆಯಲ್ಲಿ ರಾತ್ರಿ ಸ್ನಾನಕ್ಕೆ ತಿಮ್ಮು ಬಚ್ಚಲ ನೀರು ಕಾಯಿಸಿ ಬಿಸಿ ಮಾಡಿದಳು. ಗಂಡನನ್ನು

ಸ್ನಾನಕ್ಕೆ ಕರೆದಳು. ಸೋರೆಕಾಯಿ ಕುಮಾರ ಹೊರಳಾಡಿಕೊಂಡು ಬಚ್ಚಲ ಮನೆಗೆ ಹೋದ. ತನ್ನ ಗಂಡ ಹೇಗೆ ಸ್ನಾನ ಮಾಡುತ್ತಾನೆಂದು ನೋಡಲು ಅಡಗಿ ಕುಳಿತು ಕೊಂಡಳು. ಸೋರೆಕಾಯಿ ಕುಮಾರ ಸೋರೆಕಾಯಿಯಿಂದ ಹೊರಗೆ ಬಂದ. ಚೆಲುವ ರಾಜಕುಮಾರನ ತೇಜಸ್ಸಿಗೆ ಬಚ್ಚಲು ಪೂರ್ತಿ ಬೆಳಕಾಯಿತು. ರಾಜಕುಮಾರ ಬಚ್ಚಲ ಹೊಂಡಕ್ಕೆ ಇಳಿದ ತಕ್ಷಣ ತಿಮ್ಮು ಹೋಗಿ ಬುರುಡೆಯನ್ನು ಬಚ್ಚಲ ಒಲೆಗೆ ಹಾಕಿಬಿಟ್ಟಳು. ತಿಮ್ಮು ತನ್ನ ಗಂಡನನ್ನು ಸ್ನಾನ ಮಾಡಿಸಿ ಮನೆಗೆ ಕರೆದುಕೊಂಡು ಬಂದಳು. ಎಲ್ಲರೂ ತಿಮ್ಮುವಿನ ಗಂಡನನ್ನು ನೋಡಿ ಬೆರಗಾದರು.

ಒಂದು ದಿನ ತಿಮ್ಮುವನ್ನು ಆಕೆಯ ದೊಡ್ಡ ಅಕ್ಕ ಕೆರೆಯ ಬಳಿಗೆ ಸ್ನಾನಕ್ಕೆ ಕರೆದುಕೊಂಡು ಹೋದಳು. ತಿಮ್ಮು ತನ್ನ ಎಲ್ಲಾ ಆಭರಣಗಳನ್ನೂ ಸೀರೆಯನ್ನೂ ಕೆರೆಯ ದಂಡೆಯ ಮೇಲಿಟ್ಟು ಸ್ನಾನಕ್ಕೆ ಇಳಿದಳು. ಕೂಡಲೇ ಅಕ್ಕ ಆಕೆಯನ್ನು ದೂಡಿ ಕೆರೆಗೆ ಹಾಕಿದಳು. ತಂಗಿಯ ಆಭರಣ ಸೀರೆಯನ್ನು ಧರಿಸಿಕೊಂಡು ತಿಮ್ಮುವಿನ ಗಂಡನ ಬಳಿಗೆ ಬಂದಳು. ತಿಮ್ಮುವಿನ ಗಂಡನಿಗೆ ಸಂಶಯವಾಯಿತು. ಆತ ಇದನ್ನು ಪರೀಕ್ಷಿಸುವ ಸಲುವಾಗಿ "ನನ್ನ ತಲೆ ಬಾಚು" ಎಂದ. ತಿಮ್ಮು ಯಾವಾಗಲೂ ಚಿನ್ನದ ಬಾಚಣಿಗೆಯಲ್ಲಿ ಗಂಡನ ತಲೆ ಬಾಚುತ್ತಿದ್ದಳು" ಅದು ಎಲ್ಲಿದೆ ಎಂದು ತಿಮ್ಮುವಿನ ಅಕ್ಕನಿಗೆ ಗೊತ್ತಿರಲಿಲ್ಲ. ಅಲ್ಲಿ ಇಲ್ಲಿ ಹುಡುಕಿದಳು. ಆಗ ಆಕೆ ತಿಮ್ಮುವಲ್ಲವೆಂದು ಗೊತ್ತಾಯಿತು. ಆಕೆಯನ್ನು ಎಲ್ಲರೂ ಕೂಡಿ ಬೆದರಿಸಿದಾಗ ತಿಮ್ಮು ಕೆರೆಯಲ್ಲಿ ಬಿದ್ದಿರುವುದಾಗಿ ಒಪ್ಪಿಕೊಂಡಳು.

ತಿಮ್ಮುವಿನ ತಂದೆ ತಾಯಿ ಕೆರೆಯ ಬಳಿಗೆ ಬಂದು ಕೆಳಗಿನ ಗದ್ದೆ ಕೊಯ್ಯುತ್ತದೆ, ಮೇಲಿನ ಗದ್ದೆ ಬೆಳೆಯುತ್ತದೆ. ಹೊಸ್ತೂಟಕ್ಕೆ[೨](ಪುದ್ವಾರ್) ನೀನು ಬರಬೇಕು" ಎಂದರು. ನೀರಿನೊಳಗಿನಿಂದ ತಿಮ್ಮು ಹೇಳಿದಳು. "ಕೆಳಗೆ ಇರ್ಲೋಕದಲ್ಲಿ[೩] ಮೇಲೆ ಮಿರ್ಲೋಕದಲ್ಲಿ ದೇವರ ತಲೆಯಲ್ಲಿ ನಾನು ಹೇನು ಕುಟ್ಟುತ್ತಿದ್ದೇನೆ. ನೀವು ಹೋಗಿ ಊಟ ಮಾಡಿ" ಎಂದಳು. ಆಕೆ ಬರಲಿಲ್ಲ. ಎಲ್ಲಾ ಅಕ್ಕಂದಿರು ಬಂದು ತಂಗಿಯನ್ನು ಕರೆದರು, ಎಲ್ಲರಿಗೂ ಹಾಗೆಯೇ ಹೇಳಿದಳು. ಕೊನೆಗೆ ಗಂಡನೇ ಹೋಗಿ ತಿಮ್ಮುವನ್ನು ಕರೆದ. ಆಗ ನೀರಿನಿಂದ ಒಂದು ಗುಳ್ಳೆ ಮೇಲೆ ಬಂತು. ಗಂಡ ಮತ್ತೊಮ್ಮೆ ಕರೆದ, ಆಗ ಮತ್ತೊಮ್ಮೆ ಗುಳ್ಳೆ ಬಂತು. ಮೂರನೇ ಸಲ ಕರೆದಾಗ ಆಕೆಯ ಕೂದಲು ಕಾಣ ಬಂತು. ಸೋರೆಕಾಯಿ ಕುಮಾರ ಕೂದಲನ್ನು ಹಿಡಿದು ತಿಮ್ಮುವನ್ನು ಮೇಲಕ್ಕೆಳೆದ. ತಿಮ್ಮು ಮೇಲೆ ಬಂದಳು. ರಾಜಕುಮಾರ ಮಡದಿಯನ್ನು ಕರೆದುಕೊಂಡು ತನ್ನರಮನೆಗೆ ಹೋದ. ಅರಮನೆಯಲ್ಲಿ ಸೋರೆಕಾಯಿ ಕುಮಾರನ ಹೊಸ ರೂಪ ನೋಡಿ ಎಲ್ಲರಿಗೂ ಸಂತೋಷವಾಯಿತು. ತಿಮ್ಮು ಗಂಡನೊಡನೆ ಸುಖವಾಗಿದ್ದಳು. ದೊಡ್ಡಕ್ಕನನ್ನು ಗಲ್ಲಿಗೇರಿಸಲಾಯಿತು.

ಟಿಪ್ಪಣಿಗಳು

೧. ಅಟ್ಟ – ಮನೆಯ ಒಳಗಡೆ ಛಾವಣಿಗೆ ಹೊಂದಿ ಮಾಡಿರುವ ಅಂತಸ್ತು.

೨. ಒನಕೆ – ಭತ್ತ ಕುಟ್ಟುವ ಸಾಧನ(ತುಳು : ಉಜ್ಜೆರ್)

೩. ಪುದ್ವಾರ್ – ಬೆಳೆಕೊಯ್ದ ಬಳಿಕ ಕುಟುಂಬದ ಸದಸ್ಯರೆಲ್ಲ ಒಟ್ಟು ಸೇರಿ ಮಾಡುವ ಹೊಸ ಅಕ್ಕಿ ಊಟ.

೪. ಇರ್ಲೋಕ – ಇಹಲೋಕ



೧೧

ಚಂದ್ರಲೋಕದಲ್ಲಿ ಮೊಲ

ಒಂದು ಊರಿನಲ್ಲಿ ಒಬ್ಬ ರಾಜನಿದ್ದ. ಆತನ ಮಡದಿ ಗರ್ಭಿಣಿಯಾದಳು. ಆಕೆ ಒಂದು ದಿನ ಅರಮನೆಯ ಅಂಗಳದ ಪಕ್ಕದ ಮರದಲ್ಲಿ ಕುಳಿತ ಕಾಗೆಯೊಂದು ಮಾವಿನ ಹಣ್ಣು ತಿನ್ನುವುದನ್ನು ಕಂಡಳು. ಆಕೆಗೂ ಮಾವಿನ ಹಣ್ಣು ತಿನ್ನಬೇಕೆಂದು ಬಯಕೆಯಾಯಿತು. ತನ್ನ ಆಸೆಯನ್ನು ಪತಿಯೊಡನೆ ಹೇಳಿಕೊಂಡಳು.

ಅದು ಮಾವಿನ ಹಣ್ಣಿನ ಕಾಲವಲ್ಲ. ರಾಜ ನಾಡಿನ ನಾಲ್ಕು ಕಡೆಗೆ ದೂತರನ್ನು ಅಟ್ಟಿ ಮಾವಿನ ಹಣ್ಣಿಗಾಗಿ ಹುಡುಕಿಸಿದ. ಪೂರ್ವ ದಿಕ್ಕಿಗೆ ಹೋದ ದೂತರು ಬಹಳ ದೂರ ಸಾಗಿದ ಬಳಿಕ ಒಂದು ಕಡೆ ಫಲಭರಿತ ಮಾವಿನ ಮರವೊಂದನ್ನು ನೋಡಿದರು. ಆದರೆ ಆ ಮರ ಹತ್ತಿ ಹಣ್ಣು ಕೊಯ್ಯುವ ಧೈರ್ಯ ಯಾರಿಗೂ ಬರಲಿಲ್ಲ. ಕಾರಣ ದೊಡ್ಡದೊಂದು ಏಳುಹೆಡೆಯ ಸರ್ಪ ಆ ಮರವನ್ನು ಸುತ್ತುಗಟ್ಟಿತ್ತು. ಕೊನೆಗೆ ಎಲ್ಲಾ ದೂತರು ಒಟ್ಟುಗೂಡಿ ಹತ್ತಿರ ಬಂದು ಹಣ್ಣು ಕೊಯ್ಯಲು ಪ್ರಯತ್ನಿಸಿದರು. ಆಗ ಹಾವು "ಹಣ್ಣು ಬೇಕಾದರೆ ರಾಜನೇ ಬರಲಿ. ನೀವು ಕೊಯ್ಯಬೇಡಿ" ಎಂದಿತು. ದೂತರು ಹಿಂದಕ್ಕೆ ತೆರಳಿ ರಾಜನಿಗೆ ವಿಷಯ ತಿಳಿಸಿದರು.

ರಾಜ ತಾನೇ ಮಾವಿನ ಮರದ ಬಳಿಗೆ ಬಂದು ತನಗೊಂದು ಹಣ್ಣು ಕೊಡುವಂತೆ ಹಾವನ್ನು ಪ್ರಾರ್ಥಿಸಿದ. "ಹಣ್ಣು ಕೊಡಬಹುದು. ಅದಕ್ಕೆ ಪ್ರತಿಯಾಗಿ ನನಗೇನು ಕೊಡುವೆ?" ಎಂದಿತು ಹಾವು. "ನಿನಗೆ ಬೇಕಾದುದನ್ನು ಕೊಡುತ್ತೇನೆ" ಅಂದ ರಾಜ. "ಹಾಗಾದರೆ ನಿನ್ನ ಮಡದಿ ಹೆರುವ ಮಗುವನ್ನು ನನಗೆ ಕೊಡಬೇಕು" ಎಂದಿತು ಹಾವು. ರಾಜ ಆಲೋಚಿಸಿದ. ತನ್ನ ಹೆಂಡತಿಗಿಂತ ಮಗು ದೊಡ್ಡದಲ್ಲವೆಂದು ಆತ ಭಾವಿಸಿದ. ತಾನು ಹಣ್ಣು ಕೊಂಡೊಯ್ಯದಿದ್ದರೆ ಅದೇ ಬಯಕೆಯಲ್ಲಿ ಹೆಂಡತಿ ಕಾಯಿಲೆ ಬಿದ್ದು ಸಾಯುತ್ತಾಳೆ. ಅದಕ್ಕಿಂತ ಹೆತ್ತ ಮಗುವನ್ನು ಕೊಟ್ಟಾದರೂ ಹೆಂಡತಿಯನ್ನು ಉಳಿಸಿಕೊಳ್ಳುವುದು ಮೇಲೆಂದು ರಾಜನಿಗೆ ಅನಿಸಿತು. ಅಂತೆಯೇ ಅದರ ಮಾತಿಗೆ ಒಪ್ಪಿಕೊಂಡ. ಬೇಕಾದಷ್ಟು ಹಣ್ಣು ಕೊಯ್ದು ತಂದು ರಾಣಿಗೆ ಕೊಟ್ಟ. ಆದರೆ ಹಾವಿನ ವಿಚಾರ ಮಾತ್ರ ಹೇಳಲಿಲ್ಲ.

ನವ ಮಾಸಗಳು ತುಂಬಿದ ಮೇಲೆ ರಾಣಿ ಹೆಣ್ಣು ಮಗುವನ್ನು ಹೆತ್ತಳು. ಹನ್ನೆರಡನೆಯ ದಿನ ಮುಂಜಾನೆ ಹಾವು ಅರಮನೆಯ ಅಂಗಳದಲ್ಲಿ ಕಾಣಿಸಿಕೊಂಡಿತು. ರಾಜ


ರಾಣಿಗೆ ಹಾವಿನ ಸಮಾಚಾರ ಹೇಳಿದ. "ಅಯ್ಯೋ ನನ್ನ ದುರಾದೃಷ್ಟಕ್ಕೆ ನನಗೇಕೆ ಕೆಟ್ಟ ಆಸೆ ಬಂದಿತು" ಎಂದು ರಾಣಿ ಗೋಳಿಟ್ಟಳು. ಆದರೆ ಹಾವನ್ನು ಎದುರಿಸುವ ಧೈರ್ಯ ಯಾರಿಗೂ ಇರಲಿಲ್ಲ. ಕೊನೆಗೆ ತೊಟ್ಟಿಲು ಸಮೇತ ಮಗುವನ್ನು ಅಂಗಳ ದಲ್ಲಿಟ್ಟರು. ತನ್ನ ಏಳು ಹೆಡೆಯಲ್ಲಿ ತೊಟ್ಟಿಲನ್ನೆತ್ತಿಕೊಂಡು ಹಾವು ಹೊರಟು ಹೋಯಿತು.

ವರ್ಷಗಳು ಉರುಳಿದವು. ರಾಣಿ ಮತ್ತೊಂದು ಗಂಡುಮಗುವನ್ನು ಹಡೆದಳು. ಮಗ ದೊಡ್ಡವನಾಗಿ ಶಾಲೆಗೆ ಹೋಗಲು ಪ್ರಾರಂಭಿಸಿದ. ಆಗ ಓರಗೆಯ ಹುಡುಗರು "ಇವನ ಅಕ್ಕನನ್ನು ಹಾವು ಕೊಂಡೋಗಿದೆ" ಎಂದು ತಮಾಷೆ ಮಾಡಲು ಪ್ರಾರಂಭಿಸಿದರು. ಒಂದು ದಿನ ಹುಡುಗ ತಾಯಿಯ ಬಳಿ ಬಂದು ಅಕ್ಕನ ವಿಷಯ ಕೇಳಿದ. ರಾಣಿ ಹಾವಿನ ಕತೆ ತಿಳಿಸಿದಳು. ರಾಜಕುಮಾರ ಮರುದಿನ ಎಂಟು ಎಳನೀರು, ಒಂದು ಖಡ್ಗವನ್ನು ಹಿಡಿದುಕೊಂಡು ಹಾವಿನ ಬಳಿಗೆ ಹೋದ. ಹುಡುಗ ತನ್ನನ್ನು ಹಾವಿಗೆ ಪರಿಚಯಿಸಿಕೊಂಡು ಎಳನೀರುಗಳನ್ನು ಕೆತ್ತಿ ಒಂದನ್ನು ಅಕ್ಕನಿಗೂ, ಏಳನ್ನು ಹಾವಿಗೂ ಕೊಟ್ಟ. ಹಾವು ಸಾಲಾಗಿಟ್ಟ ಏಳು ಎಳನೀರುಗಳಿಗೂ ತನ್ನ ಮೂತಿಗಳನ್ನು ಹಾಕಿ ನೀರು ಕುಡಿಯತೊಡಗಿತು. ತಕ್ಷಣ ಹುಡುಗ ತನ್ನ ಖಡ್ಗವನ್ನು ತೆಗೆದು ಏಳು ಹೆಡೆಗಳನ್ನು ಒಮ್ಮೆಗೆ ಕತ್ತರಿಸಿ ಹಾಕಿದ. ಹಾವು ಸತ್ತು ಬಿದ್ದಿತು. ಬಳಿಕ ಅಕ್ಕನನ್ನು ಕರೆದುಕೊಂಡು ಅರಮನೆಗೆ ಹಿಂತಿರುಗಿದ.

ದಾರಿಯಲ್ಲಿ ಬರುತ್ತಿರುವಾಗ ರಾಜಕುಮಾರಿ ಒಂದೊಂದೇ ಮೊಟ್ಟೆ ಇಡುತ್ತಾ ಬರುತ್ತಿದ್ದಳು. ತಮ್ಮ ಅದನ್ನು ಮೆಟ್ಟಿ ಪುಡಿ ಮಾಡುತ್ತಾ ಬರುತ್ತಿದ್ದ. ಒಂದು ಮೊಟ್ಟೆ ನೆಲದಿಂದ ಉರುಳಿ ಪೊದೆಯೊಳಗೆ ಹೋಯಿತು. ಎಷ್ಟು ಹುಡುಕಿದರೂ ಸಿಗಲಿಲ್ಲ. ಅರಮನೆಗೆ ಬಂದ ಮಗಳನ್ನು ಕಂಡು ರಾಜ ರಾಣಿಯರಿಗೆ ಅಮಿತಾನಂದವಾಯಿತು.

ಕೆಲವು ದಿನಗಳ ಮೇಲೆ ರಾಜಕುಮಾರ ಎಂದಿನಂತೆ ದಾರಿಯಲ್ಲಿ ಹೋಗುವಾಗ ಪೊದೆಯೆಡೆಯಿಂದ "ಅಪ್ಪನನ್ನು ಕೊಂದ ಮಾಮ ನಾನೂ ಬರಲೇ" ಎಂಬ ಮಾತು ಕೇಳಿತು. ರಾಜಕುಮಾರ ಆ ಮಾತು ಕೇಳಿಯೂ ಕೇಳದಂತೆ ಮುಂದಕ್ಕೆ ಹೋದ. ಮರುದಿನವೂ ಕೇಳಿತು. ಆ ದಿನವೂ ಸುಮ್ಮನಾದ. ಮೂರನೇ ದಿನ ರಾಜಕುಮಾರ ಧೈರ್ಯಮಾಡಿ 'ಬಾ' ಎಂದ. ಕೂಡಲೇ ಪೊದೆಯಿಂದ ಹಾವೊಂದು ರಾಜಕುಮಾರನನ್ನು ಅಟ್ಟಿಸಿಕೊಂಡು ಬಂತು. ರಾಜಕುಮಾರ ಓಡಿದ. ಓಡಿ ಓಡಿ ಆಯಾಸಗೊಂಡ. ಕೊನೆಗೆ ಒಂದು ತಿರುವಿಗೆ ಮುಟ್ಟಿದಾಗ ರಾಜಕುಮಾರ ಪೊದೆಯೊಂದರಲ್ಲಿ ಅಡಗಿ ಕುಳಿತ. ಆಗ ಆ ಪೊದೆಯಿಂದ ಮೊಲವೊಂದು ಹೊರಗೆ ಓಡಿತು. ಹಾವು ಮೊಲವನ್ನು ಬೆನ್ನಟ್ಟಿತು. ಮೊಲ ಓಡಿ ಓಡಿ ದಣಿಯಿತು. ಅಷ್ಟರಲ್ಲಿ ಕತ್ತಲಾಗಿ ಆಕಾಶದಲ್ಲಿ ಚಂದ್ರ ಮೂಡಿಬಂದಿದ್ದ. ಮೊಲದ ಪಾಡು ಕಂಡು ಚಂದ್ರನು ಚಂದ್ರಲೋಕದಿಂದ ಭೂಲೋಕಕ್ಕೆ ನೂಲೇಣಿಯನ್ನು ಇಳಿಬಿಟ್ಟು "ಮೊಲವೇ ನೂಲೇಣಿ ಏರಿ ಮೇಲೆ ಬಾ, ಬರುವಾಗ

ಏಣಿಯನ್ನು ಮಡಚಿಕೊಂಡೆ ಬಾ" ಎಂದ. ಮೊಲ ನೂಲೇಣಿಯಲ್ಲಿ ಏರಿಕೊಂಡು ಹೋಯಿತು. ಆದರೆ ಗಾಬರಿಯಲ್ಲಿ ನೂಲೇಣೀಯನ್ನು ಮಡಚಿಕೊಳ್ಳಲು ಅದಕ್ಕೆ ಮರೆತು ಹೋಯಿತು. ಚಂದ್ರ ಮೊಲವನ್ನು ತನ್ನ ಮಡಿಲಲ್ಲಿ ಬಚ್ಚಿಟ್ಟುಕೊಂಡ. ಹಾವು ಕೂಡ ನೂಲೇಣಿಯನ್ನು ಏರಿ ಮೊಲವನ್ನು ಹಿಂಬಾಲಿಸಿತು. ಚಂದ್ರನನ್ನೇ ನುಂಗ ತೊಡಗಿತು. ಚಂದ್ರ ತನ್ನ ಕಾಲಿಂದ ಹಾವನ್ನು ಕೊಡಹಿ ದೂರಕ್ಕೆಸೆದ. ಈಗಲೂ ವರ್ಷಕ್ಕೊಮ್ಮೆ ಸಿಟ್ಟಿನಿಂದ ಹಾವು ಚಂದ್ರನನ್ನು ನುಂಗುತ್ತದೆ. ಆದರೆ ಚಂದ್ರ ಹಾವಿನಿಂದ ತಕ್ಷಣ ಬಿಡಿಸಿಕೊಳ್ಳುತ್ತಾನೆ. ಅದನ್ನೇ ನಾವು ಗ್ರಹಣ ಎನ್ನುತ್ತೇವೆ.



೧೨

ಬಿದಿರಿನ ಚದುರೆ

ಒಂದಾನೊಂದು ಊರಿನಲ್ಲಿ ಒಬ್ಬ ಅರಸನಿದ್ದ. ಆತನಿಗೆ ಏಳು ಜನ ಮಕ್ಕಳು. ಅವರಲ್ಲಿ ಆರು ಜನರಿಗೆ ಮದುವೆಯಾಯಿತು. ಅಷ್ಟರಲ್ಲಿ ರಾಜ ಮತ್ತು ರಾಣಿಯರು ತೀರಿ ಹೋದರು. ಅಣ್ಣಂದಿರ ಹೆಂಡತಿಯರು ಸಣ್ಣವನ ಚಾಕರಿ ಸರಿಯಾಗಿ ಮಾಡಲಿಲ್ಲ. ಸಣ್ಣ ರಾಜಕುಮಾರ ಊಟ ಉಪಚಾರ ಸರಿಯಾಗಿ ಇಲ್ಲದೆ ಸೊರಗಿ ಹೋದ. ಅತ್ತಿಗೆಯಂದಿರು ತನ್ನನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲವೆಂದು ದೊಡ್ಡಣ್ಣನೊಡನೆ ದೂರು ಕೊಟ್ಟ. ಆಗ ಅತ್ತಿಗೆಯಂದಿರಿಗೆ ಸಿಟ್ಟು ಬಂತು. "ನಿನ್ನ ಚಾಕರಿ ಮಾಡಲು ಸರಿಯಾದ ಹೆಂಡತಿಯನ್ನು ನೀನೇ ಹುಡುಕಿಕೊಂಡು ಬಾ, ಹೋಗು, ನೀನು ದೇವಲೋಕದ ದೇವಕನ್ಯೆಯನ್ನು ತರುತ್ತಿಯೋ, ದಾಳಿಂಬೆ ರಂಭೆಯನ್ನು ತರುತ್ತಿಯೋ, ಬಿದಿರಿನ ಚದುರೆಯನ್ನು ತರುತ್ತಿಯೋ ನೋಡೋಣ" ಎಂದರು.

ಸಣ್ಣ ರಾಜಕುಮಾರ ಮನೆಬಿಟ್ಟು ಹೊರಟು ಹೋದ. ಬಹಳ ದೂರ ನಡೆದು ಹೋದ ಮೇಲೆ ಆತನಿಗೊಂದು ಮೈದಾನ ಸಿಕ್ಕಿತು. ಅಲ್ಲಿ ಬಹಳ ದನಕರುಗಳು ಮೇಯುತ್ತಿದ್ದವು. ದನ ಕಾಯುವ ಗೋವಳರೊಡನೆ ರಾಜಕುಮಾರ ದೇವಲೋಕಕ್ಕೆ ದಾರಿ ಎಲ್ಲಿ ಎಂದು ಕೇಳಿದ. "ನೀನು ಅಲ್ಲಿಗೇಕೆ ಹೋಗುತ್ತೀ?" ಎಂದು ಗೋವಳರು ಕೇಳಿದರು. "ನನಗೆ ಆತನ ಮಗಳನ್ನು ಮದುವೆಯಾಗಬೇಕು" ಎಂದ ರಾಜಕುಮಾರ. "ಹಾಗಾದರೆ ನೀನು ಈ ದಿನ ನಮ್ಮೊಡನೆ ನಮ್ಮ ಮನೆಗೆ ಬಾ, ನಾಳೆ ಬೆಳಗ್ಗೆ ಅಲ್ಲಿಗೆ ಹೋಗಬಹುದು" ಎಂದರು. ಸಣ್ಣ ರಾಜಕುಮಾರ ಗೋವಳರೊಡನೆ ಹೋಗಲು ಒಪ್ಪಿದ.

ರಾತ್ರಿಯಾಯಿತು, ಊಟದ ಹೊತ್ತಾಯಿತು. ರಾಜಕುಮಾರನನ್ನು ಸ್ನಾನಕ್ಕೆ ಕಳುಹಿಸಿದರು. ಆತ ಸ್ನಾನಕ್ಕೆ ಹೋದ. ಬಚ್ಚಲಿನಲ್ಲಿ ಬಿಸಿ ನೀರು, ತಣ್ಣೀರು ಎರಡೂ ಇತ್ತು. ರಾಜಕುಮಾರ ಬಿಸಿನೀರು ಮುಟ್ಟಲಿಲ್ಲ, ತಣ್ಣೀರು ಸ್ನಾನ ಮಾಡಿದ. "ತೋಟಕ್ಕೆ ಹೋಗಿ ಬಾಳೆ ಎಲೆ ತೆಗೆದುಕೊಂಡು ಬಾ" ಎಂದರು. ಆತ ತೋಟಕ್ಕೆ ಹೋಗಿ ಬಾಳೆ ಎಲೆ ಕಡಿಯದೆ ಸೀಳು ಎಲೆ ಕಡಿದುಕೊಂಡು ಬಂದ. ರಾಜಕುಮಾರ ಊಟಕ್ಕೆ ಕುಳಿತಾಗ "ನಿನಗೆ ಯಾವ ಅನ್ನ ಬಡಿಸಲಿ? ಕೋಳಿಯದ್ದೊ?, ನಾಯಿಯದ್ದೊ? ಬೆಕ್ಕಿನದ್ದೊ?"

ಎಂದು ಕೇಳಿದರು. "ನಾಯಿಯದ್ದು" ಎಂದ. ಅದನ್ನು ಊಟ ಮಾಡಿ ಎದ್ದು ಕೈ ತೊಳೆದ. "ನೀನು ಎಲ್ಲಿ ಮಲಗುತ್ತಿ? ತೆಂಗಿನಕಾಯಿ ಕೊಟ್ಟಿಗೆಯಲ್ಲೊ? ಹತ್ತಿಯ ಕೊಟ್ಟಿಗೆಯಲ್ಲೊ, ಬೆಲ್ಲದ ಕೊಟ್ಟಿಗೆಯಲ್ಲೊ?" ಎಂದು ಕೇಳಿದರು. "ಹತ್ತಿ ಕೊಟ್ಟಿಗೆಯಲ್ಲಿ" ಎಂದ. ಹತ್ತಿಯ ಕೊಟ್ಟಿಗೆಯ ದಾರಿ ತೋರಿಸಿದರು. ಅಲ್ಲಿ ಆತ ರಾತ್ರಿ ಬೆಳಗಾಗುವವರೆಗೆ ಹತ್ತಿ ಬೀಜ ತೆಗೆಯುತ್ತಾ ಕುಳಿತ. ಬೆಳಗಾಯಿತು. ಸಣ್ಣ ರಾಜಕುಮಾರನ ಕೆಲಸಕ್ಕೆ ಗೋವಳರು ಮೆಚ್ಚಿದರು. ಬೆಳಗ್ಗೆ ಎದ್ದೊಡನೆ "ಒಂದು ತುಂಡು ಬಿದಿರು ಕಡಿದುಕೊಂಡು ಬಾ" ಎಂದರು. ಬಿದಿರ ಹಿಂಡಿಲಿನ ಹತ್ತಿರ ಹೋದ. ಅದರ ಮುಳ್ಳನ್ನು ನೋಡಿ ಹೆದರಿಕೆಯಾಯಿತು. ಆತ ಹಿಂದೆ ಬಂದ. ಅದನ್ನು ಕಂಡು ಆತನನ್ನು ಕರೆದು ಬಿಸಿಬಿಸಿ ಅನ್ನ ಹಾಕಿಕೊಟ್ಟರು. ಬೇಗ ಬೇಗ ಊಟಮಾಡಿ ಮುಗಿಸು ಎಂದರು. ಬದಿ ಬದಿಯಿಂದ ಊಟ ಮಾಡುತ್ತಾ ಎಲ್ಲವನ್ನೂ ಮುಗಿಸಿದ. "ಇನ್ನು ಹೋಗು ಬಿದಿರ ಹಿಂಡಿಲಿನ ಬಳಿಗೆ" ಎಂದು ಪುನಃ ಕಳುಹಿಸಿದರು. ಸುತ್ತಲಿನ ಮುಳ್ಳನ್ನು ಕಡಿದು ಕಡಿದು ತೆಗೆದು ಒಂದು ತುಂಡು ಬಿದಿರು ತಂದ. ಅದಕ್ಕೆ ಐದು ಗಂಟುಗಳಿದ್ದವು. ಅದಕ್ಕೆ ಗೋವಳರು ಜೀವದಾನ ಮಾಡಿ "ಇದನ್ನು ಹಿಡಿದುಕೊಂಡು ಹೋಗು, ದೇವೇಂದ್ರಲೋಕಕ್ಕೆ ದಾರಿ ಸಿಗುತ್ತದೆ" ಎಂದರು.

ಹಾಗೆ ರಾಜಕುಮಾರ ಬಿದಿರ ತುಂಡು ಹಿಡಿದುಕೊಂಡು ಹೊರಟ. ಒಂದು ಹರದಾರಿ ನಡೆದಾಗ ಒಂದು ಗಂಟು ಒಡೆಯಿತು. ಎರಡು ಹರದಾರಿ ಹೋದಾಗ ಎರಡನೇ ಗಂಟು ಒಡೆಯಿತು. ಹೀಗೆ ನಾಲ್ಕು ಹರದಾರಿಗೆ ನಾಲ್ಕನೇ ಗಂಟು, ಐದು ಹರದಾರಿಗೆ ಐದನೇ ಗಂಟು ಒಡೆಯಿತು. ಆಗ ಒಬ್ಬಳು ಚೆಲುವೆ ಬಿದಿರ ತುಂಡಿನಿಂದ ಹೊರಗೆ ಹಾರಿ ಬಂದು ನಿಂತಳು. ಆಕೆ ಬಹಳ ಸುಂದರಿ, ಬಿದಿರಿನ ಚದುರೆ.

ಬಿದಿರಿನ ಚದುರೆಯನ್ನು ಕರೆದುಕೊಂಡು ರಾಜಕುಮಾರ ಮನೆ ಕಡೆ ಹೊರಟ. ಮನೆಯ ಹತ್ತಿರದ ಕೆರೆಯ ಕಟ್ಟೆಯ ಮೇಲೆ ಆಕೆಯನ್ನು ಕುಳ್ಳಿರಿಸಿ ಕೊಂಬು ವಾಲಗ ತೆಗೆದುಕೊಂಡು ಬರಲು ಮನೆಗೆ ಹೋದ. ರಾಜಕುಮಾರ ಅರಮನೆಗೆ ಹೋದೊಡನೆ ಅಲ್ಲಿಗೆ ಬಟ್ಟೆ ಒಗೆಯಲು ಒಬ್ಬ ಅಗಸರ ಹೆಂಗಸು ಬಂದಳು. ಅವಳಿಗೆ ಬಿದಿರಿನ ಚದುರೆಯನ್ನು ಕಂಡು ಆಶ್ಚರ್ಯವಾಯಿತು. "ಯಾರಮ್ಮಾ ನೀನು?" ಎಂದು ಪ್ರಶ್ನಿಸಿದಳು. ಬಿದಿರಿನ ಚದುರೆ ತನ್ನ ಕತೆಯನ್ನು ಹೇಳಿದಳು. "ನೊಡೋಣಮ್ಮಾ, ನಿನ್ನ ಉಡುಪು ಆಭರಣಗಳನ್ನು ನಾನೊಮ್ಮೆ ತೊಟ್ಟು ನೋಡುತ್ತೇನೆ" ಎಂದಳು. ಬಿದಿರಿನ ಚದುರೆ ಸತ್ಯವೆಂದು ನಂಬಿ ತನ್ನ ಸೀರೆ ರವಿಕೆ ಆಭರಣಗಳನ್ನೆಲ್ಲಾ ಆಗಸರ ಹೆಂಗಸಿಗೆ ತೊಡಿಸಿ ಅವಳ ಸೀರೆ ರವಿಕೆಯನ್ನು ತಾನು ತೊಟ್ಟುಕೊಂಡಳು. "ಕೆರೆಯ ನೀರಿನಲ್ಲಿ ನಮ್ಮ ಮುಖಗಳನ್ನು ನೋಡೋಣ" ಎಂದು ಕೆರೆಯ ಬಳಿಗೆ ಬಿದಿರಿನ ಚದುರೆಯನ್ನು ಕರೆದಳು. ಕೆರೆಯ ದಡದಲ್ಲಿ ನಿಂತ ಚದುರೆಯನ್ನು ಕೆರೆಗೆ ದೂಡಿ ಹಾಕಿ ತಾನು ಕೆರೆಯ ಕಟ್ಟೆಯ ಮೇಲೆ ಹೋಗಿ ಕುಳಿತುಕೊಂಡಳು.

ರಾಜಕುಮಾರ ಕೊಂಬು ವಾಲಗದೊಂದಿಗೆ ಕೆರೆಯ ಕಟ್ಟೆಗೆ ಬಂದು ಅಲ್ಲಿ ಕುಳಿತಿರುವ ಅಗಸರ ಹೆಣ್ಣನ್ನು ಬಿದಿರಿನ ಚದುರೆ ಎಂದೇ ಭಾವಿಸಿ ಅರಮನೆಗೆ ಕರೆದುಕೊಂಡು ಹೋದ. ಅರಮನೆಯಲ್ಲಿ ಆತನ ಅತ್ತಿಗೆಯಂದಿರು ಮೈದುನ ಕರೆತಂದ ಹುಡುಗಿಯನ್ನು ನೋಡಿ ಮುಸುಮುಸು ನಕ್ಕರು. ರಾಜಕುಮಾರನಿಗೆ ಹೆಂಡತಿಯ ಮುಖ ನೋಡಿ ಏನೋ ಮೋಸ ನಡೆದು ಹೋಗಿದೆ ಎಂಬುದು ಅರ್ಥವಾಯಿತು. ಆದರೆ ಆತ ಏನೂ ಮಾಡದಾದ.


ಪ್ರತಿ ದಿನ ಬೆಳಗ್ಗೆ ಎದ್ದು ಮುಖ ತೊಳೆಯಲು ಅದೇ ಕೆರೆಗೆ ಆತ ಹೋಗುತ್ತಿದ್ದ. ಆ ದಿನ ಹೋದಾಗ ಕೆರೆಯ ಮಧ್ಯದಲ್ಲೊಂದು ತಾವರೆ ಹೂ ಅರಳಿತ್ತು. ರಾಜಕುಮಾರ ಕೆರೆಗೆ ಇಳಿದೊಡನೆ ಅದು ನಲಿದಾಡಿಕೊಂಡು ಆತನ ಹತ್ತಿರ ಬಂತು. ರಾಜಕುಮಾರ ಅದನ್ನು ಕೊಯಿದು ಅರಮನೆಗೆ ತಂದು ಬಾಗಿಲಿನ ಮೇಲಂತಸ್ತಿನಲ್ಲಿಟ್ಟ. ಅಗಸರ ಹೆಣ್ಣು ಅದನ್ನು ನೋಡಿದಳು. ಅವನ್ನು ತೆಗೆದು ತಲೆಗಿಟ್ಟುಕೊಂಡಳು. ಅದನ್ನು ತಲೆಗಿಟ್ಟದ್ದೇ ತಡ ಆಕೆಗೆ ತಲೆ ನೋವು ಪ್ರಾರಂಭವಾಯಿತು. ತಲೆನೋವು ತಾಳಲಾರದೆ ಹೂವನ್ನು ತೆಗೆದು ಪುಡಿಮಾಡಿ ಕಿಟಕಿಯಿಂದ ಅಂಗಳಕ್ಕೆ ಬಿಸಾಡಿದಳು.

ಕೆಲವು ದಿವಸಗಳಾದ ಮೇಲೆ ಅಲ್ಲೊಂದು ಮಾವಿನಗಿಡ ಬೆಳೆಯಿತು. ಅದು ಕೆಲವೇ ತಿಂಗಳುಗಳಲ್ಲಿ ಬೆಳೆದು ದೊಡ್ಡದಾಗಿ ಹೂ ಕಾಯಿ ಬಿಟ್ಟಿತು. ಕಾಯಿ ಹಣ್ಣಾಯಿತು. ಆ ಮರದ ಗಾಳಿ ತಾಗಿದೊಡನೆ ಅಗಸರ ಹೆಣ್ಣಿಗೆ ತಲೆ ನೋಯಲು ಪ್ರಾರಂಭವಾಗುತ್ತಿತ್ತು. ಸಿಟ್ಟಿನಿಂದ ಆ ಮರವನ್ನೇ ಕಡಿದು ಹಾಕಲು ಕೆಲಸದವರಿಗೆ ಆಜ್ಞಾಪಿಸಿದಳು.

ಅರಮನೆಯ ಪಕ್ಕದಲ್ಲೊಬ್ಬಳು ಅಡುಗೂಲಜ್ಜಿಯ ಮನೆ ಇತ್ತು. ಆಕೆ ಒಂದು ದಿನ ಅರಮನೆಯ ಪಕ್ಕದಿಂದ ಬರುವಾಗ ಕಡಿದು ಹಾಕಿದ ಮರದಿಂದ ಉದುರಿದ ಮಾವಿನ ಹಣ್ಣೊಂದು ಆಕೆಗೆ ಸಿಕ್ಕಿತು, ಅದನ್ನು ತಂದು ಆಕೆ ಬಾಗಿಲಿನ ಮೇಲಂತಸ್ತಿನಲ್ಲಿಟ್ಟಳು. ಅದನ್ನು ತಿನ್ನಲು ಆಕೆಗೆ ಮರೆತೇ ಹೋಯಿತು. ಮರುದಿನ ಎದ್ದು ಆಕೆ ಭಿಕ್ಷೆ ಬೇಡಲು ಹೋದಳು. ಸಂಜೆಗೆ ಮನೆಗೆ ಬರುವಾಗ ಮನೆಯೆಲ್ಲ ಗುಡಿಸಿ ಸಾರಿಸಿ ಇಡಲಾಗಿತ್ತು. ಅಡುಗೆ ಮಾಡಿ ಇಡಲಾಗಿತ್ತು. ಆಕೆಗೆ ಬಹಳ ಆಶ್ಚರ್ಯವಾಯಿತು. ಮರುದಿನ ಅಡುಗೆ ಮಾಡುವವರನ್ನು ಪತ್ತೆಹಚ್ಚಬೇಕೆಂದು ಬಗೆದು ಭಿಕ್ಷೆಗೆಂದು ಹೊರಟು ಆಕೆ ಮನೆಯ ಹಿಂಬದಿಯಲ್ಲಿ ಅಡಗಿ ನಿಂತಳು. ಅಜ್ಜಿ ಹೊರಟದ್ದೇ ತಡ, ಬಿದುರಿನ ಚದುರೆ ಬಾಗಿಲ ಮೇಲಂತಸ್ತಿನಿಂದ ಛಂಗನೆ ಕೆಳಗೆ ಹಾರಿದಳು. ಹಿಡಿಸೂಡಿ ಹಿಡಿದು ಕಸ ಗುಡಿಸಲು ಪ್ರಾರಂಭಿಸಿದಳು. ಆಗ ಅಜ್ಜಿ ಹೋಗಿ ಆಕೆಯ ಕೈ ಹಿಡಿದುಕೊಂಡಳು "ನೀನು ಯಾರು? ಸತ್ಯ ಹೇಳು" ಎಂದಳು. ಬಿದಿರಿನ ಚದುರೆ ತನ್ನ ಕತೆಯನ್ನೆಲ್ಲಾ ಹೇಳಿದಳು.

ಕೆಲವು ದಿವಸಗಳು ಕಳೆದಾದ ಮೇಲೆ ಬಿದಿರಿನ ಚದುರೆ ಆಡುಗೂಲಜ್ಜಿಯ ಮನೆಯಲ್ಲೊಂದು ಸಮಾರಾಧನೆ ಏರ್ಪಡಿಸಿದಳು. ಅಡುಗೂಲಜ್ಜಿಯ ಮನೆಯಲ್ಲಿ

ಸಮಾರಾಧನೆ ಎಂದಾಗ ಎಲ್ಲರಿಗೂ ಆಶ್ಚರ್ಯವಾಯಿತು. ಏನು ಮಾಡುತ್ತಾಳೆ ನೋಡೋಣವೆಂದು ಎಲ್ಲರೂ ಹೊರಟರು. ಸಣ್ಣ ರಾಜಕುಮಾರನೂ ಬಂದ. ಊಟ ವಾದ ನಂತರ ಬಿದಿರಿನ ಚದುರೆ ವೀಣೆ ಹಿಡಿದುಕೊಂಡು ಬಂದು ಸಭೆಯ ಮಧ್ಯೆ ಕುಳಿತಳು. ತನ್ನ ಕತೆಯನ್ನೆಲ್ಲಾ ಹಾಡಿನ ರೂಪದಲ್ಲಿ ವೀಣೆ ಬಾರಿಸಿ ಹಾಡಿ ತೋರಿಸಿದಳು. ರಾಜಕುಮಾರನಿಗೆ ಕತೆ ಅರ್ಥವಾಯಿತು. ಆ ಹುಡುಗಿ ಬಿದಿರಿನ ಚದುರೆ ಎಂಬುದು ಗೊತ್ತಾಯಿತು. ಎದ್ದು ಹೋಗಿ ಆಕೆಯ ಕೈ ಹಿಡಿದು ತನ್ನ ಅರಮನೆಗೆ ಕರೆದೊಯ್ದ. ಅತ್ತಿಗೆಯಂದಿರು ಈ ಚೆಲುವೆಯನ್ನು ನೋಡಿ ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟರು. ಆಕೆ ಮನೆಗೆ ಬಂದ ಸುದ್ದಿ ಕೇಳಿದೊಡನೆ ಅಗಸರ ಹೆಣ್ಣು ಇನ್ನು ನನಗೆ ಉಳಿಗಾಲವಿಲ್ಲವೆಂದು ಬಗೆದು ಕೆರೆಗೆ ಹಾರಿ ಪ್ರಾಣಬಿಟ್ಟಳು. ಬಿದಿರಿನ ಚದುರೆಯೊಂದಿಗೆ ರಾಜಕುಮಾರ ಸುಖವಾಗಿದ್ದ.



೧೩

ದಾರೋ ಬೂರೊ ಭೂಪರಸು ಮಗ

ಆಲಂಬಾಡಿ ಬೀಡು ಬಲ್ಲಾಳರಾಯ ಒಬ್ಬ ಭಾರಿ ದೊಡ್ಡ ಅರಸ. ಅವನಿಗೆ ಒಬ್ಬಳೇ ಮಗಳು ಅಕ್ಕಮಲೆ. ಮಗಳು ಬೆಳೆದು ದೊಡ್ಡವಳಾದಳು. ಅರಸ ಮಗಳಿಗೆ ಸ್ವಯಂವರ ಏರ್ಪಡಿಸಿದ. ಬಹಳಷ್ಟು ಜನ ರಾಜಕುಮಾರರು ಸ್ವಯಂವರಕ್ಕೆ ಬಂದರು. ಸಭೆಯಲ್ಲಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಂಡರು. ಅರಸ ತನ್ನ ಮಗಳ ಕೈಯಲ್ಲಿ ಹೂಮಾಲೆ ಕೊಟ್ಟು ಸಭೆಯಲ್ಲಿ ಕುಳಿತ ಎಲ್ಲ ರಾಜಕುಮಾರರ ಪರಿಚಯ ಮಾಡಿಕೊಡುತ್ತಾ ಬಂದು, ನಿನಗೊಪ್ಪುವ ಹುಡುಗನಿಗೆ ಹೂಮಾಲೆ ಹಾಕಿ ಗಂಡನನ್ನು ಆರಿಸಿಕೋ ಎಂದ. ರಾಜಕುಮಾರಿ ಸಭೆಗೆ ಮೂರು ಸುತ್ತು ಬಂದು "ನನ್ನ ಮೆಚ್ಚುಗೆಯವರು ಯಾರೂ ಈ ಸಭೆಯಲ್ಲಿಲ್ಲ" ಎಂದಳು. ಬಂದ ಸಭಿಕರೆಲ್ಲ ಎದ್ದು ಹೋದರು. ಅರಸನಿಗೆ ಬೇಸರವಾಯಿತು. "ಹಾಗಾದರೆ ನಿನಗೊಪ್ಪುವ ಹುಡುಗ ಎಲ್ಲಿದ್ದಾನೆ?" ಎಂದು ಅರಸ ಕೇಳಿದ. "ಅಲಂಬಾಡಿ ಬೀಡು ಬಳ್ಳಾಲ ರಾಯರ ಮಗಳು ಅಕ್ಕಮಲೆ ಎಂಬ ಹೆಣ್ಣಿಗೆ ದಾರೊ ಬೂರೊ ಭೂಪರಸು ಮಗ ಬಾಲೆ ಆಕ್ಕಿರ ಎಂಬವನೇ ಸರಿಯಾದ ಗಂಡು. ಆತ ಸಭೆಗೆ ಬಂದಿಲ್ಲ, ಆತನಿಗೆ ಓಲೆಯನ್ನು ಕಳುಹಿಸಿಲ್ಲ" ಎಂದಳು ರಾಜಕುಮಾರಿ.

ಕೂಡಲೇ ಬಲ್ಲಾಳ ರಾಯ ಬಾಲೆ ಆಕ್ಕಿರನಿಗೆ ಓಲೆ ಕಳುಹಿಸಿ ಬರಹೇಳಿದ. ಭೂಪರಸು ಮಗ ಕೂಡಲೇ ಅಲಂಬಾಡಿ ಬೀಡಿಗೆ ಹೊರಟು ಬಂದ. ಬಹಳ ದೂರ ನಡೆದು ಬಂದಾಗ ಕಾಡುದಾರಿ ಸಿಕ್ಕಿತು. ದಾರಿಯಲ್ಲಿ ಕತ್ತಲಾಯಿತು. ಆತನಿಗೆ ಕಾಡಿನಲ್ಲಿ ಒಂದು ಕಡೆ ಬೆಳಕು ಕಂಡಿತು. ಆ ಮನೆಗೆ ಹೋದ; ಅಲ್ಲೊಬ್ಬಳು ಸುಂದರಿಯಾದ ಹುಡುಗಿ ಇದ್ದಳು. ಆಕೆ ಇವನ ಬಗ್ಗೆ ವಿಚಾರಿಸಿದಳು. ಹಾಲು ಕೊಟ್ಟು ಬಾಯಾರಿಕೆ ತಣಿಸಿದಳು. ನಂತರ "ನನ್ನ ತಾಯಿ ಒಬ್ಬಳು ರಕ್ಕಸಿ, ಅಣ್ಣನೂ ಒಬ್ಬ ರಕ್ಕಸ, ಅವರಿಬ್ಬರೂ ಬಂದು ಬಿಟ್ಟರೆ ನಿನ್ನನ್ನು ಜೀವಂತ ಬಿಡಲಾರರು. ತಾಯಿ ಬರುವ ಹೊತ್ತಾಯಿತು. ನಿನ್ನನ್ನು ನಾನು ಒಂದು ಹಲ್ಲಿಯ ರೂಪ ಮಾಡಿ ಗೋಡೆಯಲ್ಲಿ ಬಿಡುತ್ತೇನೆ" ಎಂದಳು. ರಾಜಕುಮಾರನನ್ನು ಹಲ್ಲಿ ಮಾಡಿ ಗೋಡೆಯಲ್ಲಿ ಬಿಟ್ಟಳು.

ಸ್ವಲ್ಪ ಹೊತ್ತಾಗುವಾಗ ಏಳಾನೆಗಳನ್ನು ತಿಂದುಕೊಂಡು ಏಳಾನೆಗಳನ್ನು ಮಡಿಲಲ್ಲಿ ಕಟ್ಟಿಕೊಂಡು ತಾಳೆಮರವನ್ನು ಮುರಿದು ಒಂದನ್ನು ಕಂಕುಳಲ್ಲಿ ಇಟ್ಟುಕೊಂಡು

ಇನ್ನೊಂದರಿಂದ ಹಲ್ಲು ಉಜ್ಜುತ್ತಾ ರಕ್ಕಸಿ ಬಂದಳು. ಮನೆಗೆ ಬರುವಾಗಲೇ ಅವಳಿಗೆ ಮನುಷ್ಯರ ವಾಸನೆ ಸಿಕ್ಕಿತು. "ನರಹುಳ ವಾಸನೆ ಬರುತ್ತದೆ. ಯಾರು ಬಂದರು ಮಗಾ? ಎಲ್ಲಿದ್ದಾನೆ? ನಾನು ಅವನನ್ನು ಕೊಲ್ಲುವುದಿಲ್ಲ. ನಿನಗೆ ಮದುವೆ ಮಾಡಿಸುತ್ತೇನೆ ತೋರಿಸು" ಎಂದಳು. ಹುಡುಗಿ ಸತ್ಯ ನಂಬಿ ಹಲ್ಲಿಯನ್ನು ರಾಜಕುಮಾರನನ್ನಾಗಿ ಮಾಡಿ ತೋರಿಸಿದಳು. ರಕ್ಕಸಿಗೆ ರಾಜಕುಮಾರನ ದಷ್ಟಪುಷ್ಟ ದೇಹವನ್ನು ಮಾಂಸ ಖಂಡಗಳನ್ನು ನೋಡಿಕೊಂಡು ಹುರಿದು ತಿಂದು ರುಚಿನೋಡುವ ಆಸೆಯಾಯಿತು. ಆದರೆ ಆಕೆ ತನ್ನ ಮಗಳೆದುರು ಆತನನ್ನು ಕೊಲ್ಲುವ ಹಾಗಿಲ್ಲ. ಕೊಲ್ಲುವ ಉಪಾಯ ಹೇಗೆಂದು ಆಲೋಚಿಸುತ್ತಲೇ ಇದ್ದಳು. ಅಷ್ಟರಲ್ಲಿ ರಕ್ಕಸಿಯ ಮಗನೂ ಬಂದ. ಇಬ್ಬರೂ ಊಟ ಮಾಡಿ ಒಂದೇ ಕಡೆ ಮಲಗಿದರು. ರಕ್ಕಸಿ ತನ್ನ ಮಗನ ಕುತ್ತಿಗೆಗೆ ಕಂಬಳಿದಾರ ಒಂದನ್ನು ಕಟ್ಟಿಬಿಟ್ಟಳು. ಅದನ್ನು ಮಗಳು ನೋಡಿಕೊಂಡಳು. ಎಲ್ಲರಿಗೂ ನಿದ್ದೆ ಬಂತು. ಹುಡುಗಿಗೆ ನಿದ್ದೆ ಬರಲಿಲ್ಲ. ಮೆಲ್ಲ ಎದ್ದಳು. ರಕ್ಕಸನ ಕುತ್ತಿಗೆಯಲ್ಲಿದ್ದ ದಾರವನ್ನು ರಾಜಕುಮಾರನ ಕುತ್ತಿಗೆಗೆ ಕಟ್ಟಿ ಮಲಗಿಕೊಂಡಳು. ಸ್ವಲ್ಪ ಹೊತ್ತಾಗುವಾಗ ರಕ್ಕಸಿ ಎದ್ದಳು. ದೊಡ್ಡ ಕಡ್ಪತ್ತಿ[೧] ತಂದು ಕರಿದಾರ ಕಟ್ಟಿಕೊಂಡವನನ್ನು ಬಿಟ್ಟು ಇನ್ನೊಬ್ಬನ ಕುತ್ತಿಗೆಗೆ ಒಂದು ಗಡಿ[೨] ಹಾಕಿ ತುಂಡರಿಸಿದಳು. ನಂತರ ಮಗಳನ್ನು ಎಬ್ಬಿಸಿ "ಒಬ್ಬನನ್ನು ಕೊಂದು ಹಾಕಿದ್ದೇನೆ. ಅವನನ್ನು ಪದಾರ್ಥ[೩] ಮಾಡು ನಾನು ಸ್ವಲ್ಪ ಕುಡಿದು ಬರುತ್ತೇನೆ" ಎಂದು ಹೊರಗಡೆ ಹೋಗಿಬಿಟ್ಟಳು.

ರಕ್ಕಸಿಯ ಮಗಳು ಅಣ್ಣನನ್ನು ಮಾಂಸ ಮಾಡಿ ಪದಾರ್ಥ ಮಾಡಿದಳು. ಬೆಳಗಾಗುತ್ತಾ ಬಂತು. ರಾಜಕುಮಾರನನ್ನು ಎಬ್ಬಿಸಿ ನೀನು ಬೇಗನೆ ಹೋಗಿ ಬಿಡು ಎಂದು ಕಳುಹಿಸಿಕೊಟ್ಟಳು. ಸ್ವಲ್ಪ ಹೊತ್ತಾಗುವಾಗ ರಕ್ಕಸಿ ಬಂದಳು. ಊಟಕ್ಕೆ ಕುಳಿತು ಕೊಂಡಳು. ತನ್ನ ಮಗನನ್ನು ಕರೆದಳು. "ಮಗನನ್ನು ಎಲ್ಲಿಂದ ಕರೆಯುತ್ತೀರಿ? ಆತನನ್ನು ತಾನೇ ಪದಾರ್ಥ ಮಾಡಿದ್ದು" ಎಂದಳು ಮಗಳು. "ಹಾಗಾದರೆ ಆತ ಎಲ್ಲಿ ಹೋದ" ಎಂದ ರಕ್ಕಸಿ ಕೇಳಿದಳು. "ಆತ ಈಗ ತಾನೇ ಹೊರಟು ಹೋದ" ಎಂದಳು ಹುಡುಗಿ, ರಕ್ಕಸಿ ಊಟವನ್ನು ಬಿಟ್ಟು ರಾಜಕುಮಾರನನ್ನು ಬೆನ್ನಟ್ಟಿಕೊಂಡು ಓಡಿ ಹೋದಳು.

ಬಹಳ ದೂರ ಓಡಿಕೊಂಡು ಬಂದ ನಂತರ ರಕ್ಕಸಿ ರಾಜಕುಮಾರನ ಹತ್ತಿರವಾದಳು. ಆಗ ರಾಜಕುಮಾರ "ನಾನು ಸತ್ಯದಲ್ಲಿ ಹುಟ್ಟಿ ವರದಲ್ಲಿ ಬೆಳೆದವನಾದರೆ ಒಂದು ದೊಡ್ಡ ಸಮುದ್ರವಾಗಲಿ" ಎಂದ. ಹಾಗೆ ಆಯಿತು. ರಕ್ಕಸಿ ಸಮುದ್ರದ ನೀರನ್ನು ಪೂರ್ತಿ ಕುಡಿದು ದಾಟಿ ಬಂದಳು. ರಕ್ಕಸಿ ಹತ್ತಿರಕ್ಕೆ ತಲುಪಿದಾಗ ರಾಜಕುಮಾರ "ನಾನು ಸತ್ಯದಲ್ಲಿ ಹುಟ್ಟಿ ವರದಲ್ಲಿ ಬೆಳೆದವನಾಗಿದ್ದರೆ ದಾರಿಗಡ್ಡ ಒಂದು ಬೆಂಕಿಯ ರಾಶಿಯಾಗಲಿ" ಎಂದ. ರಕ್ಕಸಿಯ ಮುಂದೆ ದೊಡ್ಡ ಬೆಂಕಿಯ ರಾಶಿಯಾಯಿತು. ರಕ್ಕಸಿ ಆ ಬೆಂಕಿಗೆ ನೂರು ಕೊಡ ಮೂತ್ರ ಮಾಡಿ, ಉಗುಳಿ ನಂದಿಸಿಬಿಟ್ಟಳು. ನಂತರ ದಾಟಿ ಬಂದಳು. ಮತ್ತೊಮ್ಮೆ ರಕ್ಕಸಿ ರಾಜಕುಮಾರನಿಗೆ ತೀರಾ ಹತ್ತಿರಕ್ಕೆ

ಮುಟ್ಟಿದಳು. ಆಗ ರಾಜಕುಮಾರ "ನಾನು ಸತ್ಯದಲ್ಲಿ ಹುಟ್ಟಿ ವರದಲ್ಲಿ ಬೆಳೆದವನಾದರೆ ರಕ್ಕಸಿಯ ದಾರಿಗಡ್ಡ ಮುಳ್ಳು ಬೇಲಿ ಉಂಟಾಗಲಿ" ಎಂದ. ದೊಡ್ಡ ಒಂದು ಮುಳ್ಳು ಬೇಲಿ ಉಂಟಾಯಿತು. ರಕ್ಕಸಿ ಹಲ್ಲಿನಿಂದ ಕಚ್ಚಿಯೇ ಆ ಬೇಲಿಯನ್ನು ಕಿತ್ತು ಬಿಸಾಡಿದಳು. ರಾಜಕುಮಾರ ಅರಮನೆಯ ಹತ್ತಿರ ಹತ್ತಿರ ಮುಟ್ಟಿದ. ರಕ್ಕಸಿಯು ಅವನ ಹತ್ತಿರಕ್ಕೆ ಸೇರಿ ಬಿಟ್ಟಳು. ಆಗ ರಾಜಕುಮಾರ "ನಾನು ಸತ್ಯದಲ್ಲಿ ಹುಟ್ಟಿ ವರದಲ್ಲಿ ಬೆಳೆದವನಾದರೆ ರಕ್ಕಸಿಗೆ ದಾರಿಗಡ್ಡ ಒಂದು ದೊಡ್ಡ ಕಮರಿಯಾಗಬೇಕು ಅದರಲ್ಲಿ ಬೀಳಬೇಕು" ಎಂದ. ತಟ್ಟನೆ ನೆಲಬಿರಿಯಿತು. ರಕ್ಕಸಿ ಅದರೊಳಗೆ ಬಿದ್ದುಬಿಟ್ಟಳು. ಅಷ್ಟರಲ್ಲಿ ರಾಜಕುಮಾರ ಅರಮನೆ ಸೇರಿಕೊಂಡ.

ರಕ್ಕಸಿ ಕಮರಿಯಿಂದ ಎದ್ದು ಒಂದು ಸುಂದರಿ ಹೆಣ್ಣಿನ ರೂಪ ತಾಳಿದಳು. ಸೊಂಟದಲ್ಲಿ ಒಂದು ಮಗುವನ್ನೂ ಎತ್ತಿಕೊಂಡು ಅರಮನೆಗೆ ಬಂದಳು. ಅರಸ "ಯಾರು ನೀನು?" ಎಂದು ಪ್ರಶ್ನಿಸಿದ. "ಈಗ ತಾನೇ ಬಂದರಲ್ಲ ನಿಮ್ಮಲ್ಲಿಗೆ ಒಬ್ಬ ಯುವಕ, ಅವರ ಹೆಂಡತಿ ನಾನು. ಈ ಮಗು ಅವರದ್ದೇ. ಅವರು ನನ್ನನ್ನು ಬಿಟ್ಟು ಬೇರೆ ಮದುವೆಯಾಗಲು ಮನೆಬಿಟ್ಟು ಓಡಿ ಬಂದಿದ್ದಾರೆ. ದಯವಿಟ್ಟು ನನಗೆ ನನ್ನ ಗಂಡನನ್ನು ಕೊಡಿಸಿ" ಎಂದು ಅಂಗಲಾಚಿ ಬೇಡಿಕೊಂಡಳು. ರಾಜಕುಮಾರನನ್ನು ಕರೆದು ಅರಸ ವಿಚಾರಿಸಿದ. ಆತ "ಈಕೆ ನನ್ನ ಹೆಂಡತಿಯಲ್ಲ ರಕ್ಕಸಿ, ನನ್ನನ್ನು ತಿನ್ನಲು ಬಂದವಳು" ಎಂದು ಎಷ್ಟು ಹೇಳಿದರೂ ಅರಸ ನಂಬಲಿಲ್ಲ. ಬಲಾತ್ಕಾರ ಮಾಡಿ ಅವರಿಬ್ಬರನ್ನೂ ಆ ರಾತ್ರಿ ಒಂದೇ ಕೋಣೆಯಲ್ಲಿ ಹಾಕಿಸಿದ. ಮಧ್ಯರಾತ್ರಿ ರಾಜಕುಮಾರನನ್ನು ಕೊಂದು ರಕ್ಕಸಿ ರಕ್ತಹೀರಿ ಕುಡಿದು ದುಂಬಿಯ ರೂಪ ತಾಳಿ ಹಾರಿ ಹೋಗಿಬಿಟ್ಟಳು.

ಬೆಳಗ್ಗೆ ಎದ್ದು ಕೋಣೆಯ ಬಾಗಿಲು ತೆರೆಯುವಾಗ ರಾಜಕುಮಾರನ ಹೆಣ ಬಿದ್ದಿತ್ತು. ಅದು ಭೂಪರಸನ ಮಗನೆಂದು ಹೆಣದ ಕಿಸೆಯಲ್ಲಿದ್ದ ಓಲೆಯಿಂದ ತಿಳಿಯಿತು. ಸತ್ತ ಯುವಕನು ಬಾಲೆ ಆಕ್ಕಿರನೆಂದು ತಿಳಿದು ಅಕ್ಕಮಲೆ ಬಿದ್ದು ಗೋಳಾಡಿದಳು. ಆಕ್ಕಿರನ ಅರಮನೆಗೆ ಜನ ಕಳುಹಿಸಿ ಅವನ ಮನೆಯವರನ್ನು ಬರಮಾಡಿಕೊಂಡರು. ಹೆಣವನ್ನು ಸುಡಲು ಚಿತೆ ತಯಾರಿಸಿದರು. ಚಿತೆಯ ಮೇಲೆ ಹೆಣವನ್ನಿಟ್ಟು ಮನೆಯವರೆಲ್ಲ ಹಿಂತಿರುಗಿದರು. ರಾಜಕುಮಾರಿ ಕಾಟ[೪](ಕಾಷ್ಟ)ದ ಬೆಂಕಿಗೆ ಬಿದ್ದು ಪ್ರಾಣ ಬಿಡಲು ಸಿದ್ಧತೆ ನಡೆಸಿದಳು. ಆಗ ಶಿವ-ಪಾರ್ವತಿಯರು ಆಕಾಶಮಾರ್ಗದಲ್ಲಿ ಕಾಣಿಸಿಕೊಂಡರು. ಚಿತೆಯ ಬಳಿ ಕುಳಿತು ತನ್ನ ಪ್ರಿಯತಮನನ್ನು ಬದುಕಿಸಿ ಕೊಡುವಂತೆ ಶಿವ-ಪಾರ್ವತಿಯರಲ್ಲಿ ವಿಧವಿಧವಾಗಿ ಬೇಡಿಕೊಂಡಳು. ಪರಿಣಾಮ ನಿಷ್ಫಲವಾದಾಗ ಕಾಷ್ಟದ ಬೆಂಕಿಗೆ ಹಾರಿ ಪ್ರಾಣ ಬಿಡಲು ಕಾಷ್ಟಕ್ಕೆ ಸುತ್ತು ಬರುವ ಹೊತ್ತಿಗೆ ಪಾರ್ವತಿ ನೋಡಿ ಶಿವನೊಡನೆ ಅದೇನು ವಿಚಿತ್ರವೆಂದು ಕೇಳಿದಳು. ಶಿವನು ರಾಜಕುಮಾರನ ಕತೆಯನ್ನು ವಿವರಿಸಿದ. ಆಗ ಪಾರ್ವತಿ "ಹೇಗಾದರೂ ಮಾಡಿ ಅವನನ್ನು ಬದುಕಿಸಿ" ಎಂದು ಬೇಡಿಕೊಂಡಳು. ಶಿವನು ಪಾರ್ವತಿಯ ಪ್ರಾರ್ಥನೆಗೆ ಒಪ್ಪಿಗೆ ನೀಡಿ ಕಳುಹಿಸಿಕೊಟ್ಟ.

ಪಾರ್ವತಿಯು ಬಂದು ಹೆಣದ ಮೇಲೆ ಕಮಂಡಲದ ನೀರು ಹನಿಸಿ ದರ್ಬೆಯಿಂದ ಪೂಸಿ "ಏಳು ರಾಜಕುಮಾರ" ಎಂದು ಒಂದು ಪೆಟ್ಟು ಕೊಟ್ಟಳು. ರಾಜಕುಮಾರ ಎದ್ದು ಕುಳಿತ. ರಾಜಕುಮಾರಿಯೊಡಗೂಡಿ ಅರಮನೆಗೆ ಬಂದ. ಅನಂತರ ಆತನಿಗೆ ರಾಜಕುಮಾರಿಯೊಡನೆ ವಿಜೃಂಭಣೆಯಿಂದ ಮದುವೆಯಾಯಿತು.

ಕೆಲವು ದಿವಸ ಕಳೆದ ಮೇಲೆ ರಾಜಕುಮಾರ ರಕ್ಕಸಿಯ ಮನೆಗೆ ಹೋದ. ಆಗ ಅಲ್ಲಿ ರಕ್ಕಸಿಯ ಮಗಳಿದ್ದಳು. ತಾಯಿ ಹೊರಗಡೆ ಹೋಗಿದ್ದಳು. ರಕ್ಕಸಿಯ ಮಗಳೊಡನೆ ಆಕೆಯ ತಾಯಿ ಮಾಡಿದ ಕೆಲಸವನ್ನೆಲ್ಲ ಹೇಳಿದ. ಸತ್ತುಹೋದ ತಾನು ಪಾರ್ವತಿದೇವಿಯ ಕೃಪೆಯಿಂದ ಮರುಹುಟ್ಟು ಪಡೆದೆನೆಂಬ ವಿಚಾರವನ್ನು ತಿಳಿಸಿದ. ರಕ್ಕಸಿಯ ಮಗಳು ತನ್ನ ತಾಯಿಯನ್ನು ಕೊಲ್ಲಲು ರಾಜಕುಮಾರನಿಗೆ ಸಹಕರಿಸುವುದಾಗಿ ಒಪ್ಪಿದಳು.

ಹೊತ್ತು ಮಧ್ಯಾಹ್ನವಾಗುತ್ತಾ ಬಂತು. ದೂರದಿಂದ ಮನೆಗೆ ಬರುವ ರಕ್ಕಸಿಯ ಆರ್ಭಟ ಕೇಳತೊಡಗಿತು. ಮಸೆದ ಚಂದ್ರಾಯುಧವನ್ನು ರಕ್ಕಸಿಯ ಮಗಳು ರಾಜಕುಮಾರನ ಕೈಯಲ್ಲಿ ಕೊಟ್ಟು ಬಾಗಿಲ ಮರೆಯಲ್ಲಿ ನಿಲ್ಲಿಸಿದಳು. ರಕ್ಕಸಿಯ ಬರವನ್ನೇ ಕಾದು ಕುಳಿತ ರಾಜಕುಮಾರ ರಕ್ಕಸಿ ಮನೆಗೆ ಹೊಕ್ಕಿದ್ದೇ ತಡ, ಒಂದೇ ಹೊಡೆತದಲ್ಲಿ ರಕ್ಕಸಿಯ ತಲೆ ಹಾರಿಸಿದ. ನಂತರ ರಕ್ಕಸಿಯ ಮಗಳನ್ನು ಊರಿಗೆ ಕರೆದೊಯ್ದ. ಮದ್ವೆಯಾದ. ಮೊದಲ ಹೆಂಡತಿಯನ್ನೂ ಕರೆಸಿಕೊಂಡ. ಇಬ್ಬರೊಡನೆ ಕೂಡಿಕೊಂಡು ಸುಖವಾಗಿದ್ದ.

ಟಿಪ್ಪಣಿಗಳು

೧. ಕಡ್ಪತ್ತಿ – ದೊಡ್ಡಕತ್ತಿ
೨. ಗಡಿ – ಕತ್ತಿಯ ಪೆಟ್ಟು
೩. ಪದಾರ್ಥ – ಸಾಂಬಾರು
೪. ಕಾಟ – ಚಿತೆ

***

೧೪

ಬುದ್ಧಿವಂತ ರಂಗ

ಒಂದೂರಲ್ಲಿ ಒಬ್ಬ ರೈತನಿದ್ದ. ಆತನಿಗೆ ಏಳು ಜನ ಮಕ್ಕಳು. ಅವರಲ್ಲಿ ಕೊನೆಯವನು ರಂಗ. ಕಿರಿಯವನೆಂಬ ಕಾರಣದಿಂದ ಆತನ ಮೇಲೆ ತಾಯಿಗೆ ತುಂಬಾ ಪ್ರೀತಿ. ತಾಯಿಯ ಕೊಂಡಾಟ ಹೆಚ್ಚಾಗಿ ಆತ ಸೋಮಾರಿಯಾಗಿ ಬೆಳೆದ. ಅಣ್ಣಂದಿರೊಂದಿಗೆ ಕೃಷಿ ಕೆಲಸಕ್ಕೂ ಹೋಗುತ್ತಿರಲಿಲ್ಲ. ಯಾವ ವೃತ್ತಿಯನ್ನು ಮಾಡುವ ಆಸಕ್ತಿಯೂ ಆತನಿಗಿರಲಿಲ್ಲ. ಮೈಗಳ್ಳನಾಗಿದ್ದ ಆತನಿಗೆ ದೊಡ್ಡವನಾದ ಮೇಲೆ ಖರ್ಚಿಗೆ ಹಣ ಬೇಕಲ್ಲಾ. ಮನೆಯಿಂದ ತಾಯಿ ಕೊಡುತ್ತಿದ್ದುದು ಸಾಕಾಗುತ್ತಿರಲಿಲ್ಲ. ಹಾಗಾಗಿ ಕಳ್ಳತನಕ್ಕೆ ಪ್ರಾರಂಭಿಸಿದ. ಮೊದಲಿಗೆ ಮನೆಯಿಂದಲೇ ಕದಿಯುತ್ತಿದ್ದ. ಅದು ಸಾಕಾಗದೆ ಹೋದಾಗ ಬೇರೆಯವರ ತೋಟದಿಂದ ಅಡಿಕೆ, ತೆಂಗಿನಕಾಯಿ ಕದಿಯತೊಡಗಿದ. ಮತ್ತೆ ಬೇರೆಯವರ ಮನೆಯಿಂದ ಹಣ, ಚಿನ್ನಾಭರಣ ಕದಿಯಲು ಶುರು ಮಾಡಿದ. ಒಂದು ಸಲ ಆತ ಒಂದು ಮನೆಯಿಂದ ಚಿನ್ನಾಭರಣ ಕದಿಯುವಾಗ ಆತನನ್ನು ಎಲ್ಲರೂ ಕೂಡಿ ಹಿಡಿದು ಪಂಚಾಯತಿ ಕಟ್ಟೆಗೆ ಎಳೆದುಕೊಂಡು ಬಂದರು. ತಮ್ಮ ತಮ್ಮ ವಸ್ತುಗಳನ್ನು ಕಳೆದುಕೊಂಡವರೆಲ್ಲ ಅಲ್ಲಿಗೆ ಬಂದು ಆತನ ಮೇಲೆ ದೂರು ಕೊಟ್ಟರು. ಪಂಚಾಯಿತಿಕೆಯಲ್ಲಿ ಆತನಿಗೆ ಗಡಿಪಾರು ಶಿಕ್ಷೆ ವಿಧಿಸುವುದೆಂದು ನಿರ್ಣಯವಾಯಿತು. ಇನ್ನೆರಡು ದಿನಗಳೊಳಗೆ ಆತ ಊರು ಬಿಟ್ಟು ಹೋಗಬೇಕೆಂದು ಆತನಿಗೆ ಆಜ್ಞೆ ನೀಡಿದರು.

ಪಂಚಾಯತಿಯ ತೀರ್ಪು ಕೇಳಿ ರಂಗನ ತಾಯಿಗೆ ಬಹಳ ಬೇಸರವಾಯಿತು. ಆದರೆ ಊರ ಮುಖಂಡರ ನಿರ್ಣಯಕ್ಕೆ ಆಕೆ ಏನೂ ವಿರೋಧ ಹೇಳುವಂತಿರಲಿಲ್ಲ. ಮರುದಿನ ರಂಗ ಮನೆಯಿಂದ ಹೊರಟು ಹೋಗುವುದೆಂದು ನಿರ್ಣಯವಾಯಿತು. ರಂಗ ಹೊರಡುವಾಗ ಆತನನ್ನು ತಾಯಿ ಕರೆದು "ರಂಗಾ, ನೀನು ಈ ಊರು ಬಿಟ್ಟು ಹೋಗುವುದು ಒಳ್ಳೆಯದು. ಏಕೆಂದರೆ ನೀನು ಇನ್ನುಮುಂದೆ ಕಳ್ಳತನ ಮಾಡುವುದನ್ನು ಬಿಟ್ಟು ಬದುಕಿದರೂ ಯಾರು ನಿನ್ನನ್ನು ಸುಬಗ<sup>ನೆಂದು ಪರಿಗಣಿಸುವುದಿಲ್ಲ. ಪರವೂರಿಗೆ ಹೋಗಿ ಮೈ ಬಗ್ಗಿ ದುಡಿದು ಒಳ್ಳೆ ಸಂಪಾದನೆ ಮಾಡಿ ಬುದ್ಧಿವಂತನಾಗಿ ಬಾಳು. ಇಲ್ಲಿಂದ ಬೇಗನೆ ಹೊರಟು ಹೋಗು" ಎಂದಳು. ಆತ ಹೊರಡುವಾಗ ಆತನ

ಕೈಯಲ್ಲಿ ನಾಲ್ಕಾಣೆ ಹಣ ಒಂದು ಕುಡ್ತೆ ಅಕ್ಕಿ ಮತ್ತು ಅಷ್ಟೇ ಅಕ್ಕಿ ಬೇಯಿಸಲು ತಕ್ಕ ಒಂದು ಚಿಕ್ಕ ಮಣ್ಣಿನ ಪಾತ್ರವನ್ನು ಕೊಟ್ಟು "ನಿನಗೆ ದಾರಿಯಲ್ಲಿ ಬಾಯಾರಿಕೆಯಾದರೆ ಏನಾದರೂ ತೆಗೆದು ಕುಡಿ. ರಾತ್ರಿ ಹೊತ್ತು ಯಾರ ಮನೆಯಲ್ಲಾದರೂ ಇರು. ನಿನಗೆ ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟವರಿಗೆ ಈ ಅಕ್ಕಿ ಮತ್ತು ಪಾತ್ರೆ ಕೊಟ್ಟು ಅನ್ನ ಮಾಡಿಕೊಡಲು ಹೇಳು. ನಾಳೆಯಿಂದ ಯಾರ ಮನೆಗಾದರೂ ಹೋಗಿ ದುಡಿದು ಸಂಪಾದಿಸಿ ಬದುಕು" ಎಂದಳು.

"ಹಾಗೆಯೇ ಆಗಲಮ್ಮಾ" ಎಂದ ರಂಗ ತಾಯಿ ಕೊಟ್ಟದ್ದನ್ನೆಲ್ಲಾ ಹಿಡಿದುಕೊಂಡು ಆ ಊರಿನಿಂದ ಪರಊರಿಗೆ ಹೋಗುವ ದಾರಿ ಹಿಡಿದ. ಹೊತ್ತು ಮಧ್ಯಾಹ್ನವಾಗುವಾಗ ಆತನ ಹೊಟ್ಟೆ ಚುರುಗುಟ್ಟತೊಡಗಿತು. ಏನು ಮಾಡುವುದೆಂದು ಆಲೋಚಿಸುವಷ್ಟರಲ್ಲಿ ಆತನಿಗೆ ದಾರಿ ಬದಿಯಲ್ಲೊಂದು ಮನೆ ಕಂಡಿತು. ರಂಗ ಆ ಮನೆಗೆ ಹೋಗಿ ಮನೆಯವರನ್ನು ಕರೆದ. ಮನೆಯೊಳಗಿನಿಂದ ಒಬ್ಬಳು ಹೆಂಗಸು ಹೊರಗೆ ಬಂದಳು "ಯಾರಪ್ಪಾ ನೀನು, ಏನು ಬೇಕು?" ಎಂದು ಕೇಳಿದಳು. ಅದಕ್ಕೆ ರಂಗ ತಾನು ಪರ ಊರಿಗೆ ಹೋಗುತ್ತಿರುವ ಒಬ್ಬ ಪ್ರಯಾಣಿಕನೆಂದು ಹೇಳಿ ಬಾಯಾರಿಕೆಗೆ ನೀರು ಕೇಳಿ ಕುಡಿದ ಮೇಲೆ "ಅಮ್ಮಾ ನನಗೆ ಮಧ್ಯಾಹ್ನಕ್ಕೆ ಒಂದು ತುತ್ತು ಅನ್ನ ನೀಡಬಹುದೇ?" ಎಂದು ಬಹಳ ದೈನ್ಯದಿಂದ ಕೇಳಿದ. "ಇಲ್ಲಪ್ಪಾ, ನಮ್ಮ ಮನೆಯವರು ಅಂಗಡಿ ವ್ಯಾಪಾರಿ. ಅವರ ಬೆಳಗ್ಗೆ ಎದ್ದು ಗಂಜಿಯೂಟ ಮಾಡಿ ಅಂಗಡಿಗೆ ಹೋಗುತ್ತಾರೆ. ಅವರಿನ್ನು ಬರುವುದು ಸಂಜೆ ಹೊತ್ತಿಗೆ, ಬೆಳಗ್ಗೆ ಇಟ್ಟ ಗಂಜಿಯನ್ನೇ ಸ್ವಲ್ಪ ಉಳಿಸಿಕೊಂಡು ನಾನು ಮಧ್ಯಾಹ್ನ ಊಟಮಾಡುತ್ತೇನೆ. ನನ್ನ ಊಟ ಮುಗಿಯಿತು" ಎಂದಳು. "ಹಾಗಾದರೆ ಒಂದು ಸಂಗತಿ ಮಾಡಿ ನನ್ನಲ್ಲಿ ಅಕ್ಕಿ ಇದೆ ಪಾತ್ರೆ ಇದೆ. ಈ ಅಕ್ಕಿಯನ್ನೆ ದಯವಿಟ್ಟು ಈ ಪಾತ್ರೆಯಲ್ಲಿ ಬೇಯಿಸಿ ಕೊಡಿ" ಎಂದ. ಅದಕ್ಕೆ ಮನೆಯಾಕೆ ಒಪ್ಪಿಕೊಂಡಳು. ಅಕ್ಕಿ ಮತ್ತು ಪಾತ್ರೆ ಒಳಗೆ ತೆಗೆದುಕೊಂಡು ಹೋಗಿ ಅಕ್ಕಿ ತೊಳೆಯುವ ಮೊದಲು ಒಂದು ಮುಷ್ಟಿ ಅಕ್ಕಿಯನ್ನು ತೆಗೆದು ತನ್ನ ಮನೆಯ ಅಕ್ಕಿ ಪಾತ್ರೆಗೆ ಹಾಕಿದಳು. ಉಳಿದುದನ್ನು ತೊಳೆದು ಪಾತ್ರೆಗೆ ಹಾಕಿ ಒಲೆ ಮೇಲೆ ಬೇಯಲಿಕ್ಕಿಟ್ಟಳು. ರಂಗ ಇದನ್ನೆಲ್ಲ ಕಿಟಕಿಯಿಂದ ನೋಡುತ್ತಿದ್ದ. ಅನ್ನ ಬೇಯಲಿಕ್ಕಿಟ್ಟ ಬಳಿಕ ರಂಗ ಬಂದು ಜಗಲಿಯಲ್ಲಿ ಮಲಗಿಕೊಂಡ.

ಅನ್ನ ಬೆಂದ ಬಳಿಕ ಮನೆಯಾಕೆ ಅನ್ನದ ಪಾತ್ರೆಯನ್ನೂ, ಒಂದು ಬಾಳೆ ಎಲೆ ಒಂದಿಷ್ಟು ಉಪ್ಪಿನಕಾಯಿ ಮತ್ತು ಕುಡಿಯಲು ನೀರು ತಂದು ಜಗಲಿಯಲ್ಲಿಟ್ಟು ರಂಗನೊಡನೆ ಊಟ ಮಾಡಲು ಹೇಳಿ ಆಕೆ ಒಳಗಡೆ ಹೋದಳು. ರಂಗ ಎದ್ದು ಕೂತು ಎಲೆಗೆ ನೀರು ಹಾಕಿ ಪೂಸಿದ. ಅನ್ನದ ಪಾತ್ರೆ ನೋಡಿ ಅದರೊಡನೆ ಮಾತನಾಡುವವನಂತೆ ಗಟ್ಟಿಯಾಗಿ "ಮನೆಯೊಡತಿ ಒಂದು ಮುಷ್ಟಿ ಅಕ್ಕಿ ತೆಗೆದರೆಂದು ನೀನೇಕೆ ನನ್ನಲ್ಲಿ ದೂರು ಹೇಳುತ್ತೀ, ಅಡುಗೆ ಮಾಡಿಕೊಟ್ಟ ಅವರು ಒಂದು ಮುಷ್ಟಿ

ಅಕ್ಕಿ ತೆಗೆದದ್ದು ತಪ್ಪೇ ಅನ್ನ ಬೇಯಿಸಿ ಕೊಟ್ಟಿದ್ದಾರೆ ಜೊತೆಗೆ ಉಪ್ಪಿನಕಾಯಿ ಕೂಡ ಕೊಟ್ಟಿದ್ದಾರೆ. ನೀನೊಮ್ಮೆ ಸುಮ್ಮನಿರು" ಎಂದು ಹೇಳಿ ಅನ್ನವನ್ನು ಎಲೆಗೆ ಹಾಕಿಕೊಂಡು ಊಟಮಾಡತೊಡಗಿದ. "ಹೊರಗೆ ಕುಳಿತು ಈತ ಯಾರೊಡನೆ ಮಾತನಾಡುತ್ತಿದ್ದಾನೆ ಮನೆಯಲ್ಲಿ ಬೇರೆ ಯಾರೂ ಇಲ್ಲವಲ್ಲಾ!" ಎಂದು ಮನೆಯಾಕೆ ಹೊರಗೆ ಬಂದು ನೋಡಿ "ನೀವು ಯಾರೊಡನೆ ಮಾತನಾಡುತ್ತಿದ್ದೀರಿ?" ಎಂದು ಕೇಳಿದಳು. "ನಾನು ನನ್ನ ಅನ್ನದ ಪಾತ್ರೆಯೊಡನೆ ಮಾತನಾಡುತ್ತಿದ್ದೇನೆ. ನೀವು ಒಂದು ಮುಷ್ಟಿ ಅಕ್ಕಿ ತೆಗೆದುದ್ದನ್ನು ಅದು ನನ್ನೊಡನೆ ಹೇಳಿತು" ಎಂದ ರಂಗ. "ಹಾಗಾದರೆ ನಿಮ್ಮ ಪಾತ್ರೆ ಮಾತನಾಡುತ್ತದೆಯಾ?"

"ಹೌದೌದು, ಅದು ಎಲ್ಲಾ ಸಂಗತಿಯನ್ನು ನನ್ನಲ್ಲಿ ಹೇಳುತ್ತದೆ."

"ಹಾಗಾದರೆ ಆ ಪಾತ್ರೆ ನನಗೆ ಕೊಡಿ ನಿಮಗೆ ಅದರ ಬದಲು ಒಂದು ತಾಮ್ರದ ಪಾತ್ರೆ ಕೊಡುತ್ತೇನೆ" ಎಂದಳು ಮನೆಯಾಕೆ. ರಂಗ ಊಟ ಮಾಡಿ ಎದ್ದು ಕೈ ತೊಳೆದ. ಪಾತ್ರೆಯ ಮಾರಾಟದ ಬಗೆಗೆ ಅವರಿಬ್ಬರಿಗೂ ಚರ್ಚೆ ನಡೆಯಿತು. ಒಂದೆರಡು ತಾಮ್ರದ ಪಾತ್ರೆಗಳಿಗೆ ತನ್ನ ಮಾತನಾಡುವ ಮಣ್ಣಿನ ಪಾತ್ರೆ ಕೊಡಲು ರಂಗ ಒಪ್ಪಲಿಲ್ಲ. ಮನೆಯಾಕೆ ತನಗೆ ಆ ಪಾತ್ರೆ ಬೇಕೇಬೇಕೆಂದು ಹಟ ಹಿಡಿದಳು. ಕೊನೆಗೆ ಮನೆಯಲ್ಲಿದ್ದ ಎಲ್ಲಾ ತಾಮ್ರದ ಪಾತ್ರೆಗಳನ್ನು ಆತನ ಪಾತ್ರೆಯ ಬದಲಾಗಿ ಕೊಡಲು ಒಪ್ಪಿಕೊಂಡ. ಬಳಿಕ ಆತ ತನ್ನ ಪಾತ್ರೆಯನ್ನು ಮನೆಯಾಕೆಗೆ ಕೊಡಲು ಒಪ್ಪಿದ. ಆಕೆ ಕೊಟ್ಟ ತಾಮ್ರದ ಪಾತ್ರೆಗಳನ್ನೆಲ್ಲಾ ಒಂದು ಗೋಣಿಚೀಲದಲ್ಲಿ ತುಂಬಿಸಿ ತಲೆ ಮೇಲೆ ಹೊತ್ತು ಕೊಂಡು ಆತ ಅಲ್ಲಿಂದ ಬೇಗ ಬೇಗನೆ ಕಾಲುಕಿತ್ತ. ಪಟ್ಟಣಕ್ಕೆ ಹೋಗಿ ಒಂದು ತಾಮ್ರದ ಅಂಗಡಿಗೆ ಆ ಪಾತ್ರೆಗಳನ್ನೆಲ್ಲಾ ಮಾರಾಟ ಮಾಡಿ ಸಿಕ್ಕಿದ ಹಣವನ್ನು ತನ್ನ ಕಿಸೆಯಲ್ಲಿ ತುಂಬಿಸಿಕೊಂಡು, ಇನ್ನು ಈ ಊರಲ್ಲಿ ನಿಲ್ಲುವುದು ಅಪಾಯವೆಂದು ಪರವೂರಿನ ದಾರಿ ಹಿಡಿದ. ಆಗಿನ ಕಾಲದಲ್ಲಿ ನೋಟುಗಳು ಇದ್ದಿರಲಿಲ್ಲ. ಎಲ್ಲಾ ನಾಣ್ಯಗಳನ್ನು ಅಂಗಿಯ ಕಿಸೆತುಂಬ ತುಂಬಿಕೊಂಡು ಪೂರ್ತಿ ಕತ್ತಲಾಗುವ ಮೊದಲು ಇನ್ನೊಂದು ಹಳ್ಳಿ ತಲುಪಬೇಕೆಂಬ ಅವಸರದಲ್ಲಿ ವೇಗವಾಗಿ ಹೊರಟ. ಆ ಹಳ್ಳಿಯಿಂದ ಇನ್ನೊಂದು ಹಳ್ಳಿಯ ಮಧ್ಯೆ ಕಾಡು ಹಬ್ಬಿತು. ಕಾಡುದಾಟಿ ಹೋಗಲು ಒಂದು ಓಣಿಯ ದಾರಿ. ಎರಡೂ ಕಡೆಗಳಲ್ಲಿ ದರೆ ಮಧ್ಯೆ ಅಗಲ ಕಿರಿದಾದ ದಾರಿ. ಇಬ್ಬರಿಗೆ ಒಟ್ಟಿಗೆ ಹೋಗಲು ಸಾಧ್ಯವಿಲ್ಲದಷ್ಟು ಚಿಕ್ಕ ದಾರಿ. ಆ ದಾರಿಯಲ್ಲಿ ಓಡಿಕೊಂಡು ಹೋಗುತ್ತಿರುವಾಗ ರಂಗನಿಗೆ ಒಂದು ಕರಡಿ ಎದುರಾಯಿತು. ಇಬ್ಬರೂ ಒಬ್ಬರನ್ನೊಬ್ಬರು ನೋಡಿರಲಿಲ್ಲ. ಫಕ್ಕನೆ ಕರಡಿ ಎದುರಾದಾಗ ರಂಗನಿಗೆ ಏನು ಮಾಡುವುದೆಂದು ತೋಚಲಿಲ್ಲ. ಇನ್ನೇನು ತನ್ನ ಮೇಲೆ ಕರಡಿ ಎರಗುತ್ತದೆ ಎಂದಾಗ ಆತ ಕರಡಿಯ ಎರಡೂ ಕಿವಿಗಳನ್ನು ತನ್ನೆರಡು ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡ. ಕರಡಿಗೂ ಹೆದರಿಕೆಯಾಗಿತ್ತು ಏನು ಮಾಡಲೂ ಉಪಾಯವಿಲ್ಲ. ಇಬ್ಬರಿಗೂ ಜಗ್ಗಾಟ ನಡೆಯಿತು. ಜಗ್ಗಾಟ ನಡೆಯುವ ಹೊತ್ತಿಗೆ ರಂಗನ ಕಿಸೆಯಲ್ಲಿದ್ದ ನಾಣ್ಯಗಳೆಲ್ಲ ಕೆಳಗೆ ಬಿದ್ದುವು.

ಹೀಗೆ ಕೆಲವು ನಿಮಿಷಗಳು ಕಳೆದಾಗ ಆಚೆಗಿನ ಹಳ್ಳಿಯಿಂದ ಒಬ್ಬಾತ ಅದೇ ಓಣಿಯಲ್ಲಿ ರಂಗನಿಗೆ ಎದುರಾಗಿ ನಡೆದು ಬಂದ. ಬಂದವ ಕರಡಿಗೂ ರಂಗನಿಗೂ ಆಗುತ್ತಿರುವ ಎಳೆದಾಟ ನೋಡಿದ. ಆಗ ರಂಗನ ತಲೆಗೊಂದು ಆಲೋಚನೆ ಹೊಳೆಯಿತು. "ಅಣ್ಣಾ ಅಣ್ಣಾ ಈ ಕರಡಿಯ ಕಿವಿಯನ್ನು ಹಿಡಿದು ಜಗ್ಗಿದಷ್ಟು ಹಣ ಉದುರುತ್ತದೆ. ನನಗೆ ಇಷ್ಟು ಸಾಕು. ಕತ್ತಲಾಯಿತು. ನನಗಿನ್ನೂ ಬಹಳ ದೂರ ಹೋಗಬೇಕು. ನೀವು ಸ್ವಲ್ಪ ಕಿವಿಯನ್ನು ಹಿಡಿದುಕೊಂಡು ಜಗ್ಗಾಟ ನಡೆಸಿ ಸಾಕಷ್ಟು ನಾಣ್ಯಗಳು ಬಿದ್ದ ಮೇಲೆ ನೀವು ಹೆಕ್ಕಿಕೊಂಡು ಹೋಗಬಹುದು. ಬನ್ನಿ ಕಿವಿಗಳನ್ನು ಹಿಡಿದುಕೊಳ್ಳಿ" ಎಂದು ಬಂದವನ ಕೈಗೆ ಕರಡಿಯ ಕಿವಿಗಳನ್ನು ಕೊಟ್ಟ. ಕೆಳಗೆ ಬಿದ್ದ ನಾಣ್ಯಗಳನ್ನು ಹೆಕ್ಕಿ ಕಿಸೆಯಲ್ಲಿ ತುಂಬಿಸಿಕೊಂಡು ರಂಗ ಮುಂದಿನ ದಾರಿ ಹಿಡಿದ. ಕರಡಿಯ ಕಿವಿಗಳನ್ನು ಹಿಡಿದುಕೊಂಡು ಜಗ್ಗಾಟಕ್ಕೆ ಪ್ರಾರಂಭಿಸಿದವನು ಎಷ್ಟು ಜಗ್ಗಾಟ ನಡೆಸಿದರೂ ಅದರ ಬಾಯಿಯಿಂದ ನಾಣ್ಯಗಳು ಉದುರಲಿಲ್ಲ. ನಾನು ಸುಲಭದಲ್ಲಿ ಮೋಸ ಹೋದೆನಲ್ಲಾ ಎಂದಾತನಿಗೆ ಚಿಂತೆಯಾಯಿತು. ಆತ ವ್ಯಾಪಾರಿ. ರಂಗನಿಗೆ ಮಧ್ಯಾಹ್ನ ಅಡುಗೆ ಮಾಡಿಕೊಟ್ಟ ಹೆಂಗಸಿನ ಗಂಡ. ಆತ ಅಂಗಡಿ ಮುಚ್ಚಿ ತನ್ನ ಮನೆಗೆ ಬರುವಾತ. ಆತನಿಗೆ ಕರಡಿಯ ಕಿವಿಗಳನ್ನು ಬಿಟ್ಟುಬಿಡಲೂ ಧೈರ್ಯವಿಲ್ಲ. ಬಿಟ್ಟರೆ ಎಲ್ಲಿ ಕಚ್ಚಿ ಕೊಂದುಬಿಡುತ್ತದೋ ಎಂಬ ಹೆದರಿಕೆ. ಕೊನೆಗೆ ಯಾರೋ ಒಬ್ಬ ಆ ದಾರಿಯಿಂದ ನಡೆದುಕೊಂಡು ಬಂದ. ಬಂದವನು ಮತ್ತು ವ್ಯಾಪಾರಿ ಇಬ್ಬರೂ ಸೇರಿ ಮೊಣ್ಣೆ ಹಿಡಿದು ಕರಡಿಯನ್ನು ಅಟ್ಟಿದರು.

'ವ್ಯಾಪಾರಿ ವೇಗವಾಗಿ ನಡೆದು ತನ್ನ ಮನೆ ಸೇರಿದ. ಆತನಿಗೆ ತುಂಬಾ ಆಯಾಸವಾಗಿತ್ತು. ಜಗಲಿ ಏರಿ ಕುಳಿತುಕೊಂಡವನೇ ಹೆಂಡತಿಯೊಡನೆ ಕುಡಿಯಲು ಸ್ವಲ್ಪ ನೀರು ಕೊಡೆಂದು ಕೇಳಿದ. ತಾಮ್ರದ ಪಾತ್ರೆ, ಲೋಟವೊಂದೂ ಮನೆಯಲ್ಲಿರಲಿಲ್ಲ. ಎಲ್ಲವನ್ನೂ ರಂಗನಿಗೆ ಕೊಟ್ಟಿದ್ದಳು. ಆಕೆ ಒಳಗೆ ಹೋಗಿ ರಂಗ ಕೊಟ್ಟ ಮಾತನಾಡುವ ಮಣ್ಣಿನ ಮಡಕೆಯಲ್ಲಿ ಗಂಡನಿಗೆ ಕುಡಿಯಲು ನೀರು ತಂದುಕೊಟ್ಟಳು. ಮೊದಲೇ ವ್ಯಾಪಾರಿಗೆ ಬಹಳ ಆಯಾಸವಾಗಿತ್ತು. ಹೆಂಡತಿ ಮಣ್ಣಿನ ಪಾತ್ರೆಯಲ್ಲಿ ನೀರು ತಂದು ಕೊಟ್ಟದ್ದು ಕಂಡು ವ್ಯಾಪಾರಿಗೆ ವಿಪರೀತ ಸಿಟ್ಟು ಬಂತು. ಆತ ಮಡಕೆಯನ್ನೆತ್ತಿ ಅಂಗಳಕ್ಕೆ ಬಿಸಾಡಿದ. ಅದು ಪುಡಿಪುಡಿಯಾಗಿ ಹೋಯಿತು. "ಅಯ್ಯೋ ನನ್ನ ಮಾತನಾಡುವ ಮಡಕೆ ಚೂರು ಚೂರಾಯಿತಲ್ಲಾ" ಎಂದು ಆತನ ಹೆಂಡತಿ ರೋದಿಸತೊಡಗಿದಳು. ವ್ಯಾಪಾರಿಗೆ ಆಕೆ ಯಾಕೆ ಅಳುತ್ತಿದ್ದಾಳೆಂಬುದೇ ಮೊದಲಿಗೆ ಗೊತ್ತಾಗಲಿಲ್ಲ. ನಿಧಾನವಾಗಿ ಆಕೆ ಮನೆಯಲ್ಲಿದ್ದ ಪಾತ್ರೆಗಳನ್ನೆಲ್ಲಾ ಒಂದು ಮಡಕೆಗಾಗಿ ಮಾರಿದ ವಿಷಯ ಹೇಳಿದ ಮೇಲೆ ಹೆಂಡತಿ ಮೋಸಹೋದ ವಿಚಾರ ಗೊತ್ತಾಯಿತು. ಇದೇ ಮೋಸಗಾರ ನನ್ನಿಂದ ಕರಡಿಯ ಕಿವಿ ಹಿಡಿಸಿ ಓಡಿ ಹೋದವನೆಂದೂ ಅಂದಾಜಾಯಿತು. ಆತನನ್ನು ಹೇಗಾದರೂ ಮಾಡಿ ಪತ್ತೆಹಚ್ಚಿ ಕೊಂದೇಬಿಡಬೇಕೆಂದು ವ್ಯಾಪಾರಿ ಬಗೆದ.

ಇತ್ತ ಪಕ್ಕದೂರಿಗೆ ಹೋದ ರಂಗ ಆ ರಾತ್ರಿ ಒಂದು ಅಡುಗೂಲಜ್ಜಿಯ ಮನೆಯಲ್ಲಿ ತಂಗಿದ. ಬೆಳಗಾತ ಆ ಊರಿನ ಸ್ಥಿತಿಗತಿಯನ್ನೆಲ್ಲಾ ತಿಳಿದುಕೊಂಡ. ಆ ಊರಿನ ಜಮೀನ್ದಾರನಲ್ಲಿ ಹೋಗಿ ತನಗೊಂದು ಮನೆ ಕಟ್ಟಿಕೊಟ್ಟು ಉಳುಮೆಗೊಂದು ತುಂಡು ಜಮೀನು ಕೊಡಬೇಕೆಂದು ಕೇಳಿಕೊಂಡ. ರಂಗನ ಮಾತಿಗೆ ಒಪ್ಪಿ ಜಮೀನ್ದಾರ ಆತನಿಗೆ ಒಂದು ಚಿಕ್ಕ ಮನೆ ಕಟ್ಟಿ ಕೊಟ್ಟು ಬೇಸಾಯ ಮಾಡಲೆಂದು ಸ್ವಲ್ಪ ಜಮೀನನ್ನು ಬಿಟ್ಟುಕೊಟ್ಟ. ನಂತರ ರಂಗ ಒಂದು ಹೆಣ್ಣು ನೋಡಿ ಮದ್ವೆಯಾದ.

ವರ್ಷ ಒಂದೆರಡು ಕಳೆದು ಹೋಯಿತು. ವ್ಯಾಪಾರಿ ರಂಗನಿಗಾಗಿ ಹುಡುಕುತ್ತಲೇ ಇದ್ದ. ಒಂದು ಸಲ ಆತ ರಂಗ ಇರುವ ಸ್ಥಳವನ್ನು ಯಾರ ಮೂಲಕವೋ ಪತ್ತೆಹಚ್ಚಿ ಬಿಟ್ಟ. ಆತನನ್ನು ಹುಡುಕಿ ಆತನಿಂದ ತನ್ನ ಹಣವನ್ನು ವಸೂಲಿ ಮಾಡಿಬಿಡಬೇಕೆಂದು ಬಗೆದ. ತನ್ನ ಸ್ನೇಹಿತ ವ್ಯಾಪಾರಿಯೊಬ್ಬನನ್ನು ಕೂಡಿಕೊಂಡು ರಂಗನನ್ನು ಹುಡುಕುತ್ತಾ ಹಳ್ಳಿಗೆ ಬಂದ.

ರಂಗ ತನ್ನ ಮನೆಯಲ್ಲಿ ಎರಡು ಮೊಲಗಳನ್ನು ಸಾಕುತ್ತಿದ್ದ. ಅವು ಎರಡು ಕೂಡ ನೋಡಲು ಬಣ್ಣದಲ್ಲಿ ಹಾಗೂ ರೂಪದಲ್ಲಿ ಒಂದೇ ರೀತಿ ಇದ್ದುವು. ಮೊಲಗಳಿಗೆ ಹುಲ್ಲು ತಿನ್ನಿಸುತ್ತಾ ಇರುವಾಗ ರಸ್ತೆಯ ಮೇಲೆ ದೂರದಲ್ಲಿ ಇಬ್ಬರು ವ್ಯಕ್ತಿಗಳು ಆತನ ಮನೆ ಕಡೆ ಬರುವುದು ರಂಗನಿಗೆ ಕಂಡಿತು. ದಿಟ್ಟಿಸಿ ನೋಡಿದಾಗ ಅವರಲ್ಲೊಬ್ಬ ತನ್ನಿಂದ ಮೋಸ ಹೋದ ವ್ಯಾಪಾರಿ ಎಂಬ ಗುರುತು ಸಿಕ್ಕಿತು. ಕೂಡಲೇ ಹೆಂಡತಿಯನ್ನು ಕರೆದು "ನೋಡು ಇಬ್ಬರು ನೆಂಟರು ನಮ್ಮಲ್ಲಿಗೆ ಬರುತ್ತಾ ಇದ್ದಾರೆ. ನೀನು ಊಟಕ್ಕೆ ತಯಾರು ಮಾಡು. ಹೆಸ್ರು ಬೇಳೆ ಪಾಯಸ, ಸೌತೆಕಾಯಿ ಸಾಂಬಾರು, ಅಲಸಂಡೆ ಪಲ್ಯ ಮಾಡು. ಸ್ನಾನಕ್ಕೆ ಅವರಿಗೆ ಬಿಸಿ ನೀರು ಕಾಯಿಸು. ನಾನು ಒಂದು ಮೊಲವನ್ನೆತ್ತಿಕೊಂಡು ಹಿಂದಿನ ಗುಡ್ಡೆಗೆ ಹೋಗುತ್ತೇನೆ. ನನ್ನನ್ನು ಕೇಳಿದರೆ ಅವರು ಪ್ರಾಣಿಗಳಿಗೆ ಬುದ್ಧಿ ಕಲಿಸಲು ಹಿಂದಿನ ಗುಡ್ಡೆಗೆ ಹೋಗಿದ್ದಾರೆ ಎಂದು ಹೇಳು" ಎಂದು ಹೇಳಿ ಒಂದು ಮೊಲವನ್ನೆತ್ತಿಕೊಂಡು ರಂಗ ಹಿಂಬದಿಯ ಗುಡ್ಡೆಯ ಕಡೆಗೆ ಓಡಿದ.

ರಂಗ ಹೋಗುವಷ್ಟರಲ್ಲಿ ರಂಗನ ಮನೆಗೆ ವ್ಯಾಪಾರಿಗಳು ಬಂದರು. ಬಂದವರನ್ನು ಒಳಗೆ ಕುಳ್ಳಿರಿಸಿ ರಂಗನ ಹೆಂಡತಿ ಬಾಯಾರಿಕೆ ಕೊಟ್ಟಳು. ದಾಹತೀರಿಸಿದ ನಂತರ "ಎಲ್ಲಿ ರಂಗ?" ಎಂದು ಕೇಳಿದರು. "ಹೋ ಅವರಿಗೀಗ ಪ್ರಾಣಿಗಳಿಗೆ ಬುದ್ಧಿ ಕಲಿಸುವ ಕೆಲಸ. ಹಿಂಬದಿಯ ಗುಡ್ಡೆಗೆ ಹೋಗಿದ್ದಾರೆ. ಈಗ ಬಂದು ಬಿಡುತ್ತಾರೆ" ಎಂದಳು. "ಇಲ್ಲ ಇಲ್ಲ ನಮಗೆ ಕಾಯಲು ಪುರುಸೋತ್ತಿಲ್ಲ, ನಾವೇ ಗುಡ್ಡೆಗೆ ಹೋಗಿ ನೋಡುತ್ತೇವೆ" ಎಂದು ಹಿಂಬದಿಯ ಗುಡ್ಡೆಗೆ ಹೊರಟರು.

ಗುಡ್ಡೆಯಲ್ಲಿ ಮೊಲ ಹಿಡಿದುಕೊಂಡು ಕುಳಿತ ರಂಗನನ್ನು ನೋಡಿ "ಎಲ್ಲಿ ನನ್ನ ಮನೆಯ ಪಾತ್ರೆ ಎಲ್ಲಾ ಮೋಸ ಮಾಡಿ ಹಿಡಿದುಕೊಂಡು ಬಂದಿದ್ದಿಯಲ್ಲಾ. ಐದು ಸಾವಿರ ರೂಪಾಯಿ ಕೊಡು. ಇಲ್ಲದಿದ್ದರೆ ನಿನ್ನನ್ನು ಬಿಡುವುದಿಲ್ಲ" ಎಂದ ವ್ಯಾಪಾರಿ.

"ಹೋ ಈಗ ನಿಮ್ಮ ಗುರುತು ಸಿಕ್ಕಿತು. ಆಗ ನನಗೆ ಹಣದ ಅನಿವಾರ್ಯತೆ ಇತ್ತು. ನಿಮಗೆ ಮೋಸ ಮಾಡಿಬಿಟ್ಟೆ. ಈಗ ನಾನು ಶ್ರೀಮಂತನಾಗಿದ್ದೇನೆ. ಬನ್ನಿ ಮನೆಗೆ ಹೋಗೋಣ. ಊಟ ಮಾಡಿ ಮಾತನಾಡೋಣ" ಎಂದು ರಂಗ ಬಂದವರನ್ನು ಸಮಾಧಾನಪಡಿಸಿದ. ತನ್ನ ಮೊಲದೊಡನೆ "ಮೊಲವೇ ನೀನು ಮನೆಗೆ ಹೋಗು ಅಮ್ಮನಲ್ಲಿ ಹೇಳು ಊಟ ತಯಾರು ಮಾಡಲಿ, ಸೌತೆಕಾಯಿ ಸಾಂಬಾರು ಅಲಸಂಡೆ ಪಲ್ಯ ಮಾಡಲಿ. ಜೊತೆಗೆ ಹೆಸ್ರುಬೇಳೆ ಪಾಯಸ ಕೂಡ ಮಾಡಿ ಸ್ನಾನಕ್ಕೆ ನೀರು ಕಾಯಿಸಿಡಲಿ" ಎಂದು ಹೇಳಿ ಹಿಡಿದುಕೊಂಡಿದ್ದ ಮೊಲವನ್ನು ರಂಗ ಕೈಯಿಂದ ಬಿಟ್ಟ. ಮೊಲ ಗುಡ್ಡೆಯಲ್ಲಿ ಓಡಿ ಹೋಯಿತು.

ಮೂವರೂ ಮನೆಗೆ ಬಂದರು. ಅವರು ಮನೆಗೆ ಬರುವ ಹೊತ್ತಿಗೆ ಇನ್ನೊಂದು ಮೊಲದ ಗೂಡನ್ನು ತಂದು ರಂಗನ ಹೆಂಡತಿ ಜಗಲಿಯಲ್ಲಿಟ್ಟಿದ್ದಳು. ಜಗಲಿಯಲ್ಲಿ ಮೊಲವನ್ನು ನೋಡಿ ವ್ಯಾಪಾರಿಗಳಿಗೆ ಆಶ್ಚರ್ಯವಾಯಿತು. ಮೂವರು ಮನೆಯೊಳಗೆ ಬಂದ ಕೂಡಲೇ "ಹೋಗಿ ಸ್ನಾನ ಮಾಡಿಕೊಂಡು ಬನ್ನಿ" ಎಂದು ಇಬ್ಬರನ್ನೂ ಬಚ್ಚಲ ಮನೆಗೆ ಕಳುಹಿಸಿದಳು. ಅವರು ಸ್ನಾನ ಮಾಡಿ ಬರುವಷ್ಟರಲ್ಲಿ ಗಂಡ-ಹೆಂಡತಿ ಮುಂದಿನ ಸಂಗತಿಯನ್ನು ಮಾತಾಡಿಕೊಂಡರು.

ಎಲ್ಲರೂ ಊಟಕ್ಕೆ ಕುಳಿತರು. ಊಟ ಮಾಡುವಾಗ ಸೌತೆಕಾಯಿ ಸಾಂಬಾರು, ಅಲಸಂಡೆ ಪಲ್ಯ, ಹೆಸ್ರುಬೇಳೆ ಪಾಯಸ ಕಂಡು ವ್ಯಾಪಾರಿಗಳಿಗೆ ಸೋಜಿಗವಾಯಿತು. ಇದನ್ನೆಲ್ಲ ಮಾಡಬೇಕೆಂದು ನಿಮಗೆ ಹೇಗೆ ಗೊತ್ತಾಯಿತೆಂದು ವ್ಯಾಪಾರಿಗಳು ರಂಗನ ಹೆಂಡತಿಯೊಡನೆ ಕೇಳಿದರು. ಅದಕ್ಕವಳು "ಅದೆಲ್ಲ ಮೊಲ ಬಂದು ನನ್ನಲ್ಲಿ ಹೇಳಿದೆ. ಮೊಲ ಹೇಳಿದಂತೆ ನಾನು ತಯಾರು ಮಾಡಿಟ್ಟಿದ್ದೇನೆ" ಎಂದಳು. ರಂಗನಂತೂ ಊಟ ಮುಗಿಯುವವರೆಗೂ ಮೊಲವನ್ನು ಹೊಗಳಿದ್ದೇ ಹೊಗಳಿದ್ದು.

ಊಟವಾದ ಬಳಿಕ ಎಲೆ ಅಡಿಕೆ ತಿನ್ನುತ್ತಾ ವ್ಯಾಪಾರಿ ರಂಗನಲ್ಲಿ ಹೇಳಿದ. "ರಂಗಾ ನೀನು ಈ ಮೊಲವನ್ನು ನನಗೆ ಕೊಡಬೇಕು. ನೀನು ನನಗೆ ಕೊಡಬೇಕಾದ ಹಣದಲ್ಲಿ ಅರ್ಧಾಂಶ ಬಿಟ್ಟು ಬಿಡುತ್ತೇನೆ" ಎಂದ. ರಂಗ ಒಪ್ಪಲೇ ಇಲ್ಲ. "ಅಯ್ಯೋ ಆ ಮೊಲ ವೆಂದರೆ ನನ್ನ ಜೀವ. ನನ್ನ ಜಮೀನೆಲ್ಲ ನೋಡಿಕೊಳ್ಳುವುದು ಇದೇ ಮೊಲ. ನಾನು ಹೊರಗೆ ಹೋದಾಗ ನನ್ನ ಹೆಂಡತಿಗೆ ಸಂಗಾತಿ ಈ ಮೊಲ. ಕೊಡಲಾರೆನಪ್ಪ, ನಿಮ್ಮ ಹಣ ಬೇಕಾದರೆ ಕೊಟ್ಟುಬಿಡುತ್ತೇನೆ" ಎಂದ. ವ್ಯಾಪಾರಿ ಪಟ್ಟು ಬಿಡಲಿಲ್ಲ. ಅವನು ಕೊಡಬೇಕಾದ ಪೂರ್ತಿ ಹಣ ಮಾಫಿ ಮಾಡಿ ಮೊಲವನ್ನು ಪಡೆದುಕೊಂಡ. ರಂಗ ಕಣ್ಣೀರಿಡುತ್ತಾ ಮೊಲವನ್ನು ವ್ಯಾಪಾರಿಯ ಕೈಗೆ ಕೊಟ್ಟ. ಅದನ್ನೆತ್ತಿಕೊಂಡು ಇಬ್ಬರೂ ರಂಗನಲ್ಲಿಂದ ಹೊರಟುಹೋದರು.

ವ್ಯಾಪಾರಿಗಳು ತಮ್ಮ ಮನೆಯ ಹತ್ತಿರ ಮುಟ್ಟುವಾಗ ಮೊಲವನ್ನು ಪರೀಕ್ಷೆ ಮಾಡಬೇಕೆಂಬ ಮನಸ್ಸಾಯಿತು. ಮೊಲದೊಡನೆ "ನೀನು ಮನೆಗೆ ಹೋಗಿ ನನ್ನ

ಹೆಂಡತಿಯಲ್ಲಿ ಹೇಳು. ನಾವಿಬ್ಬರೂ ಬರುತ್ತಿದ್ದೇವೆ. ಊಟಕ್ಕೆ ಕೋಳಿ ರೊಟ್ಟಿ ತಯಾರು ಮಾಡಿಡಲಿ" ಎಂದು ಹೇಳಿ ಮೊಲವನ್ನು ಬಿಟ್ಟು ಬಿಟ್ಟ. ಮೊಲ ಗುಡ್ಡೆಯ ಕಡೆಗೆ ಓಡಿ ಹೋಯಿತು.

ಮನೆಗೆ ಮುಟ್ಟಿದೊಡನೆ ವ್ಯಾಪಾರಿ ಹೆಂಡತಿಯನ್ನು ಕರೆದು "ಮೊಲ ಬಂದಿಲ್ವೇ?" ಎಂದು ಕೇಳಿದ. "ಯಾವ ಮೊಲಾರೀ ಏನು ಹೇಳುತ್ತೀರಿ ನೀವು?" ಎಂದು ಕೇಳಿದಳು ಹೆಂಡತಿ. "ನಿನಗೆ ಮೋಸ ಮಾಡಿ ಪಾತ್ರೆ ಎಲ್ಲಾ ಹೊತ್ತುಕೊಂಡು ಹೋದ ರಂಗ ಸಿಕ್ಕಿದ. ಅವನಲ್ಲಿ ಹಣ ವಸೂಲಿ ಮಾಡಿ ಬರುವ ಬದಲು ಮಾತನಾಡುವ ಮೊಲವೊಂದನ್ನು ತಂದಿದ್ದೆ. ಇಲ್ಲೇ ಮನೆಯಿಂದ ಸ್ವಲ್ಪ ದೂರದಲ್ಲಿ ಮನೆಯ ದಾರಿ ಹೇಳಿ ಮೊಲವನ್ನು ಬಿಟ್ಟೆ. ಅದೀಗ ಇಲ್ಲಿಗೇ ಬಂದಿರಬಹುದೆಂದು ಭಾವಿಸಿದೆ" ಎಂದು ಮೊಲದ ಬಗ್ಗೆ ಹೇಳಿದಾಗ ಆತನ ಹೆಂಡತಿ ಜೋರಾದಳು. "ನಾನು ಆತನಿಂದ ಪಾತ್ರೆ ಪಡೆದುಕೊಂಡದ್ದಕ್ಕೆ ನೀವು ನನ್ನ ಮೇಲೆ ಎಷ್ಟು ರೇಗಾಡಿದಿರಿ? ಈಗ ನೀವೇ ಆತನ ಮಾತಿಗೆ ಸೋತಿರಲ್ಲ. ಮೊಲ ಎಲ್ಲಾದರೂ ಮಾತನಾಡುವುದನ್ನು ನೀವು ಕೇಳಿದ್ದೀರಾ?" ಎಂದು ಹಂಗಿಸಿದಳು. "ಒಟ್ಟಿನಲ್ಲಿ ನಾವಿಬ್ಬರೂ ಆತನಿಗೆ ಮೋಸ ಹೋದೆವು. ಇನ್ನೊಂದು ಸಲ ಹೋಗಿ ಹಣ ವಸೂಲಿ ಮಾಡಿಕೊಂಡೇ ಬರಬೇಕು" ಎಂದು ಹೇಳಿ ವ್ಯಾಪಾರಿಗಳು ಊಟ ಮಾಡಲು ಕುಳಿತುಕೊಂಡರು.

ಮರುದಿನ ಮತ್ತೆ ವ್ಯಾಪಾರಿಗಳು ರಂಗನನ್ನು ಹುಡುಕಿಕೊಂಡು ರಂಗನ ಮನೆಗೆ ಬಂದರು. ಮರುದಿನ ಅವರು ಬಂದೇ ಬರುತ್ತಾರೆಂದು ರಂಗ ಅಂದಾಜು ಮಾಡಿದ್ದ. ಆತ ಹೆಂಡತಿಯನ್ನು ಕರೆದು "ಈ ದಿನ ಖಂಡಿತ ವ್ಯಾಪಾರಿಗಳು ಹಣ ವಸೂಲಿಗೆ ಇಲ್ಲಿಗೆ ಬಂದೇ ಬರುತ್ತಾರೆ. ಅವರು ಬಂದೊಡನೆ ಊಟಕ್ಕೆಬ್ಬಿಸಿ ಊಟ ಮಾಡಿಸುವ. ಊಟವಾದ ನಂತರ ನಾನು ಅಡಿಕೆ-ವೀಳ್ಯದ ತಟ್ಟೆ ತರಲು ನಿನ್ನಲ್ಲಿ ಹೇಳುತ್ತೇನೆ. ಆಗ ನೀನು ಬೇಕಾದರೆ ಹುಡುಕಿಕೊಳ್ಳಿ ಎಂದು ಹೇಳಬೇಕು. ನಾನು ಸಿಟ್ಟು ಬಂದಂತೆ ನಟಿಸಿ ನಿನಗೆ ಬೆತ್ತದಲ್ಲಿ ಒಂದು ಹೊಡೆಯುತ್ತೇನೆ. ನೀನು ನೆಲದ ಮೇಲೆ ಡಬ್ಬ ಬಿದ್ದು ಪ್ರಾಣ ಹೋದಂತೆ ನಟಿಸಬೇಕು. ಆಮೇಲೆ ಅದೇ ಬೆತ್ತದಿಂದ ನಿನ್ನನ್ನು ತಲೆಯಿಂದ ಕಾಲಿನವರೆಗೆ ಪೂಸುತ್ತೇನೆ, ಆಗ ನೀನು ಮತ್ತೆ ಪ್ರಾಣ ಬಂದವಳಂತೆ ಎದ್ದು ನಿಲ್ಲಬೇಕು" ಎಂದು ಹೇಳಿಕೊಟ್ಟು ಒಂದು ನಾಗರಬೆತ್ತ ತಂದು ಮನೆಯ ಮಾಡಿನಲ್ಲಿ ತುರುಕಿಸಿಟ್ಟ.

ಹೊತ್ತು ನಡುನೆತ್ತಿಗೇರುವಾಗ ವ್ಯಾಪಾರಿಗಳು ಬಂದು ರಂಗನ ಮನೆ ಮೆಟ್ಟಲೇರಿದರು. ಬಂದವರನ್ನು ಆತ್ಮೀಯವಾಗಿ ಬರಮಾಡಿಕೊಂಡ ರಂಗ ಕುಳ್ಳಿರಿಸಿ ಬಾಯಾರಿಕೆ ಕೊಟ್ಟು ಸತ್ಕಾರ ಮಾಡಿದ. ಬಾಯಾರಿಕೆ ಕುಡಿದ ಬಳಿಕ ವ್ಯಾಪಾರಿಗಳು "ನೀನು ನಮಗೆ ಬಹಳ ದೊಡ್ಡ ಮೋಸ ಮಾಡಿದ್ದಿ. ಮೊಲ ಮಾತನಾಡುತ್ತದೆಂದು ಸುಳ್ಳು ಹೇಳಿ ನಮ್ಮನ್ನು ನಂಬಿಸಿ ಕಳುಹಿಸಿಕೊಟ್ಟೆ. ನಮ್ಮ ಹಣವನ್ನು ವಸೂಲಿ ಮಾಡಲು

ಬಂದಿದ್ದೇವೆ. ಬೇಗನೆ ಹಣಲೆಕ್ಕ ಮಾಡಿಕೊಡು. ನಾವು ಹೋಗಿಬಿಡುತ್ತೇವೆ" ಎಂದರು. ರಂಗ ಬಹಳ ಸಮಾಧಾನದಿಂದ "ನೀವು ತಪ್ಪು ಮಾಡಿದಿರಿ. ಮನೆ ಸೇರುವ ಮೊದಲೇ ಮೊಲವನ್ನು ಕೈಯಿಂದ ಬಿಟ್ಟಿರಿ. ಮನೆಗೆ ಹೋಗಿ ಎರಡು ದಿನವಾದರೂ ಕಳೆಯಬೇಕಿತ್ತು. ಅದು ಪಾಪ ಗುರುತು ಪರಿಚಯ ಇಲ್ಲದವರೊಡನೆ ಹೇಗೆ ಮಾತನಾಡುತ್ತದೆ? ಹೋಗಲಿ ಬಿಡಿ. ಈಗ ಊಟಕ್ಕೇಳಿ. ಊಟ ಮಾಡಿ ನಂತರ ಹಣದ ವಿಷಯ ಮಾತನಾಡುವ. ನಾನು ಹಣ ಕೊಡುತ್ತೇನೆ. ಈಗೇನೂ ನನಗೆ ಹಣದ ತೊಂದರೆ ಇಲ್ಲ" ಎಂದು ಸಂತೈಸಿ ಊಟಕ್ಕೆ ಎಬ್ಬಿಸಿದ.

ಮೂವರೂ ಊಟವಾದ ಮೇಲೆ ವೀಳ್ಯಹಾಕಲು ಚಾಪೆ ಮೇಲೆ ಜಗಲಿಯಲ್ಲಿ ಕುಳಿತುಕೊಂಡರು. ರಂಗ ಹೆಂಡತಿಯನ್ನು ಕರೆದು ವೀಳ್ಯದೆಲೆ ತಟ್ಟೆ ತರುವಂತೆ ಹೇಳಿದ. ಆಕೆ "ನಿಮಗೇನು ಹೋಗಿ ಹುಡುಕಿಕೊಂಡು ಬರಲು ಸಂಕಟ. ನನ್ನಿಂದಾಗದು" ಎಂದು ಒರಟಾಗಿ ಉತ್ತರಿಸಿದಳು. ಕೂಡಲೇ ರಂಗ ಎದ್ದು ಮಾಡಿನಿಂದ ಒಂದು ನಾಗರಬೆತ್ತ ತೆಗೆದು ಹೆಂಡತಿಗೆ ಒಂದು ಹೊಡೆದ. ಇನ್ನೊಂದು ಹೊಡೆದ. ಎರಡೇ ಪೆಟ್ಟಿನಲ್ಲಿ ಆಕೆ ಕೆಳಗೆ ಬಿದ್ದು ಹೆಣದಂತೆ ಮಲಗಿ ಬಿಟ್ಟಳು.

ಅದನ್ನು ಕಂಡ ವ್ಯಾಪಾರಿಗಳು ಗಾಬರಿಗೊಂಡರು. "ಏನು ಮಾರಾಯ ಒಂದು ಸಣ್ಣ ಕಾರಣಕ್ಕಾಗಿ ಹೆಂಡತಿಯನ್ನು ಕೊಂದೇಬಿಟ್ಟೆಯಲ್ಲಾ" ಎಂದು ರಂಗನನ್ನು ಬೈದರು. ರಂಗ "ಗಾಬರಿಗೊಳ್ಳದೆ ನೀವು ಭಯಪಡಬೇಡಿ. ಈಗ ಅವಳನ್ನು ಬದುಕಿಸುತ್ತೇನೆ" ಎಂದು ಹೇಳಿ ಬೆತ್ತ ತೆಗೆದು ತಲೆಯಿಂದ ಕಾಲಿನವರೆಗೆ ಪೂಸಿದ. ಆಗ ಬಿದ್ದವಳು ಎದ್ದು ಕುಳಿತಳು. ವ್ಯಾಪಾರಿಗಳಿಗೆ ಆಶ್ಚರ್ಯವಾಯಿತು. ಅವರು "ಇಷ್ಟರವರೆಗೆ ನೀನು ಮಾಡಿದ ತಪ್ಪನ್ನೆಲ್ಲ ನಾವು ಕ್ಷಮಿಸಿಬಿಟ್ಟಿದ್ದೇವೆ. ನೀನು ಕೊಡಬೇಕಾದ ಹಣವನ್ನೂ ಉದಾರವಾಗಿ ಬಿಟ್ಟಿದ್ದೇವೆ. ನೀನು ಮಾತ್ರ ಆ ಬೆತ್ತವನ್ನು ನಮಗೆ ಕೊಡಬೇಕು" ಎಂದರು. ರಂಗ ಮೊದಲು ಕೊಡಲು ಮನಸ್ಸಿಲ್ಲದವನಂತೆ ನಟಿಸಿ ಕೊನೆಗೆ "ಏನು ಮಾಡುವುದು ನಾನು ತುಂಬಾ ತಪ್ಪು ಮಾಡಿಬಿಟ್ಟಿದ್ದೇನೆ. ನೀವು ತೆಗೆದುಕೊಂಡು ಹೋಗಿ" ಎಂದು ಬೆತ್ತವನ್ನು ಅವರ ಕೈಗೆಕೊಟ್ಟು ಕಳುಹಿಸಿಕೊಟ್ಟನು.

ಬೆತ್ತವನ್ನು ಪಡೆದು ತಮ್ಮ ಮನೆಕಡೆ ಹಿಂತಿರುಗಿದ ವ್ಯಾಪಾರಿಗಳು ಒಂದೊಂದು ದಿನ ಒಬ್ಬೊಬ್ಬರು ಬೆತ್ತದ ಪರೀಕ್ಷೆ ನಡೆಸುವುದಾಗಿ ಮಾತನಾಡಿಕೊಂಡರು. ಮೊದಲ ವ್ಯಾಪಾರಿ ಆ ದಿನ ಮಧ್ಯಾಹ್ನ ಊಟ ಮಾಡಿ ಹೆಂಡತಿಯನ್ನು ಕರೆದು ಅಡಿಕೆ ವೀಳ್ಯ ತರುವಂತೆ ಹೇಳಿದ. ಆಕೆ ಸಿಟ್ಟಿನಲ್ಲಿ "ಇದು ಎಲ್ಲಿಂದ ಬಂತು ನಿಮಗೆ ವೀಳ್ಯ ಹಾಕುವ ಅಭ್ಯಾಸ? ನೀವೇನು ಅಡಿಕೆ ವೀಳ್ಯ ತಂದಿಟ್ಟಿದ್ದೀರಾ?" ಎಂದು ಕೇಳಿದಳು. ವ್ಯಾಪಾರಿ ಬೆತ್ತ ತೆಗೆದು ಹೆಂಡತಿಗೆ ಸಾಯುವವರೆಗೆ ಹೊಡೆದು ಬೀಳಿಸಿದ. ಅವಳು ಸತ್ತೇ ಹೋದಳು. ಇನ್ನು ಬೆತ್ತದಿಂದ ಪೂಸಿ ಬದುಕಿಸುವ ಎಂದು "ಎದ್ದು ಬಾ ಎದ್ದು ಬಾ" ಎನ್ನುತ್ತಾ ಹತ್ತು ಸಲ ತಲೆಯಿಂದ ಕಾಲಿನವರೆಗೆ ಪೂಸಿದ. ಆಕೆ ಎದ್ದು ಬರಲಿಲ್ಲ.

ನಿಜವಾಗಿಯೂ ಸತ್ತೇ ಹೋಗಿದ್ದಳು. ರಂಗನಿಗೆ ಶಾಪ ಹಾಕುತ್ತಾ ಆತ ಹೆಂಡತಿಯ ಶವ ಸಂಸ್ಕಾರಕ್ಕೆ ಅಟ್ಟಣೆ ನಡೆಸಿದ.

ಹೀಗೆ ಕೆಲವು ದಿನ ಕಳೆದ ಮೇಲೆ ಆ ವ್ಯಾಪಾರಿಗೆ ಆತನ ಸ್ನೇಹಿತ ವ್ಯಾಪಾರಿ ಒಂದು ಸಲ ದಾರಿಯಲ್ಲಿ ಸಿಕ್ಕಿದ. ಆತನಿಗೆ ಬೆತ್ತದ ಮಹಿಮೆಯ ಬಗ್ಗೆ ತಿಳಿದುಕೊಳ್ಳಲು ಕುತೂಹಲ. "ಏನಣ್ಣಾ ನೀನು ಬೆತ್ತವನ್ನು ನನಗೊಮ್ಮೆ ಕೊಡಲೇ ಇಲ್ಲ" ಎಂದ. ಅದಕ್ಕೆ ಆ ವ್ಯಾಪಾರಿ ನಡೆದ ಸತ್ಯ ಸಂಗತಿಯನ್ನು ಮುಚ್ಚಿಟ್ಟು "ಹಾಂ ಹಾಂ ಮರೆತೇ ಬಿಟ್ಟಿದೆ. ಇವತ್ತೇ ನಿನಗೆ ತಂದುಕೊಡುತ್ತೇನೆ" ಎಂದ. ನನ್ನ ಹೆಂಡತಿ ಸತ್ತು ಹೋಗಿದ್ದಾಳೆ. ಇನ್ನು ಇವನ ಹೆಂಡತಿಯನ್ನೇಕೆ ಉಳಿಸಬೇಕು ಎಂದು ಮನಸ್ಸಿನೊಳಗೆ ಆಲೋಚನೆ ಮಾಡಿ ಆತನಿಗೆ ಬೆತ್ತ ಕಳುಹಿಸಿಕೊಟ್ಟ. ಬೆತ್ತವನ್ನು ಪಡೆದು ವ್ಯಾಪಾರಿಯ ಗೆಳೆಯ ತಾನೂ ಕೂಡ ತನ್ನ ಸ್ನೇಹಿತನಂತೆ ಹೆಂಡತಿಯನ್ನು ಹೊಡೆದು ಕೊಂದೇ ಬಿಟ್ಟ.

ಮರುದಿನ ತನ್ನ ಸ್ನೇಹಿತನನ್ನು ಚೆನ್ನಾಗಿ ಬೈಯ್ಯಬೇಕೆಂದು ಆಲೋಚನೆ ಮಾಡಿ ಸ್ನೇಹಿತ ವ್ಯಾಪಾರಿಯ ಮನೆಗೆ ಬಂದು "ಎಲ್ಲಿ ನಿನ್ನ ಹೆಂಡತಿ?" ಎಂದು ಕೇಳಿದ. "ಹೋ ಆಕೆ ನಾನು ಬರುವಾಗ ತವರಿಗೆ ಹೋಗಿದ್ದಾಳೆ. ಇನ್ನೂ ಆಕೆ ಬಂದಿಲ್ಲ. ನಿನ್ನ ಹೆಂಡತಿಗೆ ಹೊಡೆದು ಪರೀಕ್ಷೆ ಮಾಡಿ ನೋಡಿದೆಯಾ?" ಎಂದು ಕೇಳಿದ. ವ್ಯಾಪಾರಿ ಹೇಳಿದ ಮಾತನ್ನು ಸತ್ಯವೆಂದು ನಂಬಿದ ಗೆಳೆಯ ಆತನೊಡನೆ ತನ್ನ ಹೆಂಡತಿ ಸತ್ತು ಹೋದ ಕತೆಯನ್ನು ಗೆಳೆಯನಿಗೆ ಹೇಳಿ "ರಂಗನನ್ನು ಈ ಸಲ ಹೋಗಿ ಕೊಂದೇ ಬರಬೇಕು. ನಾಳೇನೇ ಆತನಲ್ಲಿಗೆ ಹೋಗುವ" ಎಂದು ಇಬ್ಬರು ಮರುದಿನ ರಂಗನ ಮನೆಗೆ ಹೋಗಿ ಆತನನ್ನು ಕೊಂದು ಬರಲು ನಿರ್ಧರಿಸಿದರು.

ತಮ್ಮ ಹೆಂಡತಿಯರನ್ನು ಕೊಂದು ಮತ್ತೆ ತನ್ನಲ್ಲಿಗೆ ಬಂದೇ ಬರುತ್ತಾರೆ ಎಂಬುದಾಗಿ ರಂಗ ಗ್ರಹಿಸಿಕೊಂಡಿದ್ದ. ಹೆಂಡತಿಯನ್ನು ಕರೆದು ಅವರು ಇಂದು ನಾಳೆ ಬಂದೇ ಬರುತ್ತಾರೆ. ನಾನು ಜಗಲಿಯಲ್ಲಿ ಬಿಳಿಬಟ್ಟೆ ಮುಸುಕು ಹಾಕಿ ಸತ್ತಂತೆ ಮಲಗುತ್ತೇನೆ. ನೀನು ಇಂದು ಬೆಳಗ್ಗೆ ನನ್ನ ಗಂಡ ಸತ್ತು ಹೋದರೆಂದು ಹೇಳುತ್ತಾ ನನ್ನ ಕಾಲಬುಡದಲ್ಲಿ ಕುಳಿತು ಜೋರಾಗಿ ಅಳುತ್ತಿರಬೇಕು. ಅವರು ಅಷ್ಟಕ್ಕೆ ನಂಬಲಾರರು. ಹೆಣ ಸುಡಲು ತಯಾರಿ ನಡೆಸಬಹುದು. ಆಗ ನೀನು ಅವರನ್ನು ತಡೆದು ಅವರು ಸಾಯುವ ಮೊದಲು ತನ್ನ ಹೆಣವನ್ನು ಸಮುದ್ರಕ್ಕೆ ಬಿಸಾಡಬೇಕೆಂದು ಹೇಳಿದ್ದಾರೆ. ನೀವು ಹಾಗೆ ಮಾಡಿದರೆ ಅವರಿಗೆ ಮುಕ್ತಿ ಸಿಗುತ್ತದೆ ಎಂದವರಲ್ಲಿ ಹೇಳು ಎಂದು ಮೊದಲೇ ಚಾಪೆ ಹಾಸಿ ದೀಪ, ಬಿಳಿಬಟ್ಟೆ ಊದುಬತ್ತಿ ಎಲ್ಲಾ ತಯಾರುಮಾಡಿ ಇಟ್ಟುಕೊಂಡ.

ದಿನನಿತ್ಯ ಆತ ಎದ್ದು ಜಗಲಿಯಲ್ಲಿ ಕುಳಿತು ಅವರು ಬರುವ ದಾರಿಯನ್ನೇ ಕಾಯುತ್ತಿದ್ದ. ಒಂದು ದಿನ ಅವರು ದೂರದಿಂದ ಬರುವುದು ಕಂಡಿತು. ಹೆಂಡತಿಯನ್ನು ಕರೆದು, ತಾನು ಚಾಪೆಯಲ್ಲಿ ಮಲಗಿ ಬಿಳಿಬಟ್ಟೆ ಮುಸುಕು ಹಾಕಿಕೊಂಡ. ಹೆಂಡತಿ ದೀಪ, ಊದುಬತ್ತಿ ಎಲ್ಲ ಹಚ್ಚಿಟ್ಟು ಗೋಳೋ ಎಂದು ಅಳತೊಡಗಿದಳು. ಬಂದವರು

ಮೆಟ್ಟಿಲೇರಿ ರಂಗ ಹೆಣವಾಗಿ ಮಲಗಿರುವುದು ನೋಡಿದರು. "ಯಾಕೆ ಏನಾಯಿತು? ಯಾಕೆ ಅಳುತ್ತಿದ್ದೀಯ" ಎಂದು ಆತನ ಹೆಂಡತಿಯನ್ನು ಕೇಳಿದರು. ಆಕೆ ಬಿಕ್ಕಿ ಬಿಕ್ಕಿ ಅಳುತ್ತಾ "ಇವತ್ತು ಬೆಳಗ್ಗೆ ಎದೆನೋವು ಜೋರಾಗಿ ಪಟ್ಟಂತ ಪ್ರಾಣಬಿಟ್ಟರು" ಎಂದಳು. "ಮಾಡಿದ ಪಾಪಕ್ಕೆ ಸರಿಯಾದ ಶಿಕ್ಷೆಯಾಗಿದೆ" ಎಂದು ಭಾವಿಸಿಕೊಂಡ ವ್ಯಾಪಾರಿಗಳಿಗೆ ಇವನು ಸತ್ತಿರುವ ಬಗ್ಗೆ ನಂಬಿಕೆ ಬರಲಿಲ್ಲ. "ಸತ್ತು ಹೋದ ಮೇಲೆ ಇನ್ನು ಅತ್ತು ಪ್ರಯೋಜನವಿಲ್ಲ. ಹೇಗೂ ನಾವು ಇಬ್ಬರಿದ್ದೇವೆ. ಅವನ ಹೆಣವನ್ನು ಸುಟ್ಟೇ ಹೋಗುತ್ತೇವೆ" ಎಂದರು. "ಇಲ್ಲ-ಇಲ್ಲ ಅವರು ಸಾಯುವಾಗ ನನ್ನನ್ನು ಸುಡಲೂ ಬಾರದು. ಹೂಳಲೂ ಬಾರದು. ನನ್ನ ಹೆಣ ಕಡಲ ಮೀನುಗಳಿಗೆ ಆಹಾರವಾಗಬೇಕು. ಅದಕ್ಕಾಗಿ ನನ್ನನ್ನು ಕಡಲಿಗೆ ಎಸೆದು ಬಿಡಬೇಕೆಂದು ಹೇಳಿ ಪ್ರಾಣ ಬಿಟ್ಟಿದ್ದಾರೆ" ಎಂದಳು. "ಹಾಗೋ ಸಮಾಚಾರ ಹಾಗಾದರೆ ಹಾಗೆ ಮಾಡುವ ಒಂದು ದೊಡ್ಡ ಗೋಣಿಚೀಲ ತಂದು ಅದರೊಳಗೆ ತುಂಬಿಸಿ ಹೆಣವನ್ನು ನಾವೇ ಕಡಲ ಬದಿಗೆ ಹೊತ್ತುಕೊಂಡು ಹೋಗುತ್ತೇವೆ" ಎಂದರು. ರಂಗನ ಹೆಂಡತಿ ಮೊದಲೇ ತಯಾರಿಸಿಟ್ಟ ಒಂದಾಳು ಗಾತ್ರದ ಗೋಣಿ ಚೀಲ ತಂದುಕೊಟ್ಟಳು. ಇಬ್ಬರೂ ಸೇರಿ ರಂಗನನ್ನು ಅದರಲ್ಲಿ ತುಂಬಿಸಿ ಚೀಲದ ಬಾಯನ್ನು ಗಟ್ಟಿಯಾಗಿ ಬಿಗಿದರು. ಆತನನ್ನು ಹೊತ್ತು ಕೊಂಡು ಕಡಲ ಬದಿಗೆ ನಡೆದರು. ಕಡಲಬದಿಗೆ ಮುಟ್ಟುವಾಗ ವ್ಯಾಪಾರಿಗೆ ಅವನ ಗೆಳೆಯ ಹೇಳಿದ "ನಾವೀಗ ಹೀಗೇನೇ ಗೋಣಿಚೀಲ ಕಡಲಿಗೆ ಬಿಸಾಡಿದರೆ ಅದು ತೇಲಿಕೊಂಡು ಬದಿಗೆ ಬರುತ್ತದೆ. ಆತ ಸತ್ತಿಲ್ಲವೆಂದಾದರೆ ಮತ್ತೆ ಯಾರಾದರೂ ಅವನನ್ನು ಬದುಕಿಸುತ್ತಾರೆ. ಗೋಣಿ ಚೀಲಕ್ಕೆ ಒಂದು ದೊಡ್ಡ ಕಲ್ಲು ಕಟ್ಟಿ ಕಡಲಿಗೆ ಎಸೆದು ಬಿಡುವ. ಅವನ ಹೆಣ ಕೂಡ ಯಾರಿಗೂ ಸಿಗುವುದಿಲ್ಲ" ಎಂದ. ಇಬ್ಬರಿಗೂ ಅದು ಸರಿ ಎಂದು ಕಂಡಿತು. ಗೋಣಿಚೀಲವನ್ನು ದಾರಿ ಪಕ್ಕದಲ್ಲಿಟ್ಟು ಕಲ್ಲು ಹುಡುಕಿ ಕೊಂಡು ಬರಲು ಇಬ್ಬರೂ ಹೋದರು.

ಅವರು ಕಲ್ಲು ತರಲು ಹೋಗುವಾಗ ಅಲ್ಲೇ ದನಗಳನ್ನು ಮೇಯಿಸುತ್ತಿದ್ದ ಯುವಕನೊಬ್ಬ ಇದ್ಯಾಕೆ ಗೋಣಿಚೀಲ ಇಟ್ಟು ಹೋಗಿದ್ದಾರೆ ಎಂದು ನೋಡಲು ಚೀಲದ ಹತ್ತಿರ ಬಂದ. ಅವನು ಬರುವಾಗ ಚೀಲದೊಳಗಿನಿಂದ ರಂಗ "ನನಗೆ ಮದ್ವೆ ಬೇಡಾ... ನನಗೆ ಮದ್ವೆಬೇಡ..." ಎಂದು ಒಂದೇ ಸವನೆ ಕಿರುಚತೊಡಗಿದ. ಇದ್ಯಾಕೆ ಮನುಷ್ಯನನ್ನು ಗೋಣಿ ಚೀಲದಲ್ಲಿ ತುಂಬಿಸಿಟ್ಟಿದ್ದಾರೆ ವಿಚಾರಿಸೋಣವೆಂದು ಯುವಕ ಗೋಣಿ ಚೀಲದ ಬಾಯಿಗೆ ಕಟ್ಟಿದ ಗಂಟು ಬಿಚ್ಚಿದ. ಗೋಣಿ ಚೀಲದಿಂದ ಹೊರಬಂದ ರಂಗ "ಈ ಊರಿನ ರಾಜಕುಮಾರಿಗೆ ಮದ್ವೆ ಮಾಡಿಸಲು ಬಲತ್ಕಾರವಾಗಿ ನನ್ನನ್ನು ಚೀಲದಲ್ಲಿ ತುಂಬಿಸಿ ಕೊಂಡೊಯ್ಯುತ್ತಿದ್ದಾರೆ. ನನಗೆ ಹೆಂಡತಿ ಮಕ್ಕಳಿದ್ದಾರೆ ನನ್ಗೆ ಮದ್ವೆ ಬೇಡ. ನೀನು ರಾಜಕುಮಾರಿಯನ್ನು ಮದ್ವೆಯಾಗುವಿಯಾದರೆ ಗೋಣಿ ಯೊಳಗೆ ಕುಳಿತುಕೋ" ಎಂದ. ದನಕಾಯುವ ಹುಡುಗನಿಗೆ ರಾಜ ಕುಮಾರಿ ಹೆಂಡತಿ

ಯಾಗಿ ಸಿಗುತ್ತಾಳೆ ಎನ್ನುವಾಗ ಆಸೆಯಾಯಿತು. "ನಿನಗೆ ರಾಜಕುಮಾರಿ ಬೇಡವೆಂದಾದರೆ ನಾನು ಮದ್ವೆಯಾಗುತ್ತೇನೆ" ಎಂದ. ಕೂಡಲೇ ರಂಗ ಆತನನ್ನು ಚೀಲದೊಳಗೆ ತುಂಬಿಸಿ ಮೊದಲಿನಂತೆ ಚೀಲದ ಬಾಯಿಕಟ್ಟಿ ದೂರದಲ್ಲಿ ಹೋಗಿ ಪೊದರಿನಡ್ಡ ಅಡಗಿ ಕುಳಿತುಕೊಂಡ. ವ್ಯಾಪಾರಿಗಳು ಕಲ್ಲು ತಂದು ಗೋಣಿಚೀಲಕ್ಕೆ ಕಟ್ಟಿದರು. ಇಬ್ಬರೂ ಚೀಲವನ್ನೆತ್ತಿಕ್ಕೊಂಡು ಹೋಗಿ ಸಮುದ್ರಕ್ಕೆ ಬಿಸಾಡಿ "ಮಾರಿ ಹೋಯಿತು" ಎಂದು ತಮ್ಮ ಊರಿಗೆ ಹೊರಟು ಹೋದರು. ಯುವಕನು ಮೇಯಿಸುತ್ತಿದ್ದ ದನಗಳನ್ನಟ್ಟಿ ಕೊಂಡು ರಂಗ ಬೇರೆ ದಾರಿಯಾಗಿ ತನ್ನ ಮನೆ ಸೇರಿದ.

ಹೀಗೆ ಹಲವು ದಿನಗಳು ಕಳೆದುವು. ವ್ಯಾಪಾರಿಗಳು ಮತ್ತೊಮ್ಮೆ ಒಟ್ಟು ಸೇರಿದಾಗ ರಂಗನ ಬಗ್ಗೆ ಮಾತನಾಡಿಕೊಂಡರು. "ರಂಗ ಸತ್ತು ಹೋದ. ಆದರೆ ನಮಗೆ ನಷ್ಟವೇ ಹೊರತು ಲಾಭವಾಗಲಿಲ್ಲ. ಈಗ ಹೋಗಿ ಅವನ ಹೆಂಡತಿಯಲ್ಲಿ ಹಣ ವಸೂಲಿ ಮಾಡಿಕೊಂಡು ಬರುವುದು ಸುಲಭ. ಒಮ್ಮೆ ಹೋಗಿ ಪ್ರಯತ್ನಿಸುವ" ಎಂದು ವ್ಯಾಪಾರಿ ಸ್ನೇಹಿತನಿಗೆ ಹೇಳಿದ. ಸ್ನೇಹಿತನೂ ಅದಕ್ಕೆ ಒಪ್ಪಿಕೊಂಡ. ಮರುದಿನ ಇಬ್ಬರೂ ಬೆಳಗ್ಗೆ ಎದ್ದು ರಂಗನ ಮನೆಗೆ ಹೊರಟರು.

ವ್ಯಾಪಾರಿಗಳು ರಂಗನ ಮನೆಯ ಹತ್ತಿರಬಂದಾಗ ರಂಗ ಮನೆಯ ಎದುರಿನ ಹುಲ್ಲುಗಾವಲಿನಲ್ಲಿ ದನಗಳನ್ನು ಮೇಯಿಸುತ್ತಿದ್ದುದನ್ನು ಕಂಡು ಆಶ್ಚರ್ಯಪಟ್ಟರು. ಅವರು ರಂಗನನ್ನು ಕರೆದು "ಹೇ ನೀನು ಸತ್ತವ ಹೇಗೆ ಬದುಕಿ ಬಂದೆ?" ಎಂದು ಕೇಳಿದರು. "ಹೋ ಅದು ದೊಡ್ಡ ಸಂಗತಿ ನೀವು ನನ್ನನ್ನು ಚೀಲದಲ್ಲಿ ತುಂಬಿ ಕಲ್ಲುಕಟ್ಟಿ ಸಮುದ್ರಕ್ಕೆ ಎಸೆದಿರಲ್ಲಾ; ಚೀಲ ನೇರವಾಗಿ ಪಾತಾಳಕ್ಕೆ ಹೋಯಿತು. ಅಲ್ಲಿದ್ದ ಜನ ಚೀಲದ ಬಾಯಿ ಬಿಚ್ಚಿಸಿದರು. ಪಾತಾಳದ ಒಡೆಯ ನಾಗರಾಜ ನನಗೆ ಜೀವದಾನ ಮಾಡಿ ಬದುಕಿಸಿದ. ಅಲ್ಲಿ ನನ್ನ ತಂದೆ, ತಾಯಿಯರನ್ನೆಲ್ಲಾ ಕಂಡು ಮಾತನಾಡಿದೆ. ನನ್ನ ತಂದೆ ತಾಯಿ ಮಾತ್ರವಲ್ಲ. ನಿಮ್ಮ ಹೆಂಡತಿಯರು ಕೂಡ ಮಾತನಾಡಲು ಸಿಕ್ಕಿದರು. ಅಲ್ಲಿ ಕೆಲವು ದಿವಸ ಇದ್ದು ಹೊರಟು ಬರುವಾಗ ಚಿನ್ನ, ಬೆಳ್ಳಿ ಗೋವುಗಳನ್ನು ನನ್ನೊಂದಿಗೆ ಕಳಿಸಿಕೊಟ್ಟರು. ಅದೇ ಗೋವುಗಳನ್ನು ನಾನಿಲ್ಲಿ ಮೇಯಿಸುತ್ತಿದ್ದೇನೆ. ನಿಮ್ಮ ಹೆಂಡತಿಯರು ನಿಮ್ಮನ್ನು ತುಂಬಾ ನೆನಪಿಸಿಕೊಂಡರು. ನಿಮ್ಮನ್ನು ಕಂಡು ಬೆಳ್ಳಿ ಬಂಗಾರ ಕೊಟ್ಟು ಕಳುಹಿಸಲು ಕಾದು ಕುಳಿತಿದ್ದಾರೆ" ಎಂದ

ಬೆಳ್ಳಿ, ಬಂಗಾರ ಎಂದಾಗ ವ್ಯಾಪಾರಿಗಳಿಗೆ ಪಡೆಯುವ ಆಸೆ ಜೋರಾಯಿತು. ರಂಗನನ್ನು ನಾವೇ ಕಲ್ಲು ಕಟ್ಟಿ ಕಡಲಿಗೆಸೆದಿದ್ದೇವೆ. ಆತ ಈಗ ಜೀವಂತ ಬಂದಿದ್ದಾನೆ ಎಂದರೆ ಆತ ಹೇಳಿದ್ದು ಸತ್ಯವೇ ಆಗಿರಬೇಕೆಂದು ರಂಗನ ಮಾತನ್ನು ನಂಬಿದರು. ನಮಗೂ ಕೂಡ ಪಾತಾಳಕ್ಕೆ ಹೋಗಿ ನಮ್ಮ ಹಿರಿಯರನ್ನು ಹೆಂಡತಿಯರನ್ನು ನೋಡಲು ಆಸೆಯಾಗಿದೆ. ನಮ್ಮನ್ನು ಪಾತಾಳಕ್ಕೆ ಕಳುಹಿಸಿಕೊಡುವ ಏರ್ಪಾಡನ್ನು ದಯವಿಟ್ಟು ಮಾಡು ಎಂದು ರಂಗನೊಡನೆ ಕೇಳಿಕೊಂಡರು.

"ಅದಕ್ಕೇನೂ ಕಷ್ಟವಿಲ್ಲ. ನೀವು ನನ್ನನ್ನು ಮಾಡಿದಂತೆ ನಾನೂ ನಿಮ್ಮನ್ನು ಗೋಣಿ ಚೀಲದಲ್ಲಿ ಕಟ್ಟಿ ಸಮುದ್ರಕ್ಕೆ ಬಿಸಾಡುತ್ತೇನೆ" ಎಂದ ರಂಗ. ಮನೆಗೆ ಹೋಗಿ ಎರಡು ದೊಡ್ಡ ಗೋಣಿಚೀಲಗಳ ಹಗ್ಗವನ್ನೂ ಹಿಡಿದುಕೊಂಡು ಬಂದ. ವ್ಯಾಪಾರಿಗಳನ್ನು ಕರೆದುಕೊಂಡು ಸಮುದ್ರದ ಬದಿಗೆ ಹೋದ. ಒಬ್ಬೊಬ್ಬರನ್ನು ಒಂದೊಂದು ಚೀಲದಲ್ಲಿ ತುಂಬಿಸಿ ಗಟ್ಟಿಯಾಗಿ ಬಿಗಿದ. ಗೋಣಿಚೀಲಗಳಿಗೆ ಒಂದೊಂದು ಕಲ್ಲನ್ನು ಕೂಡ ಕಟ್ಟಿದ. ಒಂದೊಂದನ್ನೇ ಎತ್ತಿ ಸಮುದ್ರದಲ್ಲಿ ದೂರದವರೆಗೆ ಕೊಂಡೊಯ್ದು ಎಸೆದು ಬಿಟ್ಟ. "ತನಗಿನ್ನು ತೊಂದರೆ ಕೊಡುವವರು ಯಾರೂ ಇಲ್ಲ"ವೆಂದು ಸಂತೋಷದಿಂದ ಮನೆಗೆ ಬಂದ. ಹೆಂಡತಿಯೊಡನೆ ಸುಖವಾಗಿ ಜೀವನ ನಡೆಸುತ್ತಿದ್ದ.

ಟಿಪ್ಪಣಿ

೧. ಸುಬಗ – ಪ್ರಾಮಾಣಿಕ



೧೫

ದಾಳಿಂಬೆ ಕುಮಾರ

ಒಂದು ಊರಲ್ಲಿ ಒಬ್ಬ ಅರಸನಿದ್ದ. ಅರಸನಿಗೊಬ್ಬ ಪ್ರಧಾನಿ. ಬಹುಕಾಲದಿಂದ ಅವರಿಬ್ಬರಿಗೂ ಮಕ್ಕಳಾಗಲಿಲ್ಲ. ಇದ್ದ ದೈವ ದೇವರಿಗೆಲ್ಲ ಹರಕೆ ಹೇಳಿದರು. ತೀರ್ಥಕ್ಷೇತ್ರಗಳನ್ನೆಲ್ಲ ಸಂದರ್ಶಿಸಿದರು. ಆದರೂ ಪ್ರಯೋಜನವಿಲ್ಲ. ಕೊನೆಗೊಮ್ಮೆ ಒಬ್ಬ ಹೆಸರಾಂತ ಜೋಯಿಸರನ್ನು ಕರೆದು "ನಮಗೆ ಮಕ್ಕಳಾಗುವ ಯೋಗವಿದೆಯೇ? ಎಂದು ಕರೆದು ಕೇಳಿದರು. ಜೋಯಿಸರು ಬಂದು ಕವಡೆ ಇಟ್ಟು ನೋಡಿದಾಗ ಇಬ್ಬರಿಗೂ ಮಕ್ಕಳಾಗುವ ಯೋಗ ಕಂಡುಬಂತು. ಅರಸನಿಗೆ ಬಹಳ ಸಂತೋಷ ವಾಯಿತು. ಪ್ರಧಾನಿಯನ್ನು ಕರೆದು "ನಿನ್ನ ಪತ್ನಿಗೆ ಹೆಣ್ಣು ಮಗುವಾಗಿ ನನಗೆ ಗಂಡು ಮಗುವಾದರೆ ನನ್ನ ಮಗನಿಗೆ ನಿನ್ನ ಮಗಳನ್ನು ಮದ್ವೆಮಾಡಿಕೊಡಬೇಕು. ನನಗೆ ಹೆಣ್ಣು ಮಗುವಾಗಿ ನಿನಗೆ ಗಂಡು ಮಗುವಾದರೆ ನನ್ನ ಮಗಳನ್ನು ನಿನ್ನ ಮಗನಿಗೆ ಕೊಟ್ಟು ಆತನನ್ನು ಈ ರಾಜ್ಯದ ಮುಂದಿನ ರಾಜನನ್ನಾಗಿ ಮಾಡುತ್ತೇನೆ" ಎಂದು ಮಾತು ಕೊಟ್ಟ. ತನಗೆ ಗಂಡು ಮಗುವಾದರೆ ಆತ ಈ ರಾಜ್ಯದ ಮುಂದಿನ ರಾಜನಾಗುತ್ತಾನೆ ಎಂಬ ಕಲ್ಪನೆಯಿಂದಲೇ ಮಂತ್ರಿ ಉಬ್ಬಿ ಹೋದ. ಹೇಗಾದರೂ ಮಾಡಿ ನನಗೂ ರಾಜನಿಗೂ ಮಕ್ಕಳಾಗುವ ಪ್ರಯತ್ನ ನಡೆಸಬೇಕೆಂದು ಆಲೋಚಿಸಿದ.

ಮಂತ್ರಿ ರಾಜನಿಗೆ ತಿಳಿಸದೇನೇ ಕಾಶಿಗೆ ಹೋದ. ಗಂಗಾನದಿಯಲ್ಲಿ ಸ್ನಾನಮಾಡಿ ವಿಶ್ವನಾಥ ದೇವರ ದರ್ಶನ ಮಾಡಿದ. ಫಲಪುಷ್ಪಗಳನ್ನು ಸಮರ್ಪಿಸಿ ಪೂಜೆ ಮಾಡಿದ. ಅರ್ಚಕರ ಮೂಲಕ ತನಗೂ ತನ್ನ ರಾಜನಿಗೂ ಮಕ್ಕಳಾಗುವಂತೆ ಪ್ರಾರ್ಥನೆ ಸಲ್ಲಿಸಿದ. ಅರ್ಚಕರು ದೇವರಲ್ಲಿ ಪ್ರಾರ್ಥಿಸಿ ದೇವರ ಸನ್ನಿಧಿಯಿಂದ ಒಂದು ದಾಳಿಂಬೆ ಹಣ್ಣು ತೆಗೆದುಕೊಟ್ಟು ಇದನ್ನು ನಿಮ್ಮ ಪತ್ನಿ ಹಾಗೂ ಮಹಾರಾಜರ ಪತ್ನಿ ಹಂಚಿ ತಿನ್ನಲಿ. ಅವರಿಬ್ಬರೂ ಖಂಡಿತ ಗರ್ಭಿಣಿಯರಾಗುತ್ತಾರೆ ಎಂದು ಹರಸಿ ಪ್ರಧಾನಿಯನ್ನು ಕಳುಹಿಸಿಕೊಟ್ಟರು.

ದಾಳಿಂಬೆ ಹಣ್ಣನ್ನು ಬಹಳ ಜಾಗ್ರತೆಯಿಂದ ಮನೆಗೆ ತಂದು ಪ್ರಧಾನಿ ತನ್ನ ಪತ್ನಿಯನ್ನು ಕರೆದು ಆಕೆಯ ಕೈಯಲ್ಲಿ ಹಣ್ಣನ್ನು ಕೊಟ್ಟು "ಇದು ಕಾಶಿ ವಿಶ್ವನಾಥನ ಅನುಗ್ರಹದಿಂದ ಪಡೆದ ಫಲ. ಇದನ್ನು ಬಹಳ ಭಕ್ತಿಯಿಂದ ಸೇವನೆ ಮಾಡಿದವರು

ಗರ್ಭಿಣಿಯಾಗುತ್ತಾರೆ. ಈ ಫಲ ಸೇವನೆಗೆ ಜೋಯಿಸರಲ್ಲಿ ಒಳ್ಳೆ ಮುಹೂರ್ತ ನೋಡಿ ಅರಮನೆಗೂ ಹೋಗಿ ಹೇಳಿಬರುತ್ತೇನೆ. ಅಲ್ಲಿ ಮಹಾರಾಣಿಯೊಡನೆ ಕೂಡಿ ಸೇವಿಸಬೇಕು" ಎಂದು ಹೇಳಿ ಜೋಯಿಸರಲ್ಲಿಗೆ ಹೊರಟು ಹೋದ.

ಜೋಯಿಸರಲ್ಲಿಗೆ ಹೋದ ಪ್ರಧಾನಿ ಸಂಜೆಯವರೆಗೂ ಬರಲಿಲ್ಲ. ಪ್ರಧಾನಿಯ ಮಡದಿಗೆ ದಾಳಿಂಬೆ ತಿನ್ನುವ ಆತುರ ಹೆಚ್ಚಾಯಿತು. "ಇನ್ನು ನಾಳೆಯವರೆಗೆ ಈ ಹಣ್ಣನ್ನಿಟ್ಟರೆ ಅದು ಕೊಳೆತು ಹೋಗಬಹುದು. ಫಲ ಸಿಗದೇ ಹೋಗಬಹುದು. ಒಂದು ವೇಳೆ ತನ್ನ ಗಂಡ ಬಂದುಬಿಟ್ಟರೆ ಅದರ ಅರ್ಧ ಭಾಗ ರಾಣಿಗೂ ಕೊಡಲು ಹೇಳುತ್ತಾನೆ. ಅರ್ಧರ್ಧ ಫಲ ತಿಂದು ಇಬ್ಬರಿಗೂ ಮಕ್ಕಳಾಗದೆ ಹೋಗಬಹುದು. ಪ್ರಧಾನಿ ಬರುವ ಮೊದಲೇ ಹಣ್ಣು ತಿಂದುಬಿಟ್ಟರೆ ಮತ್ತೆ ಆತ ಏನೂ ಮಾಡುವಂತಿಲ್ಲ" ಎಂದು ಆಲೋಚಿಸಿ ಗಂಡ ತನ್ನ ಕೈಯಲ್ಲಿ ಕೊಟ್ಟ ದಾಳಿಂಬೆಯ ಸಿಪ್ಪೆ ಸುಲಿದು ಎಲ್ಲಾ ಬೀಜಗಳನ್ನು ಆಕೆ ತಿಂದು ಮುಗಿಸಿದಳು. ತಾನು ಹಣ್ಣು ತಿಂದಿದ್ದೇನೆ ಎಂಬುದಕ್ಕೆ ಸಾಕ್ಷಿ ಹೇಳಲು ಸಿಪ್ಪೆಯನ್ನು ಬಿಸಾಡದೆ ತೆಗೆದಿಟ್ಟಳು.

ಸಂಜೆಯ ಹೊತ್ತಿಗೆ ಪ್ರಧಾನಿ ಮನೆಗೆ ಬಂದು ಹೆಂಡತಿಯನ್ನು ಕರೆದು "ಎಲ್ಲಿ ಆ ದಾಳಿಂಬೆ ಹಣ್ಣು ಅದನ್ನು ಹಿಡಿದುಕೊಂಡು ನಾವಿಬ್ಬರೂ ಅರಮನೆಗೆ ಹೋಗಬೇಕು" ಎಂದ. ಪ್ರಧಾನಿಯ ಮಾತು ಕೇಳಿ ಆತನ ಮಡದಿ ತಬ್ಬಿಬ್ಬಾದಳು. ಅದು ನನಗೆಂದು ತಂದ ಫಲವಲ್ಲವೇ? ಅದನ್ನು ನಾನು ತಿಂದು ಬಿಟ್ಟಿದ್ದೇನೆ ಎಂದಳು. ವಿಷಯ ತಿಳಿದು ಪ್ರಧಾನಿಗೆ ಬಹಳ ಬೇಸರವಾಯಿತು. ತನ್ನ ಬೇಸರವನ್ನು ತಡೆದುಕೊಂಡು ಪ್ರಧಾನಿ "ಎಲ್ಲಿ ನೀನು ತಿಂದದ್ದಕ್ಕೆ ಸಾಕ್ಷಿ?" ಎಂದು ಕೇಳಿದ. ಪತ್ನಿ ತೆಗೆದಿಟ್ಟ ಸಿಪ್ಪೆಯನ್ನು ತಂದು ಆತನ ಕೈಗೆ ಕೊಟ್ಟಳು.

ಆ ಸಿಪ್ಪೆಯನ್ನು ಜಾಗ್ರತೆಯಾಗಿ ಕೈಯಲ್ಲಿಟ್ಟುಕೊಂಡು ಪ್ರಧಾನಿ ಅರಮನೆಗೆ ಹೋದ. ಅಲ್ಲಿ ರಾಜರಾಣಿಯರನ್ನು ಭೇಟಿಯಾಗಿ ತಾನು ಕಾಶಿಗೆ ಹೋಗಿ ವಿಶ್ವನಾಥನ ಸಂದರ್ಶನ ಪಡೆದು ಫಲವಂತಿಕೆಯ ವರಪ್ರಸಾದವಾಗಿ ತಂದ ದಾಳಿಂಬೆ ಹಣ್ಣಿನ ಸಂಗತಿ ಹೇಳಿದ. "ನಾನು ನನ್ನ ಪತ್ನಿ ಮತ್ತು ಮಹಾರಾಣಿಯವರಿಗೆ ಹಣ್ಣನ್ನು ಸಮಾನವಾಗಿ ಹಂಚಿಕೊಡ ಬೇಕೆಂದು ಭಾವಿಸಿದೆ. ಹಣ್ಣಿನ ಮಹತ್ವ ತಿಳಿಯದ ನನ್ನ ಮಡದಿ ನಾನು ಹೊರಗೆ ಹೋಗಿ ಬರುವಷ್ಟರಲ್ಲಿ ಹಣ್ಣನ್ನು ತಿಂದು ಮುಗಿಸಿದ್ದಾಳೆ. ಅದರ ಸಿಪ್ಪೆ ಮಾತ್ರ ನನ್ನ ಕೈಯಲ್ಲಿದೆ. ದಯವಿಟ್ಟು ಇದನ್ನು ಸ್ವೀಕರಿಸಿ ಮಹಾರಾಣಿಯವರು ತಿನ್ನಬೇಕು ಎಂದು ಪ್ರಧಾನಿ ತನ್ನಿಂದಾದ ತಪ್ಪಿಗೆ ಕ್ಷಮೆಕೊಡಿ" ಎಂದು ಹೇಳಿ ಹಣ್ಣಿನ ಸಿಪ್ಪೆಯನ್ನು ಮಹಾರಾಣಿಯ ಕೈಗಿತ್ತ. ಮಹಾರಾಣಿ ಬೇಸರಪಡಲಿಲ್ಲ. "ದೇವರ ಪ್ರಸಾದ ಹಣ್ಣಾ ದರೇನು? ಸಿಪ್ಪೆಯಾದರೇನು? ಎರಡೂ ಒಂದೇ ಅದನ್ನು ನಾನು ಗರ್ಭಧಾರಣೆಗೆ ಮದ್ದಿನ ರೂಪದಲ್ಲಿ ಸೇವಿಸುತ್ತೇನೆ" ಎಂದು ಬಹಳ ಭಕ್ತಿಯಿಂದ ಸಿಪ್ಪೆಯನ್ನೆಲ್ಲ ಜಗಿದು ನುಂಗಿ ಹಾಲು ಕುಡಿದಳು.

ರಾಣಿ ಮತ್ತು ಪ್ರಧಾನಿಯ ಮಡದಿ ಇಬ್ಬರೂ ಗರ್ಭಿಣಿಯಾದರು. ಕೆಲವು ತಿಂಗಳ ನಂತರ ಇಬ್ಬರೂ ಹೆತ್ತರು. ಮಂತ್ರಿಯ ಪತ್ನಿ ಹೆಣ್ಣು ಮಗುವನ್ನು ಹೆತ್ತಳು. ಮಗು ದಾಳಿಂಬೆ ಬೀಜದಂತೆ ಕೆಂಪುಕೆಂಪಾಗಿ ಬಹಳ ಚಂದವಾಗಿತ್ತು. ರಾಣಿ ಗಂಡು ಮಗುವಿಗೆ ಜನ್ಮಕೊಟ್ಟಳು. ಆದರೆ ಆ ಮಗುವಿನ ಮೈಯೆಲ್ಲಾ ದಾಳಿಂಬೆ ಸಿಪ್ಪೆಯ ಚಿಪ್ಪು ಆವರಿಸಿ ಕೊಂಡಿತ್ತು. ತಲೆ ಮತ್ತು ಕೈ ಕಾಲು ಮಾತ್ರ ಹೊರಗೆ ಕಾಣುತ್ತಿತ್ತು. ನೋಡುವವರಿಗೆ ಆ ಮಗು ಆಮೆ ಮರಿಯಂತೆ ಕಾಣುತ್ತಿತ್ತು.

ವರ್ಷಗಳು ಕಳೆದವು ಮಂತ್ರಿಯ ಮಗಳು ಬೆಳೆದು ದೊಡ್ಡವಳಾದಳು. ರಾಜಕುಮಾರನು ಕೂಡ ಎತ್ತರೆತ್ತರಕ್ಕೆ ಬೆಳೆಯುತ್ತಿದ್ದ. ರಾಜನು ಒಂದು ದಿನ ಪ್ರಧಾನಿಯನ್ನು ಕರೆದು "ನನ್ನ ಮಗನಿಗೆ ನಿನ್ನ ಮಗಳನ್ನು ಕೊಟ್ಟು ಮದ್ವೆ ಮಾಡಬೇಕು ಎಂದ. ಮಂತ್ರಿಗೆ ತನ್ನ ಸುಂದರಿ ಮಗಳನ್ನು ದಾಳಿಂಬೆ ಕುಮಾರನಿಗೆ ಕೊಟ್ಟು ಮದ್ವೆ ಮಾಡಿಸಲು ಇಷ್ಟವಿರಲಿಲ್ಲ." ಎಲ್ಲದಕ್ಕೂ ಮಗಳ ಒಪ್ಪಿಗೆ ಕೇಳಬೇಕು ಎಂದು ತನ್ನ ಮನೆಗೆ ಹೋದ. ಮದ್ವೆಯಿಂದ ತಪ್ಪಿಸಲು ಏನಾದರೂ ಉಪಾಯ ಮಾಡೋಣವೆಂದು ಬಗೆದು ಮಂತ್ರಿಯ ಮಗಳು ರಾಜಕುಮಾರ ತನಗೆ ಅತ್ತಿಯ ಹೂ ತಂದು ಕೊಟ್ಟರೆ ನಾನವನನ್ನು ಮದ್ವೆಯಾಗುತ್ತೇನೆ ಎಂದಳು.

ದಾಳಿಂಬೆ ಕುಮಾರ ಅತ್ತಿಯ ಹೂ ಹುಡುಕಿಕೊಂಡು ಮನೆಯಿಂದ ಹೊರಟ. ಬಹಳ ದೂರ ನಡೆದುಹೋದ ಮೇಲೆ ಆತನಿಗೆ ಅಲ್ಲೊಬ್ಬ ಮಾಯಾವಿ ಮಂತ್ರವಾದಿಯ ಗುಡಿಸಲು ಸಿಕ್ಕಿತು. ಆತನಿಗೆ ವಂದಿಸಿ ರಾಜಕುಮಾರ "ಅತ್ತಿ ಹೂ ಎಲ್ಲಿ ಸಿಗುತ್ತದೆ ಹೇಳಿ" ಎಂದ. ಅದಕ್ಕೆ ಆ ಮಂತ್ರವಾದಿ "ಇಲ್ಲಿಂದ ಹತ್ತು ಹರದಾರಿ ದಕ್ಷಿಣಕ್ಕೆ ಹೋದರೆ ಅಲ್ಲಿ ನನ್ನ ಗುರುಗಳ ಆಶ್ರಮವಿದೆ. ಅವರಿಗೆ ಅತ್ತಿ ಹೂವಿನ ವಿಚಾರ ಗೊತ್ತಿರಬಹುದು. ನೀನು ಅವರಲ್ಲಿ ಹೋಗಿ ಕೇಳು" ಎಂದ.

ರಾಜಕುಮಾರ ಅಲ್ಲಿಂದ ಮುಂದುವರಿದ. ಹತ್ತು ಹರದಾರಿ ಮುಂದುವರಿದಾಗ ಅಲ್ಲೊಂದು ಗುಡಿಸಲು ಕಂಡಿತು. ಆ ಗುಡಿಸಲಿನೊಳಗೊಬ್ಬ ಮಾಯಾವಿ ಕುಳಿತು ಹೋಮ ಮಾಡುತ್ತಿದ್ದ. ರಾಜಕುಮಾರ ಆತನ ಬಳಿಗೆ ಹೋಗಿ "ನಿಮ್ಮ ಶಿಷ್ಯ ನನ್ನನ್ನಿಲ್ಲಿ ಕಳುಹಿಸಿದ್ದಾರೆ. ನನಗೆ ಅತ್ತಿ ಹೂ ಎಲ್ಲಿ ಸಿಗುತ್ತದೆ ಎಂಬ ವಿಚಾರ ತಿಳಿಸಿಕೊಡಬೇಕು" ಎಂದ. ಆತನಿಗೆ ಆ ಮಾಯಾವಿ ಗುರು ಅತ್ತಿ ಹೂ ಪಡೆಯುವ ಉಪಾಯವನ್ನು ಹೇಳಿಕೊಟ್ಟ. ಮಾಯಾವಿ ಗುರುವಿಗೆ ನಮಸ್ಕರಿಸಿ ಆತ ಹೇಳಿದ ದಾರಿಯಲ್ಲಿ ರಾಜಕುಮಾರ ಮುಂದುವರಿದ. ಮುಂದೆ ಹತ್ತು ಹರದಾರಿ ಹೋದಾಗ ರಾಜಕುಮಾರನಿಗೊಂದು ಅರಳಿ ಮರ ಕಂಡಿತು. ಆ ಅರಳಿಮರದ ಬುಡದಲ್ಲಿ ಒಂದು ಕೆರೆ ಇತ್ತು. ಆ ಕೆರೆಯಲ್ಲಿ ಸಿರಿಕನ್ಯೆಯರು(ಯಕ್ಷಿ) ಜಲಕ್ರೀಡೆಯಾಡುತ್ತಿದ್ದರು. ಮಾಯಾವಿ ಗುರು ಹೇಳಿಕೊಟ್ಟಂತೆ ರಾಜಕುಮಾರ ಅರಳಿ ಕಟ್ಟೆಯ ಮೇಲೆ ಸಿರಿ ಕನ್ಯೆಯರಿಟ್ಟಿದ್ದ ಒಂದು ಸೀರೆಯನ್ನು ತೆಗೆದು ಹಿಡಿದುಕೊಂಡು ಮೆಲ್ಲಗೆ ಮರವನ್ನೇರಿ ಕುಳಿತ.

ಸಿರಿಕನ್ಯೆಯರು ಸ್ನಾನ ಮುಗಿಸಿ ಅರಳಿ ಮರದ ಬುಡಕ್ಕೆ ಬಂದು ಅವರವರ ಸೀರೆಗಳನ್ನೆತ್ತಿ ಉಟ್ಟುಕೊಂಡರು. ಒಬ್ಬಾಕೆಯ ಸೀರೆ ಕಾಣೆಯಾಗಿತ್ತು. ಆಕೆ ಮರದ ಮೇಲಿರುವ ರಾಜಕುಮಾರನನ್ನು ನೋಡಿ ತನ್ನ ಸೀರೆ ಕೊಡುವಂತೆ ಕೇಳಿದಳು. ತನಗೆ ಅತ್ತಿ ಹೂ ತರಿಸಿಕೊಟ್ಟರೆ ಸೀರೆ ಕೊಡುವುದಾಗಿ ರಾಜಕುಮಾರ ಹೇಳಿದ. "ಅತ್ತಿ ಹೂವಿನ ತೋಟ ಸಿರಿಲೋಕದಲ್ಲಿದೆ. ಅಲ್ಲಿಗೆ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ. ನೀನು ಬೇಕಾದ ಹೂ ಕೊಯ್ದುಕೊಳ್ಳಬಹುದು" ಎಂದು ಸಿರಿಕನ್ಯೆ ರಾಜಕುಮಾರನಿಗೆ ಮಾತು ಕೊಟ್ಟಳು. ರಾಜಕುಮಾರ ಮರದಿಂದಳಿದು ಆಕೆಯ ಸೀರೆಕೊಟ್ಟ, ಆಕೆಯನ್ನು ಹಿಂಬಾಲಿಸಿಕೊಂಡು ಸಿರಿಲೋಕಕ್ಕೆ ಹೋದ.

ರಾಜಕುಮಾರನನ್ನು ಸಿರಿಲೋಕಕ್ಕೆ ಕರೆದುಕೊಂಡು ಹೋದ ಸಿರಿಕನ್ಯೆ ಆತನಿಗೆ ಒಂದು ಬುಟ್ಟಿ ಅತ್ತಿ ಹೂ ತಂದು ಕೊಟ್ಟಳು. "ಇನ್ನು ನೀನು ಊಟ ಎಲ್ಲಾ ಮುಗಿಸಿ ಕೊಂಡು ನಿನ್ನೂರಿಗೆ ಹೋಗು. ನಿನ್ನನ್ನು ಕೆರೆಯ ಪಕ್ಕದವರೆಗೆ ನಾನು ಬಿಟ್ಟು ಬರುತ್ತೇನೆ" ಎಂದಳು. ರಾಜಕುಮಾರ ತನ್ನರಮನೆಗೆ ಬರಲು ದೇವಕನ್ಯೆಯನ್ನು ಒತ್ತಾಯಿಸಿದ. ಅದಕ್ಕವಳು "ಇಲ್ಲ ನಾವು ಮನುಷ್ಯರೊಂದಿಗೆ ಸಂಬಂಧ ಇಟ್ಟುಕೊಳ್ಳುವುದಿಲ್ಲ. ನಿನಗೊಂದು ವೀಣೆಯನ್ನು ಕೊಡುತ್ತೇನೆ. ನಿನಗೆ ನನ್ನನ್ನು ಕಾಣಬೇಕೆಂದು ಮನಸ್ಸಾದಾಗ ಈ ವೀಣೆ ಬಾರಿಸು. ನಾನು ನಿನ್ನೆದುರು ಬಂದು ನಿಲ್ಲುತ್ತೇನೆ" ಎಂದು ಹೇಳಿ ಒಂದು ವೀಣೆಯನ್ನು ಆತನ ಕೈಗಿತ್ತಳು. ಸಿರಿಕನ್ಯೆಗೆ ರಾಜಕುಮಾರನ ಮೇಲೆ ಬಹಳ ಪ್ರೀತಿ ಹುಟ್ಟಿತು. ಆಕೆ ಆತನ ಶರೀರವನ್ನು ಆವರಿಸಿದ್ದ ದಾಳಿಂಬೆ ಸಿಪ್ಪೆಯನ್ನು ಕಿತ್ತು ತೆಗೆದಳು. ಸಿಪ್ಪೆಯೊಳಗಿಂದ ಒಬ್ಬ ಸುಂದರ ಯುವಕ ಹೊರಗೆ ಬಂದ. ರಾಜಕುಮಾರ ಯಕ್ಷಕನ್ಯೆಗೆ ಕೃತಜ್ಞತೆ ಸಲ್ಲಿಸಿ "ಈ ಸಿಪ್ಪೆ ನನ್ನ ಮೈಮೇಲೆ ನಾನು ಮನೆ ಮುಟ್ಟುವವರೆಗೆ ಬೇಕು" ಎಂದ. "ಹಾಗೆಯೇ ಆಗಲಿ. ನೀನು ಬೇಕೆಂದಾಗ ಇದನ್ನು ಧರಿಸಿಕೊಳ್ಳಬಹುದು ಬೇಡವೆಂದಾಗ ತೆಗೆದಿಡಬಹುದು" ಎಂದು ಹೇಳಿ ಪುನಃ ದಾಳಿಂಬೆ ಸಿಪ್ಪೆಯೊಳಗೆ ಆತನನ್ನು ತುಂಬಿಸಿದಳು. ಸಿರಿಕನ್ಯೆ ಕೊಟ್ಟ ಅತ್ತಿ ಹೂ ಮತ್ತು ವೀಣೆಯನ್ನೆತ್ತಿಕೊಂಡು ದೇವಲೋಕದ ಊಟೋಪಚಾರ ಮುಗಿಸಿಕೊಂಡು ರಾಜಕುಮಾರ ಹೊರಟ. ಸಿರಿಕನ್ಯೆ ಆತನನ್ನು ಕೆರೆಯ ಪಕ್ಕದವರೆಗೆ ಕರೆತಂದು ಬಿಟ್ಟು ಹೋದಳು.

ದಾಳಿಂಬೆಕುಮಾರ ನಡೆದು ನಡೆದು ಮಾಯಾವಿ ಗುರುವಿನ ಬಳಿಗೆ ಬಂದ. ಗುರುವಿನೊಡನೆ ನಡೆದ ಸಂಗತಿಯನ್ನೆಲ್ಲಾ ಹೇಳಿದ ಆ ವೀಣೆ ಬಾರಿಸಿದಾಗ ಸಿರಿಕನ್ಯೆ ಪ್ರತ್ಯಕ್ಷಳಾಗುತ್ತಾಳೆ ಎಂದು ಕೂಡ ಹೇಳಿದ. ಆಗ ಆ ಮಾಯಾವಿ ಗುರುವಿಗೆ ಸಿರಿಕನ್ಯೆ ಯನ್ನು ಪಡೆಯುವ ಆಸೆಯಾಯಿತು. ಆತ "ಆ ವೀಣೆಯನ್ನು ನನಗೆ ಕೊಡು ಅದರ ಬದಲು ನಾನು ನಿನಗೊಂದು ಖಡ್ಗ ಕೊಡುತ್ತೇನೆ. ಈ ಖಡ್ಗ ಕೈಯಲ್ಲಿ ಹಿಡಿದು ಯಾರ ತಲೆ ಕಡಿಯಬೇಕೆಂದು ನೆನೆಸಿಕೊಂಡರೂ ಅದು ಹೋಗಿ ಅವರ ತಲೆ ಕಡಿಯುತ್ತದೆ" ಎಂದ ರಾಜಕುಮಾರ ಅದಕ್ಕೊಪ್ಪಿ ಖಡ್ಗವನ್ನು ಪಡೆದು ವೀಣೆಯನ್ನು

ಆತನ ಕೈಗಿತ್ತ. ಆತ ಸಿರಿಕನ್ಯೆಯನ್ನು ಬರಮಾಡಿಕೊಳ್ಳುವಷ್ಟರಲ್ಲಿ "ಹೇ ಖಡ್ಗವೇ ನೀನು ಮಾಯಾವಿ ಗುರುವಿನ ತಲೆಯನ್ನು ಕಡಿ" ಎಂದ. ಖಡ್ಗ ಕೂಡಲೇ ಮಾಯಾವಿ ಗುರುವಿನ ತಲೆಯನ್ನು ಕತ್ತರಿಸಿ ಹಾಕಿತು. ವೀಣೆ, ಖಡ್ಗ ಮತ್ತು ಹೂವಿನ ಬುಟ್ಟಿ ಹಿಡಿದುಕೊಂಡು ನಡೆದು ನಡೆದು ರಾಜಕುಮಾರ ಮೊದಲನೆಯ ಮಾಯಾವಿಯಲ್ಲಿಗೆ ಬಂದ. ಆತನಿಗೂ ಸಿರಿಕನ್ಯೆಯ ಕತೆ ಹೇಳಿದ. ಅವನಿಗೂ ಸಿರಿಕನ್ಯೆಯನ್ನು ಪಡೆಯುವ ಆಸೆಯಾಯಿತು. ಆತ "ನಾನು ನಿನಗೊಂದು ಜೊತೆ ಹಾವುಗೆ[೧] ಕೊಡುತ್ತೇನೆ. ಇದನ್ನು ಕಾಲಲ್ಲಿ ಧರಿಸಿ ನೀನು ಎಲ್ಲಿಗೆ ಹೋಗಬೇಕೆಂದು ಎನಿಸಿಕೊಂಡರೂ ಅವು ನಿನ್ನನ್ನೆತ್ತಿ ಕೊಂಡು ನೀನು ನೆನೆಸಿದಲ್ಲಿಗೆ ಕೊಂಡೊಯ್ಯುತ್ತವೆ. ಇದು ನಿನಗಿರಲಿ. ಅದರ ಬದಲು ನೀನು ನಿನ್ನ ಕೈಯಲ್ಲಿರುವ ವೀಣೆಯನ್ನು ಕೊಡು" ಎಂದ. ರಾಜಕುಮಾರ ಅದಕ್ಕೊಪ್ಪಿ ವೀಣೆಯನ್ನು ಆತನ ಕೈಗೆ ಕೊಟ್ಟ ಆತನಿಂದ ಹಾವುಗಳನ್ನು ಪಡೆದು ತನ್ನ ಕಾಲಲ್ಲಿ ಧರಿಸಿಕೊಂಡ. ತನ್ನ ಕೈಯಲ್ಲಿದ್ದ ಖಡ್ಗವನ್ನೆತ್ತಿ "ಎಲೇ ಖಡ್ಗವೇ ಈ ಮಾಯಾವಿಯ ತಲೆ ಕಡಿ" ಎಂದ. ಖಡ್ಗವು ಕೂಡಲೇ ಮಾಯಾವಿಯ ರುಂಡವನ್ನು ಹಾರಿಸಿತು.

ತನ್ನ ಸಾಮಗ್ರಿಗಳನ್ನೆಲ್ಲಾ ಕೈಗೆತ್ತಿಕೊಂಡು ಹಾವುಗೆ ಧರಿಸಿದ ರಾಜಕುಮಾರ ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ತನ್ನರಮನೆಗೆ ಸೇರಿದ. ಮರುದಿನ ಮಂತ್ರಿಯನ್ನು ಕರೆದು ಅತ್ತಿ ಹೂವಿನ ಬುಟ್ಟಿಯನ್ನು ಕೊಟ್ಟು ಮದ್ವೆ ದಿನ ನಿಗದಿಗೊಳಿಸುವಂತೆ ತಂದೆಗೆ ಹೇಳಿದ. ಮಂತ್ರಿಗೆ ತನ್ನ ಮಗಳನ್ನು ಮದ್ವೆ ಮಾಡಿಕೊಡದೆ ಉಪಾಯವಿರಲಿಲ್ಲ. ರಾಜಕುಮಾರನನ್ನು ಬಿಟ್ಟರೆ ರಾಜ್ಯ ಕೈತಪ್ಪಿ ಹೋಗುತ್ತದಲ್ಲಾ ಎಂಬ ಚಿಂತೆಯಿಂದ ಕುರೂಪಿ ರಾಜಕುಮಾರನಿಗೆ ತನ್ನ ಮಗಳನ್ನು ಕೊಡಲೊಪ್ಪಿದ. ಮದ್ವೆಗೆ ದಿನ ನಿಶ್ಚಯಿಸಿದರು. ವೈಭವದಿಂದ ಮದ್ವೆ ನಡೆದು ಹೋಯಿತು.

ಮದ್ವೆ ಮುಗಿದ ಕೆಲವೇ ದಿನಗಳಲ್ಲಿ ನೆರೆಯ ರಾಜ ದಾಳಿಂಬೆ ಕುಮಾರನ ರಾಜ್ಯದ ಮೇಲೆ ದಾಳಿ ಮಾಡಿದ. ದಾಳಿಂಬೆ ರಾಜಕುಮಾರನಿಗೆ ದಾಳಿಂಬೆ ಚಿಪ್ಪನ್ನೆತ್ತಿ ಕೊಂಡು ನಡೆಯಲು ಕಷ್ಟವಾಗುತ್ತದೆ. ಮತ್ತೆ ಯುದ್ಧ ಹೇಗೆ ಮಾಡುತ್ತಾನೆ ಎಂದು ಬಗೆದ ರಾಜ ಮತ್ತು ಮಂತ್ರಿ ಇಬ್ಬರೂ ಯುದ್ಧಕ್ಕೆ ಹೋದರು. ವೈರಿರಾಜ ಇವರನ್ನು ಯುದ್ಧದಲ್ಲಿ ಸೋಲಿಸಿ ರಾಜನನ್ನೂ ಮಂತ್ರಿಯನ್ನು ಹೆಡೆಮುರಿಕಟ್ಟಿ ತನ್ನರಮನೆಗೆ ಕೊಂಡೊಯಿದ. ಸೈನಿಕರು ರಾಜ್ಯದೊಳಗೆ ಆಕ್ರಮಣ ಮಾಡಿ ದಾಂದಲೆ[೨] ಎಬ್ಬಿಸಲು ಪ್ರಾರಂಭಿಸಿದರು.

ರಾಜಕುಮಾರನಿಗೆ ಸುದ್ದಿ ತಿಳಿಯಿತು. ಆತ ತನ್ನ ಶಸ್ತ್ರಾಗಾರಕ್ಕೆ ಹೋಗಿ ತನ್ನ ದಾಳಿಂಬೆ ಸಿಪ್ಪೆಯ ಕವಚ ಕಳಚಿ ಅಡಗಿಸಿಟ್ಟ. ಮೈ ಕಾಣದಂತೆ ಲೋಹದ ನಿಲುವಂಗಿ ಧರಿಸಿದ. ತಲೆಗೆ ಶಿರಸ್ತ್ರಾಣ ಇಟ್ಟುಕೊಂಡ. ಕೈಯಲ್ಲಿ ಮಾಯಾವಿ ಗುರುಕೊಟ್ಟ ಖಡ್ಗ ಮತ್ತೊಂದರಲ್ಲಿ ಗುರಾಣಿಯನ್ನೆತ್ತಿಕೊಂಡ. ಕಾಲಿಗೆ ಹಾವುಗೆಗಳನ್ನು ಕಟ್ಟಿಕೊಂಡು ವೈರಿ ರಾಜನ ಅರಮನೆಯೊಳಗೆ ಹಾರಿದ. ಎದುರು ಸಿಕ್ಕಿದವರ ತಲೆಯನ್ನೆಲ್ಲಾ ಕತ್ತರಿಸುತ್ತಾ

ಹೋಗಿ ಸೆರೆಮನೆಯಿಂದ ತನ್ನ ತಂದೆ ಮತ್ತು ಪ್ರಧಾನಿಯನ್ನು ಬಿಡಿಸಿದ. ಆ ಊರಿನ ರಾಜನ ತಲೆ ಹಾರಿಸಿದ. ಎದುರು ಬಂದ ಸೈನಿಕರನ್ನೆಲ್ಲಾ ತನ್ನ ಖಡ್ಗದಿಂದ ಕೊಂದು ಆ ರಾಜ್ಯವನ್ನು ವಶಪಡಿಸಿಕೊಂಡ.

ಯುದ್ಧ ಮುಗಿಯಿತು. ವೈರಿರಾಜನ ಪಡೆ ಎಲ್ಲ ಶರಣಾಗತವಾಯಿತು. ತನ್ನ ತಂದೆಯನ್ನು ಆ ರಾಜ್ಯದ ಸಿಂಹಾಸನದಲ್ಲಿ ಕುಳ್ಳಿರಿಸಿ ತಾನು ತನ್ನ ರಾಜ್ಯಕ್ಕೆ ಬಂದು ಅರಮನೆ ಸೇರಿದ. ರಾಜಕುಮಾರನ ತಾಯಿಗೆ ಬಹಳ ಸಂತೋಷವಾಯಿತು.

ಹೀಗೆ ಕೆಲವು ದಿನಗಳು ಕಳೆದುವು. ರಾಜಕುಮಾರ ಸ್ನಾನ ಮಾಡಲು ಸ್ನಾನಗೃಹಕ್ಕೆ ಏಕಾಂಗಿಯಾಗಿ ಹೋಗುತ್ತಿದ್ದ. ಒಂದು ದಿನ ಸ್ನಾನಗೃಹ ಪ್ರವೇಶಿಸಿದಾಗ ಆತನಿಗೆ ಬಾಗಿಲು ಚಿಲಕ ಹಾಕಿಕೊಳ್ಳಲು ಮರೆತು ಹೋಯಿತು. ಆತನ ಬೆನ್ನ ಹಿಂದೆ ಹೋದ ಆತನ ಮಡದಿ ಬಾಗಿಲ ಮರೆಯಲ್ಲಿ ನಿಂತು ಆತ ಹೇಗೆ ಸ್ನಾನ ಮಾಡುತ್ತಾನೆಂದು ನೋಡಿದಳು. ರಾಜಕುಮಾರ ತನ್ನ ದಾಳಿಂಬೆ ಕವಚವನ್ನು ತೆಗೆದಿಟ್ಟು ಬಚ್ಚಲ ಗುಂಡಿಗೆ ಇಳಿಯುವುದನ್ನು ಆಕೆ ನೋಡಿದಳು. ಕವಚ ಕಳಚಿಕೊಂಡ ರಾಜಕುಮಾರ ಅಂಗ ಸೌಷ್ಠವ ಮತ್ತು ಸೌಂದರ್ಯಕ್ಕೆ ಆಕೆ ಮಾರುಹೋದಳು. ಓಡಿ ಹೋಗಿ ಆ ದಾಳಿಂಬೆ ಕವಚವನ್ನು ತೆಗೆದು ಉರಿಯುತ್ತಿರುವ ಒಲೆಗೆ ಹಾಕಿದಳು. ಬಚ್ಚಲ ಗುಂಡಿಗಿಳಿದು ತನ್ನ ಪತಿಯನ್ನು ಸ್ನಾನಮಾಡಿಸಿ ಉಡುಪು ತೊಡಿಸಿ ಮನೆಗೆ ಕರೆತಂದಳು. ರಾಜಕುಮಾರನನ್ನು ನೋಡಿ ಎಲ್ಲರಿಗೂ ಸೋಜಿಗವಾಯಿತು. ಎಲ್ಲರೂ ಬಹಳ ಸಂತೋಷಪಟ್ಟರು.

ಟಿಪ್ಪಣಿ

೧. ಹಾವುಗೆ – ಮರದ ಎಕ್ಕಡ

೨. ದಾಂದಲೆ – ಗಲಾಟೆ



೧೬

ಮಂತ್ರದ ಕಲ್ಲುಗಳು

ಒಂದು ಊರಿನಲ್ಲಿ ಸೇಸಪ್ಪನೆಂಬ ಬಡ ರೈತನಿದ್ದ. ಆತ ಕೂಲಿ ಕೆಲಸ ಮಾಡಿ ತನ್ನ ಹೆಂಡತಿಯೊಂದಿಗೆ ಜೀವನ ನಿರ್ವಹಿಸುತ್ತಿದ್ದ. ಹೆಂಡತಿ ಗರ್ಭಿಣಿಯಾಗಿ ಒಂದು ಹೆಣ್ಣು ಮಗುವನ್ನು ಹೆತ್ತಳು. ಹೆಂಡ್ತಿ ಬಾಣಂತಿಯಾಗಿದ್ದಾಗ ಹೆಂಡತಿಯ ಆರೈಕೆ ಮತ್ತು ಮನೆಯ ಖರ್ಚುವೆಚ್ಚಗಳನ್ನು ಆತನೊಬ್ಬನ ದುಡಿಮೆಯಿಂದಲೇ ನೋಡಿಕೊಳ್ಳ ಬೇಕಾಯಿತು. ಮುಂದೆ ಎರಡು ವರ್ಷ ಕಳೆಯುವಾಗ ಇನ್ನೊಂದು ಗಂಡು ಮಗುವನ್ನು ಹೆತ್ತಳು. ಆಕೆಯ ಆರೋಗ್ಯ ಕೆಟ್ಟಿತು. ಹೆಂಡತಿ ಮಕ್ಕಳ ಕಾಯಿಲೆಗೆ ಔಷಧಿ ತರಲು ಮತ್ತು ಜೀವನ ನಿರ್ವಹಣೆ ರೈತನಿಗೆ ಕಷ್ಟವಾಯಿತು. ಸಾಲ ಮಾಡಬೇಕಾಯಿತು. ಹೇಳಿದ ಸಮಯಕ್ಕೆ ಸರಿಯಾಗಿ ಆತನಿಂದ ಸಾಲ ತೀರಿಸಲು ಸಾಧ್ಯವಾಗಲಿಲ್ಲ. ಸಾಲಗಾರರು ಬಂದು ಪೀಡಿಸತೊಡಗಿದರು. ಈ ಎಲ್ಲ ಕಷ್ಟಕಾರ್ಪಣ್ಯಗಳಿಂದ ಪಾರಾಗಲು ಸೇಸಪ್ಪ ಆತ್ಮಹತ್ಯೆ ಮಾಡಿಕೊಳ್ಳುವುದೊಂದೇ ದಾರಿ ಎಂದು ಬಗೆದ. ದೈವ ದೇವರಿಗೆಲ್ಲ ಕೈ ಮುಗಿದು ಕಾಡಿನ ಪಕ್ಕದಲ್ಲಿರುವ ಹಾಳು ಬಾವಿಯೊಂದಕ್ಕೆ ಹಾರಿ ಪ್ರಾಣ ಕಳೆದು ಕೊಳ್ಳಲು ಬಾವಿಯ ಕಡೆಗೆ ನಡೆದ.

ಬಾವಿಯ ಮುಂದೆ ಕೈ ಮುಗಿದು ನಿಂತುಕೊಂಡು "ಸ್ವಾಮೀ ದೈವವೇ ಈವರೆಗೆ ನಿನ್ನನ್ನೇ ನಂಬಿ ನಾನು ಬದುಕಿದ್ದೆ. ಆದರೆ ಈಗ ನಾನು ಸಾಲದಲ್ಲಿ ಮುಳುಗಿದ್ದೇನೆ ಮರ್ಯಾದೆ ಕಳೆದು ಬದುಕಲು ನನಗೆ ಇಷ್ಟವಿಲ್ಲ. ನನ್ನ ಹೆಂಡತಿ ಮಕ್ಕಳನ್ನು ನೀನೇ ಕಾಪಾಡಬೇಕು" ಎಂದು ಹೇಳಿ ಪ್ರಾರ್ಥಿಸಿಕೊಂಡು ಬಾವಿಗೆ ಹಾರಲು ಸೇಸಪ್ಪ ಸಿದ್ಧನಾದ. ಆಗ ಆ ಹಾಳು ಬಾವಿಯಿಂದ ದೈವವೊಂದು ಎದ್ದು ಬಂದು "ನಿಲ್ಲು ಪ್ರಾಣ ಕಳೆದುಕೊಳ್ಳಬೇಡ. ಅದು ದೊಡ್ಡ ಪಾಪ. ನಿನಗೆ ನಾನು ಮೂರು ಮಂತ್ರದ ಕಲ್ಲುಗಳನ್ನು ಕೊಡುತ್ತೇನೆ. ನಿನಗೆ ಏನಾಗಬೇಕೆಂದು ಹೇಳಿಬಿಟ್ಟು ಒಂದೊಂದೇ ಕಲ್ಲನ್ನು ಬಿಸಾಡು. ನೀನು ಎಣಿಸಿದ್ದೆಲ್ಲ ನಿನಗೆ ಸಿಗುತ್ತದೆ" ಎಂದು ಹೇಳಿ ಆತನ ಕೈಯಲ್ಲಿ ಮೂರು ಕಲ್ಲುಗಳನ್ನು ಕೊಟ್ಟು ಮಾಯವಾಯಿತು.

ಸೇಸಪ್ಪ ಕಲ್ಲುಗಳನ್ನು ಬಹಳ ಜಾಗ್ರತೆಯಿಂದ ಹಿಡಿದುಕೊಂಡು ಮನೆಗೆ ಬಂದ. ಬಹಳ ಚೆನ್ನಾಗಿ ಆಲೋಚನೆ ಮಾಡಿ "ನನ್ನ ಹೆಂಡತಿ ಮಕ್ಕಳಿಗೆ ಕಾಯಿಲೆ ಗುಣವಾಗಿ

ಆರೋಗ್ಯ ಲಭಿಸಲಿ" ಎಂದು ಒಂದು ಕಲ್ಲನ್ನು ಬಿಸಾಡಿದ. ಏಳಲಾರದೆ ಮಲಗಿದ್ದ ಹೆಂಡತಿ ಕೂಡಲೇ ಎದ್ದು ಕುಳಿತಳು. ಮಕ್ಕಳಿಬ್ಬರೂ ಕಾಯಿಲೆಗಳನ್ನೆಲ್ಲಾ ಕಳೆದುಕೊಂಡು ಅಪ್ಪನ ತೊಡೆಯಲ್ಲಿ ಬಂದು ಕುಳಿತರು. ಸೇಸಪ್ಪನಿಗೆ ಬಹಳ ಸಂತೋಷವಾಯಿತು. "ಈ ಮುರುಕು ಗುಡಿಸಲಿನ ಬದಲು ನಮಗೊಂದು ಅಂದಚೆಂದದ ಪುಟ್ಟ ಮನೆ ಯಾಗಲಿ" ಎಂದು ಇನ್ನೊಂದು ಕಲ್ಲನ್ನು ಬಿಸಾಡಿದ.

ಕೂಡಲೇ ಆತನ ಗುಡಿಸಲು ಮಾಯವಾಗಿ ಚಂದದ ಒಂದು ಹೊಸ ಮನೆ ಯಾಯಿತು. "ಈ ಮನೆಯಲ್ಲಿ ಧನ ಧಾನ್ಯ ತುಂಬಿ ಬರಲಿ" ಎಂದು ಮೂರನೇ ಕಲ್ಲನ್ನು ಬಿಸಾಡಿದ ಕೂಡಲೇ ಮನೆಯ ಒಂದು ಕೋಣೆಯಲ್ಲಿ ಅಕ್ಕಿ ಮೂಟೆಗಳು ತುಂಬಿದವು. ಅವನೆದುರು ಒಂದಷ್ಟು ನಾಣ್ಯಗಳು ರಾಶಿಬಿದ್ದುವು. ಅವುಗಳನ್ನೆಲ್ಲ ತೆಗೆದು ಜಾಗ್ರತೆಯಾಗಿ ಒಂದು ಕೋಣೆಯಲ್ಲಿ ಚೀಲದಲ್ಲಿ ತುಂಬಿಸಿಟ್ಟ. ಮನೆಯವರೆಲ್ಲರಿಗೂ ಸಂತೋಷವಾಯಿತು. ಹೆಂಡತಿ ಎದ್ದು ಅಡುಗೆಮನೆಗೆ ಹೋಗಿ ಅಡುಗೆಯ ಸಿದ್ಧತೆ ನಡೆಸಿದರು. ಮಕ್ಕಳು ಅಳುವುದನ್ನು ಬಿಟ್ಟು ಆಟವಾಡಲು ಪ್ರಾರಂಭಿಸಿದರು.

ಆ ದಿನ ರಾತ್ರಿ ಕಳೆದು ಬೆಳಗಾಯಿತು. ಬೆಳಗಾದೊಡನೆ ಎದ್ದ ಪಕ್ಕದ ಮನೆಯ ಶಂಕರನಿಗೆ ಆಶ್ಚರ್ಯವೋ ಆಶ್ಚರ್ಯ. ನಿನ್ನೆವರೆಗೆ ಮುರುಕು ಗುಡಿಸಲಾಗಿದ್ದ ಸೇಸಪ್ಪನ ಮನೆ ದೊಡ್ಡ ಶ್ರೀಮಂತರ ಮನೆಯಾಗಿದೆ. ಆ ದಿನ ಕನಸೋ, ನನಸೋ ಎಂದು ಕಣ್ಮುಚ್ಚಿ ತೆರೆದುಕೊಂಡು ಮತ್ತೆ ಮತ್ತೆ ಮನೆಯನ್ನು ನೋಡತೊಡಗಿದ. ಸೇಸಪ್ಪನಲ್ಲೇ ಈ ವಿಚಾರ ಕೇಳಿ ಬಿಡುವ ಎಂದು ಎದುರು ಮನೆಗೆ ಓಡಿದ. ಶಂಕರ ಮಧ್ಯಮ ವರ್ಗದ ಜಮೀನ್ದಾರ ಬಹಳ ಜಿಪುಣ. ಸೇಸಪ್ಪನಿಗೆ ಚಕ್ರ ಬಡ್ಡಿಗೆ ಹಣ ಸಾಲಕೊಟ್ಟಿದ್ದ. ಶಂಕರ ಮನೆಗೆ ಬಂದೊಡನೆ ಆತನನ್ನು ಕುಳ್ಳಿರಿಸಿ ಸೇಸಪ್ಪ ತಾನು ತೆಗೆದುಕೊಂಡ ಸಾಲದ ಹಣವನ್ನು ಬಡ್ಡಿ ಸಹಿತ ಒಳಗಿನಿಂದ ತಂದು ಕೊಟ್ಟ.

"ಸೇಸಪ್ಪಾ ನಾನು ನಿನ್ನಲ್ಲಿ ಸಾಲದ ಹಣ ಕೇಳಲು ಬಂದವನಲ್ಲ. ಇದೆಲ್ಲ ಬದಲಾವಣೆ ಹೇಗಾಯಿತೆಂದು ನಿನ್ನಲ್ಲಿ ತಿಳಿದುಕೊಳ್ಳಲು ಬಂದಿದ್ದೇನೆ. ದಯಮಾಡಿ ಎಲ್ಲ ಕತೆಯನ್ನು ನನಗೂ ಹೇಳು" ಎಂದ ಶಂಕರ. "ಅದೆಲ್ಲ ದೇವರ ದಯೆ" ಸೇಸಪ್ಪನೆಂದಾಗ ಶಂಕರ ನನಗೆ ಹೇಳಿಯೇ ತೀರಬೇಕೆಂದು ಪಟ್ಟುಹಿಡಿದು ಕುಳಿತುಬಿಟ್ಟ. ಸೇಸಪ್ಪ ಸತ್ಯವಾದಿಗ. ನಡೆದ ಸಂಗತಿಯನ್ನೆಲ್ಲ ಹೇಳಿದ.

ಸೇಸಪ್ಪನ ಕತೆ ಕೇಳಿಕೊಂಡು ಶಂಕರ ಮನೆಗೆ ಹಿಂತಿರುಗಿದ. ಶಂಕರ ತನಗೂ ಕೂಡ ದೈವದೊಡನೆ ಐಸಿರಿಯ ವರ ಕೇಳಿಕೊಂಡು ಬರಬೇಕೆಂದು ಹಾಳು ಬಾವಿಯ ಕಡೆ ಹೊರಟ. ಬಾವಿಯ ಪಕ್ಕದಲ್ಲಿ ನಿಂತು "ಸ್ವಾಮಿ. ದೈವವೇ ನೀನು ಸೇಸಪ್ಪನಿಗೆ ಮೂರು ವರಗಳ ಕಲ್ಲುಗಳನ್ನು ಕೊಟ್ಟಿದ್ದಿಯಾ, ನಾನು ಕೂಡ ಬಡವ. ನಾನು ಕೂಡ ನಿನ್ನ ಭಕ್ತ. ಅವನಿಗಿಂತ ಹೆಚ್ಚು ಪೂಜೆ ಪುನಸ್ಕಾರ ನಾನು ಮಾಡುತ್ತೇನೆ. ನೀನು ವರದ ಕಲ್ಲು ಕೊಟ್ಟರೆ ಇನ್ನಷ್ಟು ಗೌಜಿ ಗದ್ದಲದಿಂದ ಮಾಡಿಸುತ್ತೇನೆ. ಇಲ್ಲದಿದ್ದರೆ

ನಾನೇ ಬಾವಿಗೆ ಹಾರಿ ಸಾಯುತ್ತೇನೆ" ಎಂದು ಹೇಳಿ ಶಂಕರ ಬಾವಿಗೆ ಹಾರಲು ತಯಾರಾದಾಗ ಬಾವಿಯಿಂದ ದೈವ ಪ್ರತ್ಯಕ್ಷವಾಯಿತು. ತನ್ನ ಕೈಯಲ್ಲಿದ್ದ ಮೂರು ಮಂತ್ರದ ಕಲ್ಲುಗಳನ್ನು ಶಂಕರನಿಗೆ ಕೊಟ್ಟು "ಈ ಕಲ್ಲುಗಳನ್ನೆಸೆದು ಬೇಕಾದುದನ್ನು ಪಡೆದುಕೋ" ಎಂದಿತು. ದೈವದಿಂದ ಕಲ್ಲುಗಳನ್ನು ಪಡೆದ ಶಂಕರ ಕೃತಜ್ಞತೆ ಸಲ್ಲಿಸಿ ತನ್ನ ಮನೆ ಕಡೆ ಹೊರಟ.

ಬರುತ್ತಿದ್ದಂತೆ ಆತನಿಗೆ ದೈವ ಕೊಟ್ಟ ಕಲ್ಲುಗಳ ಬಗೆಗೆ ಸಂಶಯ ಉಂಟಾಗಲು ಪ್ರಾರಂಭವಾಯಿತು. ಪರೀಕ್ಷಿಸಿಬಿಡುವುದು ಒಳ್ಳೆಯದೆಂದು ಕಂಡಿತು. ದಾರಿಯ ಬದಿಯಲ್ಲೊಂದು ಹಲಸಿನ ಮರವಿತ್ತು. ಅದು ಹಲಸಿನಕಾಯಿಯ ಕಾಲವಲ್ಲ. ಪರೀಕ್ಷಿಸಿಯೇ ಬಿಡೋಣವೆಂದು "ಈ ಮರದ ತುಂಬ ಹಲಸಿನಕಾಯಿಯಾಗಲಿ" ಎಂದು ಮರಕ್ಕೆ ಒಂದು ಕಲ್ಲು ಬಿಸಾಡಿದ. ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ಆ ಹಲಸಿನ ಮರದ ತುಂಬ ಹಲಸಿನ ಕಾಯಿಗಳು ನೇತಾಡತೊಡಗಿದವು.

ಈಗ ಶಂಕರನಿಗೆ ಧೈರ್ಯವಾಯಿತು. ಉಳಿದ ಎರಡು ಕಲ್ಲುಗಳನ್ನು ಹಿಡಿದುಕೊಂಡು ಮನೆ ಕಡೆ ನಡೆದ. ಮನೆಯ ಹತ್ತಿರ ಬರುತ್ತಿದ್ದಂತೆ ಆತನ ಬಾಕ್ಯಾರು ಗದ್ದೆಯಲ್ಲಿ ದನಗಳು ಮೇಯುತ್ತಿರುವುದು ಆತನ ಕಣ್ಣಿಗೆ ಬಿತ್ತು. ಒಮ್ಮೆಗೆ ಆತನ ಸಿಟ್ಟು ನೆತ್ತಿಗೇರಿತು. ತನ್ನ ಕೈಯಲ್ಲಿದ್ದುದು ಮಂತ್ರದ ಕಲ್ಲುಗಳೆಂದು ಆತನಿಗೆ ಮರೆತೇ ಹೋಯಿತು. ಗೌರೀ, ಗೌರೀ ಎಂದು ಹೆಂಡತಿಯನ್ನು ಕರೆದ "ನಿನ್ನ ಕಣ್ಣು ಸೀದು ಹೋಗ, ಆಕಳೆಲ್ಲ ತಿಂದು ಹಾಳು ಮಾಡ್ತು" ಎಂದು ದನಕ್ಕೊಂದು ಕಲ್ಲು ಬಿಸಾಡಿದ. ಶಂಕರ ಕರೆದ ಸ್ವರ ಕೇಳಿ ಗದ್ದೆಯ ಕಡೆ ಓಡುತ್ತಾ ಬರುತ್ತಿದ್ದಂತೆ ಗೌರಿಯ ಕಣ್ಣುಗಳೆರಡು ಕುರುಡಾಗಿ ಹೋದುವು. ಆಕೆ ಅಲ್ಲೇ ಕುಸಿದು ಬಿದ್ದಳು. ಗೌರಿ ಕುಸಿದು ಬಿದ್ದುದನ್ನು ನೋಡಿ ಶಂಕರ ಅವಳ ಬಳಿಗೆ ಓಡಿದ. ಅವಳ ಕಣ್ಣುಗಳೆರಡೂ ಕುರುಡಾಗಿ ಹೋಗಿವೆ. ಶಂಕರನಿಗೆ ಕಲ್ಲಿನ ಮಹಿಮೆ ಜ್ಞಾಪಕಕ್ಕೆ ಬಂತು. ಬೇರೆ ಉಪಾಯ ಕಾಣದೆ "ನನ್ನ ಹೆಂಡತಿಯ ಸೀದು ಹೋದ ಕಣ್ಣುಗಳು ಮತ್ತೆ ಕಾಣುವಂತಾಗಲಿ" ಎಂದು ಮೂರನೇ ಕಲ್ಲನ್ನೆಸೆದ. ಗೌರಿಗೆ ಮತ್ತೆ ಕಣ್ಣುಗಳು ಬಂದುವು.

***

೧೭

ಬಾವಿಯಿಂದ ನೀರೆಳೆಯಿತು ಕೇರೆ

ಒಂದು ಊರಲ್ಲೊಬ್ಬ ಅರಸನಿದ್ದ. ಆ ಅರಸನಿಗೆ ಏಳು ಜನ ಗಂಡು ಮಕ್ಕಳು. ಒಬ್ಬಾಕೆ ಮಗಳು. ಆಕೆ ಎಲ್ಲರಿಂದಲೂ ಚಿಕ್ಕವಳು. ಅರಸ ಹಿರಿಯ ಮಗನಿಗೆ ಮದ್ವೆ ಮಾಡಿಸಲು ಆಲೋಚನೆ ಮಾಡಿದ. ಅಷ್ಟರಲ್ಲಿ ಹಿರಿಯ ಮಗ ಬಂದು ನಮ್ಮ ತಂಗಿಗೆ ಮೊದಲು ಮದುವೆಯಾಗಬೇಕು. ಅವಳ ಮದ್ವೆಯಾದ ನಂತರ ಉಳಿದವರ ಮದ್ವೆ ಎಂದ. ಅರಸನು ಅದಕ್ಕೊಪ್ಪಿ ಮಗಳ ಮದ್ವೆ ನಡೆಸಲು ಅಣಿಯಾದ. ಹಿರಿಯ ಮಗ ತಮ್ಮಂದಿರನ್ನು ಕರೆದು ನೀವು ಮೊದಲಿಗೆ ತಂಗಿಯ ಸಿಂಗಾರಕ್ಕೆ ಬೇಕಾದ ತಯಾರಿ ನಡೆಸಬೇಕು. ದೇಶದ ಮೂಲೆಮೂಲೆವರೆಗೂ ಹೋಗಿ ಬೆಲೆಬಾಳುವ ವಜ್ರ, ವೈಢೂರ್ಯ ತಂದು ಅದನ್ನು ಚಿನ್ನದ ಕಟ್ಟಿನಲ್ಲಿ ಹುದುಗಿಸಿ ಹಾರ ಮಾಡಿಸಬೇಕು. ದೇಶ ವಿದೇಶಗಳಿಂದ ಬೆಲೆಬಾಳುವ ಸೀರೆ, ರವಿಕೆ, ಉಡುಗೆ–ತೊಡುಗೆಗಳನ್ನು ತರಿಸಬೇಕು ಎಂದು ಒಬ್ಬೊಬ್ಬರಿಗೆ ಒಂದೊಂದು ಕೆಲಸ ಕೊಟ್ಟು ಕಳುಹಿಸಿದ.

ಹೀಗೆ ತಂಗಿಯ ಸಿಂಗಾರಕ್ಕಾಗಿ ವಜ್ರಾಭರಣ, ಉಡುಗೆ-ತೊಡುಗೆಗಳನ್ನು ತರಲು ಹೋದವರೆಲ್ಲ ಒಂದು ತಿಂಗಳಲ್ಲಿ ಅರಮನೆಗೆ ಹಿಂತಿರುಗಿದರು. ಅಷ್ಟರಲ್ಲಿ ಅರಸ ತೀರಿಹೋದ. ರಾಣಿ ಮೊದಲೇ ತೀರಿಹೋಗಿದ್ದಳು. ರಾಜ್ಯಾಡಳಿತ ಹಿರಿಯ ಮಗನ ಕೈಗೆ ಬಂತು. ತಂದೆ ತಾಯಿ ತೀರಿಹೋದರೂ ಕೂಡ ತಂಗಿಯ ಮದ್ವೆ ನಡೆದೇ ತೀರಬೇಕು. ಅಣ್ಣಂದಿರು ತಂದ ಆಭರಣ ಉಡುಗೆ ತೊಡುಗೆಗಳನ್ನು ತೊಟ್ಟು ತಂಗಿ ಸಿಂಗಾರಗೊಂಡಳು. ಅವಳ ಅಂದ ಚಂದವನ್ನು ನೋಡಿ ಅಣ್ಣಂದಿರು ಬೆರಗಾದರು. ಆದರೆ ಅವರಿಗೆ ತೃಪ್ತಿ ಇರಲಿಲ್ಲ. ಅಣ್ಣಂದಿರಲ್ಲಿ ಒಬ್ಬಾತ ತಂಗಿಯ ಕೂದಲುಕೂದಲಿಗೂ ಮುತ್ತು ಪೋಣಿಸಿ, ನೆಯ್ದು ಕಟ್ಟಿ ಅದರ ಚಂದವನ್ನು ನೋಡಬೇಕಿತ್ತು ಎಂದ. ಉಳಿದವರೆಲ್ಲ ಅದಕ್ಕೆ ಸೈ ಎಂದರು. "ಮುತ್ತು ತರಲು ಏಳು ಕಡಲಾಚೆಗೆ ಹೋಗಬೇಕು. ಏಳು ಕಡಲಾಚೆ ಒಬ್ಬೊಬ್ಬರೇ ಹೋಗುವುದು ಬೇಡ. ಎಲ್ಲರೂ ಒಟ್ಟಾಗಿ ಹೋಗೋಣ" ಎಂದ ಹಿರಿಯಣ್ಣ. ಹೋಗಿ ಮೂರು ತಿಂಗಳೊಳಗೆ ಹಿಂತಿರುಗಿ ಬರಬೇಕು. ಬರುವವರೆಗೆ ತಂಗಿಗೆ ಬೇಕಾದ ವ್ಯವಸ್ಥೆ ಮಾಡಿ ಹೋಗಬೇಕೆಂದು ಹಿರಿಯಣ್ಣ ತಮ್ಮಂದಿರಿಗೆ ಆದೇಶ ನೀಡಿದ.

ಅಣ್ಣನ ಆದೇಶ ಪ್ರಕಾರ ತಮ್ಮಂದಿರು ತಂಗಿಗೆ ಬಂದೋಬಸ್ತಾದ ಒಂದು ಮನೆಯನ್ನು ಕಟ್ಟಿಕೊಟ್ಟರು. ಆ ಮನೆಗೆ ಒಂದೇ ಬಾಗಿಲು. ಯಾವ ಕಡೆಯಿಂದಲೂ ಕಣ್ಣು ತಪ್ಪಿಸಿ ಯಾರೂ ಒಳಗೆ ಪ್ರವೇಶ ಮಾಡುವಂತಿರಲಿಲ್ಲ. ಮನೆಯೊಳಗಿನಿಂದಲೇ ಬಾವಿ ತೋಡಿಸಿ ನೀರಿನ ವ್ಯವಸ್ಥೆ ಮಾಡಿದರು. ಮೂರು ತಿಂಗಳಿಗೆ ಬೇಕಾಗುವಷ್ಟು ಅಕ್ಕಿ ದವಸ ಧಾನ್ಯ, ತರಕಾರಿ, ಕಟ್ಟಿಗೆ, ಎಣ್ಣೆ, ತೆಂಗಿನಕಾಯಿ, ಸಾಂಬಾರ ಪದಾರ್ಥಗಳು, ಬಟ್ಟೆಬರೆ ಎಲ್ಲವನ್ನೂ ಮನೆಯೊಳಗೆ ಇಡಿಸಿದರು. ರಾಜಕುಮಾರಿ ಆ ಮನೆಯಲ್ಲಿ ಇರಲು ಒಪ್ಪಿದಳು. ಜೊತೆಗೆ ಅವಳ ಮುದ್ದಿನ ಬೆಕ್ಕು ಮಿಣ್ಣಿಯನ್ನು ಕೂಡ ಕರೆದುಕೊಂಡಳು. ಅಣ್ಣಂದಿರು ಬಂದು ಬಾಗಿಲು ತೆರೆಯಲು ಹೇಳುವ ಮೊದಲು ಯಾರು ಬಂದು ಕರೆದರೂ ನೀನು ಬಾಗಿಲು ತೆರೆಯಬಾರದೆಂದು ಕಟ್ಟಪ್ಪಣೆ ಮಾಡಿ ರಾಜ್ಯಾಡಳಿತವನ್ನು ಪ್ರಧಾನಿಗೆ ಒಪ್ಪಿಸಿ, ಅವರು ಏಳು ಕಡಲಾಚೆ ಹೊರಟುಹೋದರು.

ಹೀಗೆ ಕೆಲವು ದಿವಸಗಳು ಕಳೆಯಿತು. ರಾಜಕುಮಾರಿ ತನ್ನ ಭದ್ರಕೋಟೆಯ ಅರಮನೆಯೊಳಗೆ ಸುಖವಾಗಿದ್ದಳು. ಒಂದು ದಿನ ಬೆಂಕಿ ನಂದಿಹೋಯಿತು. ಒಲೆ ಉರಿಸಲು ಬೆಂಕಿ ಇಲ್ಲ. ಎಲ್ಲಿಂದ ಬೆಂಕಿ ತರುವುದು. ತನ್ನ ಭದ್ರಕೋಟೆಯ ಮನೆ ಇರುವುದು ಕಾಡಿನ ಮಧ್ಯೆ. ಈ ಕಾಡಿನಲ್ಲಿ ಎಲ್ಲಿಂದ ಬೆಂಕಿ ಹುಡುಕುವುದು. ಹುಡುಗಿಗೆ ತಲೆ ಬಿಸಿಯಾಯಿತು. ಬೆಂಕಿ ಆರಿ ಹೋದ ಸಂಗತಿ ಮಿಣ್ಣಿಗೆ ಗೊತ್ತಾಯಿತು. ಮಿಣ್ಣಿ "ಅಕ್ಕಾ ನಾನು ಈ ಕಾಡಿನ ಮಧ್ಯೆ ಒಂದು ದೊಡ್ಡ ಮರ ಹತ್ತಿ ಎಲ್ಲಿ ಬೆಳಕು ಕಾಣುತ್ತದೆ ನೋಡುತ್ತೇನೆ. ಆಮೇಲೆ ಆ ದಾರಿ ಹಿಡಿದು ನೀನು ಹೋಗಿ ಬೆಂಕಿ ತರುವಿಯಂತೆ" ಎಂದು ಹೇಳಿತು. ರಾಜಕುಮಾರಿ ಮಿಣ್ಣಿಯನ್ನು ಹೊರಗೆ ಬಿಟ್ಟಳು. ಮಿಣ್ಣಿ ಮರ ಹತ್ತಿ ಬೆಂಕಿ ಎಲ್ಲಿದೆ ಎಂದು ನೋಡಿ ಬಂದಿತು. "ಮೂಡು ದಿಕ್ಕಿನಲ್ಲಿ ದೂರದಲ್ಲಿ ಒಂದು ಕಡೆ ಬೆಳಕು ಕಾಣುತ್ತದೆ. ಅಲ್ಲೊಂದು ಮನೆ ಇರಬೇಕು, ನೀನು ಹೋಗಿ ಬೆಂಕಿ ತಾ, ಅಲ್ಲಿವರೆಗೆ ನಾನಿಲ್ಲಿ ಮನೆ ಕಾಯುತ್ತಿರುತ್ತೇನೆ" ಎಂದು ಮಿಣ್ಣಿ ರಾಜಕುಮಾರಿಯನ್ನು ಬೆಂಕಿ ತರಲು ಕಳುಹಿಸಿಕೊಟ್ಟಿತು. ರಾಜಕುಮಾರಿ ಬೆಕ್ಕು ಹೇಳಿದ ದಾರಿಯನ್ನನುಸರಿಸಿ ಹೋಗಿ ಹೋಗಿ ಕೊನೆಗೊಂದು ಮನೆಗೆ ಮುಟ್ಟಿದಳು. ಅದೊಂದು ರಕ್ಕಸನ ಮನೆ. ಆಕೆಗೊಬ್ಬ ಮಗ. ರಾಜಕುಮಾರಿ ಆ ಮನೆಗೆ ಹೋಗುವಾಗ ಆತ ಇರಲಿಲ್ಲ. ಮುದುಕಿ ತಾಯಿಯೊಬ್ಬಳೇ ಇದ್ದಳು. ಮುದುಕಿ ಬಾಗಿಲು ತೆರೆದು ಹೊರಗೆ ಬಂದು ರಾಜಕುಮಾರಿಯನ್ನು ನೋಡಿದಳು. ಅವಳ ಅಂದ ಚಂದ ನೋಡಿ ತನ್ನ ಮಗನಿಗೆ ತಕ್ಕ ಹುಡುಗಿ ಎಂದು ಭಾವಿಸಿ ಒಳಗೆ ಕರೆಸಿಕೊಂಡಳು. ರಾಜಕುಮಾರಿ ಮುದುಕಿಯೊಡನೆ ಸ್ವಲ್ಪ ಬೆಂಕಿ ಕೊಡುವಂತೆ ಕೇಳಿದಳು. ರಕ್ಕಸಿ ತನ್ನ ಮಗ ಮನೆಗೆ ಬರುವವರೆಗೆ ಹೇಗಾದರೂ ರಾಜಕುಮಾರಿಯನ್ನು ತನ್ನ ಮನೆಯಲ್ಲೇ ಉಳಿಸಿಕೊಳ್ಳಲು ಆಲೋಚನೆ ಮಾಡಿದಳು. "ನಿನಗೆ ಬೆಂಕಿ ಕೊಡುವ, ಆದರೆ ನೀನು ನನಗೊಂದು ಸಹಾಯ ಮಾಡಬೇಕು. ಅಂಗಳದ ಮುಂದೆ ಒಂದು ಬಾವಿ ಇದೆ. ಆ ಬಾವಿಯಿಂದ

ಒಂದು ಕೊಡ ನೀರು ತಂದು ಕೊಡಬೇಕು" ಎಂದು ರಾಜಕುಮಾರಿಯ ಕೈಯಲ್ಲೊಂದು ಕೊಡಪಾನ ಕೊಟ್ಟಳು. "ಅದಕ್ಕೇನಜ್ಜಿ ತಂದುಕೊಡುತ್ತೇನೆ" ಎಂದು ಕೊಡ ಹಿಡಿದು ರಾಜಕುಮಾರಿ ಬಾವಿಯ ಬಳಿಗೆ ಹೋದಳು. ಬಾವಿಯಬದಿಗೆ ಹೋದಾಗ ಆ ಬಾವಿಗೆ ದಂಡೆಯೂ ಇರಲಿಲ್ಲ. ನೀರು ಸೇದಲು ಹಗ್ಗವೂ ಅಲ್ಲಿರಲಿಲ್ಲ. ಏನು ಮಾಡುವುದೆಂದು ದಾರಿ ಕಾಣದೆ ರಾಜಕುಮಾರಿ ಕುಳಿತುಕೊಂಡು ಅಳಲು ಪ್ರಾರಂಭಿಸಿದಳು. ಅಷ್ಟರಲ್ಲಿ ಅಲ್ಲಿಗೊಂದು ಉದ್ದದ ಕೇರೆ ಹಾವು ಬಂದು ಕೊಡದ ಬಾಯಿಗೆ ಸುತ್ತು ಹಾಕಿಕೊಂಡಿತು. ರಾಜಕುಮಾರಿ ಕೇರೆ ಹಾವಿನ ಬಾಲದಲ್ಲಿ ಹಿಡಿದು ಕೊಡವನ್ನು ಬಾವಿಗಿಳಿಸಿ ನೀರು ತುಂಬಿಸಿ ಮೇಲಕ್ಕೆಳೆದಳು. ರಾಜಕುಮಾರಿ ನೀರು ಸೇದಿದಾಗ ಕೊಡ ತುಂಬ ನೀರು ಬಂತು. ಕೇರೆ ಹಾವಿಗೆ ಉಪಕಾರ ಸ್ಮರಣೆ ಹೇಳಿ ರಾಜಕುಮಾರಿ ಕೊಡದಲ್ಲಿ ನೀರು ತಂದು ರಕ್ಕಸಿಯ ಹಂಡೆ ತುಂಬಿಸಿದಳು. ರಕ್ಕಸಿಗೆ ಆಶ್ಚರ್ಯವಾಯಿತು. ಇನ್ನೂ ಸ್ವಲ್ಪ ಹೊತ್ತು ಆಕೆಯನ್ನು ನಿಲ್ಲಿಸಬೇಕೆಂದು ಬಗೆದ ರಕ್ಕಸಿ, ಒಂದು ಮುಡಿ ಭತ್ತ ತಂದು ಜಗಲಿಯಲ್ಲಿ ಹರಡಿ ಇದನ್ನು ಒನಕೆಯಲ್ಲಿ ಕುಟ್ಟಿ ಅಕ್ಕಿ ಮಾಡಿ ಕೊಟ್ಟುಬಿಡು" ಎಂದಳು. ರಾಜಕುಮಾರಿಗೆ ಭತ್ತ ಕುಟ್ಟಿ ಗೊತ್ತೇ ಇಲ್ಲ. ಏನು ಮಾಡುವುದೆಂದು ಚಿಂತೆಗೊಳಗಾದಳು. ಅಷ್ಟರಲ್ಲಿ ಎಲ್ಲಿಂದಲೋ ನೂರಾರು ಗುಬ್ಬಚ್ಚಿಗಳು ರಕ್ಕಸಿಯ ಮನೆಯೊಳಗೆ ಹಾರಿ ಬಂದುವು. ಭತ್ತರಾಶಿಯ ಮೇಲೆ ಕುಳಿತು ಭತ್ತವನ್ನು ಒಂದೊಂದಾಗಿ(ಕೊಜಿಲಿ[೧]) ಕೊಕ್ಕಿನಿಂದ ಸುಲಿದು ಅಕ್ಕಿ ಮತ್ತು ಉಮಿ[೨](ಹೊಟ್ಟು)ಯನ್ನು ಬೇರೆ ಬೇರೆ ಗುಡ್ಡೆ(ರಾಶಿ) ಹಾಕಿಕೊಟ್ಟು ಹಾರಿಹೋದುವು. "ಅಜ್ಜಿ ನೀನು ಕೊಟ್ಟ ಭತ್ತವನ್ನು ಅಕ್ಕಿ ಮಾಡಿಯಾಯಿತು. ನಾನಿನ್ನು ಹೋಗುತ್ತೇನೆ. ಕತ್ತಲಾದರೆ ಮತ್ತೆ ನನಗೆ ದಾರಿ ಕಾಣಲಾರದು. ಬೆಂಕಿ ಕೊಡು" ಎಂದು ರಾಜಕುಮಾರಿ ರಕ್ಕಸಿಯನ್ನು ಕೇಳಿದಳು. ರಕ್ಕಸಿಯ ಮಗ ಇನ್ನೂ ಬಂದಿರಲಿಲ್ಲ. ರಾಜಕುಮಾರಿಯನ್ನು ಉಳಿಸಿಕೊಳ್ಳಲು ಬೇರೆ ದಾರಿ ಕಾಣದೆ ಒಂದು ತೂತಿರುವ ದೊಡ್ಡ ಗೆರಟೆಯ[೩] ತುಂಬ ಬೂದಿ ಹಾಕಿ ಅದರಲ್ಲಿ ಬೆಂಕಿ ಕೆಂಡ ಇಟ್ಟು ರಾಜಕುಮಾರಿಯ ಕೈಯಲ್ಲಿ ಕೊಟ್ಟಳು. ರಾಜಕುಮಾರಿ ಬೆಂಕಿಯನ್ನೆತ್ತಿಕೊಂಡು ತನ್ನ ಮನೆಗೆ ಹೋಗಿ ಒಲೆ ಉರಿಸಿ ಅಡುಗೆ ಮಾಡಿದಳು.

ರಾಜಕುಮಾರಿ ಹೊರಟು ಹೋದ ಸ್ವಲ್ಪ ಹೊತ್ತಿನ ಬಳಿಕ ರಕ್ಕಸಿಯ ಮಗ ಮನೆಗೆ ಬಂದ. "ಅಯ್ಯೋ ಮಗನೇ ಒಬ್ಬಳು ಬಹಳ ಚೆಂದದ ಹುಡುಗಿ ಇಲ್ಲಿಗೆ ಬೆಂಕಿ ಕೇಳಲು ಬಂದಿದ್ದಳು. ಅವಳು ನಿನಗೆ ಹೆಂಡತಿಯಾಗಲು ತಕ್ಕವಳು. ಅವಳನ್ನು ಸ್ವಲ್ಪ ಹೊತ್ತು ಕೆಲಸ ಕೊಟ್ಟು ನಿಲ್ಲಿಸಿದೆ. ಈಗತಾನೇ ಅವಳು ಹೊರಟು ಹೋದಳು ಎಂದು ರಕ್ಕಸಿ ಮಗನಿಗೆ ಹುಡುಗಿಯ ಆಸೆ ತೋರಿಸಿದಳು. "ಅವಳು ಎಲ್ಲಿ ಹೋದಳೆಂದು ಹೇಗೆ ಹುಡುಕುವುದಮ್ಮಾ" ಎಂದು ಮಗ ಕೇಳಿದ. ಅವಳನ್ನು ಹುಡುಕಲು ದಾರಿ ಸುಲಭವಿದೆ. ಅವಳ ಕೈಯಲ್ಲಿ ತೂತಿರುವ ಗೆರಟೆ ತುಂಬ ಬೂದಿ ಹಾಕಿ ಅದರ ಮೇಲೆ ಕೆಂಡ ಹಾಕಿ ಕೊಟ್ಟಿದ್ದೇನೆ. ಅವಳು ದಾರಿಯಲ್ಲಿ ನಡೆದುಕೊಂಡು ಹೋಗುವಾಗ

ಗೆರಟೆಯ ತೂತಿನಿಂದ ಬೂದಿ ಉದುರುತ್ತಾ ಹೋಗುತ್ತದೆ. ಅದೇ ದಾರಿ ಹಿಡಿದು ನೀನು ಆಕೆಯನ್ನು ಹುಡುಕಿಕೊಂಡು ಹೋಗು ಎಂದು ಮುದುಕಿ ಮಗನಿಗೆ ಉಪಾಯ ಹೇಳಿಕೊಟ್ಟಳು.

ರಕ್ಕಸ ಹಾಗೆಯೇ ಮಾಡಿದ. ಬೂದಿ ಬಿದ್ದ ಗುರುತನ್ನು ಅರಸಿಕೊಂಡು ಹೋಗಿ ರಾಜಕುಮಾರಿಯ ಮನೆ ಬಾಗಿಲ ಬಳಿ ಹೋಗಿ ನಿಂತ. ಮನೆಯ ಬಾಗಿಲು ಹಾಕಿತ್ತು. ಬಾಗಿಲು ಬಡಿದಾಗ ರಾಜಕುಮಾರಿ ಬಾಗಿಲು ತೆರೆಯಲಿಲ್ಲ. "ಯಾರು ಬಂದರು" ಎಂದು ಕೇಳಿದಳು ಅದಕ್ಕೆ ಆ ರಕ್ಕಸ "ನಿನ್ನ ಹಿರಿಯಣ್ಣ ಬಂದಿದ್ದೇನೆ ಬಾಗಿಲು ತೆರೆ" ಎಂದ. ರಾಜಕುಮಾರಿಗೆ ಒಮ್ಮೆಗೆ ಸಂತೋಷವಾಯಿತು. ಬಾಗಿಲು ತೆರೆಯಲು ಹೋಗುವಷ್ಟರಲ್ಲಿ ಮನೆ ಮುಂದಿನ ಮಾವಿನ ಮರದಲ್ಲಿ ಕುಳಿತ ಕಾಗೆಯೊಂದು "ರಾಜಕುಮಾರಿ ಬಾಗಿಲು ತೆಗೆಯಬೇಡ ಬಂದವನು ನಿನ್ನ ಅಣ್ಣನಲ್ಲ ಅವನೊಬ್ಬ ರಕ್ಕಸ" ಎಂದು ಎಚ್ಚರಿಕೆ ನೀಡಿತು.

ರಕ್ಕಸ ಆ ದಿನ ಹೊರಟು ಹೋದ. ಎಂದಾದರೂ ಒಂದು ದಿನ ರಾಜ ಕುಮಾರಿ ಬಾಗಿಲು ತೆಗೆದೇ ತೆಗೆಯುತ್ತಾಳೆ ಎಂದು ಪ್ರತಿದಿನ ಮನೆಬಾಗಿಲ ಮುಂದೆ ಕುಳಿತು ರಾಜಕುಮಾರಿ ಹೊರಬರುವುದನ್ನೇ ಕಾಯತೊಡಗಿದ.

ಹೀಗೆ ಕೆಲವು ದಿನಗಳಾದ ಮೇಲೆ ಏಳು ಕಡಲಾಚೆ ಮುತ್ತು ತರಲು ಹೋದ ಅಣ್ಣಂದಿರು ಹಿಂತಿರುಗಿ ಬಂದರು. ರಾಜಕುಮಾರಿಯ ಮನೆ ಮುಂದೆ ನಿಂತು "ಬಾಗಿಲು ತೆರೆಯಮ್ಮಾ ನಾವು ನಿನ್ನ ಅಣ್ಣಂದಿರು ಬಂದಿದ್ದೇವೆ" ಎಂದರು ರಾಜಕುಮಾರಿಗೆ ಬಾಗಿಲು ತೆರೆಯಲು ಧೈರ್ಯವಿಲ್ಲ. ಇದು ರಕ್ಕಸನದ್ದೇ ಮೋಸವಿರಬಹುದೆಂದು ಭಾವಿಸಿ "ಕಾಗಕ್ಕಾ ಕಾಗಕ್ಕಾ ಬಂದವರ್‍ಯಾರು? ಹೇಳು? ಎಂದು ಕಾಗೆಯೊಡನೆ ಕೇಳಿದಳು. ನಿನ್ನ ಅಣ್ಣಂದಿರೇ ಬಂದಿದ್ದಾರೆ ಬಾಗಿಲು ತೆಗೆ" ಎಂದಿತು ಕಾಗೆ.

ರಾಜಕುಮಾರಿ ಬಾಗಿಲು ತೆರೆಯುವಷ್ಟರಲ್ಲಿ ಅಣ್ಣಂದಿರ ಒಟ್ಟಿಗೆ ರಕ್ಕಸನೂ ಒಳಗೆ ನುಗ್ಗಿದ. ರಾಜಕುಮಾರಿಯನ್ನು ಹಿಡಿಯಲು ಹೋದ. ಅಷ್ಟರಲ್ಲಿ ಏಳು ಜನ ಅಣ್ಣಂದಿರು ಸೇರಿ ರಕ್ಕಸನನ್ನು ಹಿಡಿದು ಗುದ್ದಿ ಗುದ್ದಿಯೇ ಕೊಂದು ಹಾಕಿದರು. ತಂಗಿಯನ್ನು ಅರಮನೆಗೆ ಕರೆದೊಯ್ದು ವಿಜೃಂಭಣೆಯಿಂದ ಮದ್ವೆ ಮಾಡಿಕೊಟ್ಟರು.

ಟಿಪ್ಪಣಿಗಳು

೧. ಕೊಜಿಲಿ – ಬಾಯಲ್ಲಿ ಸುಲಿದು

೨. ಉಮಿ – ಭತ್ತದ ಹೊಟ್ಟು

೩. ಗೆರಟೆ – ಕರಟ

***

೧೮

ಕೀಲುಕುದುರೆ ಸವಾರನನ್ನು ವರಿಸಿದ ರಾಜಕುಮಾರಿ

ಒಂದಾನೊಂದು ಊರು, ಆ ಊರಿಗೊಬ್ಬ ಅರಸ. ಆ ಅರಸನಿಗೊಬ್ಬಳೇ ಮಗಳು. ಆಕೆ ಬಲು ಚೆಲುವೆ. ವಿದ್ಯಾವಂತೆ, ಬುದ್ಧಿವಂತೆ. ತನಗೆ ಇರುವವಳೊಬ್ಬಳೇ ಮಗಳಾಗಿರುವುದರಿಂದ ಆಕೆಗೆ ತಂದೆ ಯುದ್ಧ ವಿದ್ಯೆ, ಕುದುರೆ ಸವಾರಿ, ಕತ್ತಿ ವರಸೆ ಎಲ್ಲವನ್ನೂ ಕಲಿಸಿದ. ತನ್ನ ಮಗಳಿಗೆ ಯೋಗ್ಯ ರಾಜಕುಮಾರನನ್ನು ಹುಡುಕಿ ಮದ್ವೆ ಮಾಡಿಸಬೇಕೆಂಬ ಆಲೋಚನೆಯಲ್ಲಿದ್ದ.

ಅಷ್ಟರಲ್ಲಿ ಆ ಊರಿಗೆ ಮಳೆ ಬಾರದೆ ಬರಗಾಲ ಬಂತು. ಜಲಾಶಯಗಳ ನೀರೆಲ್ಲ ಆರಿಹೋಯಿತು. ಬೆಳೆ ಒಣಗಿ ಹೋಯಿತು. ಕಾಡಿನಲ್ಲಿದ್ದ ಮೃಗಗಳೆಲ್ಲ ಊರಿಗೆ ದಾಳಿ ಮಾಡಲು ಪ್ರಾರಂಭಿಸಿದವು. ಕಾಡಿನಲ್ಲಿದ್ದ ಒಂದು ದೊಡ್ಡ ಮದ್ದಾನೆ ಊರಿಗಿಳಿಯಿತು. ಇದ್ದ ಕಬ್ಬು, ಬಾಳೆಯ ತೋಟವನ್ನೆಲ್ಲ ತಿಂದು ಹಾಕಿತು. ಕೊನೆಗೆ ಅದು ಊರ ಮಧ್ಯದ ಒಂದು ದೊಡ್ಡ ಕೆರೆಯಲ್ಲಿ ಹೋಗಿ ಮಲಗಿಕೊಂಡಿತು.

ಆ ಕೆರೆ, ಊರಲ್ಲಿರುವ ಒಂದೇ ಒಂದು ದೊಡ್ಡ ಕೆರೆ. ಉಳಿದ ಜಲಾಶಯಗಳೆಲ್ಲ ಬತ್ತಿ ಹೋದುದರಿಂದ ಊರವರೆಲ್ಲರೂ ಅದೇ ಕೆರೆಯಿಂದ ನೀರು ಪಡೆಯುತ್ತಿದ್ದರು. ಅದರೆ ಆ ಕೆರೆಯಲ್ಲಿ ಬಂದು ಆನೆ ಮಲಗಿದ್ದರಿಂದ ಯಾರಿಗೂ ಕೆರೆಯ ಬಳಿ ಹೋಗಲು ಧೈರ್ಯವಿಲ್ಲ. ತಮಟೆ ಬಡಿದು, ಬೆಂಕಿ ತೋರಿಸಿ ಆನೆಯನ್ನೋಡಿಸಲು ಅನೇಕರು ಪ್ರಯತ್ನಪಟ್ಟರು. ಆದರೆ ಜನರನ್ನು ನೋಡಿದ ಕೂಡಲೇ ಆನೆ ಅವರನ್ನು ಕೊಲ್ಲಲು ಬೆನ್ನಟ್ಟಿ ಬರುತ್ತಿತ್ತು. ಹೀಗಾಗಿ ಜನರೆಲ್ಲ ಕಂಗಾಲಾದರು. ಸ್ವತಃ ರಾಜಕುಮಾರಿಯೇ ಆನೆಯನ್ನು ಕೊಲ್ಲಲು ಪ್ರಯತ್ನಿಸಿದಳು. ಅವಳಿಂದಲೂ ಆಗಲಿಲ್ಲ. ಕೊನೆಗೆ ಯಾರು ಈ ಮದ್ದಾನೆಯನ್ನು ಕೊಲ್ಲುತ್ತಾರೋ ಅವರನ್ನೇ ತಾನು ಮದ್ವೆಯಾಗುವುದಾಗಿ ಡಂಗುರ ಸಾರಿಸಿದಳು.

ಪಕ್ಕದ ಊರಲ್ಲಿ ಒಬ್ಬ ಸಾಹುಕಾರನಿದ್ದ. ಆತನ ಕಿರಿಯ ಮಗನಲ್ಲಿ ಒಂದು ಕೀಲುಕುದುರೆ ಇತ್ತು. ಆ ಕೀಲುಕುದುರೆ ಮೇಲೆ ಕುಳಿತು ಕೀಲಿ ಕೊಟ್ಟರೆ ಅದು ಆಕಾಶದಲ್ಲಿ ಹಾರುತ್ತಿತ್ತು. ರಾಜಕುಮಾರಿ ಸಾರಿದ ಡಂಗುರ ಕೀಲುಕುದುರೆ ಸವಾರನ

ಕಿವಿಗೆ ಮುಟ್ಟಿತು. ರಾಜಕುಮಾರಿಯನ್ನು ಪಡೆಯುವ ಆಸೆಯಿಂದ ಆನೆಯನ್ನು ಕೊಲ್ಲಲು ಆತ ಹೊರಟು ಆ ಊರಿಗೆ ಬಂದ.

ಲೋಕ ಸಂಚಾರ ಮಾಡುವ ನೆಪ ಹೇಳಿ ಆತ ಮನೆಯಿಂದ ಹೊರಟು ಬಹಳ ದೂರದವರೆಗೆ ಆಕಾಶದಲ್ಲಿ ಸಂಚರಿಸುತ್ತಾ ಬಂದು ಕತ್ತಲಾಗುವ ಹೊತ್ತಿಗೆ ಆ ಊರಲ್ಲಿ ಬಂದಿಳಿದ. ಅಲ್ಲೊಂದು ಅಡುಗೂಲಜ್ಜಿಯ ಮನೆ ಇತ್ತು. ಅಲ್ಲಿ ಹೋಗಿ ಆ ರಾತ್ರಿ ಅಲ್ಲಿ ತಂಗಲು ಅಜ್ಜಿಯೊಡನೆ ಆಶ್ರಯ ಕೇಳಿದ. ಆ ರಾತ್ರಿ ಅಲ್ಲಿ ತಂಗಿ ರಾತ್ರಿ ಊಟವಾದ ಮೇಲೆ ಅಜ್ಜೀ ಅಜ್ಜೀ ಈ ಊರಿನ ಸ್ಥಿತಿಗತಿ ಏನೆಂದು ಕೇಳಿದ. ಅದಕ್ಕೆ ಅಜ್ಜಿಯು "ಈ ಊರಿಗೆ ಬರಗಾಲ ಬಂದಿದೆ. ಕುಡಿಯಲು ನೀರಿಲ್ಲ. ಊರಲ್ಲೊಂದು ಕೆರೆ ಇದೆ. ಕೆರೆಯ ಮಧ್ಯೆ ಮದ ಬಂದ ದೊಡ್ಡ ಆನೆಯೊಂದು ನಿಂತಿದೆ. ಹಾಗಾಗಿ ನೀರು ತರಲು ಆ ಕೆರೆ ಬಳಿಗೆ ಹೋಗಲು ಎಲ್ಲರೂ ಹೆದರುತ್ತಾರೆ. ಹೋದ ಅನೇಕರನ್ನು ಆನೆ ಕೊಂದು ಹಾಕಿದೆ. ಈ ಊರಿನ ರಾಜಕುಮಾರಿ ಆ ಮದ್ದಾನೆಯನ್ನು ಕೊಂದವನನ್ನು ತಾನು ಮದ್ವೆಯಾಗುವುದಾಗಿ ಡಂಗುರ ಸಾರಿದ್ದಾಳೆ" ಎಂದು ಹೇಳಿದಳು.

ಕೀಲು ಕುದುರೆ ಸವಾರ ಬೆಳಗಾಗುತ್ತಲೇ ಎದ್ದು ಒಂದು ದೊಡ್ಡ ಖಡ್ಗವನ್ನೆತ್ತಿಕೊಂಡು ಕೀಲುಕುದುರೆ ಏರಿ ಕೆರೆಯ ಬಳಿಗೆ ಹೋಗಿ ಇಳಿದ. ಆನೆ ಕೆರೆಯ ಮಧ್ಯೆ ನಿಂತಿತ್ತು. ಕೀಲು ಕುದುರೆ ಮೇಲೆ ಕುಳಿತು ಆನೆಯ ಮೇಲಿಂದ ಹಾರಿ ಹೋಗುತ್ತಿದ್ದಂತೆ ಆನೆ ಸೊಂಡಿಲನ್ನೆತ್ತಿ ಘೀಳಿಟ್ಟಿತು. ತಕ್ಷಣ ತನ್ನ ಖಡ್ಗದಿಂದ ಆನೆಯ ಸೊಂಡಿಲನ್ನು ಕತ್ತರಿಸಿ ಹಾಕಿದ. ಆನೆ ಕೆರೆಯಲ್ಲಿ ಸತ್ತು ಬಿದ್ದಿತು. ಸಾಹುಕಾರ ಯುವಕ ಆನೆಯ ಸೊಂಡಿಲನ್ನೆತ್ತಿಕೊಂಡು ಅಜ್ಜಿಯ ಮನೆಗೆ ಬಂದ.

ಕೀಲು ಕುದುರೆ ಸವಾರ ಆನೆಯನ್ನು ಕೊಂದ. ಸ್ವಲ್ಪ ಹೊತ್ತಿನಲ್ಲೇ ಮಾಂಕು ಎಂಬವನೊಬ್ಬ ಆ ಕೆರೆಗೆ ಬಟ್ಟೆ ಮಡಿ ಮಾಡಲು ಬಂದ. ಆನೆ ಸತ್ತಿರುವುದನ್ನು ಕಂಡು ಆತನಿಗೆ ಬಹಳ ಸಂತೋಷವಾಯಿತು. ಹೋಗಿ ಅದರ ಬಾಲವನ್ನು ತನ್ನ ಕೈಯಲ್ಲಿದ್ದ ಕತ್ತಿಯಲ್ಲಿ ಕತ್ತರಿಸಿ ಅರಮನೆಗೆ ಕೊಂಡೊಯಿದು ಅರಸನಿಗೊಪ್ಪಿಸಿ ತಾನು ಕೆರೆಯಲ್ಲಿದ್ದ ಮದ್ದಾನೆಯನ್ನು ಕೊಂದು ಬಂದುದಾಗಿ ಹೇಳಿದ. ಮಗಳನ್ನು ಮದ್ವೆ ಮಾಡಿಕೊಡುವಂತೆ ರಾಜನಲ್ಲಿ ವಿನಂತಿಸಿಕೊಂಡ ಮಾಂಕು ಮುದುಕ. "ನಿನಗೇಕೆ ರಾಜಕುಮಾರಿ? ನಿನಗೆ ಎಷ್ಟು ಹಣ ಬೇಕೋ ಅಷ್ಟು ಕೇಳು. ರಾಜಕುಮಾರಿಯನ್ನು ಮಾತ್ರ ಕೇಳಬೇಡ"ವೆಂದು ಅರಸ ಎಷ್ಟು ಹೇಳಿದರೂ ಮಾಂಕು ಅದಕ್ಕೊಪ್ಪಲಿಲ್ಲ. ತನಗೆ ರಾಜಕುಮಾರಿಯೇ ಬೇಕೆಂದು ಹಟಹಿಡಿದ. ಉಪಾಯ ಕಾಣದ ರಾಜ ಮದ್ವೆಗೆ ದಿನ ನಿಶ್ಚಯ ಮಾಡಿದ. ಊರಲ್ಲೆಲ್ಲಾ ಡಂಗುರ ಸಾರಲಾಯಿತು. ದೊಡ್ಡ ಚಪ್ಪರ ಹಾಕಲಾಗಿತ್ತು. ಭಾರಿ ಭೋಜನ ಏರ್ಪಡಿಸಲಾಗಿತ್ತು. ಮಾಂಕು ಅಲಂಕಾರ ಗೊಂಡು ದಿಬ್ಬಣ ಸಹಿತ ಬಂದಿದ್ದ. ಮದ್ವೆಯ ಮುಹೂರ್ತ ಹತ್ತಿರ ಬಂದಾಗ ಇದನ್ನೆಲ್ಲಾ ತಿಳಿದುಕೊಂಡ ಕೀಲುಕುದುರೆ ಸವಾರ ಅರಮನೆಯ ಎದುರು ಬಂದಿಳಿದ. ಮದುವೆಯ

ಮುಹೂರ್ತಕ್ಕೆ ಸರಿಯಾಗಿ ರಾಜಕುಮಾರಿ ಸಭೆಯ ಮಧ್ಯೆ ಬಂದು "ಆನೆಯನ್ನು ತಾನು ಕೊಂದದ್ದೆಂದು ಮಾಂಕು ಆ ಆನೆಯ ಬಾಲ ತಂದು ತೋರಿಸಿದ್ದಾನೆ. ಬಾಲ ತುಂಡಾದೊಡನೆ ಆನೆ ಸಾಯುವುದಿಲ್ಲ. ಆನೆ ಸಾಯಬೇಕಾದರೆ ಅದರ ಸೊಂಡಿಲನ್ನು ಕಡಿಯಬೇಕು. ಬಾಲ ಕಡಿದು ತಂದ ಮಾಂಕುವನ್ನು ನಾನು ಮದ್ವೆಯಾಗುವುದಿಲ್ಲ. ಆನೆಯ ಸೊಂಡಿಲು ಕಡಿದು ಯಾರಾದರೂ ತಂದಿದ್ರೆ ತೋರಿಸಿ. ಅವರನ್ನು ನಾನು ಮದ್ವೆಯಾಗುತ್ತೇನೆ" ಎಂದಳು. ಅಷ್ಟರಲ್ಲಿ ಸಭೆಯಿಂದೆದ್ದು ಕೀಲು ಕುದುರೆ ಸವಾರ ಆನೆಯ ಸೊಂಡಿಲನ್ನೆತ್ತಿಕೊಂಡು ಬಂದು ಅದನ್ನು ಅರಸನ ಕೈಗಿತ್ತ. ತಾನೇ ಆನೆಯನ್ನು ಕೊಂದಿರುವುದಾಗಿ ಹೇಳಿದ. ತಾನು ಆನೆಯನ್ನು ಕೊಂದು ಹಾಕಿದ ಬಳಿಕ ಅದರ ಬಾಲವನ್ನು ಮಾಂಕು ಕಡಿದುಕೊಂಡು ಬಂದ ವಿಷಯವನ್ನೂ ತಿಳಿಸಿದ.

ಅತಿಥಿಗಳೆಲ್ಲರೂ ಆತನೇ ಆನೆಯನ್ನು ಕೊಲ್ಲಲು ಸಮರ್ಥನಾದವನೆಂದು ನಿರ್ಣಯಿಸಿದರು. ಮಾಂಕುವನ್ನು ಗದರಿಸಿದಾಗ ತಾನು ಸತ್ತು ಬಿದ್ದ ಆನೆಯ ಬಾಲ ಕತ್ತರಿಸಿಕೊಂಡು ಬಂದುದಾಗಿ ಸತ್ಯ ಹೇಳಿದ. ಕೀಲು ಕುದುರೆ ಸವಾರನೊಡನೆ ರಾಜಕುಮಾರಿಯ ಮದ್ವೆ ನಡೆಯಿತು. ಮಾಂಕುವನ್ನು ಅಲ್ಲಿಂದ ಗಡಿಪಾರು ಮಾಡ ಲಾಯಿತು.

ಅರಮನೆಯಲ್ಲಿ ನಾಲ್ಕು ದಿವಸ ಕುಳಿತು ಐದನೇ ದಿನ ತನ್ನ ಮಡದಿಯೊಡನೆ ಕುದುರೆ ಸವಾರ ತನ್ನ ಕೀಲುಕುದುರೆ ಏರಿ ಊರಿಗೆ ಹೊರಟ. ಬಹಳಷ್ಟು ದೂರ ಹೋದ ಮೇಲೆ ಇದ್ದಕ್ಕಿದ್ದಂತೆ ಕೀಲು ಕುದುರೆ ಹಾಳಾಗಿ ನೆಲಕ್ಕಿಳಿದು ನಿಂತಿತು. ಏನು ಮಾಡುವುದೆಂದು ತೋಚಲಿಲ್ಲ. ಇಬ್ಬರಿಗೂ ಬಹಳ ಬಾಯಾರಿಕೆಯಾಗಿತ್ತು. ತನ್ನ ಮಡದಿಯನ್ನು ಕುದುರೆ ಬಳಿ ನಿಲ್ಲಿಸಿ ನಾನು ಎಲ್ಲಾದರೂ ನೀರಿದ್ದರೆ ಹೋಗಿ ತರುತ್ತೇನೆಂದು ಕುದುರೆ ಸವಾರ ಹೊರಟ.

ಅಷ್ಟರಲ್ಲಿ ಆ ಊರಿನ ಶ್ರೀಮಂತನೊಬ್ಬ ವಾಯುವಿಹಾರಕ್ಕೆಂದು ಆ ಕಡೆ ಬರುತ್ತಿದ್ದವನು ರಾಜಕುಮಾರಿಯನ್ನು ನೋಡಿದ. ಇಷ್ಟು ಚಂದದ ಹುಡುಗಿ ಇಷ್ಟು ಸುಲಭದಲ್ಲಿ ಸಿಗುವಾಗ ಬಿಡುವುದು ಹೆಡ್ಡತನವೆಂದು ಆಕೆಯನ್ನು ತನ್ನ ಮನೆಗೆ ಬಲಾತ್ಕಾರವಾಗಿ ಕರೆದುಕೊಂಡು ಹೋದ. ಆಕೆ "ತನ್ನ ಗಂಡ ನೀರು ತರಲು ಹೋಗಿದ್ದಾನೆ ಇನ್ನೇನು ಸ್ವಲ್ಪ ಹೊತ್ತಿನಲ್ಲಿ ಬರುತ್ತಾನೆ" ಎಂದು ಎಷ್ಟು ಹೇಳಿಕೊಂಡರೂ ಶ್ರೀಮಂತ ಕೇಳಲೇ ಇಲ್ಲ. ರಾಜಕುಮಾರಿಯನ್ನು ತನ್ನ ಮನೆಗೊಯ್ದು ಮರುದಿನ ಮದ್ವೆಗೆ ನಿಶ್ಚಯ ಮಾಡಿದ. ಊರವರೆಲ್ಲರನ್ನೂ ಊಟಕ್ಕೆ ಕರೆದ.

ಕುದುರೆ ಸವಾರ ನೀರು ತೆಗೆದುಕೊಂಡು ಬರುವಾಗ ಅಲ್ಲಿ ರಾಜಕುಮಾರಿ ಇರಲಿಲ್ಲ. ಆಕೆಯನ್ನು ಬಲತ್ಕಾರದಿಂದ ಆ ಊರಿನ ಸಾಹುಕಾರನ ಕಡೆಯವರು ಎತ್ತಿಕೊಂಡೊಯ್ದ ಸಂಗತಿ ಆತನಿಗೆ ತಿಳಿಯಿತು. ಮದ್ವೆಯ ವಿಷಯವು ಕೀಲು ಕುದುರೆ ಸವಾರನಿಗೆ ಗೊತ್ತಾಯಿತು. ಆತನೂ ಮದುವೆಯ ದಿನ ಸಾಹುಕಾರನ ಮನೆಗೆ ಹೋಗಿ ಊಟ

ಮಾಡಲು ಕುಳಿತ. ಕೀಲುಕುದುರೆ ಸವಾರ ಹಾಗೂ ರಾಜಕುಮಾರಿ ಇಬ್ಬರೂ ಪರಸ್ಪರ ನೋಡಿಕೊಂಡರಾದರೂ ಅವರವರು ಮಾತನಾಡಿಕೊಳ್ಳಲು ಸಾಧ್ಯವಾಗಲಿಲ್ಲ. ರಾಜಕುಮಾರಿ ಬಂದವರೆಲ್ಲರಿಗೂ ಒಂದೊಂದು ಶಾಲು ಉಡುಗೊರೆ ಕೊಡುವಂತೆ ಶ್ರೀಮಂತನೊಡನೆ ಕೇಳಿಕೊಂಡಳು. ಅವಳ ಬೇಡಿಕೆಯಂತೆ ಬಂದವರೆಲ್ಲರಿಗೂ ಒಂದೊಂದು ಶಾಲು ಹಂಚಲಾಯಿತು. ರಾಜಕುಮಾರಿ ಕೀಲುಕುದುರೆ ಸವಾರನಿಗೆ ಶಾಲು ಹಂಚುವಾಗ ಅದರೆಡೆಯಲ್ಲೊಂದು ಪತ್ರವಿಟ್ಟು ಕಳುಹಿಸಿಕೊಟ್ಟಳು. ಆ ಪತ್ರದಲ್ಲಿ "ಈ ದಿನ ರಾತ್ರಿ ನೀನು ಮನೆಯ ಹಿತ್ತಿಲ ಬಾಗಿಲ ಬಳಿಗೆ ಬಾ ನಾನು ನಿನ್ನೊಂದಿಗೆ ಬರುತ್ತೇನೆ" ಎಂದು ಬರೆದಿದ್ದಳು. ಕೀಲುಕುದುರೆ ಸವಾರ ಪತ್ರವನ್ನು ಗಮನಿಸದೆ ಶಾಲನ್ನು ಹೊದ್ದುಕೊಂಡು ಹೋದ. ಅಷ್ಟರಲ್ಲಿ ಕೆಳಗೆ ಬಿದ್ದ ಪತ್ರವನ್ನು ಅಲ್ಲಿ ಕುಳಿತ್ತಿದ್ದ ಒಬ್ಬ ಯುವಕ ಹೆಕ್ಕಿಕೊಂಡ. ಅದನ್ನೋದಿದ ಆತ ರಾತ್ರಿ ಹೊತ್ತು ಶ್ರೀಮಂತನ ಮನೆಯ ಹಿತ್ತಿಲ ಬಾಗಿಲ ಬಳಿ ಬಂದು ನಿಂತ. ರಾಜಕುಮಾರಿ ಮನೆಯಿಂದ ಹೊರಗೆ ಬಂದಳು. ಕತ್ತಲೆಯಲ್ಲಿ ಯುವಕನ ಮುಖ ಕಾಣಲಿಲ್ಲ. ಆತ ಕೀಲುಕುದುರೆ ಸವಾರನೇ ಆಗಿರಬಹುದೆಂದು ಅವನೊಂದಿಗೆ ಹೊರಟಳು.

ದಾರಿಯಲ್ಲಿ ಹೋಗುವಾಗ ಇವರಿಬ್ಬರನ್ನು ಒಂದು ಕಳ್ಳರ ಗುಂಪು ಅಡ್ಡಕಟ್ಟಿತು. ರಾಜಕುಮಾರಿಯ ಮೈ ತುಂಬಾ ಬಂಗಾರದ ಆಭರಣಗಳಿದ್ದುವು. ಕಳ್ಳರು ಯುವಕನನ್ನು ಕೊಂದು ಆಕೆಯನ್ನು ತಮ್ಮೊಂದಿಗೆ ತಾವು ವಾಸ ಮಾಡುವ ಗುಹೆಗೆ ಕರೆದುಕೊಂಡು ಹೋದರು. ರಾಜಕುಮಾರಿ ತಾನು ಹಬ್ಬದಡುಗೆ ಮಾಡುವುದಾಗಿ ಕಳ್ಳರಿಗೆ ಹೇಳಿದಳು. ರಾಜಕುಮಾರಿ ಅಡುಗೆ ಮಾಡುವಾಗ ಅವರೆಲ್ಲ ಕುಡಿತಕ್ಕೆ ಸುರುಮಾಡಿದರು. ರಾಜಕುಮಾರಿ ಅಲ್ಲಿ ಇಟ್ಟಿದ್ದ ಬಂಗಿಸೊಪ್ಪಿನ ಕಟ್ಟನ್ನು ನೋಡಿದಳು. ಅಡುಗೆಗೆ ಚೆನ್ನಾಗಿ ಬಂಗಿ ಬೆರೆಸಿ ಕಳ್ಳರೆಲ್ಲರಿಗೂ ಉಣಬಡಿಸಿದಳು. ಮೊದಲೇ ಚೆನ್ನಾಗಿ ಕುಡಿದಿದ್ದ ಅವರು ಬಂಗಿ ಬೆರೆಸಿದ ಊಟ ಮಾಡಿದ ಮೇಲೆ ಮಲಗಿದವರೆಲ್ಲರೂ ಅಲ್ಲಿಗೇನೆ ಜೀವ ಬಿಟ್ಟರು.

ಬೆಳಗಾದೊಡನೆ ಎದ್ದ ರಾಜಕುಮಾರಿ ಕಳ್ಳರು ಶೇಖರಿಸಿಟ್ಟಿದ್ದ ಎಲ್ಲಾ ಚಿನ್ನಾಭರಣ ಗಳನ್ನು ಗಂಟು ಕಟ್ಟಿಕೊಂಡು ಹೊರಟಳು. ಆ ದಿನ ಆ ಊರಿನ ಅಡುಗೂಲಜ್ಜಿಯ ಮನೆಯಲ್ಲಿ ನಿಂತು ಚಿನ್ನಾಭರಣಗಳನ್ನು ಒಂದೊಂದಾಗಿಯೇ ಮಾರಾಟ ಮಾಡಿ ಸಾಕಷ್ಟು ಹಣ ಸಂಪಾದನೆ ಮಾಡಿಕೊಂಡಳು. ನಂತರ ಪಟ್ಟಣಕ್ಕೆ ಹೋಗಿ ಒಂದು ದೊಡ್ಡ ಮನೆಯನ್ನು ಕೊಂಡುಕೊಂಡು ಅಲ್ಲಿ ವಾಸ ಮಾಡತೊಡಗಿದಳು. ಬೇಕಾದಷ್ಟು ಆಳುಕಾಳುಗಳನ್ನು ನೇಮಿಸಿಕೊಂಡಳು.

ಇಷ್ಟಾದರೂ ಆಕೆಯ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ತನ್ನ ಗಂಡನಿಗೆ ಏನಾಯಿತೋ ಎಲ್ಲಿ ಹೋದನೋ ಎಂಬ ಹೆದರಿಕೆ ಚಿಂತೆ ಆಕೆಯನ್ನು ಕಾಡುತ್ತಿತ್ತು. ಅಕೆಗೆ ಕೀಲುಕುದುರೆ ಸವಾರನ ಸುಳಿವು ಎಲ್ಲೂ ಸಿಗಲಿಲ್ಲ. ಆತನನ್ನು ಪತ್ತೆ ಹಚ್ಚಲು ಒಂದು ಉಪಾಯ

ಮಾಡಿದಳು. ಚಿತ್ರಕಲಾವಿದರನ್ನು ಕರೆಸಿ ತನ್ನ ಒಂದು ದೊಡ್ಡ ಚಿತ್ರ ಬರೆಸಿ ರಸ್ತೆಯಲ್ಲಿ ಹೋಗುವವರಿಗೆ ಸರಿಯಾಗಿ ಕಾಣುವಂತೆ ಮನೆಯ ಮುಂದೆ ನಾಲ್ಕು ಕಂಬ ಹಾಕಿ ತೂಗಿಸಿದಳು. ಅಲ್ಲೊಬ್ಬ ಕೆಲಸದಾಳನ್ನು ನಿಲ್ಲಿಸಿದಳು. ಯಾರಾದರೂ ಚಿತ್ರ ನೋಡಿ ಪ್ರತಿಕ್ರಿಯೆ ತೋರಿಸಿದರೆ ಅವರನ್ನು ತನ್ನಲ್ಲಿಗೆ ಕರೆದು ತರುವಂತೆ ಕೆಲಸದವನಲ್ಲಿ ಹೇಳಿದಳು.

ದಾರಿ ಹೋಗುವವರೆಲ್ಲ ಅವಳ ಚಿತ್ರಪಟವನ್ನು ನೋಡಿಕೊಂಡು ಏನೂ ಪ್ರತಿಕ್ರಿಯೆ ಮಾಡದೆ ಹೋಗುತ್ತಿದ್ದರು. ಒಂದು ದಿನ ಬಂದ ಶ್ರೀಮಂತನೊಬ್ಬ ಚಿತ್ರಪಟ ನೋಡಿ ಗಾಡಿಯಿಂದಿಳಿದ. ಅಲ್ಲಿ ಕಾಯುತ್ತಿದ್ದ ಕೆಲಸದವನೊಡನೆ ಎಲ್ಲಿದ್ದಾಳೆ ಈಕೆ ನನಗೆ ಮೋಸ ಮಾಡಿ ಹೋದವಳೆಂದು ಆ ಚಿತ್ರಪಟಕ್ಕೆ ಉಗಿದುಬಿಟ್ಟ. ಕೂಡಲೇ ಕೆಲಸದಾಳು ಗಳು ಆತನನ್ನು ಎಳೆದುಕೊಂಡು ಹೋಗಿ ರಾಜಕುಮಾರಿಯ ಮುಂದೆ ನಿಲ್ಲಿಸಿದರು. ರಾಜಕುಮಾರಿಗೆ ಆತ ತನ್ನನ್ನು ಬಲಾತ್ಕಾರದಿಂದ ಮದ್ವೆಯಾದ ಶ್ರೀಮಂತನೆಂದು ಗೊತ್ತಾಯಿತು. "ಇವನನ್ನು ಕರೆದುಕೊಂಡು ಹೋಗಿ ಅವನ ಬಟ್ಟೆ ಎಲ್ಲಾ ಕಳಚಿ ನೂರು ಚಡಿ ಏಟು ಕೊಟ್ಟು ರಸ್ತೆಯಲ್ಲಿ ಕೊಂಡೊಯ್ದು ಬಿಡಿ" ಎಂದಳು "ದಮ್ಮಯ್ಯಾ ನನ್ನನ್ನು ಬಿಟ್ಟು ಬಿಡಿ" ಎಂದು ಆತ ಕೂಗಾಡತೊಡಗಿದ. "ದಾರಿಯಲ್ಲಿ ಹೋಗುವ ಹುಡುಗಿಯರನ್ನೆಲ್ಲಾ ಬಲಾತ್ಕಾರವಾಗಿ ಎಳೆದುಕೊಂಡು ಹೋಗಿ ಮದ್ವೆಯಾಗುವ ನೀಚ" ಎಂದು ಹೇಳಿ ರಾಜಕುಮಾರಿ ತಾನೇ ಚಾಟಿ ತೆಗೆದು ಶ್ರೀಮಂತನಿಗೆ ನಾಲ್ಕು ಬಾರಿಸಿ ಕಳುಹಿಸಿಕೊಟ್ಟಳು.

ಇನ್ನೊಂದು ದಿನ ಒಬ್ಬ ಮುದುಕ ರಸ್ತೆಯಲ್ಲಿ ಹೋಗುತ್ತಾ ರಾಜಕುಮಾರಿಯ ಚಿತ್ರಪಟ ನೋಡಿ ಅದಕ್ಕೆ ಕಲ್ಲು ಹೊಡೆಯತೊಡಗಿದ. ಆಳುಗಳು ಆತನನ್ನು ಹಿಡಿದು ಕೊಂಡೊಯ್ದು ರಾಜಕುಮಾರಿಯ ಮುಂದೆ ನಿಲ್ಲಿಸಿದರು. ರಾಜಕುಮಾರಿಗೆ ಮಾಂಕುವಿನ ಗುರುತು ಸಿಕ್ಕಿತು. "ಮಹಾ ಸುಳ್ಳುಗಾರನೀತ ಚಂದದ ಹುಡುಗಿ ಸಿಕ್ಕಿದ್ರೆ, ಈ ಮುದ್ಕನಿಗೂ ಮದ್ವೆಯಾಗುವ ಆಸೆ ಹೋಗಿ ಅವನಿಗೆ ಚೆನ್ನಾಗಿ ಊಟ ಬಡಿಸಿ, ನಮ್ಮ ಹೂವಿನ ತೋಟಕ್ಕೆ ನೀರು ಹಾಕಲು ಇವನನ್ನು ನೇಮಕ ಮಾಡಿಕೊಳ್ಳಿ" ಎಂದಾಗ ಮಾಂಕುವನ್ನು ಆಳುಗಳು ಕರೆದೊಯ್ದರು.

ಇನ್ನೊಂದು ದಿನ ಒಬ್ಬ ಯುವಕ ರಸ್ತೆಯಲ್ಲಿ ಹೋಗುತ್ತಾ ರಾಜಕುಮಾರಿಯ ಚಿತ್ರಪಟ ನೋಡಿ ಅಲ್ಲೇ ನಿಂತುಬಿಟ್ಟ. ಚಿತ್ರಪಟದ ಹತ್ತಿರ ಹೋಗಿ ಅದನ್ನು ಮುಟ್ಟಿ ಕಣ್ಣೀರಿಟ್ಟು ಅಳತೊಡಗಿದ. ಆಳುಗಳು ಅವನನ್ನು ಕರೆದುಕೊಂಡು ಹೋಗಿ ರಾಜಕುಮಾರಿಯ ಮುಂದೆ ನಿಲ್ಲಿಸಿದರು. ರಾಜಕುಮಾರಿ ಆತನನ್ನು ತಬ್ಬಿಕೊಂಡು ಒಂದೇ ಸಮನೆ ಅತ್ತು ಸಂತೋಷದ ಕಣ್ಣೀರು ಸುರಿಸಿದಳು. ಆತ ಬೇರಾರೂ ಅಲ್ಲ, ಕೀಲುಕುದುರೆ ಸವಾರ. ತನ್ನ ಗಂಡನನ್ನು ಪಡೆದ ರಾಜಕುಮಾರಿ ಬಹಳ ಸಂತೋಷ ಪಟ್ಟಳು. ಆತನೊಂದಿಗೆ ಸುಖವಾಗಿದ್ದಳು. ಈ ಸುದ್ದಿ ಆಕೆಯ ತಂದೆಗೆ ಮುಟ್ಟಿತ್ತು.

ಆತ ತನ್ನ ರಾಣಿ ಸಹಿತ ಮಗಳ ಮನೆಗೆ ಬಂದು ಮಗಳು–ಅಳಿಯನನ್ನು ತನ್ನರಮನೆಗೆ ಕರೆದುಕೊಂಡು ಹೋದ. ಅನೆ ಸತ್ತು ಹೋದ ಮೇಲೆ ಅಲ್ಲಿ ಮಳೆ ಬಂದು ಬರಗಾಲ ನಿಂತಿತ್ತು. ತಾನು ಮುದುಕನಾದೆ, ತನಗಿನ್ನು ರಾಜ್ಯವಾಳಲು ಸಾಧ್ಯವಾಗದು ಯುದ್ಧ ವಿದ್ಯೆ ಕಲಿತ ನೀನೇ ಈ ರಾಜ್ಯವಾಳಬೇಕೆಂದು ಮಗಳನ್ನು ಕೇಳಿಕೊಂಡು ಮಗಳಿಗೆ ಪಟ್ಟಾಭಿಷೇಕ ಮಾಡಿ ರಾಜ್ಯದ ಆಡಳಿತವನ್ನು ಆಕೆಗೆ ಒಪ್ಪಿಸಿದನು. ಮಗಳು ಆಳಿಯನ ಜೊತೆ ತಂದೆ–ತಾಯಿ ಅರಮನೆಯಲ್ಲಿ ಸುಖವಾಗಿದ್ದರು.



೧೯

ದುಷ್ಟ ಮಂಗ ಮತ್ತು ರಾಜಕುಮಾರಿ

ಒಂದೂರಲ್ಲಿ ಒಬ್ಬ ರಾಜನಿದ್ದ. ಆತನಿಗೊಬ್ಬಳು ಮಗಳು. ಒಂದು ದಿನ ಅರಮನೆಗೆ ಮಂಗನನ್ನು ಕುಣಿಸಿಕೊಂಡು ಒಬ್ಬ ಬೇಡುವವ ಬಂದ. ಮಂಗ ಕುಣಿಸುವವನಿಗೆ ಭಿಕ್ಷೆ ಹಾಕಲು ದಾಸಿ ಹೋಗುವಾಗ ಅವಳೊಟ್ಟಿಗೆ ರಾಜಕುಮಾರಿ ಕೂಡ ಹೋದಳು. ಮಂಗನ ವಿಧವಿಧದ ಆಟವನ್ನು ನೋಡಿ ಬಾಲಕಿ ರಾಜಕುಮಾರಿಗೆ ಬಹಳ ಇಷ್ಟವಾಯಿತು. ಆ ಮಂಗ ತನಗೆ ಬೇಕೆಂದು ಹಟ ಹಿಡಿದಳು. ಮೊದಲು ಮಂಗನನ್ನು ಕೊಡುವುದಿಲ್ಲವೆಂದು ಹೇಳಿದ ಭಿಕ್ಷುಕ, ಕೊನೆಗೆ ರಾಜನೇ ಮಂಗನಿಗೆ ನಾಲ್ನೂರು ವರಹ ಕೊಡುತ್ತೇನೆಂದು ಹೇಳಿದ ಮೇಲೆ ಮಂಗನನ್ನು ಕೊಡಲು ಒಪ್ಪಿಕೊಂಡ. ಅರಸನಿಂದ ನಾಲ್ನೂರು ವರಹ ಪಡೆದು ಮಂಗನನ್ನು ರಾಜಕುಮಾರಿಗೆ ಕೊಟ್ಟು ಹೊರಟುಹೋದ.

ಬಾಲಕಿ ರಾಜಕುಮಾರಿ ಮಂಗನನ್ನು ತನ್ನ ಕೋಣೆಯಲ್ಲೇ ಇರಿಸಿ ಕೊಂಡಳು. ಅದನ್ನು ಬಹಳ ಪ್ರೀತಿಯಿಂದ ಸಾಕುತ್ತಿದ್ದಳು. ತಾನು ಉಣ್ಣುವ, ತಿನ್ನುವ, ಕುಡಿಯುವ ಆಹಾರವನ್ನೇ ಅದಕ್ಕೂ ಕೊಡುತ್ತಿದ್ದಳು. ತನ್ನ ಹಾಸಿಗೆಯಲ್ಲೇ ಮಲಗಿಸಿಕೊಳ್ಳುತ್ತಿದ್ದಳು. ಮಂಗವು ಕೂಡ ತನ್ನ ಆಟ ಚೇಷ್ಟೆಗಳಿಂದ ರಾಜಕುಮಾರಿಯನ್ನು ಸಂತೋಷಪಡಿಸುತ್ತಿತ್ತು.

ಹುಡುಗಿ ಬೆಳೆದು ದೊಡ್ಡವಳಾದಳು. ಈಗ ಅವಳಿಗೆ ಮಂಗಚೇಷ್ಟೆ ಇಷ್ಟವಾಗುತ್ತಿರಲಿಲ್ಲ. ಆದರೆ ಆ ಮಂಗ ರಾಜಕುಮಾರಿಗೆ ಉಪದ್ರ ಕೊಡುವುದನ್ನು ಮಾತ್ರ ಬಿಡಲಿಲ್ಲ. ಮಂಗನನ್ನು ಎಲ್ಲಿ ಮಲಗಿಸಿದರೂ ಅದು ರಾಜಕುಮಾರಿಯ ಹಾಸಿಗೆಯಲ್ಲೇ ಮಲಗುತ್ತಿತ್ತು. ಮಲಗಿದ ಮೇಲೆ ಸುಮ್ಮನಿರುತ್ತಿರಲಿಲ್ಲ. ಆಕೆಯ ಮೈ ಮೇಲೆ ಕೈ ಹಾಕಲು ಸುರು ಮಾಡುತ್ತಿತ್ತು. ರಾಜಕುಮಾರಿಗೆ ಇದು ಹಿಡಿಸಲಿಲ್ಲ. ಆಕೆ ಮೊದಲಿಗೆ ಮಂಗನನ್ನು ಮಂಗಟಾಯಿಸಿ[೧] ನೋಡಿದಳು. ಮಂಗನದ್ದು ಉಪದ್ರ ಮತ್ತೂ ಜೋರಾಯಿತು. ಗದರಿಸಿ ಹೊಡೆದು ನೋಡಿದಳು. ಅದಕ್ಕೂ ಮಂಗ ಬಗ್ಗಲಿಲ್ಲ. ಅವಳ ಕೋಣೆಯಿಂದ ಮಂಗನನ್ನು ಬೇರೆಡೆಗೆ ಕಳುಹಿಸಿ ಕೊಟ್ಟರೂ ಅದು ಹೇಗಾದರೂ ಮಾಡಿ ತಪ್ಪಿಸಿಕೊಂಡು ಅವಳ ಕೋಣೆಗೆ ಬಂದು ಸೇರುತ್ತಿತ್ತು. ಕೆಲಸದವರು ಅದನ್ನು ಹಿಡಿಯಲು ಹೋದರೆ ಅವರಿಗೆ ಹೊಡೆದು ಪರಚಿ, ಕಚ್ಚಿ ಗಾಯ ಮಾಡುತ್ತಿತ್ತು.

ರಾಜಕುಮಾರಿ ಕೆಲಸದವರನ್ನು ಕರೆದು "ಮಂಗನನ್ನು ಜೀವಂತವಾಗಿ ಇಟ್ಟರೆ ಅಪಾಯ ತಪ್ಪಿದ್ದಲ್ಲ. ನನ್ನ ಮಾನ-ಮರ್ಯಾದೆ ತೆಗೆದುಬಿಡುತ್ತದೆ. ಈ ಮಂಗನನ್ನು ಹೇಗಾದರೂ ಮಾಡಿ ಹಿಡಿದು ದೂರದ ಕಾಡಿಗೆ ಕೊಂಡೊಯ್ದು ಕೊಂದು ಬನ್ನಿ" ಎಂದಳು. ಆಳುಗಳು ಬಲೆ ಹಾಕಿಸಿ ಆ ಮಂಗನನ್ನು ಹಿಡಿದು ದೂರದ ಕಾಡಿಗೆ ಕೊಂಡೊಯ್ದರು. ಕಾಡಿನಲ್ಲಿ ಅದನ್ನು ಕೊಂದು ಬಂದಿರುವುದಾಗಿ ರಾಜಕುಮಾರಿಗೆ ಹೇಳಿದರು.

ಮಂಗ ಸತ್ತು ಹೋದುದನ್ನು ತಿಳಿದ ರಾಜಕುಮಾರಿ ಆ ರಾತ್ರಿಯಾದರೂ ಸುಖವಾಗಿ ನಿದ್ದೆ ಮಾಡಬಹುದೆಂದು ಭಾವಿಸಿದಳು. ರಾತ್ರಿ ಊಟ ಮಾಡಿ ಹಾಸಿಗೆ ಸೇರಬೇಕೆನ್ನು ವಷ್ಟರಲ್ಲಿ ಮತ್ತೆ ಮಂಗ ಪ್ರತ್ಯಕ್ಷವಾಯಿತು. ಸತ್ತುಹೋದ ಮಂಗ ಜೀವಂತವಾಗಿ ಬಂದುದನ್ನು ನೋಡಿದ ರಾಜಕುಮಾರಿಗೆ ಬಹಳ ಹೆದರಿಕೆಯಾಯಿತು. ಮಂಗ ಆಕೆಯನ್ನು ಕೊಲ್ಲಲು ಪ್ರಯತ್ನಿಸಿತು. ಇನ್ನು ಕೋಣೆಯೊಳಗೆ ಕುಳಿತರೆ ತನ್ನನ್ನು ಮಂಗ ಕೊಂದುಬಿಡುವುದಾಗಿ ಆಲೋಚಿಸಿ ಆಕೆ ಕೋಣೆಯ ಬಾಗಿಲು ತೆರೆದು ಹೊರಗಡೆ ಓಡಿ ಹೋಗತೊಡಗಿದಳು. ಮಂಗ ಆಕೆಯನ್ನು ಬೆನ್ನಟ್ಟಿಕೊಂಡು ಹೋಯಿತು.

"ರಕ್ಷಿಸಿ, ರಕ್ಷಿಸಿ" ಎನ್ನುತ್ತಾ ಆಕೆ ಓಡುತ್ತಿದ್ದಳು. ರಾತ್ರಿ ತುಂಬಾ ಹೊತ್ತಾಗಿದ್ದುದರಿಂದ ಎಲ್ಲರೂ ಗಾಢ ನಿದ್ದೆಯಲ್ಲಿದ್ದರು. ಯಾರಿಗೂ ಎಚ್ಚರವಾಗಲಿಲ್ಲ.

ಬಹಳ ದೂರ ಓಡಿ ಹೋದ ಮೇಲೆ ದಾರಿ ಪಕ್ಕದಲ್ಲಿ ಆಕೆಗೊಂದು ಒಣಗಿ ನಿಂತ ಮರ ಕಂಡಿತು. ಆ ಮರದೊಳಗೆ ಒಂದು ದೊಡ್ಡ ಪೊಟರೆ ಇತ್ತು. ರಾಜಕುಮಾರಿ ಮಂಗನ ಕಣ್ಣು ತಪ್ಪಿಸಿ ಆ ಮರದ ಪೊಟರೆಯೊಳಗೆ ನುಗ್ಗಿ ಅವಿತಿಟ್ಟುಕೊಂಡಳು. ಮಂಗನಿಗೆ ರಾಜಕುಮಾರಿ ಎಲ್ಲೂ ಕಾಣಲಿಲ್ಲ. ಈ ಮರವನ್ನೇರಿ ಎಲ್ಲೋ ಅಡಗಿ ಆಕೆ ಕುಳಿತಿರಬಹುದೆಂದು ಭಾವಿಸಿ ಮಂಗವು ಮರವನ್ನೇರಿತು. ಮಂಗ ಮರವನ್ನೇರಿದಾಗ ಅದರ ಭಾರಕ್ಕೆ ಒಣಗಿದ ಮರ ಮುರಿದು ಬಿತ್ತು. ಕೆಳಗೊಂದು ನದಿ ಹರಿಯುತ್ತಿತ್ತು. ಆ ನದಿಯಲ್ಲಿ ಮರ ತೇಲಿಕೊಂಡು ಮುಂದೆ ಮುಂದೆ ಹೋಯಿತು. ಮರದ ಪೊಟರೆಯೊಳಗೆ ರಾಜಕುಮಾರಿ ಇದ್ದಳು. ಅದೇ ಮರದ ಮೇಲೆ ಮಂಗವು ಕೂಡ ಕುಳಿತುಕೊಂಡಿತ್ತು. ಮರ ತೇಲಿಕೊಂಡು ಹೋಗಿ ಹೋಗಿ ಇನ್ನೊಂದು ರಾಜ್ಯಕ್ಕೆ ತಲುಪಿತು. ದಡ ಸೇರಿ ಅಲ್ಲೇ ಉಳಿದುಬಿಟ್ಟಿತು.

ಅಷ್ಟರಲ್ಲಿ ಬೆಳಗಾಯಿತು. ಆ ಊರಿನ ರಾಜಕುಮಾರ ಮುಂಜಾನೆ ಎದ್ದು ಹಲ್ಲುಜ್ಜಿ ಮುಖತೊಳೆಯಲೆಂದು ಆ ನದಿಯ ದಂಡೆಗೆ ಬಂದ. ಒಣ ಮರದ ಮೇಲೆ ಕುಳಿತಿದ್ದ ರಾಜಕುಮಾರಿ ಆತನ ಕಣ್ಣಿಗೆ ಬಿದ್ದಳು. ಆತ ರಾಜಕುಮಾರಿಯನ್ನು ಮಾತನಾಡಿಸಿದ. ಅವಳು ಅವಳ ಸಂಗತಿಯನ್ನೆಲ್ಲಾ ಆ ಊರಿನ ರಾಜಕುಮಾರನೊಡನೆ ಹೇಳಿದಳು. ಆತ ರಾಜಕುಮಾರಿಯನ್ನು ಮದುವೆಯಾಗುವುದಾಗಿ ಮಾತುಕೊಟ್ಟು ತನ್ನ ಅರಮನೆಗೆ ಕರೆದುಕೊಂಡು ಹೋದ. ಆಕೆಯೊಡನೆ ರಾಜಕುಮಾರನ ಮದ್ವೆಗೆ ಎಲ್ಲರೂ ಒಪ್ಪಿದರು. ಮದ್ವೆಗೆ ದಿನ ನಿಶ್ಚಯವಾಯಿತು.

ರಾಜಕುಮಾರಿಗೆ ಉಪ್ಪರಿಗೆ ಮೇಲಿನ ಒಂದು ಕೋಣೆಯಲ್ಲಿ ಉಳಿದುಕೊಳ್ಳಲು ಎಲ್ಲಾ ವ್ಯವಸ್ಥೆ ಮಾಡಿಕೊಟ್ಟರು. ಮಂಗನ ಉಪಟಳ ತಪ್ಪಿತೆಂದು ಭಾವಿಸಿ ಆಕೆ ಅಲ್ಲಿ ಸಂತೋಷದಲ್ಲಿದ್ದಳು. ಆದರೆ ಆ ದಿನ ರಾತ್ರಿ ಊಟ ಮಾಡಿ ಮಲಗಲು ಹಾಸಿಗೆಗೆ ಬಂದಾಗ ಅಲ್ಲಿ ಮಂಗ ಗೋಚರಿಸಿತು. "ಹೋದೆಯಾ ಶನಿ ಅಂದ್ರೆ, ಬಂದೆ ಗಿಳಿಸೂವೆಲಿ"[೨] ಎಂಬಂತೆ ಮತ್ತೆ ಆಕೆ ಚಿಂತೆಗೆ ಒಳಗಾದಳು. ಅದು ಬಲತ್ಕಾರದಿಂದ ಆಕೆಯನ್ನು ಎತ್ತಿಕೊಂಡು ಉಪ್ಪರಿಗೆಯ ಛಾವಣಿಗೇರಿತು. ಉಪ್ಪರಿಗೆಯ ಮೇಲ್ಗಡೆ ಬಾಗಿನಿಂತ ಮರಕ್ಕೆ ಹಾರಿತು. ಹೀಗೆ ಮರದಿಂದ ಮರಕ್ಕೆ ಹಾರಾಡುತ್ತಾ ಹೋಗಿ ಒಂದು ಕಾಡು ಸೇರಿತು. ಕಾಡಿನಲ್ಲಿ ಒಂದು ದೊಡ್ಡ ಆಲದ ಮರವನ್ನು ಹುಡುಕಿ ಮರದ ಮೇಲೊಂದು ಪುಟ್ಟ ಮನೆ ಕಟ್ಟಿ ಅಲ್ಲಿ ರಾಜಕುಮಾರಿಯನ್ನು ಮಲಗಿಸಿತು. ಪ್ರತಿದಿನ ಆ ಮಂಗ ಆಹಾರ ತರಲು ಮುಂಜಾನೆ ಮರವಿಳಿದು ಕಾಡಿನೊಳಗೆ ಹೊರಟು ಹೋಗುತ್ತಿತ್ತು. ಸಂಜೆಯ ವೇಳೆಗೆ ಮತ್ತೆ ಹಿಂತಿರುಗಿ ಬರುತ್ತಿತ್ತು. ರಾಜಕುಮಾರಿಗೆ ಆ ಮರದಿಂದ ಇಳಿಯಲು ಸಾಧ್ಯವಾಗದಷ್ಟು ಎತ್ತರದಲ್ಲಿ ಅದು ತನ್ನ ಮನೆ ಕಟ್ಟಿತ್ತು. ಹಾಗಾಗಿ ಆಕೆ ಉಪಾಯವಿಲ್ಲದೆ ಮಂಗನೊಡನೆ ವಾಸಿಸ ಬೇಕಾಯಿತು.

ಹೀಗೆ ಕೆಲವು ದಿನಗಳು ಕಳೆದವು. ಒಂದು ದಿನ ಆ ಊರಿನ ರಾಜಕುಮಾರ ಆ ಕಾಡಿಗೆ ಬೇಟೆಯಾಡಲು ಬಂದವನು ಆಯಾಸ ಪರಿಹಾರಕ್ಕಾಗಿ ರಾಜಕುಮಾರಿ ಇದ್ದ ಮರದಡಿಯಲ್ಲಿ ಕುಳಿತುಕೊಂಡ. ಮರಕ್ಕೆ ಒರಗಿ ಕುಳಿತವನ ತಲೆಗೆ ಮರದ ಮೇಲಿಂದ ಪಟಪಟನೆ ನೀರಹನಿ ಬೊಟ್ಟುಬೊಟ್ಟಾಗಿ ಬೀಳತೊಡಗಿತು. ಇದೇನು ಮರದ ಮೇಲಿಂದ ನೀರು ಬೀಳುತ್ತದೆ, ನೋಡೋಣವೆಂದು ಆತ ಆ ಮರವನ್ನೇರಿ ನೋಡಿದ. ನೋಡುವಾಗ ನದಿದಂಡೆಯಲ್ಲಿ ಆತನಿಗೆ ಸಿಕ್ಕಿದ ರಾಜಕುಮಾರಿ ಅಲ್ಲಿ ಕುಳಿತು ಕಣ್ಣೀರಿಡುತ್ತಿದ್ದುದು ಕಂಡಿತು. ಆಕೆ ಸುರಿಸುತ್ತಿದ್ದ ಕಣ್ಣೀರ ಹನಿಯೇ ತನ್ನ ತಲೆಗೆ ಬಿದ್ದುದೆಂದು ರಾಜಕುಮಾರ ನಿಗೆ ಗೊತ್ತಾಯಿತು. ರಾಜಕುಮಾರ ಮರವನ್ನೇರಿ ರಾಜಕುಮಾರಿಯ ಬಳಿ ಬಂದು ಕುಳಿತ. ಮಂಗನು ತನ್ನನ್ನು ಎತ್ತಿಕೊಂಡು ಬಂದ ಸಂಗತಿಯನ್ನೆಲ್ಲ ಹೇಳಿ ತನ್ನನ್ನು ಹೇಗಾದರೂ ಮಾಡಿ ಮಂಗನಿಂದ ರಕ್ಷಿಸಬೇಕೆಂದು ರಾಜಕುಮಾರಿ ಆತನನ್ನು ಕೇಳಿಕೊಂಡಳು.

ರಾಜಕುಮಾರ ಚೆನ್ನಾಗಿ ಆಲೋಚನೆ ಮಾಡಿ "ಈ ಮಂಗ ನಿಜವಾದ ಮಂಗವಲ್ಲ. ಸಾಯುವಂತೆ ಹೊಡೆದರೂ, ಕಡಿದರೂ ಸಾಯುವುದಿಲ್ಲವೆಂದಾದ ಮೇಲೆ ಇದು ಯಾವುದೋ ಮಾಯಾವಿ. ನೀನು ಆ ಮಂಗನನ್ನು ಪ್ರೀತಿಸುವಂತೆ ನಟನೆ ಮಾಡು. ಆ ಬಳಿಕ ಅದರ ಕತೆಯನ್ನು ಕೇಳಿಕೊಂಡು ಅದನ್ನು ಕೊಲ್ಲುವ ಬಗೆ ಹೇಗೆಂಬುದನ್ನು ಉಪಾಯದಿಂದ ತಿಳಿದುಕೋ. ನಾನು ನಾಳೆ ಮತ್ತೆ ಇಲ್ಲಿಗೆ ಬರುತ್ತೇನೆ" ಎಂದು ಹೇಳಿ ರಾಜಕುಮಾರ ಮರದಿಂದಿಳಿದು ತನ್ನರಮನೆಗೆ ಹೋದ.

ಮುಸ್ಸಂಜೆಯ ಹೊತ್ತಿಗೆ ಮಂಗ ಕಾಡಿನಿಂದ ತನ್ನ ಮರದ ಮೇಲಿನ ಮನೆಗೆ ಹಿಂತಿರುಗಿ ಬಂತು. ಬರುವಾಗ ರಾಜಕುಮಾರಿಗೆ ಬಗೆಬಗೆಯ ಹಣ್ಣುಗಳನ್ನು ತಂದಿತ್ತು. ಆ ದಿನ ಮಂಗ ಬಂದೊಡನೆ ಅದರ ಮೈನೇವರಿಸಿ ಮುತ್ತು ಕೊಟ್ಟಳು. ತಾನು ಬೇಕಾದಷ್ಟು ಹಣ್ಣುಗಳನ್ನು ತಿಂದು ಅದಕ್ಕೂ ತಿನ್ನಲು ಕೊಟ್ಟಳು. ಮಂಗನ ಮಡಿಲಲ್ಲಿ ತಲೆಯಿಟ್ಟುಕೊಂಡು ಮಲಗಿ "ಸತ್ಯ ಹೇಳಿ ನೀವು ಮಂಗನಲ್ಲ, ನೀವು ಮಹಾಪುರುಷ. ನಿಮ್ಮನ್ನು ನಾನು ಪ್ರೀತಿಸುತ್ತಿದ್ದೇನೆ. ಸತ್ಯ ಸಂಗತಿ ಹೇಳಿ" ಎಂದಳು. ಆಗ ಮಂಗ ಸಂತೋಷದಿಂದ ಉಬ್ಬಿಹೋಯಿತು. "ನಾನು ನಿಜವಾದ ಮಂಗನಲ್ಲ, ನಾನೊಬ್ಬ ರಕ್ಕಸ. ಋಷಿಯೊಬ್ಬನ ಶಾಪದಿಂದ ನಾನು ಮಂಗನಾಗಿದ್ದೇನೆ" ಎಂದು ಮಂಗ ಸತ್ಯ ಮಾತನಾಡಿತು. ಹಾಗಾದರೆ ದಿನನಿತ್ಯ ಎದ್ದು ನೀವು ಕಾಡಿಗೆ ಹೋಗುತ್ತೀರಿ. ಅಲ್ಲಿ ನಿಮ್ಮನ್ನು ಯಾರಾದರೂ ಬೇಟೆಗಾರರು ಕೊಂದುಬಿಟ್ಟರೆ ಇಲ್ಲವೇ ಕ್ರೂರ ಪ್ರಾಣಿಗಳು ಹಿಡಿದು ತಿಂದುಬಿಟ್ಟರೆ ನನ್ನ ಗತಿಯೇನು? ನಾನಿಲ್ಲಿ ಬಾಯಿಗೆ ನೀರಿಲ್ಲದೆ ಸಾಯಬೇಕಲ್ಲ? ಎಂದು ಹೇಳಿ ಗೋಳೋ ಎಂದು ಅತ್ತಳು. ಆಗ ಮಂಗನಿಗೆ ಕನಿಕರ ಮೂಡಿತು. "ನೀನು ಅಳಬೇಡ ನನ್ನ ಸಾವಿನ ಬಗ್ಗೆ ನೀನೇನೂ ಹೆದರಬೇಕಾಗಿಲ್ಲ. ಏಕೆಂದರೆ ನನ್ನ ಜೀವ ನನ್ನ ಶರೀರದಲ್ಲಿಲ್ಲ. ಯಾರೂ ನನ್ನನ್ನು ಕೊಲ್ಲಲಾರರು. ನನ್ನನು ಹೊಡೆದರೂ ಕಡಿದರೂ ನನಗೆ ನೋವು ಆಗುವುದಿಲ್ಲ. ನಾನು ಸಾಯುವುದೂ ಇಲ್ಲ" ಎಂದಿತು ಮಂಗ. "ಹೋ ಹಾಗಾ ಹಾಗಾದರೆ ನಿಮ್ಮ ಜೀವ ಎಲ್ಲಿದೆ?" ಕುತೂಹಲದಿಂದ ರಾಜಕುಮಾರಿ ಕೇಳಿದಳು. "ಈ ಕಾಡಿನ ಮಧ್ಯ ಭಾಗದಲ್ಲೊಂದು ದೊಡ್ಡ ಆಲದ ಮರವಿದೆ. ಆ ಆಲದ ಮರದ ಪೊಟರೆಯಲ್ಲೊಂದು ಗಿಳಿಯಿದೆ. ಆ ಗಿಳಿಯ ಶರೀರದಲ್ಲಿ ನನ್ನ ಜೀವವಿದೆ. ಇದು ಯಾರಿಗೂ ಗೊತ್ತಿಲ್ಲದ ಸಂಗತಿ. ಇದನ್ನು ನೀನು ಯಾರಿಗೂ ಹೇಳಬೇಡ" ಎಂದಿತು ಮಂಗ. ಹಾಗೆಯೇ ಆಗಲಿ. ಎಂದು ರಾಜಕುಮಾರಿ ಬಹಳ ಸಂತೋಷದಿಂದ ಮಂಗನನ್ನು ಮುದ್ದಾಡಿಸಿ ತಾನೂ ನಿದ್ದೆ ಹೋದಳು.

ಮರುದಿನ ಹೇಳಿದ ಸಮಯಕ್ಕೆ ಸರಿಯಾಗಿ ರಾಜಕುಮಾರ ಆ ಮರದ ಬುಡಕ್ಕೆ ಬಂದು ಮರವೇರಿ ರಾಜಕುಮಾರಿಯೊಂದಿಗೆ ಮಾತನಾಡಿದ. ರಾಜಕುಮಾರಿ ನಡೆದ ಸಂಗತಿಯನ್ನೆಲ್ಲ ರಾಜಕುಮಾರನೊಡನೆ ಹೇಳಿದಳು. ರಾಜಕುಮಾರ ಅರಮನೆಗೆ ಹೇಳಿ ಕಳುಹಿಸಿ ದೊಡ್ಡ ಒಂದು ಬಲೆಯನ್ನು ತರಿಸಿದ. ರಾಜಕುಮಾರಿಯನ್ನು ಮರದಿಂದ ಇಳಿಸಿ ಕಾಡಿನ ಮಧ್ಯೆ ತನ್ನ ಆಳುಗಳೊಂದಿಗೆ ತೆರಳಿದ. ಅಲ್ಲಿ ದೊಡ್ಡದಾದ ಅರಳಿ ಮರ ಕಾಣಸಿಕ್ಕಿತು. ರಾಜಕುಮಾರನ ಆಳುಗಳು ಇಡೀ ಆಲದ ಮರವನ್ನೇ ಬಲೆಯಿಂದ ಮುಚ್ಚಿದರು. ನಂತರ ಪೊಟರೆಯೊಳಗಿದ್ದ ಗಿಳಿಯನ್ನು ಹಿಡಿದು ತಂದುಕೊಟ್ಟರು.

ರಾಜಕುಮಾರ ಗಿಳಿಯನ್ನು ಹಿಡಿದೊಡನೆ ಎಲ್ಲಿಯೋ ಇದ್ದ ಮಂಗನಿಗೆ ಜ್ವರ ಬರಲು ಶುರುವಾಯಿತು. ಮಂಗನಿಗೆ ತನ್ನ ಜೀವತೆಗೆಯಲು ಯಾರೋ ಪ್ರಯತ್ನಿಸುತ್ತಿದ್ದಾರೆ ಎಂಬ ವಿಷಯ ತಿಳಿಯಿತು. ಮಂಗ ಮರದಿಂದ ಮರಕ್ಕೆ ಹಾರಾಡುತ್ತಾ


ಆಲದ ಮರದ ಹತ್ತಿರ ಮುಟ್ಟಿತು. ಅಷ್ಟರಲ್ಲಿ ರಾಜಕುಮಾರ ಗಿಳಿಯ ಎರಡೂ ರೆಕ್ಕೆಗಳನ್ನು ಮುರಿದುಬಿಟ್ಟ. ಮಂಗ ಹಾರಲಾರದೆ ಕೆಳಗೆ ಬಿತ್ತು. ಅಲ್ಲಿಂದ ನಡೆದುಕೊಂಡು ಬರಲು ಪ್ರಯತ್ನಿಸಿತು. ರಾಜಕುಮಾರ ಗಿಳಿಯ ಒಂದು ಕಾಲು ಮುರಿದ. ಮಂಗನ ಒಂದು ಕಾಲು ಮುರಿಯಿತು. ಇನ್ನೊಂದು ಕಾಲಿನಲ್ಲಿ ಹೊರಳಾಡಿ ಕೊಂಡು ಬರಲು ಪ್ರಯತ್ನಿಸಿತು. ಮಂಗ ಹತ್ತಿರ ಮುಟ್ಟಿದಾಗ ರಾಜಕುಮಾರ ಗಿಳಿಯ ಕುತ್ತಿಗೆ ಹಿಸುಕಿ ಕೊಂದುಬಿಟ್ಟ. ಗಿಳಿ ಸತ್ತು ಹೋದಾಗ ಮಂಗವೂ ಸತ್ತು ಹೋಯಿತು.

ರಾಜಕುಮಾರ ತನ್ನ ಕುದುರೆಯ ಮೇಲೆ ರಾಜಕುಮಾರಿಯನ್ನು ಕುಳ್ಳಿರಿಸಿಕೊಂಡು ತನ್ನ ಅರಮನೆಗೆ ಹಿಂತಿರುಗಿದ. ತಪ್ಪಿಹೋದ ರಾಜಕುಮಾರಿ ಮತ್ತೆ ಸಿಕ್ಕಿದಳೆಂದು ಎಲ್ಲರಿಗೂ ಸಂತೋಷವಾಯಿತು. ರಾಜಕುಮಾರಿಯು ತನ್ನ ಊರಿಂದ ತಂದೆ-ತಾಯಿಯರನ್ನು ಬರಮಾಡಿಕೊಂಡಳು. ಕಳೆದುಹೋದ ಮಗಳನ್ನು ಪಡೆದು ತಂದೆ ತಾಯಿಗೂ ಸಂತೋಷವಾಯಿತು. ಬಹಳ ವೈಭವದಿಂದ ಮದ್ವೆ ನಡೆಯಿತು. ಎಲ್ಲರೂ ಸುಖವಾಗಿದ್ದರು.

ಟಿಪ್ಪಣಿಗಳು

೧. ಮಂಗಟಾಯಿಸಿ – ಮುದ್ದಿನಿಂದ ಒಪ್ಪಿಸು

೨. ಗಿಳಿಸೂವೆ – ಗವಾಕ್ಷಿ



೨೦

ಹಾವು ಕೊಟ್ಟ ಅದೃಷ್ಟ

ಒಂದಾನೊಂದು ಊರಿನಲ್ಲೊಬ್ಬ ರೈತನಿದ್ದ. ಆತನಿಗೆ ಏಳು ಜನ ಗಂಡು ಮಕ್ಕಳು. ಏಳು ಜನರಿಗೂ ಮದ್ವೆಯಾಯಿತು. ರೈತ ಮತ್ತು ಆತನ ಹೆಂಡತಿ ತೀರಿ ಹೋದರು. ಮನೆಯಲ್ಲಿದ್ದ ದವಸ ಧಾನ್ಯವೆಲ್ಲಾ ಮುಗಿದು ಹೋಯಿತು. ರೈತನ ಮಕ್ಕಳೆಲ್ಲಾ ಸೋಮಾರಿಗಳು. ಯಾವ ವೃತ್ತಿಯನ್ನೂ ಕಲಿಯದವರು. ಉಪಾಯವಿಲ್ಲದೆ ಹೊಟ್ಟೆ ತುಂಬಿಸುವ ಸಲುವಾಗಿ ಕೂಲಿ ಕೆಲಸಕ್ಕೆ ಹೋಗಬೇಕಾದ ಅನಿವಾರ್ಯತೆ ಬಂತು. ಮನೆಯ ಹದಿನಾಲ್ಕು ಮಂದಿ ಸದಸ್ಯರಲ್ಲಿ ಹದಿಮೂರು ಮಂದಿಯೂ ಕೆಲಸಕ್ಕೆ ಹೋಗುತ್ತಿದ್ದರು. ದಿನಕ್ಕೊಬ್ಬಳು ಮನೆಯಲ್ಲಿ ಉಳಿಯುತ್ತಿದ್ದಳು. ಸಂಜೆಗೆ ಎಲ್ಲರೂ ಬಂದ ಮೇಲೆ ಅವರು ಕೂಲಿಯಾಗಿ ತಂದ ಭತ್ತವನ್ನು ಕುಟ್ಟಿ ಅಕ್ಕಿ ಮಾಡಿ, ಬೇಯಿಸಿ, ಗಂಜಿ ಮಾಡಿ ಎಲ್ಲರೂ ಊಟ ಮಾಡಿ ಮಲಗುತ್ತಿದ್ದರು. ರಾತ್ರಿಯ ಊಟದಲ್ಲಿ ಮರುದಿನ ಮಧ್ಯಾಹ್ನಕ್ಕೆ ಒಬ್ಬಳಿಗೆ ಬೇಕಾಗುವಷ್ಟು ಗಂಜಿ ಇಟ್ಟುಕೊಳ್ಳುತ್ತಿದ್ದರು. ಬೆಳಗಾದೊಡನೆ ಎಲ್ಲರೂ ಎದ್ದು ಕೆಲಸಕ್ಕೆ ಹೋಗುತ್ತಿದ್ದರು.

ಹೀಗೆ ಆರು ದಿನಗಳು ಕಳೆದವು. ಏಳನೇ ದಿನ ಚಿಕ್ಕವನ ಮಡದಿ ಮನೆಯಲ್ಲಿ ಉಳಿಯುವ ಸರದಿ. ಉಳಿದವರೆಲ್ಲ ಹೊರಟುಹೋದ ಮೇಲೆ ಚಿಕ್ಕವನ ಮಡದಿ ಗೆರಸೆ ತಂದು ಕಳೆದ ಆರು ದಿನಗಳಲ್ಲಿ ಭತ್ತ ಕುಟ್ಟಿ ರಾಶಿ ಹಾಕಿದ್ದ ತೌಡನ್ನು ಗೆರಸೆಯಲ್ಲಿ ಗೇರಿದಳು. ಅದರಲ್ಲಿ ಅವರೆಲ್ಲರಿಗೂ ಒಂದು ಹೊತ್ತಿನ ಊಟಕ್ಕಾಗುವಷ್ಟು ಕಡಿಯಕ್ಕಿ ಸಿಕ್ಕಿತು. ಅದನ್ನು ಬೇಯಿಸಿ ಗಂಜಿ ಮಾಡಿದಳು. ಅಂಗಳದ ಬದಿಯಲ್ಲೊಂದು ಮಾವಿನ ಗಿಡವಿತ್ತು. ಆ ಗಿಡದಿಂದ ಎರಡು ಮಾವಿನಕಾಯಿ ಕೊಯಿದು ತಂದು ಚಟ್ನಿ ಮಾಡಿದಳು.

ಸಂಜೆಯ ಹೊತ್ತಿಗೆ ಎಲ್ಲರೂ ಮನೆಗೆ ಬಂದರು. ಎಂದಿನಂತೆ ಭತ್ತ ಕುಟ್ಟಲು ಅಣಿಮಾಡಿದರು. ಆಗ ಚಿಕ್ಕವನ ಹೆಂಡತಿ "ನೀವು ಭತ್ತ ಕುಟ್ಟುವುದು ಬೇಡ. ಎಲ್ಲರೂ ಹೋಗಿ ಸ್ನಾನ ಮಾಡಿಕೊಂಡು ಬನ್ನಿ ಊಟಕ್ಕೆ ಅಡುಗೆ ತಯಾರಾಗಿದೆ" ಎಂದಳು. ಎಲ್ಲರಿಗೂ ಸಂತೋಷವಾಯಿತು. ಸ್ನಾನ ಮಾಡಿಕೊಂಡು ಬಂದು ಊಟ ಮಾಡಿದರು. ಇನ್ನು ಮುಂದೆ ಚಿಕ್ಕವನ ಮಡದಿಯೇ ಮನೆಯಲ್ಲಿ ನಿಲ್ಲುವುದೆಂದು ಎಲ್ಲರೂ ತೀರ್ಮಾನಿಸಿಬಿಟ್ಟರು.

ಹೋಗಿ. ಮಧ್ಯಾಹ್ನದ ನನ್ನ ಊಟಕ್ಕೆ ನಾನು ಭತ್ತ ಕುಟ್ಟಿ ಅಕ್ಕಿ ತಯಾರಿಮಾಡುತ್ತೇನೆ” ಎಂದಳು. ಅವಳು ಬಡಿಸಿಟ್ಟ ಗಂಜಿ ಚಟ್ನಿಯನ್ನು ಊಟ ಮಾಡಿಕೊಂಡು ಎಲ್ಲರೂ ಕೆಲಸಕ್ಕೆ ಹೊರಟರು. ಹೊರಡುವಾಗ ಚಿಕ್ಕವನ ಮಡದಿ “ಅಡುಗೆಗೆ ಸೌದೆ ಮುಗಿದಿದೆ. ಪ್ರತಿಯೊಬ್ಬರೂ ದಿನನಿತ್ಯ ಕೆಲಸ ಬಿಟ್ಟು ಬರುವಾಗ ದಾರಿಯಲ್ಲಿ ಸಿಕ್ಕಿದ ಏನಾದರೂ ಒಂದು ತುಂಡು ಕಟ್ಟಿಗೆ ಹಿಡಿದುಕೊಂಡು ಬಂದು ಮನೆಯ ಅಂಗಳದಲ್ಲಿ ರಾಶಿ ಹಾಕಬೇಕು” ಎಂದಳು. ಎಲ್ಲರೂ ಒಪ್ಪಿಕೊಂಡು ಕೆಲಸಕ್ಕೆ ಹೊರಟು ಹೋದರು.

ಚಿಕ್ಕವನ ಮಡದಿ ಹಿಂದಿನ ದಿನ ಮನೆಯವರು ತಂದ ಭತ್ತವನ್ನು ಕುಟ್ಟಿ ಅಕ್ಕಿ ಮಾಡಿ ಅಡುಗೆ ಮಾಡಿದಳು. ಅಂಗಳದ ಪಕ್ಕದಲ್ಲಿ ಬೆಳೆದ ಚಗಟೆ[7] ಗಿಡದ ಚಿಗುರು ಕಿತ್ತುತಂದು ಪಲ್ಯ ಮಾಡಿದಳು. ತಾನು ಮಧ್ಯಾಹ್ನದ ಊಟ ಮಾಡಿ ಉಳಿದುದುದನ್ನು ರಾತ್ರಿಗೆ ಮುಚ್ಚಿಟ್ಟಳು. ಊಟವಾದ ಮೇಲೆ ಪಕ್ಕದ ಮನೆಗೆ ಹೋಗಿ ಸ್ವಲ್ಪ ಅಲಸಂಡೆ, ಬೆಂಡೆ ಬೀಜ ತೆಗೆದುಕೊಂಡು ಬಂದಳು. ಹಾರೆ ತೆಗೆದುಕೊಂಡು ಮನೆಯ ಹಿತ್ತಿಲಲ್ಲಿ ನಾಲ್ಕು ಸಾಲು ಮಾಡಿ ತರಕಾರಿ ಬೀಜ ಬಿತ್ತಿ ನೀರು ಹಾಕಿ ಬಿಟ್ಟಳು. ಬಚ್ಚಲ ಹಂಡೆಗೆ ನೀರು ತುಂಬಿಸಿ ಒಲೆಗೆ ಬೆಂಕಿ ಹಚ್ಚಿ ಬಂದಳು. ಹಾಗೇನೇ ಬಾವಿಕಟ್ಟೆಗೆ ಹೋಗಿ ನೀರು ಸೇದಿ ಮನೆಯವರೆಲ್ಲರ ಬಟ್ಟೆ ಒಗೆದು ಒಣಗಲು ಹಾಕಿದಳು. ಮನೆ ಅಂಗಳವೆಲ್ಲ ಗುಡಿಸಿ ಸ್ವಚ್ಛಗೊಳಿಸಿದಳು.

ಮುಸ್ಸಂಜೆಗೆ ಎಲ್ಲರೂ ಮನೆಗೆ ಬಂದರು. ಬರುವಾಗ ತಾವು ಕೈಯಲ್ಲಿ ಎತ್ತಿಕೊಂಡು ಬಂದ ಕಟ್ಟಿಗೆ ತುಂಡನ್ನು ಅಂಗಳದ ಮೂಲೆಯಲ್ಲಿ ರಾಶಿ ಹಾಕಿ ಒಳಗೆ ಬಂದರು. ಒಳಗೆ ಬಂದು ನೋಡುವಾಗ ಮನೆಯೆಲ್ಲ ಸ್ವಚ್ಛಗೊಂಡು ಒಪ್ಪ ಓರಣವಾಗಿತ್ತು. ಅವರ ಬಟ್ಟೆಯೆಲ್ಲ ಕೊಳೆ ಕಳೆದು ಸ್ವಚ್ಛವಾಗಿತ್ತು. ಎಲ್ಲರೂ ಖುಷಿಯಿಂದ ಸ್ನಾನ ಮಾಡಿಕೊಂಡು ಬಂದು ಊಟಮಾಡಿ ಮಲಗಿ ನಿದ್ದೆ ಮಾಡಿದರು.

ಹೀಗೆ ಕೆಲವು ದಿನಗಳು ಕಳೆದು ಹೋದವು. ಆ ದಿನ ಚಿಕ್ಕವನು ಕೆಲಸ ಬಿಟ್ಟು ಬರುವಾಗ ಸ್ವಲ್ಪ ತಡವಾಗಿ ಕತ್ತಲೆಯಾಯಿತು. ಮನೆಯ ಹತ್ತಿರ ಬಂದು ಮುಟ್ಟಿದಾಗ ಆತನಿಗೆ ಕಟ್ಟಿಗೆಯ ನೆನಪಾಯಿತು. ಅಷ್ಟರಲ್ಲಿ ಆತನಿಗೆ ದಾರಿಯ ಪಕ್ಕದಲ್ಲೊಂದು ಮರದ ಕೋಲು ಬಿದ್ದಿರುವಂತೆ ಕಂಡಿತು. ಆತ ಅದನ್ನು ಹೆಕ್ಕಿಕೊಂಡು ಬಂದ. ಅಂಗಳಕ್ಕೆ ಬಂದು ನೋಡುವಾಗ ಅದು ಕಟ್ಟಿಗೆಯಾಗಿರಲಿಲ್ಲ. ಅದೊಂದು ಸತ್ತ ಹಾವು. ಇದನ್ನು ಕಟ್ಟಿಗೆ ರಾಶಿಯಲ್ಲಿ ಹಾಕುವುದು ಬೇಡವೆಂದು ಆತ ಪಕ್ಕದಲ್ಲಿದ

ಆದರೆ ಮರುದಿನ ಕೆಲಸಕ್ಕೆ ಹೊರಡುವಾಗ ಅದು ಮರೆತು ಹೋಯಿತು. ಹಾವು ಅಲ್ಲೇ ಉಳಿಯಿತು. ಎಲ್ಲರೂ ಕೆಲಸಕ್ಕೆ ಹೊರಟುಹೋದರು.

ಆ ಊರಿಗೊಬ್ಬ ಅರಸನಿದ್ದ. ಅರಸನಿಗೊಬ್ಬಳು ಮಗಳು. ಮಗಳು ರಾಜಕುಮಾರಿ ಸ್ನಾನಕ್ಕೆಂದು ತನ್ನ ಸಖಿಯರೊಂದಿಗೆ ಊರಕೆರೆಗೆ ಬಂದಳು. ಕಾವಲು ಭಟರನ್ನು ಕೆರೆಯ ಸುತ್ತ ದೂರದಲ್ಲಿ ನಿಲ್ಲಿಸಿ ರಾಜಕುಮಾರಿ ತನ್ನ ಕುತ್ತಿಗೆಯಲ್ಲಿದ್ದ ವಜ್ರದ ಹಾರವನ್ನು ಕೆರೆಯ ದಂಡೆಯಲ್ಲಿಟ್ಟು ಸ್ನಾನಕ್ಕಿಳಿದಳು. ಆಕೆಯ ಜೊತೆ ಸಖಿಯರೂ ಕೂಡ ಸ್ನಾನಕ್ಕೆಂದು ಕೆರೆಗಿಳಿದರು. ನೀರಾಟವಾಡುತ್ತಾ ಎಷ್ಟೋ ಹೊತ್ತು ಕಳೆದರು. ನಂತರ ಎಲ್ಲರೂ ಮೇಲೆ ಬಂದು ಬಟ್ಟೆ ಬದಲಾಯಿಸಿಕೊಂಡರು. ಬಟ್ಟೆ ಬದಲಾಯಿಸಿ ಆಭರಣ ಧರಿಸಿಕೊಳ್ಳಲು ನೋಡುವಾಗ ರಾಜಕುಮಾರಿಯ ವಜ್ರದ ಹಾರ ಕಾಣೆಯಾಗಿತ್ತು. ಕಾವಲು ಭಟರನ್ನು ಕರೆಸಿ ಎಲ್ಲಾ ಕಡೆ ಹುಡುಕಿಸಿದಳು. ಅದು ಲಕ್ಷಾಂತರ ರೂಪಾಯಿ ಬೆಲೆಯ ವಜ್ರದ ಹಾರ. ಎಲ್ಲಿ ಹುಡುಕಿದರೂ ಸಿಗಲಿಲ್ಲ. ಮನೆಗೆ ಬಂದ ರಾಜಕುಮಾರಿ ತಂದೆಯೊಡನೆ ನಡೆದ ಸಂಗತಿಯನ್ನು ಹೇಳಿದಳು. ಅರಸನು ರತ್ನದ ಹಾರ ಹುಡುಕಿಕೊಟ್ಟವರಿಗೆ ಹತ್ತು ಸಾವಿರ ರೂಪಾಯಿ ಬಹುಮಾನ ಕೊಡುವುದಾಗಿ ಡಂಗುರ ಸಾರಿದ.

ಆ ದಿನ ಕೆರೆಯ ದಂಡೆಯ ಮೇಲಿಟ್ಟಿದ್ದ ರತ್ನದ ಹಾರವು ಮೇಲೆ ಹಾರಾಡುತ್ತಿದ್ದ ಒಂದು ಹದ್ದಿನ ಕಣ್ಣಿಗೆ ಬಿತ್ತು. ಕೆಂಪಗೆ ಹೊಳೆಯುತ್ತಿರುವ ಹಾರವನ್ನು ಕಂಡು ಹದ್ದು ಇದು ಯಾವುದೋ ಹಣ್ಣಿರಬೇಕೆಂದು ಭಾವಿಸಿ ಕೊಕ್ಕಿನಲ್ಲಿ ಎತ್ತಿಕೊಂಡು ಹಾರಿತು. ಹಾರಾಡುತ್ತಿರುವಾಗ ದೂರದಲ್ಲಿ ಅದಕ್ಕೆ ರೈತನ ತೊಂಡೆ ಚಪ್ಪರ ಕಂಡಿತು. ಹಣ್ಣನ್ನು ತಿನ್ನಲೆಂದು ಹದ್ದು ತೊಂಡೆ ಚಪ್ಪರದಲ್ಲಿ ಹೋಗಿ ಕುಳಿತುಕೊಂಡಾಗ ಅದಕ್ಕೆ ಚಪ್ಪರದಲ್ಲಿ ನೇತಾಡುತ್ತಿದ್ದ ಹಾವು ಕಂಡಿತು. ಹದ್ದು ವಜ್ರದ ಹಾರವನ್ನು ಅಲ್ಲೇ ಬಿಟ್ಟು ಹಾವನ್ನು ಕಚ್ಚಿ ತಿಂದು ಹೊಟ್ಟೆ ತುಂಬಿಸಿಕೊಂಡು ಹೋಯಿತು.

ಮರುದಿನ ಮುಂಜಾನೆ ಎಲ್ಲರೂ ಕೆಲಸಕ್ಕೆ ಹೋದ ಮೇಲೆ ಚಿಕ್ಕವನ ಮಡದಿ ತೊಂಡೆಕಾಯಿ ಕೊಯ್ಯಲು ಚಪ್ಪರದಡಿಗೆ ಬಂದಳು. ಅಲ್ಲಿ ನೇತಾಡುತ್ತಿದ್ದ ವಜ್ರದ ಹಾರವನ್ನು ಎತ್ತಿಕೊಂಡು ತಂದು ಪೆಟ್ಟಿಗೆಯೊಳಗಿಟ್ಟಳು. ಅವಳಿಗೆ ರಾಜಕುಮಾರಿಯ ವಜ್ರದ ಹಾರ ಕಳೆದುಹೋದ ವಿಚಾರ ತಿಳಿದಿತ್ತು. ಮನೆಯ ಕೆಲಸವೆಲ್ಲ ಮುಗಿಸಿದ ಮೇಲೆ ಹಾರವನ್ನೆತ್ತಿಕೊಂಡು ಅರಮನೆಗೆ ಹೋಗಿ ಅರಸನನ್ನು ಭೇಟಿಯಾದಳು. ತನಗೆ ರಾಜಕುಮಾರಿಯ ಹಾರ ಸಿಕ್ಕಿರುವುದಾಗಿ ಹೇಳಿ ಹಾರವನ್ನು ಅರಸನ ಕೈಗಿತ್ತಳು. ಆಗ ಅರಸ ತಾನು ಡಂಗುರ ಸಾರಿದಂತೆ ಹತ್ತು ಸಾವಿರ ರೂಪಾಯಿ ಆಕೆಗೆ ಕೊಡಲು ಎಣಿಸಿ ತಂದನು.

ಆಗ ಚಿಕ್ಕವನ ಮಡದಿ "ಮಹಾರಾಜರೇ ನನಗೆ ಹತ್ತು ಸಾವಿರ ಬಹುಮಾನದ ಹಣ ಬೇಡ, ಅದರ ಬದಲಾಗಿ ನನ್ನ ಒಂದು ಬೇಡಿಕೆಯನ್ನು ಈಡೇರಿಸಿ ಕೊಡಬೇಕು"

ಎಂದಳು. ರಾಜನು ಬೇಡಿಕೆ ಏನೆಂದು ಕೇಳಿದನು. ಆಗ ಚಿಕ್ಕವನ ಮಡದಿ "ಬರುವ ಶುಕ್ರವಾರ ಮುಸ್ಸಂಜೆಯಿಂದ ರಾತ್ರಿ ಬೆಳಗಾಗುವವರೆಗೆ ನಮ್ಮ ರಾಜ್ಯದಲ್ಲಿ ಯಾರ ಮನೆಯಲ್ಲೂ ದೀಪ ಉರಿಸಬಾರದು. ಎಲ್ಲರೂ ಕತ್ತಲೆ ಬೀಳುವ ಮೊದಲೇ ಊಟ ಮಾಡಿ ಮಲಗಿಬಿಡಬೇಕು. ಅರಮನೆಯಲ್ಲೂ ಎಲ್ಲೂ ಬೆಳಕು ಇರಬಾರದು. ಹೀಗೆಂದು ನೀವು ಡಂಗುರ ಸಾರಿಸಿ ಆ ದಿನ ಊರೆಲ್ಲ ಕತ್ತಲೆ ಇರುವಂತೆ ಮಾಡಬೇಕು" ಎಂದಳು. ರಾಜನು ಅದಕ್ಕೆ ಒಪ್ಪಿಕೊಂಡು ಚಿಕ್ಕವನ ಮಡದಿ ಹೇಳಿದಂತೆ ಡಂಗುರ ಸಾರಿಸಿದನು. ಶುಕ್ರವಾರ ರಾತ್ರಿ ಎಲ್ಲೂ ಬೆಳಕಿರಬಾರದೆಂದು ಕಟ್ಟಪ್ಪಣೆ ಮಾಡಿದನು.

ಶುಕ್ರವಾರದ ದಿನ ಬಂತು. ಮುಸ್ಸಂಜೆಯ ಹೊತ್ತಿಗೆ ಚಿಕ್ಕವನ ಮಡದಿ ದೊಡ್ಡ ಒಂದು ಕಾಲುದೀಪ ಹಚ್ಚಿ ತಂದು ಮನೆಯ ಹೊಸ್ತಿಲಲ್ಲಿಟ್ಟಳು. ರಾಜ್ಯವಿಡೀ ಕತ್ತಲೆ. ಭಾಗ್ಯಲಕ್ಷ್ಮಿ ಬೆಳಕನ್ನರಸುತ್ತಾ ಊರಿಡೀ ಸುತ್ತಾಡಿದಳು. ರೈತನ ಮನೆಯಲ್ಲಿ ಮಾತ್ರ ಬೆಳಕು ಕಾಣುತ್ತಿತ್ತು. ಲಕ್ಷ್ಮೀ ರೈತನ ಮನೆಯ ಪ್ರವೇಶಕ್ಕೆ ಮುಂದಾದಳು. ಆಗ ಅವಳನ್ನು ತಡೆದ ಚಿಕ್ಕವನ ಹೆಂಡತಿ "ನೀನು ನಮ್ಮ ಮನೆಯಲ್ಲಿ ಶಾಶ್ವತ ಉಳಿಯುವುದಾದರೆ ಮಾತ್ರ ಒಳಗೆ ಪ್ರವೇಶಿಸಬಹುದು. ಬೆಳಗಾದೊಡನೆ ಹೊರಟು ಹೋಗುವವಳಾದರೆ ಒಳಗೆ ಬರುವುದೇ ಬೇಡ" ಎಂದಳು. ಲಕ್ಷ್ಮೀ ತಾನು ಶಾಶ್ವತವಾಗಿ ರೈತನ ಮನೆಯಲ್ಲಿ ಉಳಿಯುವುದಾಗಿ ಮಾತುಕೊಟ್ಟು ಅಲ್ಲೇ ಉಳಿದಳು. ಚಿಕ್ಕವನ ಮಡದಿ ಮನೆಯಲ್ಲಿ ನಂದಾದೀಪ ಹಚ್ಚಿಟ್ಟಳು. ರೈತನ ಮನೆಯ ಸಂಪತ್ತು ಹೆಚ್ಚುತ್ತಾ ಹೋಯಿತು. ಮನೆಯವರು ಸಂತೋಷದಿಂದ ಜೀವನ ನಡೆಸತೊಡಗಿದರು.

ಟಿಪ್ಪಣಿ

೧. ಚಗಟೆ – ಒಂದು ಜಾತಿಯ ಕಾಡು ಸೊಪ್ಪಿನ ಗಿಡ (ತಜೆಂಕ್–ತುಳು)



೨೧

ರಾಜ್ಯ ತಂದ ಎತ್ತು

ಒಂದಾನೊಂದು ಊರಲ್ಲಿ ಒಬ್ಬ ರೈತನಿದ್ದ. ಆತ ಸುಂದರಿಯಾದ ಒಳ್ಳೆಯ ಗುಣದ ಒಬ್ಬಳು ಹುಡುಗಿಯನ್ನು ನೋಡಿ ಮದುವೆಯಾದ. ಆಕೆ ಮಹಾ ದೈವಭಕ್ತೆ. ಆಕೆ ಮನೆಗೆ ಬಂದೊಡನೆ ಆಕೆಯ ಕಾಲ್ಗುಣದಿಂದ ರೈತನ ಧಾನ್ಯಸಂಪತ್ತು ಗೋಸಂಪತ್ತು ಹೆಚ್ಚಾಯಿತು. ರೈತನ ಮಡದಿ ಬಸುರಿಯಾದಳು. ಬಸುರಿಯಾಗಿದ್ದಾಗ ಆಕೆಯ ಬಯಕೆಯನ್ನೆಲ್ಲಾ ಗಂಡ ತೀರಿಸಿದ. ತಿಂಗಳು ತುಂಬಿದಾಗ ಆಕೆ ಒಂದು ಗಂಡು ಮಗುವನ್ನು ಹೆತ್ತು ಸತ್ತುಹೋದಳು. ರೈತನಿಗೆ ತುಂಬಾ ಬೇಸರವಾಯಿತು. ಸತ್ತುಹೋದ ತನ್ನ ಹೆಂಡತಿಗೆ ಉತ್ತರಕ್ರಿಯೆಯನ್ನೆಲ್ಲ ಮುಗಿಸಿದ. ಬಂದ ನೆಂಟರೆಲ್ಲ ಹೊರಟುಹೋದರು.

ಪುಟ್ಟ ಮಗು ಜೋರಾಗಿ ಅಳುವಾಗ ರೈತನಿಗೆ ಅದನ್ನು ಆಡಿಸಿ ಸಮಾಧಾನಪಡಿಸಲು ಕಷ್ಟವಾಗುತ್ತಿತ್ತು. ಸಣ್ಣ ಮಗುವನ್ನು ಬಿಟ್ಟು ಬೇಸಾಯದ ಕೆಲಸಕ್ಕೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಮಗುವನ್ನು ನೋಡಿಕೊಳ್ಳಲು ಅಡುಗೆ ಮಾಡಲು ಒಬ್ಬಳು ಹೆಣ್ಣನ್ನು ಮನೆಗೆ ಕರೆತಾರದೆ ಉಪಾಯವೇ ಇರಲಿಲ್ಲ. ಅದಕ್ಕಾಗಿ ಎರಡನೆಯ ಮದುವೆ ಯಾಗುವುದಾಗಿ ಆಲೋಚನೆ ಮಾಡಿದ. ರೈತನ ಬಯಕೆ ನೆರೆಕರೆಯವರಿಗೂ ತಿಳಿದು ಹೋಯಿತು. ಸುದ್ದಿ ತಿಳಿದು ಹಲವಾರು ಜನ ಹೆಣ್ಣುಮಕ್ಕಳ ತಂದೆ ತಾಯಂದಿರು ರೈತನಿಗೆ ಹೆಣ್ಣು ಕೊಡಲು ಮುಂದೆ ಬಂದರು. ನನ್ನ ಮಗುವನ್ನು ಯಾವಾಕೆ ಚೆನ್ನಾಗಿ ನೋಡಿಕೊಳ್ಳಲು ತಯಾರಿದ್ದಾಳೋ ಆಕೆಯನ್ನು ನಾನು ಮದುವೆಯಾಗುವುದಾಗಿ ರೈತ ಹೆಣ್ಣು ಕೊಡಲು ಬಂದವರಿಗೆಲ್ಲ ಹೇಳಿದ. ಕೊನೆಗೆ ಬಂದವರಲ್ಲಿ ಒಬ್ಬಳನ್ನು ನೋಡಿ ಮದುವೆಯಾದ.

ರೈತನ ಮಡದಿ ಆರಂಭದಲ್ಲಿ ಗಂಡು ಮಗು ಅಣ್ಣಪ್ಪನನ್ನು ಚೆನ್ನಾಗಿ ನೋಡಿ ಕೊಳ್ಳುತ್ತಿದ್ದಳು. ಒಂದು ವರ್ಷವಾಗುವಾಗ ಆಕೆ ಬಸುರಿಯಾದಳು. ತಿಂಗಳು ತುಂಬಿದಾಗ ಆಕೆ ಒಂದು ಹೆಣ್ಣು ಮಗುವನ್ನು ಹೆತ್ತಳು. ಮಗುವಿಗೆ ಅಕ್ಕಮ್ಮನೆಂದು ಹೆಸರಿಟ್ಟರು. ತಾನು ಹೆಣ್ಣು ಮಗುವನ್ನು ಹೆತ್ತದ್ದೇ ತಡ ಆಕೆಗೆ ರೈತನ ಗಂಡು ಮಗುವಿನ ಮೇಲೆ ಅಸೂಯೆ ಬೆಳೆಯತೊಡಗಿತು.

ಅಣ್ಣಪ್ಪ ಮತ್ತು ಅಕ್ಕಮ್ಮ ಬೆಳೆದು ದೊಡ್ಡವರಾದರು. ರೈತ ಇಬ್ಬರನ್ನೂ ಸಮಾನ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ. ರೈತನ ಮಡದಿ ಮಾತ್ರ ಮಕ್ಕಳಲ್ಲಿ ಭೇದ ಮಾಡುತ್ತಿದ್ದಳು.

ಪ್ರತಿವರ್ಷ ರೈತ ಕುಲ್ಕುಂದದ ಜಾನುವಾರು ಜಾತ್ರೆಗೆ ಹೋಗಿ ಒಂದೆರಡು ಹೋರಿಗಳನ್ನೊ ದನಕರುಗಳನ್ನೋ ತರುತ್ತಿದ್ದ. ಆ ವರ್ಷ ಜಾತ್ರೆಗೆ ತನ್ನ ಮಕ್ಕಳನ್ನೂ ಕರೆದುಕೊಂಡು ಹೋದ. ತನ್ನ ಮಗನಿಗೆ ಒಂದು ಹೋರಿಯನ್ನು ತೆಗೆದುಕೊಟ್ಟ. ಮಗಳಿಗೆ ಒಂದು ಹೆಣ್ಣು ಕರುವನ್ನೂ ತೆಗೆದುಕೊಟ್ಟ. ತಂದೆ ಮಕ್ಕಳು ಹೋರಿ ಮತ್ತು ಕರುವನ್ನು ಹೊಡೆದುಕೊಂಡು ಮನೆಗೆ ಬಂದರು.

ಅಣ್ಣಪ್ಪನ ಮೇಲೆ ಚಿಕ್ಕಮ್ಮನ ಮತ್ಸರ ಹೆಚ್ಚುತ್ತಾ ಹೋಯಿತು. ಆಕೆ ಆತನನ್ನು ಚೆನ್ನಾಗಿ ದುಡಿಸುತ್ತಿದ್ದಳು. ಸರಿಯಾಗಿ ಅನ್ನಾಹಾರ ಕೊಡುತ್ತಿರಲಿಲ್ಲ. ರೈತನಿಗೆ ಕೆಲವು ನಡೆ ಜಾನುವಾರುಗಳಿದ್ದುವು. ಅವುಗಳನ್ನು ಮೇಯಿಸಲು ರೈತ ಆಳುಗಳನ್ನೇ ನೇಮಿಸಿದ್ದ. ಒಂದು ದಿನ ರೈತನ ಮಡದಿ ರೈತನಲ್ಲಿ "ಅಣ್ಣಪ್ಪ ಈಗ ಬೆಳೆದು ದೊಡ್ಡವನಾಗಿದ್ದಾನೆ. ಮನೆಯಲ್ಲಿ ಅವನಿಗೇನು ಕೆಲಸವಿದೆ? ಕೂತು ತಿನ್ನುತ್ತಾನೆ. ಜಾನುವಾರು ಮೇಯಿಸಲು ಇನ್ನು ಮುಂದೆ ಆಳುಗಳನ್ನು ಕಳುಹಿಸಬೇಡಿ. ಅವರು ಹೊಲದಲ್ಲಿ ಕೆಲಸ ಮಾಡಲಿ. ಜಾನುವಾರು ಮೇಯಿಸಲು ಅಣ್ಣಪ್ಪನನ್ನು ಕಳುಹಿಸಿ" ಎಂದಳು. ರೈತನಿಗೆ ಅದು ಸರಿ ಎನಿಸಿತು. ಮರುದಿನದಿಂದ ಜಾನುವಾರು ಮೇಯಿಸಲು ರೈತ ಅಣ್ಣಪ್ಪನನ್ನು ಹೋಗುವಂತೆ ಹೇಳಿದ.

"ಮುಂಜಾನೆ ಎದ್ದು ತಂಗಳನ್ನ ಊಟ ಮಾಡಿಕೊಂಡು ಹೋಗು. ಸಂಜೆಗೆ ಬಂದು ಮತ್ತೆ ಊಟ ಮಾಡಿದರಾಯಿತು. ನಿನಗೆ ಬುತ್ತಿ ಕಟ್ಟಿಕೊಡಲು ಇಲ್ಲಿ ಅಡುಗೆಗೆ ಜನವಿಲ್ಲ" ಎಂದು ಹೇಳಿ ಚಿಕ್ಕಮ್ಮ ಅಣ್ಣಪ್ಪನಿಗೆ ತಂಗಳನ್ನ ಬಡಿಸಿಕೊಟ್ಟಳು. ತಂಗಳನ್ನ ಉಂಡು ಅಣ್ಣಪ್ಪ ಜಾನುವಾರುಗಳನ್ನು ಅಟ್ಟಿಕೊಂಡು ಗುಡ್ಡೆಯ ಕಡೆಗೆ ನಡೆದ.

ಹೊತ್ತು ನೆತ್ತಿಗೇರುವಾಗ ಅಣ್ಣಪ್ಪನ ಹೊಟ್ಟೆ ಚುರುಗುಟ್ಟತೊಡಗಿತು. ಆತ ಗುಡ್ಡದ ತಪ್ಪಲಲ್ಲಿರುವ ತನ್ನ ತಾಯಿಯ ದೂಪೆ[೧](ಗೋರಿ)ಯ ಪಕ್ಕದಲ್ಲಿ ಹೋಗಿ ಮಲಗಿದ. ಅಷ್ಟು ಹೊತ್ತಿಗೆ ಆತ ಸಾಕುತ್ತಿದ್ದ ಹೋರಿ ಆತನ ಬಳಿಗೆ ಬಂದು "ನೀನು ನನ್ನೊಂದಿಗೆ ಬಾ, ನಿನಗೆ ತಿನ್ನಲು ಏನಾದರೂ ಕೊಡಿಸುತ್ತೇನೆ" ಎಂದಿತು. ಅಣ್ಣಪ್ಪ ಎದ್ದು ತನ್ನ ಹೋರಿಯ ಜೊತೆ ಹೊರಟ. ಎತ್ತು ಅಣ್ಣಪ್ಪನನ್ನು ಒಂದು ದೊಡ್ಡ ಪೊದರಿನ ಕಡೆಗೆ ಕರೆದುಕೊಂಡು ಹೋಯಿತು. ಪೊದರಿನ ತುಂಬ ಕರೊಳು[೨](ಕಾಡು ತೊಂಡೆ) ಬಳ್ಳಿ ಹಬ್ಬಿತ್ತು. ಬಳ್ಳಿಯ ತುಂಬ ಕಾಯಿಗಳಿದ್ದವು. "ಈ ಕಾಯಿಯನ್ನು ಹೊಟ್ಟೆ ತುಂಬುವಷ್ಟು ಕೊಯ್ದು ತಿನ್ನು" ಎಂದಿತು. ಅಣ್ಣಪ್ಪ ಕರೊಳು ಕಾಯಿ ಕೊಯ್ದು ತಿಂದು ಹೊಟ್ಟೆ ತಂಪು ಮಾಡಿಕೊಂಡ. ಸಂಜೆ ಹೊತ್ತು ಜಾನುವಾರುಗಳನ್ನಟ್ಟಿಕೊಂಡು ಮನೆಗೆ ಬಂದ.

ಚಿಕ್ಕಮ್ಮ ಮನೆಗೆ ಬಂದ ಹುಡುಗನ ಮುಖ ನೋಡಿದಳು. ಆತನ ಮುಖದಲ್ಲಿ ಹಸಿವಿನ ಬಳಲಿಕೆ ಕಾಣಲಿಲ್ಲ. "ಇವತ್ತೇನೋ ಮೊದಲ ದಿನ. ಎರಡು ದಿನ ಕಳೆಯಲಿ ನೋಡುವ" ಎಂದು ಸುಮ್ಮನಾದಳು. ಅಣ್ಣಪ್ಪ ಪ್ರತಿದಿನ ಮಧ್ಯಾಹ್ನ ಕರುವೊಳು ಕಾಯಿ ತಿಂದು ಹಸಿವೆ ನೀಗಿಸಿಕೊಳ್ಳುತ್ತಿದ್ದ. ಹೀಗೆ ಎರಡು-ಮೂರು ದಿವಸಗಳು ಕಳೆದವು. ಚಿಕ್ಕಮ್ಮನಿಗೆ ಅಣ್ಣಪ್ಪನ ಮುಖದಲ್ಲಿ ಏನೂ ಬಳಲಿಕೆ ಕಾಣುತ್ತಿರಲಿಲ್ಲ. ಈತ

ಮಧ್ಯಾಹ್ನ ಏನೋ ತಿನ್ನುತ್ತಾನೆ ಎಂದು ಆಕೆಗೆ ಸಂಶಯ ಬಂತು. ಅದನ್ನು ಕಂಡು ಹಿಡಿಯಬೇಕೆಂದು ಆಲೋಚನೆ ಮಾಡಿದಳು. ಮರುದಿನ ಅಣ್ಣಪ್ಪ ದನ ಕಾಯಲು ಹೊರಟಾಗ ಆತನ ಜೊತೆಗೆ ತನ್ನ ಮಗಳನ್ನು ಕಳುಹಿಸಿಕೊಟ್ಟಳು. "ಅಣ್ಣಪ್ಪ ಮಧ್ಯಾಹ್ನ ಏನು ತಿನ್ನುತ್ತಾನೆ ಅದನ್ನೇ ನೀನೂ ತಿನ್ನು. ಅಲ್ಲಿ ಏನು ನಡೆಯುತ್ತದೆ ಎಂಬುದನ್ನು ನನಗೆ ಬಂದು ಹೇಳು" ಎಂದಳು.

ಮರುದಿನ ಅಣ್ಣಪ್ಪ ಜಾನುವಾರುಗಳನ್ನಟ್ಟಿಕೊಂಡು ಹೋಗುವಾಗ ಅಕ್ಕಮ್ಮ ಕೂಡ ಜೊತೆಗೆ ಹೊರಟಳು. ಇಬ್ಬರು ಜಾನುವಾರುಗಳನ್ನಟ್ಟಿಕೊಂಡು ಗುಡ್ಡೆಯ ತಪ್ಪಲಿಗೆ ಹೋದರು. ಮಧ್ಯಾಹ್ನದ ಹೊತ್ತಿಗೆ ಅಣ್ಣಪ್ಪ ತಂಗಿಯನ್ನು ಕರೊಳಿನ ಬಳ್ಳಿ ಹಬ್ಬಿದ ಪೊದೆಯ ಬಳಿಗೆ ಕರೆದುಕೊಂಡು ಹೋದ. ಕರೊಳು ಕೊಯ್ದು ತನ್ನ ತಂಗಿಗೆ ಹೊಟ್ಟೆತುಂಬ ತಿನ್ನಲು ಕೊಟ್ಟ. ತಾನೂ ತಿಂದು ಹೊಟ್ಟೆ ತುಂಬಿಸಿಕೊಂಡ.

ಸಂಜೆ ಮನೆಗೆ ಹಿಂತಿರುಗಿದ ಮೇಲೆ ಅಕ್ಕಮ್ಮ ತನ್ನ ತಾಯಿಗೆ ಜಾನುವಾರು ಮೇಯಿಸುವಲ್ಲಿ ಏನು ನಡೆಯಿತು ಎಂಬುದನ್ನು ಹೇಳಿದಳು "ಹಾಗೋ ಸಂಗತಿ ನೀನು ನಾಳೆ ಸಂಜೆ ಬರುವಾಗ ಆ ಕರೊಳು ಬಳ್ಳಿಯನ್ನು ಕತ್ತರಿಸಿ ಹಾಕಿ ಬಾ" ಎಂದು ತಾಯಿ ಅಕ್ಕಮ್ಮನಿಗೆ ಹೇಳಿಕೊಟ್ಟಳು. ಮರುದಿನವೂ ಅಣ್ಣಪ್ಪನ ಜೊತೆಯಲ್ಲಿ ಅಕ್ಕಮ್ಮ ಜಾನುವಾರು ಮೇಯಿಸಲು ಹೊರಟಳು. ಮಧ್ಯಾಹ್ನ ಕರುವೋಳು ಕಾಯಿ ತಿಂದು ಹೊಟ್ಟೆ ತುಂಬಿಸಿದರು. ಬರುವಾಗ ಅಕ್ಕಮ್ಮ ತನ್ನ ಕೈಯಲ್ಲಿದ್ದ ಕತ್ತಿಯಿಂದ ಕರುವೋಲು ಬಳ್ಳಿಯ ಬುಡ ಕತ್ತರಿಸಿ ಹಾಕಿ ಬಂದಳು.

ಮಾರನೇ ದಿನ ಅಣ್ಣಪ್ಪನ ಜೊತೆ ಅಕ್ಕಮ್ಮ ಹೊರಡಲಿಲ್ಲ. ಅಣ್ಣಪ್ಪನೊಬ್ಬನೇ ಜಾನುವಾರುಗಳನ್ನಟ್ಟಿಕೊಂಡು ಗುಡ್ಡೆಗೆ ಹೋದ. ಮಧ್ಯಾಹ್ನದ ಹೊತ್ತಿಗೆ ಕರುವೋಳು ಬಳ್ಳಿ ಹಬ್ಬಿದ ಪೊದೆಯ ಬಳಿಗೆ ಹೋದಾಗ ಬಳ್ಳಿ ಎಲ್ಲಾ ಒಣಗಿಹೋಗಿತ್ತು. "ನನ್ನ ಗ್ರಹಚಾರ ಯಾರೋ ಇದನ್ನು ಕಡಿದು ಹಾಕಿದ್ದಾರೆ" ಎಂದುಕೊಳ್ಳುತ್ತಾ ಬಳ್ಳಿಯಲ್ಲಿ ಉಳಿದ ಒಣಗಿದ ಕಾಯಿಗಳನ್ನು ತಿಂದು ಹೊಟ್ಟೆ ತುಂಬಿಸಿಕೊಂಡ. ಮರುದಿನ ಮಧ್ಯಾಹ್ನಕ್ಕೆ ಏನು ಮಾಡುವುದೆಂದು ಆತನಿಗೆ ಚಿಂತೆಯಾಯಿತು. ಅಣ್ಣಪ್ಪನ ಹೋರಿಗೆ ಸಂಗತಿ ಗೊತ್ತಾಯಿತು. ಅದು ಅಣ್ಣಪ್ಪನ ಬಳಿಗೆ ಬಂದು "ನೀನು ಚಿಂತಿಸಬೇಡ, ಬೆಳಗ್ಗೆ ನನ್ನನ್ನು ಹಟ್ಟಿಯಿಂದ ಬಿಡುವಾಗ ನನ್ನ ಕೋಡಿಗೆ ಒಂದೆಲೆಯಲ್ಲಿ ಒಂದಿಷ್ಟು ಅಕ್ಕಿಕಾಳು ಮತ್ತು ಏನಾದರೊಂದು ತುಂಡು ತರಕಾರಿ ಕಟ್ಟಿಬಿಡು. ಮಧ್ಯಾಹ್ನ ಹೊತ್ತಿಗೆ ಅದು ಅನ್ನ-ಪಲ್ಯವಾಗುತ್ತದೆ. ನೀನು ಹಸಿವೆಗೆ ಹೆದರಬೇಡ" ಎಂದಿತು.

ಎತ್ತು ಹೇಳಿದಂತೆ ಮರುದಿನ ಗುಡ್ಡೆಯ ತಪ್ಪಲಿಗೆ ಹೊರಟಾಗ ಅಣ್ಣಪ್ಪ ಎತ್ತಿನ ಕೊಂಬಿಗೆ ನಾಲ್ಕು ಕಾಳು ಅಕ್ಕಿ ಮತ್ತೊಂದು ತುಂಡು ಬೆಂಡೆಕಾಯಿ ಕಟ್ಟಿಬಿಟ್ಟ. ಹೊತ್ತು ಮಧ್ಯಾಹ್ನವಾಯಿತು. ಎತ್ತು ಅಣ್ಣಪ್ಪನ ಹತ್ತಿರ ಬಂತು. ಅಣ್ಣಪ್ಪ ಎತ್ತಿನ ಕೋಡಿಗೆ ಕಟ್ಟಿದ ಗಂಟು ಬಿಚ್ಚಿ ನೋಡಿದ. ಎಲೆಯ ಗಂಟಿನೊಳಗೆ ಅನ್ನ ಮತ್ತು ಬೆಂಡೆಕಾಯಿ

ಪಲ್ಯ ತುಂಬಿತ್ತು. ಮುಖ ತೊಳೆದು ಹೊಟ್ಟೆ ತುಂಬ ಊಟಮಾಡಿ ನೀರು ಕುಡಿದು ಮರದಡಿಗೆ ಬಂದು ಮಲಗಿ ಒಳ್ಳೆ ನಿದ್ದೆ ಮಾಡಿದ. ಸಂಜೆ ಜಾನುವಾರುಗಳನ್ನಟ್ಟಿಕೊಂಡು ಮನೆಗೆ ಹಿಂತಿರುಗಿದ.

ಹೀಗೆ ಕೆಲವು ದಿನಗಳು ಕಳೆದುವು. ಕರುವೋಳು ಬಳ್ಳಿ ಕತ್ತರಿಸಿ ಹಾಕಿದರೂ ಈತ ಹಸಿವಿನಿಂದ ಬಳಲಿದಂತೆ ಕಾಣುವುದಿಲ್ಲ. ಸಂಜೆಗೆ ಬರುವಾಗ ಒಳ್ಳೆ ಹುಮ್ಮಸ್ಸಿನಿಂದಲೇ ಇರುತ್ತಾನೆ. ಈಗ ಮಧ್ಯಾಹ್ನದೂಟಕ್ಕೆ ಏನು ಮಾಡುತ್ತಾನೆ ಎಂಬುದನ್ನು ಕಂಡು ಹಿಡಿಯಬೇಕೆಂದು ಆಲೋಚಿಸಿ ಅಕ್ಕಮ್ಮ ತನ್ನ ಮಗಳನ್ನು ಕರೆದು ಮರುದಿನ ಅಣ್ಣಪ್ಪನ ಜೊತೆ ದನಕಾಯಲು ಹೋಗುವಂತೆ ಹೇಳಿದಳು. ಅಕ್ಕಮ್ಮ ಹೋದ ದಿನವೂ ಅಣ್ಣಪ್ಪ ಹೋರಿಯ ಕೋಡಿಗೆ ಬಿಗಿದ ಪೊಟ್ಟಣ ತೆಗೆದು ಬಿಡಿಸಿ ಅನ್ನ ಪಲ್ಯವನ್ನು ತನ್ನ ತಂಗಿಗೂ ಕೊಟ್ಟು ತಾನೂ ಊಟಮಾಡಿದ. ಇಬ್ಬರೂ ಹೊಟ್ಟೆ ತುಂಬಿಸಿಕೊಂಡು ಹೊಳೆ ನೀರು ಕುಡಿದು ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ಸಂಜೆಯ ಹೊತ್ತಿಗೆ ಜಾನುವಾರುಗಳನ್ನಟ್ಟಿಕೊಂಡು ಮನೆಗೆ ಹಿಂತಿರುಗಿದರು. ಹಿಂತಿರುಗಿದ ಕೂಡಲೇ ಅಕ್ಕಮ್ಮ ತನ್ನ ತಾಯಿಯೊಡನೆ ನಡೆದ ಸಂಗತಿಯನ್ನೆಲ್ಲ ಹೇಳಿದಳು.

ಇದೆಲ್ಲ ಹೋರಿಯ ಆಟವೆಂದು ರೈತನ ಮಡದಿಗೆ ತಿಳಿದು ಹೋಯಿತು. ಅಣ್ಣಪ್ಪನನ್ನೂ ಹೋರಿಯನ್ನೂ ಇಬ್ಬರನ್ನೂ ಕೊಂದುಬಿಡಬೇಕೆಂದು ಆಲೋಚಿಸಿದಳು. ಸಂಜೆ ಗುಡ್ಡೆಯಿಂದ ಬಂದ ಜಾನುವಾರುಗಳಿಗೆ ಕುಡಿಯಲು ಕಲ್ಲ ಮರಾಯಿಗೆ[೩] ನೀರು ಹೊಯ್ಯುವಾಗ ಅಣ್ಣಪ್ಪನ ಎತ್ತನ್ನು ನೋಡಿ "ನಿನ್ನನ್ನೂ ನಿನ್ನ ಯಜಮಾನನ್ನು ಇಬ್ಬರನ್ನೂ ಈ ದಿನ ರಾತ್ರಿ ಕೊಂದುಬಿಡುತ್ತೇನೆ ನೋಡು" ಎಂದಳು. ಎತ್ತು ಇದನ್ನು ತಿಳಿದುಕೊಳ್ಳುತ್ತದೆ ಎಂದವಳಿಗೆ ತಿಳಿಯದು. ರಾತ್ರಿ ಹುಲ್ಲು ಹಾಕಲು ಹೋದಾಗ ಎತ್ತು ಅಣ್ಣಪ್ಪನಲ್ಲಿ "ನಮ್ಮಿಬ್ಬರನ್ನು ನಿನ್ನ ಚಿಕ್ಕಮ್ಮ ಈ ರಾತ್ರಿ ಕೊಂದುಬಿಡುತ್ತಾರೆ ನಾವು ಈ ರಾತ್ರಿಯೇ ಇಲ್ಲಿಂದ ತಪ್ಪಿಸಿಕೊಳ್ಳಬೇಕು. ನನ್ನ ಕೋಡಿಗೆ ಒಂದು ಹಗ್ಗ ಕಟ್ಟು ಅದರ ತುದಿಯನ್ನು ನೀನು ಮಲಗುವಾಗ ನಿನ್ನ ಕಾಲ ಬೆರಳಿಗೆ ಕಟ್ಟಿಕೊ. ಮಧ್ಯರಾತ್ರಿ ನಾನು ಕೊಂಬನ್ನು ಅಲುಗಾಡಿಸುತ್ತೇನೆ. ಆಗ ನಿನಗೆ ಎಚ್ಚರವಾಗುತ್ತದೆ, ನೀನು ಎದ್ದು ಬರಬೇಕು. ನಾವಿಬ್ಬರು ಈ ಊರು ಬಿಟ್ಟು ಹೋಗೋಣ" ಎಂದಿತು.

ಅಣ್ಣಪ್ಪ ಹಾಗೆಯೇ ಮಾಡಿದ. ಮಧ್ಯರಾತ್ರಿ ಎತ್ತು ತನ್ನ ಕೋಡನ್ನು ಅಲುಗಾಡಿಸಿತು. ಅಪ್ಪಣ್ಣನಿಗೆ ಎಚ್ಚರವಾಯಿತು. ಅವನು ಎದ್ದು ಪಕ್ಕದಲ್ಲೇ ಇಟ್ಟಿದ್ದ ಅಂಗಿ ಬಟ್ಟೆ ಹಾಕಿಕೊಂಡು ಹೊರಗೆ ಬಂದ. ಎತ್ತಿನ ಜೊತೆಯಲ್ಲಿ ಹೊರಟ.

ರಾತ್ರಿ ಇಡೀ ನಡೆದು ನಡೆದು ಇಬ್ಬರೂ ಬೆಳಗಾಗುವಾಗ ಒಂದು ಅರಮನೆಯ ಮುಂದೆ ತಲುಪಿದರು. ಅರಮನೆ ಎದುರೊಂದು ದೊಡ್ಡ ಬಾಕ್ಯಾರು[೪](ದೊಡ್ಡ ಗದ್ದೆ) ಗದ್ದೆಯಲ್ಲಿ ಹುಲುಸಾಗಿ ಪೈರು ಬೆಳೆದು ನಿಂತಿದೆ. ಎತ್ತು ಅಣ್ಣಪ್ಪನೊಡನೆ ಹೇಳಿತು. "ನಾನು ಈ ಗದ್ದೆಗೆ ಇಳಿದು ಪೈರು ತಿನ್ನಲು ಶುರುಮಾಡುತ್ತೇನೆ. ಯಾರ್‍ಯಾರು ಬಂದು

ಹೊಡೆದೋಡಿಸಲು ಪ್ರಯತ್ನಿಸಿದರೂ ನಾನು ಗದ್ದೆಯಿಂದ ಹೊರಗೆ ಹೋಗುವುದಿಲ್ಲ. ಕೊನೆಗೆ ಅರಸನೇ ಬರುತ್ತಾನೆ. ಅವನು ನನ್ನನ್ನು ಗದ್ದೆಯಿಂದ ಓಡಿಸಲು ನಿನ್ನಲ್ಲಿ ಹೇಳಿದರೆ ಮಾತ್ರ ನೀನು ನನ್ನನ್ನೋಡಿಸಲು ಬರಬೇಕು. ಆ ಮೇಲೆ ನಾನು ಗದ್ದೆಯಿಂದ ಹೊರ ಹೋಗುತ್ತೇನೆ" ಎಂದಿತು. ಹಾಗೆಯೇ ಎತ್ತು ಗದ್ದೆಗಿಳಿದು ಪೈರು ಮೇಯಲು ಪ್ರಾರಂಭಿಸಿತು.

ವಿಶಾಲವಾದ ಗದ್ದೆ. ಗದ್ದೆಯ ತುಂಬ ಪೈರು ಬಂಗಾರದ ವರ್ಣದ ತೆನೆ ಹೊತ್ತು ನಿಂತಿದೆ. ಗದ್ದೆಯಲ್ಲಿ ಎತ್ತು ಪೈರು ತಿನ್ನುವುದನ್ನು ನೋಡಿ ಆಳುಗಳು ಓಡಿ ಬಂದರು. ಗದ್ದೆಗಿಳಿದು ಎತ್ತನ್ನು ಎಷ್ಟು ಹೊಡೆದರೂ ಎತ್ತು ಹಂದಾಡುವುದಿಲ್ಲ. ಕಲ್ಲಿನ ಹಾಗೆ ನಿಂತುಬಿಟ್ಟಿದೆ. ಗದ್ದೆಯ ಅರ್ಧಾಂಶ ಪೈರು ತಿಂದು ಮುಗಿಸಿದೆ. ಊರ ಜನರೆಲ್ಲ ಸೇರಿದರು. ಗದ್ದಲವೋ ಗದ್ದಲ. ಗದ್ದಲ ಕೇಳಿ ಅರಸ ಅರಮನೆ ಉಪ್ಪರಿಗೆಯ ಮೇಲೇರಿ ನಿಂತು ನೋಡಿದ. ಜನ ಸೇರಿದ್ದನ್ನು ನೋಡಿ ತಾನೇ ಅರಮನೆಯಿಂದ ಹೊರಗೆ ಹೊರಟು ಗದ್ದೆ ಬದಿಗೆ ಬಂದ. ಅರಸನಿಗೆ ಸಂಗತಿ ಗೊತ್ತಾಯಿತು. "ನನ್ನ ಬಾಕ್ಯಾರು ಗದ್ದೆಯಿಂದ ಎತ್ತನ್ನು ಹೊರಗೋಡಿಸಿದವರಿಗೆ ಅರ್ಧರಾಜ್ಯ ಕೊಡುತ್ತೇನೆ. ನನ್ನ ಮಗಳನ್ನು ಮದ್ವೆ ಮಾಡಿಕೊಡುತ್ತೇನೆ" ಎಂದು ಅರಸ ನಿಂತಲ್ಲಿಂದಲೇ ಸಾರಿ ಬಿಟ್ಟ. ಅರಸನ ಡಂಗುರ ಕೇಳಿದ ಕೂಡಲೇ ಅಣ್ಣಪ್ಪ ಎಲ್ಲರನ್ನೂ ಗದ್ದೆಯಿಂದ ಮೇಲೆ ಬರಲು ಹೇಳಿದ. ಎಲ್ಲರೂ ಮೇಲೆ ಬಂದು ಗದ್ದೆಯ ಬದುವಿನಲ್ಲಿ ನಿಂತುಕೊಂಡರು. ಆ ಮೇಲೆ ಅಣ್ಣಪ್ಪ ಗದ್ದೆಗೆ ಇಳಿದ. ಎತ್ತಿನ ಬಳಿಗೆ ಹೋಗಿ ಅದರ ಬೆನ್ನು ತಟ್ಟಿದ. ಕೂಡಲೇ ಎತ್ತು ಗದ್ದೆಯಿಂದ ಹೊರಬಂತು. ಅದನ್ನು ಹಿಂಬಾಲಿಸಿಕೊಂಡು ಅಣ್ಣಪ್ಪನೂ ಗದ್ದೆಯಿಂದ ಹೊರಗೆ ಬಂದ. ಕೂಡಲೇ ಕೂಡಿದ ಜನರೆಲ್ಲ ಅಣ್ಣಪ್ಪನ ಕೊರಳಿಗೆ ಹೂ ಮಾಲೆ ಹಾಕಿದರು. ಅರಮನೆಗೆ ಮೆರವಣಿಗೆಯಲ್ಲಿ ಕರೆದುಕೊಂಡು ಹೋದರು. ಅರಸ ಅಣ್ಣಪ್ಪನಿಗೆ ಮದುವೆವರೆಗೆ ಉಳಿದುಕೊಳ್ಳಲು ಪ್ರತ್ಯೇಕ ಬಿಡಾರದ ವ್ಯವಸ್ಥೆ ಮಾಡಿಸಿದ. ಜೋಯಿಸರೊಡನೆ ಮಾತನಾಡಿ ಮದ್ವೆಗೆ ದಿನ ನಿಶ್ಚಯಗೊಳಿಸಿದ. ಅಣ್ಣಪ್ಪನೊಡನೆ ತನ್ನ ಮಗಳ ಮದ್ವೆಯನ್ನು ವೈಭವದಿಂದ ನಡೆಸಿಕೊಟ್ಟ. ಅರ್ಧರಾಜ್ಯ ಬಿಟ್ಟುಕೊಟ್ಟು ಮಗಳು ಅಳಿಯನ ವಾಸಕ್ಕೆ ಪ್ರತ್ಯೇಕ ಅರಮನೆ ಕಟ್ಟಿಸಿಕೊಟ್ಟ. ಅಣ್ಣಪ್ಪ ತನಗೆ ರಾಜ್ಯ ದೊರಕಿಸಿಕೊಟ್ಟ ಎತ್ತನ್ನು ಮರೆಯಲಿಲ್ಲ; ಅದನ್ನು ತನ್ನ ಸ್ನೇಹಿತನಂತೆ ನೋಡಿಕೊಂಡ. ಎತ್ತಿನ ವಾಸಕ್ಕಾಗಿ ಅರಮನೆಯ ಪಕ್ಕದಲ್ಲೇ ದೊಡ್ಡ ಮನೆಯೊಂದನ್ನು ಕಟ್ಟಿಸಿದ. ದಿನನಿತ್ಯ ತಾನೇ ಹೋಗಿ ಎತ್ತಿನೊಡನೆ ಒಂದಷ್ಟು ಹೊತ್ತು ಮಾತನಾಡಿ ಬರುತ್ತಿದ್ದ.

ಅಣ್ಣಪ್ಪ ಅರ್ಧರಾಜ್ಯ ಪಡೆದು ರಾಜಕುಮಾರಿಯನ್ನು ವರಿಸಿದ ಸುದ್ದಿ ಆತನ ತಂದೆ ರೈತನಿಗೆ ಮುಟ್ಟಿತು. ರೈತನ ಮಡದಿ ತನ್ನ ಮಗಳು ಮತ್ತು ಗಂಡನನ್ನು ಕರೆದುಕೊಂಡು ಅಣ್ಣಪ್ಪನ ಅರಮನೆಗೆ ಬಂದಳು. ತಾನು ಮಾಡಿದ ತಪ್ಪಿಗೆ ಕ್ಷಮೆ

ಬೇಡಿದಳು. ಅಣ್ಣಪ್ಪ ತನ್ನ ಮಲತಾಯಿಯನ್ನು ಕ್ಷಮಿಸಿಬಿಟ್ಟ. ಎಲ್ಲರೂ ಅರಮನೆಯಲ್ಲಿ ತನ್ನೊಂದಿಗೆ ಇರುವಂತೆ ಹೇಳಿದ. ಅಣ್ಣಪ್ಪ ರಾಜ್ಯವಾಳಿಕೊಂಡು ಅರಮನೆಯಲ್ಲಿ ಸುಖವಾಗಿದ್ದ.

ಟಿಪ್ಪಣಿಗಳು

೧. ದೂಪೆ – ಹೆಣ ಸುಟ್ಟ ಜಾಗದಲ್ಲಿ ಮಾಡಿದ ಮಣ್ಣದಿನ್ನೆ (ಗೋರಿ)

೨. ಕರೊಳು – ಕಾಡಿನಲ್ಲಿರುವ ಬಳ್ಳಿಯಲ್ಲಿ ಬೆಳೆಯುವ ತೊಂಡೆಯಾಕಾರದ ತಿನ್ನಲು ರುಚಿಯಾದ ಕಾಯಿ.

೩. ಮರಾಯಿ – ನೀರು ತುಂಬಿಡಲು ಮಾಡಿದ ತೊಟ್ಟಿ

೪. ಬಾಕ್ಯಾರು – ಮನೆ ಎದುರಿನ ವಿಶಾಲವಾದ ಗದ್ದೆ.



೨೨

ಯಕ್ಷಕನ್ಯೆಯನ್ನು ವರಿಸಿದ ಗೋವಳ

ಒಂದು ಮನೆಯಲ್ಲಿ ಒಬ್ಬ ಗೊಲ್ಲರ ಹುಡುಗ ತನ್ನ ತಾಯಿಯೊಂದಿಗೆ ವಾಸಿಸುತ್ತಿದ್ದ. ಊರಿನ ಅರಸನ ದನಕರುಗಳನ್ನು ಮೇಯಿಸುವುದು ಆತನ ಕೆಲಸ. ಮದುವೆಯಾಗುವ ಪ್ರಾಯಕ್ಕೆ ಬಂದಿದ್ದರೂ ಆತನಿಗ್ಯಾರೂ ಹುಡುಗಿ ಕೊಡಲು ಮುಂದೆ ಬರಲಿಲ್ಲ. ದಿನನಿತ್ಯ ಆತ ಬೆಳಗ್ಗೆ ಎದ್ದು ಬುತ್ತಿ ಕಟ್ಟಿಕೊಂಡು ಅರಸನ ಹಟ್ಟಿಯಿಂದ ಜಾನುವಾರುಗಳನ್ನಟ್ಟಿಕೊಂಡು ಗೋಮಾಳಕ್ಕೆ ಹೋಗುತ್ತಿದ್ದ. ಸಂಜೆಯಾಗುವಾಗ ಅವುಗಳನ್ನು ಅಟ್ಟಿಕೊಂಡು ಬಂದು ಹಟ್ಟಿಯಲ್ಲಿ ಕೂಡಿಸಿ ತನ್ನ ಮನೆಗೆ ಸೇರುತ್ತಿದ್ದ. ಕೆಲವೊಮ್ಮೆ ಜಾನುವಾರುಗಳು ಹುಲ್ಲು ಹುಡುಕಿಕೊಂಡು ಗೋಮಾಳ ಬಿಟ್ಟು ದೂರ ದೂರದವರೆಗೆ ಹೋಗುತ್ತಿದ್ದುವು. ಹಾಗೆ ಹೋದರೆ ಬರುವಾಗ ತಡವಾಗುತ್ತಿತ್ತು. ಬಹಳ ತಡವಾದರೆ ಆತ ಜಾನುವಾರುಗಳೊಂದಿಗೆ ಗೋಮಾಳದಲ್ಲೇ ಮಲಗಿಬಿಡುತ್ತಿದ್ದ. ಮರುದಿನ ಬೆಳಗ್ಗೆ ಎದ್ದು ಬಂದು ಊಟ ಮಾಡಿ ಬುತ್ತಿ ಹಿಡಿದುಕೊಂಡು ಹೋಗುತ್ತಿದ್ದ. ಪ್ರತಿದಿನ ಆತ ದನಕರು ಮೇಯಿಸಲು ಹೊರಟಾಗಲೂ ಆತನ ತಾಯಿ "ಮಗನೇ ನೀನು ಯಾವ ದಿಕ್ಕಿಗೆ ಬೇಕಾದರೂ ಹೋಗು ಆದರೆ ಬಡಗು ದಿಕ್ಕಿಗೆ ಮಾತ್ರ ಹೋಗಬೇಡ" ಎಂದು ಎಚ್ಚರಿಸುತ್ತಿದ್ದಳು. ದಿನನಿತ್ಯ ಈ ಮಾತು ಕೇಳಿ ಕೇಳಿ ಬಡಗು ದಿಕ್ಕಿನಲ್ಲೇನುಂಟೆಂದು ನೋಡುವ ಕುತೂಹಲ ಯುವಕನಲ್ಲುಂಟಾಯಿತು.

ಒಂದು ದಿನ ತಾಯಿಯ ಮಾತು ಲೆಕ್ಕಿಸದೆ ಯುವಕ ಬಡಗಣ ದಿಕ್ಕಿನ ಕಡೆಗೆ ಹೊರಟ. ಜಾನುವಾರುಗಳನ್ನು ಗೋಮಾಳದಲ್ಲೇ ಮೇಯಲು ಬಿಟ್ಟು ಆತನೊಬ್ಬನೇ ಮುಂದುವರಿದ. ಬಹಳ ದೂರ ಹೋದ ಮೇಲೆ ಆತನಿಗೊಂದು ಅರಳಿ ಮರ ಕಂಡಿತು. ಆ ಮರದಡಿಯಲ್ಲೊಂದು ತಿಳಿನೀರಿನ ಕೊಳ. ಆ ಮರದ ಬುಡದಲ್ಲಿ ತಮ್ಮ ಉಡುಪುಗಳನ್ನು ಕಳಚಿಟ್ಟು ಏಳು ಜನ ಸಿರಿಕನ್ಯೆಯರು(ಯಕ್ಷಿಣಿಯರು) ಕೊಳದಲ್ಲಿ ಸ್ನಾನ ಮಾಡುತ್ತಿದ್ದರು. ಗೋವಳ ಹುಡುಗ ಅವರ ಕಣ್ಣಿಗೆ ಬೀಳದಂತೆ ಹೋಗಿ ಅವರು ಮರದ ಬುಡದಲ್ಲಿಟ್ಟ ಉಡುಪುಗಳನ್ನೆತ್ತಿಕೊಂಡು ಮನೆ ಕಡೆ ಓಡತೊಡಗಿದ. ಹುಡುಗ ಓಡುತ್ತಿರುವುದನ್ನು ನೋಡಿದ ಅವರು ಏಳು ಜನರೂ ಅವನನ್ನು ಹಿಂಬಾಲಿಸಿ ಓಡಿಕೊಂಡು ಬಂದರು. ಬಹಳ ದೂರ ಮುಂದೆ ಬಂದಾಗ ಕನ್ಯೆಯರು ಹುಡುಗನ ಹತ್ತಿರ ಮುಟ್ಟಿದರು. "ನಮ್ಮ ಉಡುಪುಗಳನ್ನು ದಯವಿಟ್ಟು ಕೊಡು" ಎಂದು ಅಂಗಲಾಚಿ

ಬೊಬ್ಬೆ ಹೊಡೆದು ಬೇಡಿಕೊಂಡರು. ಆಗ ಆತ ಒಬ್ಬಳ ಉಡುಪು ತೆಗೆದು ಅವರೆಡೆಗೆ ಬಿಸಾಡಿದ. ಅದನ್ನು ಕಿತ್ತುಕೊಳ್ಳಲು ಅವರೊಳಗೆ ಉರುಡಾಟ ನಡೆಯಿತು. ಉಡುಪು ಪಡೆದವಳು ಹಿಂದಕ್ಕೆ ಹೋದಳು. ಉಳಿದ ಆರು ಜನ ಆತನನ್ನು ಬೆನ್ನಟ್ಟಿಕೊಂಡು ಬಂದರು. ಅವರು ಆತನ ಹತ್ತಿರ ತಲುಪಿದಾಗ ಇನ್ನೊಬ್ಬರ ಉಡುಪು ಎಸೆದುಬಿಟ್ಟ. ಹೀಗೆ ಆರು ಜನರ ಉಡುಪುಗಳನ್ನು ಬಿಸಾಡಿ ಆರು ಮಂದಿಯನ್ನು ಹಿಂದಕ್ಕೆ ಕಳುಹಿಸಿದ. ಒಬ್ಬಾಕೆಯ ಉಡುಪನ್ನು ಕೊಡಲೇ ಇಲ್ಲ. ಆಕೆ ಆತನ ಮನೆವರೆಗೂ ಬಂದಳು. ಉಡುಪು ದೊರೆಯದೆ ಆಕೆ ಸಿರಿಲೋಕಕ್ಕೆ(ಯಕ್ಷಲೋಕ) ಹಿಂತಿರುಗುವಂತಿಲ್ಲ. ಆಕೆಯ ಉಡುಪನ್ನು ಗೋವಳ ಭದ್ರವಾಗಿ ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿ ಸಿರಿಕನ್ಯೆಗೆ ಉಡಲು ಬೇರೆ ಸೀರೆ, ರವಿಕೆ ಕೊಟ್ಟ. ಆಕೆಯನ್ನು ಮದುವೆಯಾಗಿ ಗುಡಿಸಲಲ್ಲಿ ತಾಯಿಯೊಂದಿಗೆ ಸುಖವಾಗಿದ್ದ.

ಹೀಗೆ ಕೆಲವು ದಿನಗಳುರುಳಿದವು. ಗೋವಳ ಸಿರಿಕನ್ಯೆಯ ಸೀರೆ, ರವಿಕೆಯ ವಿಚಾರ ಮರೆತುಬಿಟ್ಟಿದ್ದ. ಒಂದು ದಿನ ಗೋವಳ ಮತ್ತು ಅವನ ತಾಯಿ ಇಬ್ಬರೂ ಇಲ್ಲದ ಹೊತ್ತು ನೋಡಿ ಸಿರಿಕನ್ಯೆ ಪೆಟ್ಟಿಗೆ ಹುಡುಕಿ ತನ್ನ ಸೀರೆ, ರವಿಕೆ ತೆಗೆದು ಧರಿಸಿದಳು. ಗೋವಳನ ಮನೆ ಬಿಟ್ಟು ಯಕ್ಷಲೋಕಕ್ಕೆ ಮರಳಿ ಹೊರಟುಹೋದಳು.

ಗೋವಳ ಆ ದಿನ ಸಂಜೆ ಮನೆಗೆ ಬರುವಾಗ ಸಿರಿಕನ್ಯೆ ಮಾಯವಾಗಿದ್ದಾಳೆ ಎಂಬುದು ಗೊತ್ತಾಗಿತ್ತು. ಆಕೆಯನ್ನು ಪಡೆದೇ ತೀರುವೆನೆಂದು ಗೋವಳ ಸಿರಿಲೋಕದ ಕಡೆಗೆ ತಾನೂ ಹೊರಟ. ಬಡಗಣ ದಿಕ್ಕಿಗೆ ನಡೆದುಕೊಂಡು ಮುಂದುವರಿದ. ಬಹಳಷ್ಟು ದೂರ ಹೋದಾಗ ಆತನಿಗೊಂದು ಕಾಡು ಸಿಕ್ಕಿತು. ಜಡಿ ಮಳೆ ಸುರಿಯುತ್ತಿತ್ತು. ಕಾಡಿನ ಮಧ್ಯದಿಂದ ಹೋಗುವಾಗ ಎಲೆಗಳ ಮೇಲಿದ್ದ ಇರುವೆಗಳ ಗುಂಪೊಂದು ನೀರಿನಲ್ಲಿ ತೇಲುತ್ತಾ ಹೋಗುತ್ತಿತ್ತು. ಗೋವಳ ಅದನ್ನೆತ್ತಿ ನೆಲದ ಮೇಲೆ ಬಿಟ್ಟು ಅವುಗಳ ಜೀವ ಉಳಿಸಿದ. ಮುಂದಕ್ಕೆ ಹೋದಾಗ ಭಯಂಕರ ಕಾಡ್ಗಿಚ್ಚು ಉರಿಯುತ್ತಿರುವುದು ಕಂಡುಬಂತು. ಆ ಬೆಂಕಿಯ ಮಧ್ಯೆ ಸಿಲುಕಿ ಒಂದು ಕಾಡುಹಂದಿ ಮತ್ತು ಮರಿಗಳು ಬೊಬ್ಬಿಡುತ್ತಿದ್ದುವು. ಗೋವಳ ಆ ಹಂದಿಗಳನ್ನು ಕಾಡ್ಗಿಚ್ಚಿನಿಂದ ರಕ್ಷಿಸಿದ. ಅಲ್ಲಿಂದ ಮುಂದೆ ಹೋಗುವಾಗ ಕಾಡ್ಗಿಚ್ಚಿಗೆ ಸುಡುತ್ತಿದ್ದ ಒಂದು ಒಣಮರ ಕಂಡಿತು. ಆ ಮರದಲ್ಲಿದ್ದ ದುಂಬಿಯೊಂದು ಹೊಗೆಗೆ ಹಾರಲಾರದೆ ಬೆಂಕಿಯಲ್ಲೇ ಸಾಯುವ ಸ್ಥಿತಿಯಲ್ಲಿತ್ತು. ಗೋವಳ ಆ ದುಂಬಿಯನ್ನೆತ್ತಿ ಹೊರಗಡೆ ಹಾರಾಡಿಸಿಬಿಟ್ಟ. ಗೋವಳನಿಂದ ಉಪಕಾರ ಪಡೆದವರೆಲ್ಲ ಮುಂದೆ ನಾವು ನೀನು ನೆನೆದಾಗ ಬಂದು ಸಹಾಯ ಮಾಡುತ್ತೇವೆಂದು ಹೇಳಿ ಹೋಗಿಬಿಟ್ಟರು.

ಕಟ್ಟಕಡೆಗೆ ಗೋವಳ ಸಿರಿಕನ್ಯೆಯ ಅರಮನೆಗೆ ತಲುಪಿದ. ಯಕ್ಷರಸನೊಡನೆ ತನ್ನ ಮಡದಿಯನ್ನು ಕೊಡುವಂತೆ ಕೇಳಿದ. ಅದಕ್ಕೆ ಆತ "ನಿನಗೆ ನನ್ನ ಮಗಳನ್ನು ಕೊಡಬೇಕಾದರೆ ನಾನು ಹೇಳಿದ ಮೂರು ಕೆಲಸಗಳನ್ನು ಸಾಧಿಸಿಕೊಡಬೇಕು.

ಸಾಧಿಸಿಕೊಡಲು ಸೋತರೆ ನೀನು ಬಂದ ದಾರಿಯನ್ನು ಹಿಡಿದು ಹೋಗಬಹುದು. ಗೆದ್ದರೆ ಹೆಂಡತಿಯನ್ನು ಕರೆದುಕೊಂಡು ಹೋಗಬಹುದು" ಎಂದ. ಗೋವಳ ಕೆಲಸದ ಸಾಧನೆಗೆ ಒಪ್ಪಿಕೊಂಡ. ಯಕ್ಷರಾಜ ಏಳು ಮುಡಿ ಸಾಸಿವೆ ತರಿಸಿ ಅಂಗಳದಲ್ಲಿ ಸುರಿಸಿದ. ಮತ್ತೆ ಅದರ ಮೇಲೆ ಏಳು ಮುಡಿ ರಾಗಿ ತರಿಸಿ ಸುರಿಸಿದ. ಎರಡನ್ನು ಮಿಶ್ರ ಮಾಡಿಸಿದ. ರಾತ್ರೆ ಬೆಳಗಾಗುವುದರೊಳಗೆ ರಾಗಿ, ಸಾಸಿವೆಯನ್ನು ಬೇರೆ ಬೇರೆ ಮಾಡಿಕೊಡಲು ಹೇಳಿದ. ಗೋವಳ ಚಿಂತೆಯಲ್ಲಿ ಬಿದ್ದ. ಸುಮ್ಮನೆ ಗಲ್ಲಕ್ಕೆ ಕೈಕೊಟ್ಟು ಕೂತು "ಇದನ್ನು ಇರುವೆಗಳಿಂದ ಮಾತ್ರ ಬೇರೆ ಬೇರೆ ಮಾಡಲು ಸಾಧ್ಯ. ನೀರಲ್ಲಿ ತೇಲುತ್ತಿದ್ದ ಇರುವೆಗಳಾದರೂ ಬರುತ್ತಿದ್ದರೆ ಈಗ ಬೇರೆ ಬೇರೆ ಮಾಡಬಹುದಿತ್ತು" ಎಂದು ಆಲೋಚಿಸಿದ. ಆತ ನೆನೆದದ್ದೇ ತಡ. ಸಾಲು ಸಾಲು ಇರುವೆಗಳು ಬಂದುವು. ರಾತ್ರಿ ಬೆಳಗಾಗುವುದರೊಳಗೆ ರಾಗಿ, ಸಾಸಿವೆ ಬೇರೆ ಬೇರೆ ಮಾಡಿ ರಾಶಿ ಹಾಕಿ ಹೋದುವು. ಮರುದಿನ ಬೆಳಗ್ಗೆ ನೋಡಬಂದ ಯಕ್ಷನಿಗೆ ಆಶ್ಚರ್ಯವೇ ಆಶ್ಚರ್ಯ. "ಒಳ್ಳೆಯದು ಇನ್ನೊಂದು ಕೆಲಸ ಕೊಡುತ್ತೇನೆ. ಅದನ್ನು ಮಾಡಿ ಮುಗಿಸು, ಅರಮನೆಯ ಮುಂದಿನ ಏಳು ಮುಡಿ ಬಾಕ್ಯಾರು ಗದ್ದೆಯನ್ನು ನಾಳೆ ಬೆಳಗಾಗುವುದರೊಳಗೆ ಉತ್ತು ಬೀಜ ಬಿತ್ತಿಬಿಡಬೇಕು" ಎಂದು ಹೇಳಿ ಏಳು ಮುಡಿ ಬೀಜ ಕೊಟ್ಟು ಹೋದ.

ಗೋವಳ ಯುವಕನಿಗೆ ಮತ್ತೆ ಚಿಂತೆ ಶುರುವಾಯಿತು. "ಅಯ್ಯೋ ನಾನೊಬ್ಬನೇ ರಾತ್ರೆ ಬೆಳಗಾಗುವುದರೊಳಗೆ ಏಳು ಮುಡಿಗೆ ಗದ್ದೆಯ ಉಳುಮೆ ಮಾಡುವುದಾದರೂ ಹೇಗೆ? ಕಾಡ್ಗಿಚ್ಚಿನಲ್ಲಿ ನನ್ನಿಂದ ರಕ್ಷಿಸಲ್ಪಟ್ಟ ಹಂದಿಗಳಾದರು ಬರುತ್ತಿದ್ದರೆ ಒಳ್ಳೆಯದಿತ್ತು" ಎಂದಾಲೋಚಿಸಿ ಕಣ್ಣು ಮುಚ್ಚಿ ತೆರೆಯುವಾಗ ಬಾಕ್ಯಾರು ಗದ್ದೆ ತುಂಬ ಹಂದಿಗಳು ತಮ್ಮ ಉದ್ದ ಉದ್ದದ ದಾಡೆಯಿಂದ ನೆಲವನ್ನು ಕುಕ್ಕಿ ಕುಕ್ಕಿ ಬೆಳಗಾಗುವಾಗ ಸಂಪೂರ್ಣ ಪುಡಿ ಮಾಡಿ ಹಸನುಗೊಳಿಸಿ ಹೋದುವು. ಗೋವಳ ಹುಡುಗ ಏಳು ಮುಡಿ ಗದ್ದೆಗೂ ಬೀಜ ಬಿತ್ತಿಬಿಟ್ಟ.

ಎರಡೂ ಸ್ಪರ್ಧೆಗಳಲ್ಲಿ ಗೆದ್ದ ಮೇಲೆ ಹುಡುಗನ ಬಗ್ಗೆ ಯಕ್ಷನಿಗೆ ಸ್ವಲ್ಪ ಧೈರ್ಯ ಬಂತು. ಆತ ಹುಡುಗನನ್ನು ಕರೆದು "ನೀನು ಒಳ ಕೋಣೆಗೆ ಬಂದು ನೋಡು. ನನ್ನ ಏಳು ಜನ ಹೆಣ್ಣು ಮಕ್ಕಳೂ ಏಳು ಮಂಚದಲ್ಲಿ ಮುಸುಕಿ ಹಾಕಿ ಮಲಗಿದ್ದಾರೆ. ನೀನು ನಿನ್ನ ಹೆಂಡತಿಯನ್ನು ಗುರುತಿಸಿ ಮುಟ್ಟಿ ಎಬ್ಬಿಸಿ ಕರೆದುಕೊಂಡು ಹೋಗಬಹುದು. ತಪ್ಪಾಗಿ ಬೇರೆಯವರನ್ನು ಮುಟ್ಟಿದರೆ ಭಸ್ಮವಾಗಿ ಹೋಗುವಿ" ಎಂದ. "ಇದು ಜೀವಕ್ಕೇ ಸಂಚಕಾರ ತರುವ ಪಂಥ ಇದನ್ನು ಹೇಗೆ ಗೆಲ್ಲುವುದಪ್ಪಾ! ಅಂದು ನನ್ನಿಂದ ಜೀವದಾನ ಪಡೆದ ದುಂಬಿಯೇ ಬಂದು ಇಂದು ನನ್ನ ಜೀವ ಉಳಿಸಬೇಕಷ್ಟೇ" ಎಂದುಕೊಂಡ. ಅಷ್ಟರಲ್ಲಿ ದುಂಬಿಯೊಂದು ಹಾರಾಡುತ್ತಾ ಬಂದು ಮಲಗಿದ್ದ ಗೋವಳದ ಮಡದಿ ಸಿರಿಕನ್ಯೆಯ ಮೇಲೆ ಕುಳಿತುಕೊಂಡಿತು. ಗೋವಳ ಹುಡುಗ ಧೈರ್ಯವಾಗಿ ಆಕೆಯನ್ನು ಎಬ್ಬಿಸಿದ. ಆತನ ಆಯ್ಕೆ ಸರಿಯಾಗಿತ್ತು.

ಪಂಥಗಳಲ್ಲಿ ಗೆದ್ದ ಗೋವಳ ಯುವಕನ ಬಗ್ಗೆ ಯಕ್ಷರಾಜನಿಗೆ ಖುಷಿಯಾಯಿತು. ಸಾಕಷ್ಟು ಬೆಳ್ಳಿ, ಬಂಗಾರ, ವಜ್ರ ವೈಢೂರ್ಯಗಳೊಂದಿಗೆ ತನ್ನ ಮಗಳನ್ನು ಗೋವಳನ ಜೊತೆ ರಥದಲ್ಲಿ ಕುಳ್ಳಿರಿಸಿ ಕಳುಹಿಸಿಕೊಟ್ಟ. ಗೋವಳ ಪತ್ನಿ ಸಹಿತ ತನ್ನ ಗುಡಿಸಲಿಗೆ ಬಂದಾಗ ಅಲ್ಲಿ ಗುಡಿಸಲು ಮಾಯವಾಗಿ ಸಣ್ಣ ಅರಮನೆಯೊಂದು ನಿರ್ಮಾಣವಾಗಿತ್ತು. ಗೋವಳ ಪತ್ನಿ, ತಾಯಿಯೊಂದಿಗೆ ಸುಖವಾಗಿದ್ದ.



೨೩

ಒಂದಾಣೆ ಮದುವೆ

ಒಂದಾನೊಂದು ಊರಲ್ಲಿ ಒಬ್ಬಳು ಮುದುಕಿ ಇದ್ದಳು. ಆ ಮುದುಕಿಗೊಬ್ಬ ಮೊಮ್ಮಗನಿದ್ದನು. ಅವನು ಶುದ್ಧ ಸೋಮಾರಿ. ಆದರೆ ಬಹಳ ಬುದ್ಧಿವಂತ. ಅವನ ಹೆಸರು ಸೋಮಣ್ಣ.

ಒಂದು ದಿನ ಸೋಮಣ್ಣ ತನ್ನ ಅಜ್ಜಿಯೊಡನೆ "ಅಜ್ಜೀ, ಅಜ್ಜಿ ನನಗೊಂದು ಮದ್ವೆ ಆಗ್ಬೇಕು" ಎಂದ. "ಒಂದು ಚಿಕ್ಕಾಸು ಕೂಡ ಸಂಪಾದಿಸಲಾರದವನಿಗೆ ಯಾರು ಹುಡುಗಿ ಕೊಡುತ್ತಾರೆ?" ಎಂದು ಅಜ್ಜಿ ಮೊಮ್ಮಗನನ್ನು ಹಂಗಿಸಿದಳು. "ಆ ಸಂಗತಿ ಬಿಡಜ್ಜಿ. ನನಗೆ ಒಂದಾಣೆ ದುಡ್ಡು ಕೊಡು, ನಾನು ಮದ್ವೆ ಆಗಿಕೊಂಡು ಬರುತ್ತೇನೆ" ಎಂದ ಸೋಮಣ್ಣ. "ಒಂದಾಣೆಗೊಂದು ಹುಡುಗಿ ಬರುವುದಾದರೆ ತಗೋ ಒಂದಾಣೆ ಹೋಗಿ ಕರೆದುಕೊಂಡು ಬಾ" ಎಂದು ತನ್ನ ಪೆಟ್ಟಿಗೆಯಿಂದ ಒಂದಾಣೆ ತೆಗೆದು ಅಜ್ಜಿ ಸೋಮಣ್ಣನ ಕೈಗಿತ್ತಳು.

ಸೋಮಣ್ಣ ಒಂದಾಣೆ ಹಿಡಿದುಕೊಂಡು ಹೊರಟ. ದಾರಿಯಲ್ಲಿ ಒಂದು ತಿಂಡಿಯ ಅಂಗಡಿ ಸಿಕ್ಕಿತು. ಅಲ್ಲಿ ಒಂದಾಣೆ ಕೊಟ್ಟು ನಾಲ್ಕು ಚಕ್ಕುಲಿ ತೆಗೆದುಕೊಂಡ. ಚಕ್ಕುಲಿ ತಿಂದುಕೊಂಡು ಸೋಮಣ್ಣ ದಾರಿಯಲ್ಲಿ ಮುಂದೆ ಹೋಗುತ್ತಿದ್ದಾಗ ಒಬ್ಬ ಅಗಸ ಬಟ್ಟೆಗಂಟು ಹೊತ್ತುಕೊಂಡು ಎದುರಿನಿಂದ ಬರುತ್ತಿದ್ದುದನ್ನು ಕಂಡ. ಸೋಮಣ್ಣ ಚಕ್ಕುಲಿ ಜಗಿಯುತ್ತ ಅಗಸನನ್ನು ನಿಲ್ಲಿಸಿ "ಅಣ್ಣಾ ಅಣ್ಣಾ, ಪಕ್ಕದ ಬ್ರಾಹ್ಮಣರ ಮನೆಯಲ್ಲಿ ದೊಡ್ಡ ಸಮಾರಾಧನೆ. ಹೋದವರಿಗೆಲ್ಲಾ ಊಟ ಹಾಕ್ತಾ ಇದ್ದಾರೆ. ನಾನು ಹೋಗಿ ಬಗೆಬಗೆಯ ಭಕ್ಷ್ಯವೆಲ್ಲಾ ತಿಂದುಬಂದೆ. ನೋಡು ಅಲ್ಲಿಂದ ಬರುವಾಗ ಕೈಯಲ್ಲಿ ಹಿಡಿದುಕೊಂಡು ಬಂದ ಚಕ್ಕುಲಿ ತಿನ್ತಾ ಇದ್ದೇನೆ. ನೀನೂ ಹೋಗಿ ಬಾ. ನೀನು ಊಟ ಮಾಡಿ ಬರುವವರೆಗೆ ನಿನ್ನ ಬಟ್ಟೆಯ ಗಂಟು ನಾನು ಹಿಡ್ಕೊಳ್ಳುತ್ತೇನೆ" ಎಂದ. ಅಗಸನು ಸೋಮಣ್ಣನ ಮಾತನ್ನು ಸತ್ಯವೆಂದೇ ನಂಬಿದ. ಬಟ್ಟೆಯ ಗಂಟನ್ನು ಆತನ ಕೈಗೆ ಕೊಟ್ಟು "ನೀನು ಇಲ್ಲೇ ಕುಳಿತಿರು. ನಾನು ಆದಷ್ಟು ಬೇಗ ಹೋಗಿ ಬರುತ್ತೇನೆ" ಎಂದು ಹೇಳಿ ಪಕ್ಕದ ಮನೆಯ ದಾರಿ ಹಿಡಿದ. ಹೋಗುತ್ತಾ ಇರುವಾಗ "ಅಣ್ಣಾ ನಿನ್ನ ಹೆಸರೇನಣ್ಣ?" ಎಂದು ಸೋಮಣ್ಣನಲ್ಲಿ ಕೇಳಿದ. ಅದಕ್ಕೆ ಸೋಮಣ್ಣ 'ಬಿರ್ಗಾಳಿ' ಎಂದ.

ಆಗಸ ಕಣ್ಮರೆಯಾದೊಡನೆ ಸೋಮಣ್ಣ ಬಟ್ಟೆಯ ಗಂಟನ್ನೆತ್ತಿಕೊಂಡು ಅಲ್ಲಿಂದ ಕಾಲುಕಿತ್ತ. ಸ್ವಲ್ಪ ದೂರ ಮುಂದುವರಿಯುವಾಗ ಒಂದು ಕಾಡು ಸಿಕ್ಕಿತು. ಕಾಡಿನ ಮಧ್ಯೆ ಮುಟ್ಟಿದಾಗ ಎದುರಿನಿಂದ ಒಬ್ಬ ಅಕ್ಕಸಾಲಿಗ ಅವನಿಗೆ ಎದುರಾದ ಅವನ ಕೈಯಲ್ಲಿದ್ದ ಆಭರಣದ ಪೆಟ್ಟಿಗೆ ನೋಡಿ "ಅಣ್ಣಾ ಅಣ್ಣಾ ನಿನ್ನ ಕೈಯಲ್ಲಿರುವ ಪೆಟ್ಟಿಗೆಯಲ್ಲೇನಿದೆ?" ಎಂದು ಕೇಳಿದ. ಅದಕ್ಕೆ ಅಕ್ಕಸಾಲಿಗ "ಇದರಲ್ಲಿ ಬಹಳ ಬೆಲೆಬಾಳುವ ಚಿನ್ನಾಭರಣಗಳಿವೆ" ಎಂದು ಉತ್ತರಿಸಿದ. "ಅಣ್ಣಾ ನೀನು ಆಭರಣಗಳ ಪೆಟ್ಟಿಗೆ ಹಿಡಿದುಕೊಂಡು ಒಬ್ಬಂಟಿಗನಾಗಿ ಈ ಕಾಡು ದಾರಿಯಲ್ಲಿ ಹೋಗುತ್ತಿದ್ದೀಯಲ್ಲಾ. ಈ ದಾರಿಯಲ್ಲಿ ನಾಲ್ಕು ಜನ ಕಳ್ಳರಿದ್ದಾರೆ, ನಾನವರ ಕಣ್ಣು ತಪ್ಪಿಸಿ ಹೇಗೋ ಬಂದು ಬಿಟ್ಟೆ. ನೀನು ಮನೆಗೆ ಹೋಗಿ ಹತ್ತು ಜನ ಸಂಗಾತಿಗಳನ್ನು ಜೊತೆಗೆ ಕರೆದುಕೊಂಡು ಬಾ. ಅಲ್ಲಿಯವರೆಗೆ ಈ ಪೆಟ್ಟಿಗೆಯನ್ನು ಹಿಡಿದುಕೊಂಡು ನಾನಿಲ್ಲಿಯೇ ಕುಳಿತಿರುತ್ತೇನೆ" ಎಂದ. ಅಕ್ಕಸಾಲಿಗ ಸೋಮಣ್ಣನ ಮಾತನ್ನು ಸತ್ಯವೆಂದೇ ನಂಬಿ ಚಿನ್ನಾಭರಣದ ಪೆಟ್ಟಿಗೆಯನ್ನು ಆತನ ಕೈಯಲ್ಲಿಕೊಟ್ಟು "ಆಳುಗಳನ್ನು ಕರೆದುಕೊಂಡು ಬೇಗನೆ ಬರುತ್ತೇನೆ" ಎಂದು ಹೇಳಿ ತನ್ನ ಮನೆ ಕಡೆ ಹಿಂತಿರುಗಿದ. ಹೋಗುವಾಗ ಸೋಮಣ್ಣನೊಡನೆ "ನಿನ್ನ ಹೆಸರೇನಣ್ಣಾ?" ಎಂದು ಕೇಳಿದ. ಅದಕ್ಕೆ ಸೋಮಣ್ಣ "ಅದ್ರೊಡೆಯ" ಎಂದ.

ಅಕ್ಕಸಾಲಿಗ ಸ್ವಲ್ಪ ಮುಂದೆ ಹೋಗಿ ಕಾಣದಾದಾಗ ಸೋಮಣ್ಣ ಅಲ್ಲಿಂದ ಬೇರೆ ದಾರಿ ಹಿಡಿದು ಓಡತೊಡಗಿದ. ಹೀಗೆ ಆತ ಓಡುತ್ತಾ ಹೋಗುವಾಗ ಆತನಿಗೆ ಅಜ್ಜಿಯೊಬ್ಬಳು ತನ್ನ ಮೊಮ್ಮಗಳನ್ನು ಕರೆದುಕೊಂಡು ಬರುವವಳು ಎದುರಾದಳು. ಅವರನ್ನು ನೋಡಿದ ಸೋಮಣ್ಣ "ಅಜ್ಜೀ, ಅಜ್ಜೀ ಈ ಹುಡುಗಿಯ ಗಂಡ ಯಾವಾಗ ತೀರಿ ಹೋದ?" ಎಂದು ಕೇಳಿದ. "ಅಯ್ಯೋ ದೇವ್ರೇ ನಾನೀ ಹುಡುಗಿಯನ್ನು ವಧು ಪರೀಕ್ಷೆಗೆ ಕರೆದುಕೊಂಡು ಹೋಗುತ್ತಿದ್ದೇನೆ, ನೀನೆಂತಹ ಅಪಶಕುನ ನುಡಿದೆಯಲ್ಲಾ?" ಎಂದಾಕೆ ಬೇಸರದಿಂದ ಸೋಮಣ್ಣನಲ್ಲಿ ಹೇಳಿದಳು. "ಹುಡುಗಿ ಹಣೆಗೆ ಕುಂಕುಮ ಇಟ್ಟಿಲ್ಲ. ಅದಕ್ಕೆ ನಾನು ಹಾಗೆ ಕೇಳಿದೆ" ಎಂದ ಸೋಮಣ್ಣ "ಹೋ ನೀನು ಹೇಳಿದ್ದು ಸರಿಯಣ್ಣಾ ಕುಂಕುಮವಿಡಲು ಮರ್ತೇ ಬಿಟ್ಟಿದ್ದೇನೆ. ನೀನಿಲ್ಲೇ ಇವಳ ಪಕ್ಕ ನಿಂತಿರು. ನಾನು ಮನೆಗೆ ಹೋಗಿ ಕುಂಕುಮದ ಕರಡಿಗೆ ಹಿಡ್ಕೊಂಡು ಬರುತ್ತೇನೆ" ಎಂದು ಹೇಳಿ ಅಜ್ಜಿ ತನ್ನ ಮನೆಗೆ ತಿರುಗಿ ಹೋದಳು. ಹೋಗುತ್ತಿರುವಾಗ "ನಿನ್ನ ಹೆಸರೇನಣ್ಣ?" ಎಂದು ಕೇಳಿದಳು, ಅದಕ್ಕೆ ಸೋಮಣ್ಣ 'ಗಂಡ' ಎಂದ.

ಹುಡುಗಿಯನ್ನು ಸೋಮಣ್ಣನೊಡನೆ ಬಿಟ್ಟು ಸ್ವಲ್ಪ ದೂರ ಹೋಗುವಷ್ಟರಲ್ಲಿ ಸೋಮಣ್ಣ ಹುಡ್ಗಿಯೊಡನೆ "ನೀನು ವರನನ್ನು ನೋಡಲು ಹೋಗುತ್ತಿದ್ದೀಯಾ, ನಿನ್ನನ್ನು ಕರೆತರಲು ಹೇಳಿದವನೊಬ್ಬ ರಾಕ್ಷಸ. ಆತ ಖಂಡಿತ ನಿನ್ನನ್ನು ನೋಡಿದೊಡನೆ ತಿಂದು ಬಿಡುತ್ತಾನೆ. ನೀನು ನನ್ನೊಂದಿಗೆ ಬಾ, ನಿನ್ನನ್ನು ನಾನು ಮದ್ವೆಯಾಗುತ್ತೇನೆ" ಎಂದ. ಸೋಮಣ್ಣನ ಮಾತನ್ನು ಹುಡುಗಿ ನಂಬಿದಳು. ಅವನೊಡನೆ ಹೋಗಲು

ಒಪ್ಪಿಕೊಂಡಳು. ಸೋಮಣ್ಣ ಹುಡುಗಿಯನ್ನು ಕರೆದುಕೊಂಡು ತನ್ನ ಮನೆಗೆ ಹೋದ. ಮನೆಗೆ ತಲುಪಿದೊಡನೆ ಅಜ್ಜಿಯನ್ನು ಕರೆದು "ಅಜ್ಜೀ ಅಜ್ಜಿ ನಿನ್ನ ಒಂದಾಣೆಯಲ್ಲಿ ನಾನೊಂದು ಹುಡುಗಿ ತಂದಿದ್ದೇನೆ. ಅವಳಿಗೆ ಸಾಕಷ್ಟು ಚಿನ್ನಾಭರಣ ಬಟ್ಟೆಬರೆ ಎಲ್ಲವನ್ನೂ ತಂದಿದ್ದೇನೆ. ನಮ್ಮಿಬ್ಬರಿಗೆ ಮದ್ವೆ ಮಾಡಿಬಿಡು" ಎಂದ. ಅಜ್ಜಿಗೆ ಹುಡುಗಿಯನ್ನು ನೋಡಿ ಸಂತೋಷವಾಯಿತು. ಚಿನ್ನಾಭರಣದ ಪೆಟ್ಟಿಗೆ ತೆರೆದು ನೋಡಿ ಮತ್ತೂ ಸಂತೋಷವಾಯಿತು. ಬಟ್ಟೆಯ ಗಂಟು ಬಿಚ್ಚಿ ನೋಡಿದಾಗ ಗರಿಗರಿಯಾದ ಮಡಿ ಮಾಡಿದ ಚಂದದ ಸೀರೆ, ಕುಪ್ಪಸಗಳು. ಮುದುಕಿಗೆ ಖುಶಿಯೇ ಖುಶಿ. ಕೂಡಲೇ ಮದ್ವೆ ಏರ್ಪಾಡು ಮಾಡಿದಳು. ಕೆಲವೊಂದು ಆಭರಣ ಮಾರಿ ಬಂದ ಹಣದಿಂದ ಮದ್ವೆಯಟ್ಟಣೆ ಮಾಡಿದಳು. ಊರ ಹತ್ತು ಸಮಸ್ತರಿಗೆ ಹೇಳಿ ಬಂದವರಿಗೆಲ್ಲ ಒಳ್ಳೆ ಊಟ ಕೊಟ್ಟು ಮೊಮ್ಮಗನ ಮದ್ವೆ ಮಾಡಿಬಿಟ್ಟಳು. ಮದ್ವೆಯಾದ ಮೇಲೆ ಸೋಮಣ್ಣ ತನ್ನ ಹೆಂಡತಿಯ ಜೊತೆಗೆ ಕೆಲಸಕ್ಕೆ ಹೋಗಿ ಸಂಪಾದನೆಯಲ್ಲಿ ತೊಡಗಿದ.

ಇತ್ತ ಬ್ರಾಹ್ಮಣರ ಮನೆ ಹುಡುಕಿಕೊಂಡು ಹೋದ ಅಗಸ ಸುತ್ತಾಡಿ ಸುತ್ತಾಡಿ ಸಮಾರಾಧನೆಯ ಊಟದ ಮನೆ ಕಾಣದೆ ಬೇಸತ್ತು ಹಿಂತಿರುಗಿದ. ಸೋಮಣ್ಣನನ್ನು ನಿಲ್ಲಿಸಿ ಹೋದ ಜಾಗಕ್ಕೆ ಬಂದು ನೋಡುವಾಗ ಅಲ್ಲಿ ಆತ ಕಾಣಲಿಲ್ಲ. ಹೆಸರಿಡಿದು ಎಷ್ಟು ಕರೆದರೂ ಬಿರ್ಗಾಳಿ ಬರಲಿಲ್ಲ. ಕೊನೆಗೆ ರಾಜನಲ್ಲಿ ಹೋಗಿ ತನ್ನ ಬಟ್ಟೆಯ ಗಂಟನ್ನು ಬಿರ್ಗಾಳಿ ಕೊಂಡುಹೋದನೆಂದು ದೂರು ಕೊಟ್ಟ. ಅವನ ಮಾತು ಕೇಳಿ ಅರಸ "ಅಯ್ಯೋ ನಿನ್ನ ಬಟ್ಟೆ ಗಂಟನ್ನು ಬಿರ್ಗಾಳಿ ಕೊಂಡುಹೋದರೆ ನಾನೇನು ಮಾಡಲಿ? ಎಂದು ಬುದ್ಧಿ ಹೇಳಿ ಸ್ವಲ್ಪ ಪರಿಹಾರ ಧನ ಕೊಟ್ಟು ಕಳುಹಿಸಿದ. ಅಕ್ಕಸಾಲಿಗ ಮನೆಗೆ ಹೋಗಿ ಏಳೆಂಟು ಜನ ಆಳುಗಳನ್ನು ಕರೆದುಕೊಂಡು ತಾನು ಸೋಮಣ್ಣನನ್ನು ನಿಲ್ಲಿಸಿ ಹೋದ ಜಾಗಕ್ಕೆ ಬಂದು ನೋಡುವಾಗ ಅಲ್ಲಿ 'ಅದರೊಡೆಯ' ನಿಲ್ಲ. ಎಲ್ಲರೂ ಸೇರಿ ಕಾಡೆಲ್ಲ ಹುಡುಕಿದರು. ಆದರೆ ಅವರಿಗೆ ಅದ್ರೊಡೆಯ ಸಿಗಲಿಲ್ಲ. ಕೊನೆಗೆ ಅಕ್ಕಸಾಲಿಗ ಅರಸನಲ್ಲಿಗೆ ಹೋಗಿ ದೂರುಕೊಟ್ಟ. "ನಾನು ಒಯ್ಯುತ್ತಿದ್ದ ಚಿನ್ನಾಭರಣ ಗಳನ್ನು ಅದರೊಡೆಯ ಕೊಂಡುಹೋದ" ಎಂದ. "ಅಯ್ಯೋ ಅದಕ್ಯಾಕೆ ಇಷ್ಟು ಗಡಿಬಿಡಿ. ಅದರ ಒಡೆಯನೇ ಕೊಂಡುಹೋದುದಲ್ವಾ. ನಿನಗೆ ಹುಚ್ಚು. ಆ ಬಗ್ಗೆ ನನ್ನಲ್ಲೇಕೆ ದೂರು?" ಎಂದು ಅರಸ ಹೇಳಿ ನೆಗಾಡಿಬಿಟ್ಟ. "ಹೋಗಲಿ ನಿನಗದರ ಮಜೂರಿ ಸಿಕ್ಕಿಲ್ವೊ ಏನೋ, ಮಜೂರಿ ಹಣ ಎಷ್ಟೆಂದು ಹೇಳಿಬಿಡು. ಖಜಾನೆಯಿಂದ ಪಡೆದುಕೊಂಡು ಹೋಗು" ಎಂದ. ಖಜಾನ್ಜಿಗೆ ಕರೆದು ಅಕ್ಕಸಾಲಿಗನ ಆಭರಣದ ಮಜೂರಿ ಕೊಡುವಂತೆ ಹೇಳಿದ.

ಕುಂಕುಮದ ಕರಡಿಗೆ ಹಿಡಿದುಕೊಂಡು ಹುಡುಗಿಯನ್ನು ಬಿಟ್ಟು ಹೋದ ಜಾಗಕ್ಕೆ ಅಜ್ಜಿ ಬಂದಾಗ ಅಲ್ಲಿ ಹುಡುಗಿಯೂ ಇಲ್ಲ, 'ಗಂಡ'ನೂ ಇಲ್ಲ. ಹತ್ತಾರು ಸಲ ಗಂಡನ, ಹುಡುಗಿಯ ಹೆಸರು ಹಿಡಿದು ಕೂಗಾಡಿದಳು. ಯಾರೂ ಓಗೊಡಲಿಲ್ಲ.

ಕೊನೆಗೆ ರಾಜನಲ್ಲಿಗೆ ಹೋಗಿ 'ತನ್ನ ಮೊಮ್ಮಗಳನ್ನು ಗಂಡ ಕದ್ದೊಯ್ದನೆಂದು ದೂರು ನೀಡಿದಳು. ಅದನ್ನ ಕೇಳಿದ ಅರಸ "ಅಯ್ಯೋ ಅಜ್ಜೀ ಮೊಮ್ಮಗಳನ್ನು ಗಂಡ ಕದ್ದೊಯ್ಯುವುದೆಲ್ಲಿ ಬಂತು. ಆತ ತನ್ನ ಮನೆಗೆ ಕರೆದುಕೊಂಡು ಹೋಗಿದ್ದಾನೆ. ಹೋಗಲಿ ಬಿಡು. ನಿನಗೆ ಸಾಕುವ ಭಾರ ತಪ್ಪಿತಲ್ಲಾ. ನೀನು ಚೆನ್ನಾಗಿ ಊಟ ಮಾಡಿ ಕೊಂಡು ಹೋಗು" ಎಂದು ಅರಸ ಭೋಜನ ಶಾಲೆಗೆ ಕಳುಹಿಸಿಕೊಟ್ಟ. ಹೀಗೆ ಒಂದಾಣೆಯ ಮೂಲಧನದಲ್ಲಿ ಸೋಮಣ್ಣನ ಮದ್ವೆ ನಡೆದೇಹೋಯಿತು.



೨೪

ಆಕಾಶದಿಂದ ಬಿದ್ದ ಅದೃಷ್ಟ

ಒಂದು ಊರಿನಲ್ಲಿ ಇಬ್ಬರು ಮುದುಕರಿದ್ದರು. ಇಬ್ಬರೂ ನೆರೆಕರೆಯಲ್ಲಿ ವಾಸಿಸುತ್ತಿದ್ದರು. ಅವರಲೊಬ್ಬ ತುಂಬಾ ಒಳ್ಳೆಯವನು, ಪರೋಪಕಾರಿ. ಇನ್ನೊಬ್ಬ ತೀರಾ ಜಿಪುಣ. ಒಬ್ಬರಿಗೂ ಉಪಕಾರ ಮಾಡುವವನಲ್ಲ. ದಿನನಿತ್ಯ ಅವರು ಒಂದೆಡೆ ಕುಳಿತು ತುಂಬಾ ಹೊತ್ತು ಹರಟೆ ಹೊಡೆಯುತ್ತಿದ್ದರು.

ಒಂದು ದಿನ ಉಪಕಾರಿ ಮುದುಕ ತನ್ನ ಮಿತ್ರನಿಗೆ "ನನಗೊಂದು ಒಳ್ಳೆಯ ಕನಸು ಬಿತ್ತು" ಎಂದು ಹೇಳಿದ. ಆಗ ಆತನ ಸ್ನೇಹಿತ "ಏನದು ಕನಸು?" ಎಂದು ಕೇಳಿದ "ನನಗೆ ಅದೃಷ್ಟವು ಆಕಾಶದಿಂದ ಬಿದ್ದಂತೆ ಕನಸು ಬಿತ್ತು" ಎಂದ ಉಪಕಾರಿ ಮುದುಕ. "ಹಾಗೋ! ನನಗೂ ನಿನ್ನೆ ರಾತ್ರಿ ಒಂದು ಕನಸು ಬಿತ್ತು ಅದರಲ್ಲಿ ಭೂಮಿಯಡಿಯಿಂದ ಅದೃಷ್ಟ ಎದ್ದು ಬಂದಂತೆ ಕಂಡಿತು" ಎಂದ ಜಿಪುಣ. ಇಬ್ಬರೂ ಮಾತು ಮುಗಿಸಿ ಅವರವರ ಮನೆಗೆ ಎದ್ದು ಹೋದರು. ಜಿಪುಣ ತಮಾಷೆ ಮಾಡಿದ. ಮುದುಕನ ಮಾತನ್ನು ಉಪಕಾರಿ ಮುದುಕ ಸತ್ಯವೆಂದೇ ನಂಬಿದ್ದ. ಆತ ತನ್ನನ್ನು ತಮಾಷೆ ಮಾಡಿದನೆಂದು ಆತನಿಗೆ ಗೊತ್ತಾಗಲಿಲ್ಲ.

ಹೀಗೆ ಕೆಲವು ದಿನಗಳು ಕಳೆದುವು. ಒಂದು ದಿನ ಉಪಕಾರಿ ಮುದುಕ ತನ್ನ ಗದ್ದೆ ಉಳುವಾಗ ನೇಗಿಲಿನ ಕುಳಕ್ಕೆ ಏನೋ ತಾಗಿದಂತೆ ಸದ್ದು ಕೇಳಿತು. ಮುದುಕ ಉಳುವುದನ್ನು ನಿಲ್ಲಿಸಿ ಯಾವುದೋ ದೊಡ್ಡ ಬಂಡೆಕಲ್ಲು ತಾಗಿರಬೇಕೆಂದು ಭಾವಿಸಿ ಹಾರೆ ತಂದು ಅಗೆದು ನೋಡಿದ. ಆಗ ಅಲ್ಲಿ ಆತನಿಗೆ ಒಂದು ದೊಡ್ಡ ತಾಮ್ರದ ಬಿಂದಿಗೆ ಕಂಡುಬಂತು. ಅದರ ಮುಚ್ಚಳ ತೆಗೆದು ನೋಡಿದಾಗ ಒಳಗೆ ತುಂಬ ಹೊಳೆಯುವ ಚಿನ್ನದನಾಣ್ಯಗಳು ಕಂಡುಬಂದವು. ಕೂಡಲೇ ಅವನಿಗೆ ಆತನ ಮಿತ್ರ ಹೇಳಿದ ಕನಸಿನ ಸಂಗತಿ ನೆನಪಾಯಿತು. "ಅಯ್ಯೋ ಭೂಮಿಯಡಿಯಿಂದ ನನ್ನ ಗೆಳೆಯನಿಗೆ ಬರಬೇಕಾದ ಅದೃಷ್ಟ ತಪ್ಪಿ ನನಗೆ ಬಂದುಬಿಟ್ಟಿದೆ. ಇದು ಅವನಿಗೆ ಸಿಗಬೇಕಾದ ಸೊತ್ತು. ನಾನು ಪಡೆದುಕೊಳ್ಳುವುದು ಸರಿಯಲ್ಲ. ಇದನ್ನು ಅವನಿಗೇನೇ ಒಪ್ಪಿಸುವುದು ನ್ಯಾಯ" ಎಂದಾಲೋಚಿಸಿ ಬಿಂದಿಗೆಯನ್ನು ಹೊತ್ತುಕೊಂಡು ಹೊಲದಿಂದ ನೇರವಾಗಿ ಮಿತ್ರನ ಮನೆಗೆ ಹೋದ.

ಬಿಂದಿಗೆಯನ್ನು ಮಿತ್ರನ ಮನೆಗೆ ತಂದು ಮಿತ್ರನ ಮುಂದಿರಿಸಿ "ಇದರ ತುಂಬ ಚಿನ್ನದ ನಾಣ್ಯಗಳಿವೆ. ಇದು ನನಗೆ ಗದ್ದೆ ಉಳುವಾಗ ಸಿಕ್ಕಿದ ಬಿಂದಿಗೆ, ನಿನ್ನ ಕನಸಿನ ಪ್ರಕಾರ ಇದು ನಿನಗೆ ಸಿಗಬೇಕಾದ ಅದೃಷ್ಟ. ಇದನ್ನು ನೀನೇ ಇಟ್ಟುಕೊ" ಎಂದು ಹೇಳಿ ಬಿಂದಿಗೆಯನ್ನು ಅವನ ಮನೆಯ ಜಗಲಿಯಲ್ಲಿ ತಂದಿಟ್ಟ. ಅವನು ಎಷ್ಟು ಪ್ರಾಮಾಣಿಕನೆಂದರೆ ಬಿಂದಿಗೆಯ ಒಳಗೇನಿದೆ ಎಂದು ತನ್ನ ಸ್ನೇಹಿತನಿಗೆ ಮುಚ್ಚಳ ತೆಗೆದು ತೋರಿಸುವ ಗೋಜಿಗೂ ಹೋಗಲಿಲ್ಲ. ಅಲ್ಲಿಂದ ಹೊರಟು ತನ್ನ ಗದ್ದೆಗೆ ಬಂದು ಎತ್ತುಗಳ ಹೆಗಲಿಂದ ನೊಗ, ನೇಗಿಲು ಬಿಚ್ಚಿ ಮನೆಗೆ ಅಟ್ಟಿಕೊಂಡು ಹೋದ.

ಇತ್ತ ಜಿಪುಣ ಮುದುಕನಿಗೆ ಬಹಳ ಸಂತೋಷವಾಯಿತು. ತಾನು ಹೇಳಿದ್ದು ಸುಳ್ಳು ಕನಸಾದರೂ ಮಿತ್ರ ನಂಬಿಬಿಟ್ಟಿದ್ದಾನೆ. ಅವನೆಂತಹ ದಡ್ಡ. ಒಟ್ಟು ನನ್ನ ಅದೃಷ್ಟವೆಂದು ಆಲೋಚಿಸಿಕೊಂಡು ಬಿಂದಿಗೆಯನ್ನು ಕೋಣೆಯೊಳಗೆ ಎತ್ತಿಕೊಂಡು ಹೋಗಿ ಯಾರೂ ಕಾಣದಂತೆ ಬಾಗಿಲು ಹಾಕಿಕೊಂಡು ಮೆಲ್ಲಗೆ ಮುಚ್ಚಳ ತೆಗೆದು ನೋಡಿದ. ನೋಡಿದಾಗ ಅಲ್ಲಿ ಕಂಡದ್ದೇನು? ಬಿಂದಿಗೆ ತುಂಬಾ ಚೇಳುಗಳು. ಒಮ್ಮೆಗೇ ಉಪಕಾರಿ ಮುದುಕನ ಮೇಲೆ ಸಿಟ್ಟು ಬಂತು. ತನಗೆ ಬೇಕುಬೇಕೆಂದೇ ಕೇಡು ಬಗೆದಿದ್ದಾನೆ ಎಂದು ಗ್ರಹಿಸಿದ. ಮುಯ್ಯಿಗೆ ಮುಯ್ಯಿ ತೀರಿಸಲೇಬೇಕು. ನನಗೆ ಭೂಮಿಯಿಂದ ಅದೃಷ್ಟ. ಆತನಿಗೆ ಆಕಾಶದಿಂದ ಅದೃಷ್ಟ ಸುರಿಯುತ್ತದೆ ಎಂದಿದ್ದನಲ್ಲಾ. "ಹಾಗೆಯೇ ಮಾಡುತ್ತೇನೆ" ಎಂದು ಆಲೋಚನೆ ಮಾಡಿದ.

ರಾತ್ರಿಯಾಗುವುದನ್ನೇ ಕಾದು ಕುಳಿತ. ಎಲ್ಲರೂ ಮಲಗಿ ನಿದ್ರಿಸುವ ಹೊತ್ತಿಗೆ ಅದೇ ಬಿಂದಿಗೆಯನ್ನೆತ್ತಿಕೊಂಡು ಪಕ್ಕದಲ್ಲಿರುವ ತನ್ನ ಮಿತ್ರನ ಮನೆಗೆ ಹೋದ. ಆತನ ಮನೆಯ ಛಾವಣಿಗೆ ಒಂದು ಏಣಿಯನ್ನಿಟ್ಟು ಬಿಂದಿಗೆಯನ್ನೆತ್ತಿಕೊಂಡು ಏಣಿಯ ಮೂಲಕ ಛಾವಣಿಯನ್ನೇರಿದ. ಮೆಲ್ಲಗೆ ಒಂದು ಹೆಂಚನ್ನು ತೆಗೆದು ಬಿಂದಿಗೆಯ ಮುಚ್ಚಳ ತೆಗೆದು ಅದರೊಳಗಿದ್ದುದನ್ನು ಮನೆಯೊಳಗೆ ಸುರಿದ. ನಂತರ ಏಣಿ ಇಳಿದು ಬಿಂದಿಗೆಯನ್ನು ಅಲ್ಲೇ ಬಿಸುಟು ತಾನು ತಕ್ಕ ಶಾಸ್ತಿ ಮಾಡಿದೆನೆಂದು ಸಂತೋಷಪಟ್ಟು ಕೊಂಡು, ಏಣಿಯನ್ನು ಹೊತ್ತು ತಂದು ಅದರ ಜಾಗದಲ್ಲಿಟ್ಟು ಮಲಗಿ ನಿದ್ರಿಸಿದ.

ಮರುದಿನ ಬೆಳಗಾಗುವಾಗ ಎದ್ದ ಉಪಕಾರಿ ಮುದುಕ ಮನೆಯ ಒಳಗೆಲ್ಲ ಬಿದ್ದುಕೊಂಡಿರುವ ಬಂಗಾರದ ನಾಣ್ಯಗಳನ್ನು ಕಂಡು ಆಶ್ಚರ್ಯಪಟ್ಟ. ಎಲ್ಲವನ್ನು ಹೆಕ್ಕಿ ಭದ್ರವಾಗಿ ಒಂದು ಪೆಟ್ಟಿಗೆಯಲ್ಲಿ ತೆಗೆದಿಟ್ಟು ಅದಕ್ಕೆ ವಂದನೆ ಸಲ್ಲಿಸಿದ. ಜಿಪುಣ ಮುದುಕ ಬಿಂದಿಗೆಯಲ್ಲಿದ್ದ. ತಾನು ಕಂಡ ಚೇಳುಗಳನ್ನು ಉಪಕಾರಿ ಮುದುಕ ಮನೆ ಯೊಳಗೆ ಎಸೆದಿದ್ದ. ನಿಜವಾಗಿ ಅವು ಬಂಗಾರದ ನಾಣ್ಯಗಳು. ಜಿಪುಣನಿಗೆ ಅವು ಚೇಳುಗಳಾಗಿ ಕಂಡವು. ಉಪಕಾರಿ ಮುದುಕನಿಗೆ ಅದೃಷ್ಟ ಒಲಿದಿತ್ತು. ಹಾಗಾಗಿ ಅವು ಬಂಗಾರದ ನಾಣ್ಯಗಳಾದುವು.

***

೨೫

ಮೋಂಟನ ಆಡು

ಒಂದೂರಲ್ಲಿ ಮೂಸೆ ಎಂಬೊಬ್ಬ ಆಡಿನ ವ್ಯಾಪಾರಿ ಇದ್ದ. ಆತನಲ್ಲಿ ಕೆಲವು ಆಡುಗಳಿದ್ದುವು. ಆಡಿನ ಮರಿಗಳನ್ನು ಕೊಂಡುಕೊಂಡು ಸಾಕಿ ಮಾರಾಟ ಮಾಡುವುದು ಆತನ ಉದ್ಯೋಗ. ಆತ ತನ್ನ ಆಡುಗಳನ್ನು ಮೇಯಿಸಲು ಮೋಂಟ ಎಂಬವನೊಬ್ಬನನ್ನು ಕೆಲಸಕ್ಕೆ ನೇಮಿಸಿದ. ಮೋಂಟ ದಿನನಿತ್ಯ ಬಂದು ಮೂಸೆಯ ಆಡುಗಳನ್ನು ಹುಲ್ಲುಗಾವಲಿಗೆ ಅಟ್ಟಿಕೊಂಡು ಹೋಗಿ ಸಂಜೆಯವರೆಗೆ ಮೇಯಿಸಿ ಹೊಡೆದುಕೊಂಡು ಬಂದು ಮೂಸೆಯ ಗೂಡಿಗೆ ಸೇರಿಸುತ್ತಿದ್ದ. ಆಡುಗಳನ್ನು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದ.

ಮೋಂಟ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದನ್ನು ನೋಡಿದ ಮೂಸೆಯ ಹೆಂಡತಿ ಒಂದು ದಿನ ಗಂಡನೊಡನೆ "ಮೋಂಟ ನಮ್ಮ ಆಡುಗಳನ್ನು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾನೆ. ಅವನಿಗೆ ನಮ್ಮಲ್ಲಿದ್ದ ಒಂದು ಆಡನ್ನು ಇನಾಮು ಕೊಡುವ" ಎಂದಳು. ಅದಕ್ಕೆ ಮೂಸೆ "ಅವನಿಗೆ ಆಡು ಮೇಯಿಸುವುದಕ್ಕೆ ದಿನಕೂಲಿ ಕೊಡುತ್ತಿಲ್ಲವೇ? ಮತ್ತೇಕೆ ಇನಾಮು" ಎಂದ. ಮೂಸೆಗೆ ಆಡನ್ನು ಮೋಂಟನಿಗೆ ಕೊಡಲು ಮನಸ್ಸಿರಲಿಲ್ಲ. ದಿನನಿತ್ಯ ಆತನ ಹೆಂಡತಿ ಮೂಸೆಯನ್ನು ಒತ್ತಾಯ ಮಾಡುತ್ತಿದ್ದಳು. ಒಂದೆರಡು ಸಲ ಹೇಳಿದಾಗ ಮೂಸೆ ಹೆಂಡತಿಯ ಮಾತಿಗೆ ಗಮನ ಕೊಡಲಿಲ್ಲ. ಮತ್ತೊಂದು ದಿನ ಹೆಂಡತಿಯ ಒತ್ತಾಯಕ್ಕೆ ಮಣಿದು ಒಲ್ಲದ ಮನಸ್ಸಿನಿಂದ ತನ್ನಲ್ಲಿದ್ದ ಅತ್ಯಂತ ಬಡ ಆಡೊಂದನ್ನು ಹುಡುಕಿ ಮೋಂಟನಿಗೆ ದಾನ ಮಾಡಿದ. ಮೋಂಟ ಇದರಿಂದ ಸಂತೋಷ ಪಡಲಿಲ್ಲ. ಈ ಬಡಕಲು ಆಡನ್ನು ಇನ್ನಷ್ಟು ನೋಡಿಕೊಂಡು ಮೂಸೆಗೆ ಬುದ್ಧಿ ಕಲಿಸಬೇಕೆಂದು ಬಗೆದ.

ಮೋಂಟ ಪ್ರತಿದಿನ ಮೂಸೆಯ ಆಡುಗಳನ್ನು ಹುಲ್ಲುಗಾವಲಿಗೆ ಅಟ್ಟಿಕೊಂಡು ಹೋಗಿ ಸಂಜೆವರೆಗೆ ಮೇಯಿಸಿ ಹಿಂತಿರುಗಿ ಮೂಸೆಯ ಆಡಿನ ಗೂಡಿಗೆ ತಂದು ಬಿಡುತ್ತಿದ್ದ. ಮೋಂಟನಿಗೆ ಇನಾಮು ಸಿಕ್ಕಿದ ಮೇಲೆ ತನ್ನ ಆಡನ್ನು ಮೇಯಲು ಬಿಟ್ಟು ಇನ್ನುಳಿದ ಆಡುಗಳ ಬಾಯಿಗೆ ಮಧ್ಯಾಹ್ನದವರೆಗೆ ಗೋಣಿಚೀಲ ಕಟ್ಟಿ ಬಿಡುತ್ತಿದ್ದ. ಬಾಯಿಗೆ ಗೋಣಿಚೀಲದ ತುಂಡು ಕಟ್ಟಿದ್ದರಿಂದ ಅವು ಮೇಯಲಾರದೆ ಸುಮ್ಮನೆ

ತಿರುಗಿಕೊಂಡು ಇರುತ್ತಿದ್ದುವು. ಹೀಗಾಗಿ ಆ ಆಡುಗಳೆಲ್ಲಾ ಕ್ಷೀಣಗೊಳ್ಳುತ್ತಾ ಬಂದುವು. ಮೋಂಟನ ಆಡು ಮಾತ್ರ ದಪ್ಪವಾಗುತ್ತಾ ಬಂತು.

ಒಂದು ದಿನ ರಾತ್ರಿ ಮೂಸೆಯ ಮನೆಗೆ ತುಂಬಾ ಜನ ನೆಂಟರು ಬಂದರು. ಕೊಬ್ಬಿದ ಆಡನ್ನೊಂದು ಕಡಿದು ಅತಿಥಿಗಳಿಗೆ ಔತಣ ನೀಡುವಂತೆ ಮೂಸೆ ಹೆಂಡತಿಗೆ ಹೇಳಿದ. ಬಂದಿರುವ ಅತಿಥಿಗಳಲ್ಲೊಬ್ಬ ಆಡಿನ ಗೂಡಿನ ಬಾಗಿಲು ತೆರೆದು ಕೊಬ್ಬಿದ ಆಡೊಂದನ್ನು ಹುಡುಕಿ ಹೊರಗೆಳೆದು ಕಡಿದು ಮಾಂಸ ಮಾಡಿ ಮೂಸೆಯ ಹೆಂಡತಿಗೆ ಕೊಟ್ಟ. ಮೂಸೆಯ ಹೆಂಡತಿ ಅಡುಗೆ ಮಾಡಿ ಎಲ್ಲರಿಗೂ ಬಡಿಸಿದಳು. ಮೂಳೆಗಳನ್ನು ಅಂಗಳದ ಮೂಲೆಯಲ್ಲಿ ರಾಶಿ ಹಾಕಿದಳು.

ಮರುದಿನ ಮೋಂಟ ಆಡನ್ನು ಮೇಯಿಸಲು ಬಂದವನು ಗೂಡಿನ ಬಾಗಿಲು ತೆಗೆದು ಬಿಟ್ಟಾಗ ಆತನ ಆಡು ಕಾಣಲಿಲ್ಲ. ಮೂಸೆಯೊಡನೆ ವಿಚಾರಿಸಿದಾಗ "ನಿನ್ನ ಆಡು ಇಲ್ಲಿದೆ ನೋಡು" ಎಂದು ಮೂಳೆಗಳ ರಾಶಿಯನ್ನು ತೋರಿಸಿದ. ಮೋಂಟ ತನ್ನ ಆಡನ್ನು ಬಹಳ ಪ್ರೀತಿಯಿಂದ ಸಾಕಿದ್ದ. ಅವನಿಗೆ ಬಹಳ ಬೇಸರವಾಯಿತು. ಕಣ್ಣೀರಿಡುತ್ತಾ ಆಡಿನ ಎಲುಬುಗಳನ್ನೆಲ್ಲಾ ಹೆಕ್ಕಿ ರಾಶಿ ಹಾಕಿ ಕಟ್ಟಿಗೆ ಮುಚ್ಚಿ ಬೆಂಕಿಕೊಟ್ಟು ಬೂದಿ ಮಾಡಿದ. ಬೆಂಕಿ ನಂದಿದ ಬಳಿಕ ಬೂದಿ ಮತ್ತು ಮಸಿ ತುಂಡುಗಳನ್ನು ಒಂದು ಹೊಸ ಮಡಕೆಯಲ್ಲಿ ತುಂಬಿಸಿಕೊಂಡು ನೇತ್ರಾವತಿ ಕುಮಾರಧಾರ ನದಿಗಳ ಸಂಗಮದ ಉಬಾರಿನಲ್ಲಿ[೧] ನೀರಿಗೆ ಬಿಡುವುದೆಂದು ಆಲೋಚನೆ ಮಾಡಿ ಹೊರಟ.

ತನ್ನ ಊರಿಂದ ಹೊರಟು ಉಪ್ಪಿನಂಗಡಿ(ಉಬಾರ್) ಮುಟ್ಟುವ ಮೊದಲೇ ಕತ್ತಲಾಯಿತು. ಕತ್ತಲೆಯಲ್ಲಿ ದಾರಿ ನಡೆಯುವುದು ಕಷ್ಟವೆಂದು ಬಗೆದು ರಸ್ತೆಯ ಪಕ್ಕದಲ್ಲಿದ್ದ ದೊಡ್ಡ ಒಂದು ಗೋಳಿ[೨] ಮರವೇರಿ ಕೊಂಬೆಗೆ ಕಾಲು ಚಾಚಿ ಮರಕ್ಕೆ ಒರಗಿ ಕುಳಿತ. ಮಧ್ಯರಾತ್ರಿ ಕಳೆಯುವಾಗ ಯಾರೋ ಮರದಡಿ ಕುಳಿತು ಮಾತನಾಡುವ ಸದ್ದಾಯಿತು. ಈ ರಾತ್ರಿ ಈ ಕಾಡಿನ ಮಧ್ಯೆ ಬಂದು ಸೇರಬೇಕಾದರೆ ಕಳ್ಳರೇ ಇರಬೇಕೆಂದು ಮೋಂಟನಿಗೆ ಅಂದಾಜಾಯಿತು. ತಿಂಗಳ ಬೆಳಕಿನಲ್ಲಿ ಕೆಳಗೆ ಕುಳಿತವರು ಅವನ ಕಣ್ಣಿಗೆ ಕಾಣುತ್ತಿದ್ದರು.

ಅದೊಂದು ಕಳ್ಳರ ತಂಡ. ಅವರು ಎಲ್ಲಿಂದಲೋ ಒಂದಷ್ಟು ನಾಣ್ಯಗಳನ್ನು ಕದ್ದು ತಂದಿದ್ದರು. ತಂದ ನಾಣ್ಯಗಳನ್ನು ತಮ್ಮೊಳಗೆ ಹಂಚಿಕೊಳ್ಳಲು ಅವರು ಮರದಡಿ ಯಲ್ಲಿ ಕುಳಿತಿದ್ದರು. ಆ ಕಳ್ಳರಲ್ಲಿ ಒಬ್ಬ ಕುರುಡ. ಆತನಿಗೆ ಗೊತ್ತಾಗುವುದಿಲ್ಲ ವೆಂದು ಉಳಿದವರು ನಾಣ್ಯ ಹಂಚುವಾಗ ಆತನ ಪಾಲಿಗೆ ಕಡಿಮೆ ನಾಣ್ಯ ಹಾಕಿದ್ದರು. ಇದನ್ನು ಮುಟ್ಟಿ ನೋಡಿ ಅಂದಾಜು ಮಾಡಿಕೊಂಡ ಕುರುಡ ಕಳ್ಳ ಏಯ್ ನನಗೆಲ್ಲಾದರೂ ಮೋಸ ಮಾಡಿದ್ರೆ ಕೆಂಡದ ಮಳೆ ಬೀಳಬಹುದು ಎಂದು ಗಟ್ಟಿಯಾಗಿ ಹೇಳಿದ. ಇದನ್ನೆಲ್ಲಾ ನೋಡುತ್ತಿದ್ದ ಮೋಂಟ ಕೆಂಡದ ಮಳೆ ಬೀಳಬಹುದು ಎಂಬ ಮಾತು ಕೇಳಿದೊಡನೆ ತನ್ನ ಕೈಯಲ್ಲಿದ್ದ ಮಡಕೆಯನ್ನು ಕುಳಿತವರ ಮೇಲೆ ಕವುಚಿ ಸುರಿದ. ಒಮ್ಮೆಗೆ ತಮ್ಮ ಮೈಮೇಲೆ ಸುರಿದ ಬೂದಿ, ಮಸಿಯನ್ನು ಕಂಡ ಕಳ್ಳರು ಇದು

ಕೆಂಡದ ಮಳೆಯೇ ಸುರಿಯಲು ಪ್ರಾರಂಭಿಸಿರಬೇಕೆಂದು ಭಾವಿಸಿ ಹೆದರಿ ನಾಣ್ಯಗಳನ್ನೆಲ್ಲಾ ಅಲ್ಲೆ ಬಿಟ್ಟು ಒಂದೇ ಸವನೆ ಓಡಲು ಪ್ರಾರಂಭಿಸಿದರು.

ಕಳ್ಳರೆಲ್ಲ ಓಡಿ ಹೋದ ಬಳಿಕ ಮರದಿಂದ ಇಳಿದು ಮೋಂಟ ಅಲ್ಲಿ ಚದುರಿ ಬಿದ್ದಿದ್ದ ಚಿನ್ನದ ನಾಣ್ಯಗಳನ್ನೆಲ್ಲಾ ಹೆಕ್ಕಿ ತನ್ನ ಕೈಯಲ್ಲಿದ್ದ ಮಡಕೆಯಲ್ಲಿ ಹಾಕಿಕೊಂಡು ಮನೆಗೆ ಹಿಂತಿರುಗಿದ.

ಮನೆಗೆ ಹಿಂತಿರುಗಿದ ಮೋಂಟ ತನ್ನಲ್ಲಿದ್ದ ಕೆಲವು ಚಿನ್ನದ ನಾಣ್ಯಗಳನ್ನು ಮಾರಿ ಹೊಸ ಮನೆಯೊಂದನ್ನು ಕೊಂಡುಕೊಂಡ. ಕೃಷಿ ಭೂಮಿಯನ್ನು ಕೊಂಡು ಆಳುಕಾಳುಗಳನ್ನು ನೇಮಿಸಿ ಬೇಸಾಯಕ್ಕೆ ತೊಡಗಿದ. ಒಮ್ಮಿಂದೊಮ್ಮೆಲೇ ಶ್ರೀಮಂತನಾದ ಮೋಂಟನನ್ನು ನೋಡಿ ಮೂಸೆಗೆ ಆಶ್ಚರ್ಯವಾಯಿತು. ಮೂಸೆ ಒಂದು ದಿನ ಮೋಂಟನನ್ನು ಆದರದಿಂದ ತನ್ನ ಮನೆಗೆ ಬರಮಾಡಿಕೊಂಡು ಮೋಂಟನೊಡನೆ ಆತ ಹೇಗೆ ಶ್ರೀಮಂತನಾದನೆಂಬುದನ್ನು ವಿಚಾರಿಸಿದ. ಮೋಂಟ ಮೂಸೆಯೊಡನೆ ನಡೆದ ಸಂಗತಿ ಎಲ್ಲವನ್ನೂ ತಿಳಿಸಿದ.

ಮೋಂಟನ ಕತೆಯನ್ನು ಕೇಳಿದ ಮೂಸೆಗೂ ತಾನೂ ಶ್ರೀಮಂತನಾಗಬೇಕೆಂಬ ಮನಸ್ಸಾಯಿತು. ಆ ದಿನ ರಾತ್ರಿ ಒಂದು ದೊಡ್ಡ ಮಡಕೆ ತುಂಬ ಬೂದಿ ಮಸಿ ತುಂಬಿಸಿಕೊಂಡು ಉಬಾರಿನ ಕಡೆ ನಡೆದ. ದಾರಿಯಲ್ಲಿ ಮೋಂಟ ಹೇಳಿದ ಗೋಳಿಮರ ಕಾಣಸಿಕ್ಕಿತು. ಆ ಮರವೇರಿ ಕಳ್ಳರ ದಾರಿ ಕಾಯುತ್ತಾ ಮೂಸೆ ಎಚ್ಚರಿಕೆಯಿಂದ ಕುಳಿತ. ಎಂದಿನಂತೆ ಆ ದಿನವೂ ಮಧ್ಯರಾತ್ರಿಯ ಹೊತ್ತಿಗೆ ಕಳ್ಳರು ಬಂದು ಚಿನ್ನಾಭರಣ ಗಳನ್ನು ಪಾಲು ಮಾಡತೊಡಗಿದರು. ಅವರು ಪಾಲು ಮಾಡುತ್ತಿರುವಾಗಲೇ ಮರದ ಮೇಲೆ ಕುಳಿತ ಮೂಸೆ ಅವರ ಮೇಲೆ ಮಡಕೆಯನ್ನು ಕವುಚಿ ಹಿಡಿದು ಬೂದಿ, ಮಸಿ ಸುರಿದ. ಸುರಿಯುತ್ತಿರುವಾಗಲೇ ಅವನ ಕೈಯಿಂದ ಮಡಕೆ ಕೆಳಗೆ ಬಿತ್ತು. ಕಳ್ಳರು ಮರಕ್ಕೆ ಹತ್ತಿ ಮೂಸೆಯನ್ನು ಎಳೆದು ಕೆಳಗೆ ಹಾಕಿದರು. ಹೊಡೆದು ಬಡಿದು ಆತನ ಸೊಂಟ ಮುರಿದು ಹೋದರು. ರಾತ್ರಿ ಇಡೀ ಅಲ್ಲೇ ಬಿದ್ದಿದ್ದ ಮೂಸೆಯನ್ನು ಮರುದಿನ ಬೆಳಗ್ಗೆ ಯಾರೋ ನೋಡಿ ಆತನ ಮನೆಗೆ ತಲುಪಿಸಿಬಿಟ್ಟರು. ಮೂಸೆ ಆಮೇಲೆ ಮೋಂಟನ ಗೋಜಿಗೆ ಹೋಗಲಿಲ್ಲ. ಮೋಂಟ ಮದ್ವೆಯಾಗಿ ಹೆಂಡತಿಯೊಡನೆ ಬೇಸಾಯ ಮಾಡಿಕೊಂಡು ಸುಖವಾಗಿದ್ದ.

ಟಿಪ್ಪಣಿಗಳು

೧. ಉಬಾರ್ – ಉಪ್ಪಿನಂಗಡಿ (ಊರಿನ ಹೆಸರು)

೨. ಗೋಳಿಮರ – ಆಲದ ಮರ

***

೨೬

ಅತ್ತೆ - ಸೊಸೆ

ಒಂದೂರಿನಲ್ಲಿ ಒಬ್ಬ ರೈತನಿದ್ದ. ಆತನಿಗೆ ಒಬ್ಬ ಮಗ. ರೈತ ತೀರಿಹೋದ ಮೇಲೆ ತಾಯಿ ಮಗನಿಗೆ ಹೆಣ್ಣು ನೋಡಿ ಮದ್ವೆ ಮಾಡಿಸಿದಳು. ಮನೆಗೆ ಬಂದ ಸೊಸೆ ಬಹಳ ಮುಗ್ಧೆ. ಅತ್ತೆ ಅವಳನ್ನು ಚೆನ್ನಾಗಿ ದುಡಿಸುತ್ತಿದ್ದಳು. ಬೆಳಗ್ಗೆ ಎದ್ದೊಡನೆ ಸೊಸೆ ತಂಗಳನ್ನ ಉಂಡು ಹೊಲಕ್ಕೆ ಹೋಗಿ ದನಗಳಿಗೆ ತಿನ್ನಲು ಸಾಕಾಗುವಷ್ಟು ಹುಲ್ಲು ಹೆರೆದು ತಂದು ಹಾಕಬೇಕು. ನಂತರ ಕಾಡಿಗೆ ಹೋಗಿ ಹಟ್ಟಿಗೆ ಸೊಪ್ಪು ತಂದು ಹಾಕಬೇಕು. ಮಧ್ಯಾಹ್ನ ಊಟ ಮಾಡಿದ ಬಳಿಕ ಕಾಡಿಗೆ ಹೋಗಿ ಒಲೆ ಉರಿಸಲು ಬೇಕಾಗುವಷ್ಟು ಸೌದೆ ತಂದು ಹಾಕಬೇಕು. ಇದು ಅವಳು ದಿನನಿತ್ಯ ಮಾಡಬೇಕಾದ ಕೆಲಸ. ಅತ್ತೆ ಅವಳಿಗೆ ಅಡುಗೆ ಮನೆಗೆ ಪ್ರವೇಶವನ್ನೇ ಕೊಡುತ್ತಿರಲಿಲ್ಲ. ಅಷ್ಟೇ ಅಲ್ಲ ಬೆಳಗ್ಗೆ ಎದ್ದು ಕಾಡಿಗೆ ಹೊರಡುವ ಮೊದಲು ಬೆನ್ನಿಗೆ ಒಂದು ಗುದ್ದು ಗುದ್ದಿ ಈ ದಿನ ದೊಡ್ಡ ಹೊರೆ ತರಬೇಕೆಂದು ಗದರಿಸಿ ಕಳುಹಿಸಿಕೊಡುವುದು ಅತ್ತೆಯ ದಿನಚರಿ. ಏನೂ ಅರಿಯದ ಸೊಸೆ ಇದೆಲ್ಲ ನಡೆದು ಬಂದ ಪದ್ಧತಿ ಎಂದು ಸುಮ್ಮನೆ ಅನುಭವಿಸಿ ಕಾಲ ಕಳೆಯುತ್ತಿದ್ದಳು. ತಾಯಿಗೆ ಹೆದರಿದ ಮಗನೂ ಕೂಡ ತನ್ನ ಹೆಂಡತಿ ಪಡುತ್ತಿರುವ ಹಿಂಸೆಯನ್ನು ನೋಡಿಯೂ ನೋಡದಂತಿದ್ದನು.

ಒಂದು ಸಲ ರೈತನ ಮನೆಗೆ ಮಗಳನ್ನು ಕಾಣಲೆಂದು ಸೊಸೆಯ ತಂದೆ ತಾಯಿ ಬಂದರು. ಬಂದವರೆದುರು ಸೊಸೆಯೊಡನೆ ಅತ್ತೆ ಬಹಳ ಮುದ್ದಿನಿಂದ ಮಾತನಾಡಿದಳು. ಬೆಳಗ್ಗಿನ ಗಂಜಿಯೂಟ ಮುಗಿದ ಮೇಲೆ ಸೊಸೆ ಎಂದಿನಂತೆ ಕಾಡಿಗೆ ಸೊಪ್ಪು ತರಲು ಹೊರಟಳು. ಹೊರಡುವ ಮುನ್ನ ಅತ್ತೆಯೊಡನೆ "ಎಂದಿನ ಮರ್ಯಾದೆ ಕೊಟ್ಟು ಬಿಡಿ ಅತ್ತೆ ತಡವಾಯಿತು ಕಾಡಿಗೆ ಹೋಗಿಬರುತ್ತೇನೆ" ಎಂದಳು. ಮಗಳ ಮಾತನ್ನು ಕೇಳಿದ ತಂದೆ ತಾಯಿ "ಏನದು ಮರ್ಯಾದೆ!" ಎಂದು ಕೇಳಿದರು. "ದಿನನಿತ್ಯ ಕಾಡಿಗೆ ಹೊರಡುವಾಗ ಅತ್ತೆ ಮುದ್ದಿನಿಂದ ಎರಡು ಗುದ್ದು ಗುದ್ದುವ ಕ್ರಮವಿದೆ" ಎಂದು ಹೇಳಿದಾಗ ಸೊಸೆಯ ತಂದೆ ತಾಯಿಗೆ ಬೇಸರವಾಯಿತು. ಅಳಿಯನನ್ನು ಕರೆದು "ಇನ್ನು ಮುಂದೆ ಹೀಗೆಲ್ಲ ಆದರೆ ನಾವು ಸಹಿಸುವುದಿಲ್ಲ. ಸೊಪ್ಪು–ಸೌದೆ ತರುವ ಕೆಲಸಕ್ಕೆ ನೀನು ಜನ ಮಾಡು. ಇಲ್ಲವಾದರೆ ನಾವು ಅವಳನ್ನು

ಕರೆದುಕೊಂಡು ಹೋಗುತ್ತೇವೆ" ಎಂದರು. ಇದನ್ನು ಕೇಳಿ ಅತ್ತೆಗೆ ಎಲ್ಲಿ ಸೊಸೆಯ ತಂದೆ ತಾಯಿ ಆಕೆಯನ್ನು ತವರಿಗೆ ಕರೆದುಕೊಂಡು ಹೋಗಿ ಬಿಡುತ್ತಾರೋ ಎಂದು ಹೆದರಿಕೆಯಾಯಿತು. "ಇನ್ನು ಮುಂದೆ ಆಕೆ ಗಂಡನೊಡನೆ ಬೇಸಾಯದ ಕೆಲಸ ಮಾಡಿದ್ರೆ ಸಾಕು. ಕಾಡಿಗೆ ಕಳುಹಿಸುವುದಿಲ್ಲ"ವೆಂದು ಮಾತು ಕೊಟ್ಟವರನ್ನು ಸಮಾಧಾನ ಪಡಿಸಿದಳು. ಅಂದಿನಿಂದ ಸೊಸೆಯ ಕೆಲಸ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು.

ಒಂದು ದಿನ ರೈತನ ಮನೆಯಲ್ಲಿ ಮಧ್ಯಾಹ್ನ ಊಟಕ್ಕೆ ಕೋಳಿಸಾರು ಮಾಡಿದ್ರು, ಕೋಳಿಗೆ ಮಸಾಲೆ ಬೆರೆಸಿ ಒಲೆಯಲ್ಲಿಟ್ಟು ಅತ್ತೆ ತಾನು ಸ್ನಾನಮಾಡಿ ಬರುತ್ತೇನೆ ಎಂದು ಹೇಳಿ ಬಚ್ಚಲಮನೆಗೆ ಹೋದಳು. ಕೋಳಿಸಾರು ಕುದಿಯುತ್ತಿತ್ತು. ಸೊಸೆಗೆ ನಾಲ್ಕು ತುಂಡು ತಿನ್ನಬೇಕೆಂದು ಮನಸ್ಸಾಯಿತು. ಮನೆಯಲ್ಲೇ ತಿನ್ನಲು ಕುಳಿತರೆ ಎಲ್ಲಿ ಅತ್ತೆ ಬಂದು ಬಿಡುತ್ತಾಳೋ ಎಂದು ಭಯ. ಸಾರು ಕುದಿದೊಡನೆ ಒಲೆಯಿಂದ ತೆಗೆದು ಕೆಳಗಿಟ್ಟು ಒಂದು ದೊಡ್ಡ ಗೆರಟೆಯಲ್ಲಿ ಮೂರು–ನಾಲ್ಕು ತುಂಡು ಮತ್ತು ಸಾರು ಹಾಕಿಕೊಂಡು ಬಚ್ಚಲಲ್ಲಿ ಸ್ನಾನ ಮಾಡುತ್ತಿದ್ದ ಅತ್ತೆಯನ್ನು ಕರೆದು "ಅತ್ತೇ ನಾನು ತೋಟಕ್ಕೆ ಹೋಗಿ ಊಟಕ್ಕೆ ಎಲೆ ಕೊಯ್ದುಕೊಂಡು ಬರುತ್ತೇನೆಂದು" ಹೇಳಿ ಓಡಿದಳು. ತೋಟದಲ್ಲಿ ಕುಳಿತು ಕೋಳಿಮಾಂಸ ತಿಂದರೆ ಯಾರಾದರೂ ನೋಡಿ ಬಿಟ್ಟಾರು ಎಂಬ ಹೆದರಿಕೆಯಾಯಿತು. ಆಗ ತೋಟದ ಪಕ್ಕದಲ್ಲಿದ್ದ ದೇವರ ಗುಡಿಯ ಬಾಗಿಲು ತೆರೆದಿರುವುದು ಕಂಡಿತು. ಸೊಸೆ ಗುಡಿಯೊಳಗೆ ಹೋಗಿ ಕೋಳಿಮಾಂಸ ತಿನ್ನತೊಡಗಿದಳು.

ದೇವರ ಗುಡಿಯೊಳಗೆ ಬಂದು ದೇವರೆದುರೇ ನಿಂತು ಕೋಳಿಮಾಂಸ ತಿನ್ನುವ ಮುಗ್ಧ ಸೊಸೆಯ ಧೈರ್ಯ ನೋಡಿ ದೇವರೇ ಬೆರಗಾಗಿ ಮೂಗಿನ ಮೇಲೆ ಬೆರಳಿಟ್ಟು ಬಿಟ್ಟರು.

ಮರುದಿನ ಅರ್ಚಕರು ದೇವರ ಪೂಜೆಗೆ ಬಂದಾಗ ದೇವರ ಕಲ್ಲಿನ ಮೂರ್ತಿ ನೋಡಿ ಅವರಿಗೆ ಆಶ್ಚರ್ಯವಾಯಿತು. "ನಿನ್ನೆಯವರೆಗೆ ಎರಡೂ ಕೈಗಳನ್ನು ಕೆಳಗಡೆ ಚಾಚಿ ನಿಂತಿದ್ದ ಕಲ್ಲಿನ ದೇವರು ಇವತ್ತು ಮೂಗಿನ ಮೇಲೆ ಬೆರಳಿಟ್ಟಿದ್ದಾರಲ್ಲಾ! ಅರ್ಚಕರು ದೇವರಿಗೆ ಏನೋ ಅಪಚಾರವಾಗಿದೆ ಎಂದು ಬಗೆದರು. ಬೇಗ ಬೇಗ ಪೂಜೆ ಮುಗಿಸಿ ಊರಿನ ಅರಸನ ಬಳಿಗೆ ಓಡಿದರು. ನಡೆದ ಸಂಗತಿ ಹೇಳಿದರು. ನಮ್ಮೂರಿಗೆ ಏನೋ ದೋಷ ತಟ್ಟಿದೆ ಇದಕ್ಕೆ ಪರಿಹಾರವಾಗಬೇಕು" ಎಂದರು. ಅರಸು ದೇವರ ಗುಡಿಗೆ ಬಂದು ನೋಡಿ ಆಶ್ಚರ್ಯಪಟ್ಟ. ಜನರೂ ಸಾಲು ಸಾಲಾಗಿ ಬಂದು ನೋಡಿಕೊಂಡು ಹೋಗ ತೊಡಗಿದರು. ಜನರು ನೋಡಲೆಂದೇ ಗುಡಿಯ ಬಾಗಿಲನ್ನು ಮುಚ್ಚದೆ ತೆರೆದಿಡಲಾಯಿತು. ಮೂಗಿನ ಮೇಲೆ ಬೆರಳಿಟ್ಟ ದೇವರ ಮೂರ್ತಿಯನ್ನು ಮೂಗಿನಿಂದ ಬೆರಳು ತೆಗೆಸಿ ಮೊದಲಿನಂತೆ ಮಾಡಿದವರಿಗೆ ಹತ್ತು ಮುಡಿ ಗದ್ದೆ ಇನಾಮು ಕೊಡುವುದಾಗಿ ಅರಸ ಡಂಗುರ ಸಾರಿಸಿದ. ಯಾರಿಂದಲೂ ಸರಿಪಡಿಸಲಾಗಲಿಲ್ಲ.

ಕೆಲವು ದಿನ ಕಳೆದ ಮೇಲೆ ರೈತನ ಮನೆಯಲ್ಲಿ ಮತ್ತೊಮ್ಮೆ ಊಟಕ್ಕೆ ಕೋಳಿ ಸಾರು ಮಾಡಿದರು. "ಈ ಸಲ ನಾನು ಮಾಂಸ ಬೇಯಿಸಿ ಸಾರು ಕುದಿಸುತ್ತೇನೆ, ನೀನು ಸ್ನಾನಕ್ಕೆ ಹೋಗು" ಎಂದು ಅತ್ತೆ ಸೊಸೆಯನ್ನು ಸ್ನಾನಕ್ಕೆ ಕಳುಹಿಸಿ ತಾನು ಕೋಳಿಸಾರು ಕುದಿಸಲು ನಿಂತಳು. ಕೋಳಿ ಬೇಯುವಾಗ ಅತ್ತೆಗೆ ನಾಲ್ಕು ತುಂಡು ತಿಂದುಬಿಡಬೇಕೆಂದು ಆಸೆಯಾಯಿತು. ಇಲ್ಲೇ ತಿನ್ನಲು ಶುರುಮಾಡಿದ್ರೆ, ಸೊಸೆ ಬಂದು ಬಿಡಬಹುದೆಂದು ಬಗೆದು ಒಂದು ದೊಡ್ಡ ಗೆರಟೆಯಲ್ಲಿ ಮಾಂಸ ಹಾಕಿಕೊಂಡು ತೋಟದ ಕಡೆಗೆ ಓಡಿದಳು. ಓಡುವಾಗ "ನಾನು ಎಲೆತರಲು ತೋಟಕ್ಕೆ ಹೋಗುತ್ತೇನೆ" ಎಂದು ಸೊಸೆಯೊಡನೆ ಕರೆದು ಹೇಳಿದಳು. ತೋಟದಲ್ಲಿ ಕುಳಿತು ತಿಂದರೆ ಸೊಸೆಯೋ ಮಗನೋ ಬಂದುಬಿಡಬಹುದುದೆಂದು ಪಕ್ಕದಲ್ಲಿದ್ದ ಗುಡಿಯ ಕಡೆಗೆ ಹೋದಳು. ಗುಡಿಯ ಬಾಗಿಲು ತೆರೆದಿತ್ತು ಒಳಗೆ ಹೋಗಿ ಕೋಳಿಮಾಂಸ ತಿನ್ನತೊಡಗಿದಳು.

ಇತ್ತ ಸ್ನಾನಕ್ಕೆ ಹೋದ ಸೊಸೆ ಮನೆಗೆ ಬರುವಾಗ ಮನೆಯಲ್ಲಿ ಅತ್ತೆ ಇಲ್ಲ. ಕೋಳಿ ಸಾರು ಕುದಿಸಿ ಮಡಕೆ ಕೆಳಗಿಟ್ಟು ಹೋಗಿದ್ದಾಳೆ. ಎಲೆ ತರಲು ಹೋದ ಅತ್ತೆ ಬರುವ ಮೊದಲು ನಾನೆರಡು ತುಂಡು ಮಾಂಸ ತಿಂದು ಬಿಡುತ್ತೇನೆಂದು ಗೆರಟೆ ತುಂಬಾ ಕೋಳಿಮಾಂಸ ಹಾಕಿಕೊಂಡು ದೇವರ ಗುಡಿಯ ಕಡೆಗೆ ಓಡಿ ಬಾಗಿಲು ತೆರೆದಳು. ಬಾಗಿಲು ತೆರೆಯುವಾಗ ಒಳಗಡೆ ಅತ್ತೆ ಕೋಳಿಮಾಂಸ ತಿನ್ನುವ ನೋಟ ಕಂಡಿತು. ಕೂಡಲೇ ಸೊಸೆ "ಅತ್ತೇ ಅತ್ತೇ ನೀವು ತಂದದ್ದು ಬರಿಯ ನಾಲ್ಕು ತುಂಡು ಅದೆಲ್ಲಿಗೆ ಸಾಕು? ಮಿಗತೆಗೆ(ಎರಡನೆ ಬಾರಿಗೆ) ತಂದಿದ್ದೇನೆ" ಎಂದು ತನ್ನ ಗೆರಟೆಯಿಂದ ಎರಡು ತುಂಡು ತೆಗೆದು ಅತ್ತೆಯ ಗೆರಟೆಗೆ ಹಾಕಿದಳು. ಇದನ್ನು ನೋಡಿದ ದೇವರು ಮುಗ್ಧೆಯಾಗಿದ್ದ ಸೊಸೆಯ ಜಾಣ್ಮೆಯನ್ನು ನೋಡಿ ತನ್ನ ಮೂಗಿನ ಮೇಲಿಂದ ಬೆರಳು ತೆಗೆದು ಕೆಳಚಾಚಿದರು. ಅದನ್ನು ಗಮನಿಸಿದ ಸೊಸೆ ನೇರವಾಗಿ ಅರಮನೆಗೆ ಓಡಿ ಅರಸನೊಡನೆ ತಾನು ಗುಡಿಯ ದೇವರ ಮೂಗಿನಿಂದ ಬೆರಳು ತೆಗೆಸಿದ್ದೇನೆಂದು ವರದಿ ಒಪ್ಪಿಸಿದಳು. ಅರಸ ಗುಡಿಗೆ ಬಂದು ನೋಡಿದ. ತಾನು ಡಂಗುರ ಸಾರಿಸಿದಂತೆ ಹತ್ತು ಮುಡಿ[೧] ಗದ್ದೆಯನ್ನು ಸೊಸೆಗೆ ಬಿಟ್ಟುಕೊಟ್ಟ.

ಸೊಸೆಗೆ ಅರಸನಿಂದ ಹತ್ತು ಮುಡಿ ಗದ್ದೆ ಸಿಕ್ಕಿದ್ದು ಅತ್ತೆಗೆ ಸೊಸೆಯ ಮೇಲಿನ ಕಿಚ್ಚು ಇನ್ನಷ್ಟು ಹೆಚ್ಚಿಸಿತು. ಈಗ ಸೊಸೆಗೆ ಯಾವ ರೀತಿಯ ಹಿಂಸೆ ಕೊಡಲೂ ಸಾಧ್ಯವಾಗದೆ ಆಕೆ ತಳಮಳಕ್ಕೊಳಗಾದಳು. ಮಗನಲ್ಲಿ "ಆಕೆಯನ್ನು ನನ್ನಿಂದ ಏನು ಮಾಡಲೂ ಆಗುವುದಿಲ್ಲ, ನೀನಾದರೂ ಒಮ್ಮೆ ಬಡಿದು ಹೊಡೆದು ಆಕೆಯ ಅಹಂಕಾರ ಇಳಿಸು" ಎಂದು ಕೇಳಿಕೊಂಡಳು. ಮಗ ತಾಯಿಯ ಮಾತಿಗೆ ಒಪ್ಪಿ "ಸಂದರ್ಭ ಬರಲಿ ಅವಳ ಚರ್ಮ ಸುಲಿದು ಬಿಡುತ್ತೇನೆ" ಎಂದು ತಾಯಿಯನ್ನು ಸಮಾಧಾನ ಪಡಿಸಿದ.

ಆ ದಿನ ರಾತ್ರಿ ಊಟವಾದ ಮೇಲೆ ಹೆಂಡತಿಯೊಡನೆ ಮೊಸರಲ್ಲಿ ಕಲ್ಲು ಹುಡುಕಿ ಜಗಳಾಡಿದ. ಪಕ್ಕದಲ್ಲಿದ್ದ ಒನಕೆಯಿಂದ ಬೆನ್ನಿಗೊಂದು ಬಾರಿಸಿದ. ಪೆಟ್ಟುತಿಂದ ಸೊಸೆ

ಅಲ್ಲೇ ಕುಸಿದು ಬಿದ್ದು ಸತ್ತಂತೆ ನಟಿಸಿದಳು. ಸೊಸೆ ಬಿದ್ದದ್ದು ನೋಡಿ ತಾಯಿ ಮಗನಿಗೆ ಭಯವಾಯಿತು. ಮೊದಲಿಗೆ ಸ್ಮೃತಿ ತಪ್ಪಿರಬಹುದೆಂದು ಭಾವಿಸಿದ ಅವರು ಮುಖಕ್ಕೆ ನೀರು ಹಾಕಿ ಎಚ್ಚರಿಸಲು ನೋಡಿದರು. ಆದರೂ ಎಚ್ಚರಿಕೆಯಾಗುವುದಿಲ್ಲ. ಮೂಗಿಗೆ ಕೈ ಹಿಡಿದು ಉಸಿರಾಟವಿದೆಯೇ ಎಂದು ನೋಡಿದರು. ಉಸಿರಾಡುವುದು ಕಂಡು ಬರಲಿಲ್ಲ. ಸತ್ತೇ ಹೋದಳೆಂದು ಅತ್ತೆ ಭಾವಿಸಿದಳು. ಇನ್ನೇನು ಮಾಡುವುದು ರಾತ್ರಿ ಬೆಳಗಾಗುವುದರೊಳಗೆ ಇವಳ ಹೆಣವನ್ನು ಸುಟ್ಟು ಭಸ್ಮ ಮಾಡಿಬಿಡಬೇಕು. ಬೆಳಗಾದರೆ ಊರಿಗೆಲ್ಲ ಗೊತ್ತಾಗಿಬಿಡುತ್ತದೆ. ಈಗಲೇ ಸ್ಮಶಾನಕ್ಕೆ ಕೊಂಡೊಯ್ಯುವ ಎಂದು ಹೇಳಿ ಸೊಸೆಯನ್ನು ಒಂದು ಚಾಪೆಯಲ್ಲಿ ಮಲಗಿಸಿ ಸುತ್ತಿದರು. ಇಬ್ಬರೂ ಎತ್ತಿಕೊಂಡು ಸ್ಮಶಾನಕ್ಕೆ ಹೋದರು. ಅಲ್ಲಿ ಹೆಣ ಸುಟ್ಟು ಉಳಿದಿದ್ದ ಕಟ್ಟಿಗೆಯ ಕೊಳ್ಳಿಗಳನ್ನೆಲ್ಲ ರಾಶಿ ಹಾಕಿ ಚಾಪೆಯ ಸುರುಳಿ ಬಿಚ್ಚಿದರು. ಅಷ್ಟರಲ್ಲಿ ಮಗನಿಗೆ ಬೆಂಕಿ ಪೆಟ್ಟಿಗೆ ನೆನಪಾಯಿತು. "ಛೇ ಬರುವಾಗ ಬೆಂಕಿಪೆಟ್ಟಿಗೆ ತರಲು ಮರೆತೇ ಬಿಟ್ಟಿದ್ದೇವೆ. ನಾನು ಮನೆಗೆ ಹೋಗಿ ತರುತ್ತೇನೆ, ನೀನಿಲ್ಲೇ ನಿಲ್ಲು" ಎಂದು ಮಗ ತಾಯಿಗೆ ಹೇಳಿದ. "ಅಯ್ಯೋ ನಾನೊಬ್ಬಳೇ ಹೆಣದ ಬಳಿ ಈ ರಾತ್ರಿ ಸ್ಮಶಾನದಲ್ಲಿ ನಿಲ್ಲಲಾರೆ. ನಾವಿಬ್ಬರೂ ಹೋಗಿ ಬರುವ ಎಂದಳು. ತಾಯಿ ಮಗ ಇಬ್ಬರೂ ಹಾಗೆ ಮನೆಗೆ ಹೊರಟು ಹೋದರು.

ಅವರು ಸ್ಮಶಾನದಿಂದ ಹೋದ ಮೇಲೆ ಸೊಸೆ ಮೇಲೆದ್ದು ಕುಳಿತಳು. ಚಾಪೆಯೊಳಗೆ ಕಟ್ಟಿಗೆಗಳನ್ನಿಟ್ಟು ಭಾರ ಮಾಡಿ ಸುತ್ತಿ ಗಟ್ಟಿಯಾಗಿ ಕಟ್ಟಿದಳು. ಅಲ್ಲೇ ಪಕ್ಕದ ಪೊದೆಯಡ್ಡದಲ್ಲಿ ಹೋಗಿ ಕುಳಿತುಕೊಂಡಳು. ಸ್ವಲ್ಪ ಹೊತ್ತಾಗುವಾಗ ಮನೆಗೆ ಹೋದ ತಾಯಿ ಮಗ ಬಂದರು. ಬರುವಾಗ ಬೆಂಕಿಪೆಟ್ಟಿಗೆ, ಸೀಮೆಎಣ್ಣೆ ಕಟ್ಟಿಗೆ ಎಲ್ಲಾ ಹಿಡಿದುಕೊಂಡೇ ಬಂದಿದ್ದರು. ಸ್ಮಶಾನದಲ್ಲಿ ಸುಟ್ಟು ಉಳಿದ ಕೊಳ್ಳಿಗಳನ್ನು ಮತ್ತು ತಾವು ತಂದ ಕಟ್ಟಿಗೆಯನ್ನು ರಾಶಿ ಹಾಕಿ ಅದರ ಮೇಲೆ ಚಾಪೆಯ ಸುರುಳಿಯನ್ನೆತ್ತಿಟ್ಟರು. ನಂತರ ಅದರ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿಕೊಟ್ಟು "ನಿನ್ನ ಮಾರಿ ಹೋಯಿತು" ಎನ್ನುತ್ತಾ ಇಬ್ಬರೂ ಮನೆಗೆ ನಡೆದರು.

ಹೆಣವಿಲ್ಲದ ಚಿತೆ ಉರಿಯುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿ ನಾಲ್ಕೈದು ಜನ ಕಳ್ಳರು ಅಲ್ಲಿಗೆ ಬಂದರು. ಚಿತೆಯ ಬೆಳಕಿನಲ್ಲಿ ತಾವು ರಾತ್ರಿ ಕದ್ದು ತಂದ ಚಿನ್ನಾಭರಣಗಳನ್ನು ಪಾಲು ಮಾಡಿಕೊಳ್ಳಲು ಸುತ್ತು ಹಾಕಿ ಕುಳಿತರು. ಆಭರಣಗಳನ್ನು ಚೀಲದಿಂದ ತೆಗೆದು ನೆಲದಲ್ಲಿ ಹಾಕಿ ಪಾಲು ಮಾಡುತ್ತಿರುವಾಗ ಸೊಸೆ ಪೊದರ ಪಕ್ಕದಿಂದ ಎದ್ದು ಮುಂದೆ ಬಂದು ಕಳ್ಳರನ್ನು ನೋಡಿ ಹೆದರಿಕೆಯಿಂದ ಒಂದು ಆರ್ಭಟೆಕೊಟ್ಟಳು. ಆರ್ಭಟೆ ಕೇಳಿದ ಕಳ್ಳರು ಬೆಚ್ಚಿಬಿದ್ದು ಅವಳ ಕಡೆ ನೋಡಿದರು. ಆಕೆಯ ಕೆದರಿದ ಕೂದಲು, ಕೆಂಪಾದ ಕಣ್ಣು, ನಡುಗುವ ಮೈ ನೋಡಿ ಯಾವುದೋ ಪ್ರೇತವೋ ಪಿಶಾಚಿಯೋ ಆಗಿರಬೇಕು. ಈಗ ಅದರ ಕೈಗೆ ನಾವು ಸಿಕ್ಕಿದರೆ ಬದುಕಿ

ಉಳಿಯುವುದಿಲ್ಲವೆಂದು ಬಗೆದು ನೆಲದಲ್ಲಿ ಹರಡಿದ ಆಭರಣಗಳನ್ನು ಅಲ್ಲಿಯೇ ಬಿಟ್ಟು ಅಲ್ಲಿಂದ ಕಾಲುಕಿತ್ತರು.

ಕಳ್ಳರು ಓಡಿ ಹೋಗುವುದು ನೋಡಿ ಸೊಸೆಗೆ ಧೈರ್ಯವಾಯಿತು. ಅವರು ಕುಳಿತಿದ್ದ ಜಾಗಕ್ಕೆ ಬಂದು ನೋಡುವಾಗ ಒಂದು ರಾಶಿ ಚಿನ್ನದ ಆಭರಣಗಳು. ಅವುಗಳನ್ನೆಲ್ಲ ಅವರು ಬಿಟ್ಟು ಹೋಗಿದ್ದ ಚೀಲದಲ್ಲೇ ತುಂಬಿಸಿಕೊಂಡು ಕತ್ತಲೆಯಲ್ಲಿಯೇ ನಡೆದು ಸೊಸೆ ತನ್ನ ತವರಿಗೆ ಹೋದಳು. ತವರುಮನೆಯಲ್ಲಿ ಎರಡು ದಿನ ಇದ್ದು ಮೂರನೇ ದಿನ ಬೆಳ್ಳಂಬೆಳಗ್ಗೆ ತನ್ನ ಮನೆಗೆ ಬಂದು ಅಂಗಳದಲ್ಲಿ ಕುಳಿತಳು.

ಬಾಗಿಲು ತೆರೆದು ಹೊರಗೆ ಬರುವಾಗ ಸೊಸೆ ಅಂಗಳದಲ್ಲಿ ಕುಳಿತದ್ದು ನೋಡಿ ಅತ್ತೆ ಒಮ್ಮೆಗೆ ಬೆಚ್ಚಿಬಿದ್ದಳು. ಸೊಸೆಯ ಪ್ರೇತ ಇಲ್ಲಿಗೆ ನನ್ನನ್ನು ಕೊಲ್ಲಲು ಬಂದಿದೆ ಎಂದೇ ಭಾವಿಸಿ ಒಮ್ಮೆಗೆ ಬೊಬ್ಬಿಟ್ಟಳು. ನಂತರ ನಿಧಾನವಾಗಿ ಇಬ್ಬರೂ ಧೈರ್ಯಮಾಡಿ ಸೊಸೆಯ ಬಳಿಗೆ ಹೋಗಿ ನಿಂತರು. ಆಗ ಸೊಸೆ ಎದ್ದುನಿಂತು "ಅತ್ತೇ, ನೀವು ನನ್ನನ್ನು ಚಿತೆಯಲ್ಲಿಟ್ಟು ಸುಟ್ಟು ಬಂದಿರಲ್ಲಾ. ನಾನು ಬೆಂಕಿಯ ಹೊಗೆಯ ಮೂಲಕ ನೇರ ಸ್ವರ್ಗಕ್ಕೆ ಹೋದೆ. ಸ್ವರ್ಗ ಮುಟ್ಟುವಾಗ ನನಗೆ ಮತ್ತೆ ಜೀವ ಬಂತು. ಸ್ವರ್ಗದಲ್ಲಿ ನನ್ನ ಅಜ್ಜ-ಅಜ್ಜಿ ಎಲ್ಲಾ ಹಿರಿಯರನ್ನೂ ನೋಡಿದೆ. ಅವರಿಗೆಲ್ಲ ಬಹಳ ಸಂತೋಷ ವಾಯಿತು. ನನಗೆ ಭಾರಿ ಸನ್ಮಾನ ಮಾಡಿದರು. ನಾನು ಅಲ್ಲೇ ನಿಲ್ಲುತ್ತೇನೆ ಎಂದೆ. ಬೇಡ; ನಿನ್ನ ಆಯುಷ್ಯ ಇನ್ನೂ ಮುಗಿದಿಲ್ಲ. ನಿನ್ನನ್ನು ಯಾರೋ ಕೊಂದುಹಾಕಿದ್ದಾರೆ ಅಷ್ಟೆ. ಈಗ ನಿನಗೆ ನೂರು ವರ್ಷ ಜೀವದಾನ ಮಾಡಿದ್ದೇವೆ, ನೀನು ಹೋಗು ಎಂದು ಹೇಳಿ ನನಗೆ ತುಂಬಾ ಚಿನ್ನಾಭರಣಗಳನ್ನು ಕೊಟ್ಟರು. ನೋಡಿ" ಎಂದು ತನ್ನ ಕೈಯಲ್ಲಿದ್ದ ಚೀಲವನ್ನು ನೆಲಕ್ಕೆ ಸುರುವಿದಳು. ತಾಯಿ ಮಗನಿಗೆ ಅದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಸೊಸೆ ಹೇಳಿದ್ದು ಸತ್ಯವೆಂದೇ ನಂಬಿದ್ದ ಅತ್ತೆ ಮಗ ಸೊಸೆಯೊಡನೆ "ಹಾಗಾದರೆ ನಾನು ಒಮ್ಮೆ ಸ್ವರ್ಗಕ್ಕೆ ಹೋಗಿ ಬರುತ್ತೇನೆ ಮಗಾ ಕಳುಹಿಸಿಕೊಡು" ಎಂದಳು. "ನಾನೇ ನಿಮ್ಮನ್ನು ಕಳುಹಿಸಿಕೊಡುತ್ತೇನೆ ಅತ್ತೆ ಸ್ವಲ್ಪ ದಿನ ತಡೀರಿ" ಎಂದಳು ಸೊಸೆ. ಸೊಸೆಯೊಡನೆ ಅತ್ತೆ ಮುಂದೆ ಬಾರಿ ಪ್ರೀತಿ ತೋರಿಸಿದಂತೆ ನಟಿಸಿ "ನಿನಗೆ ಹಸಿವಾಗಿರಬಹುದು ಬಾ ಊಟ ಮಾಡು" ಎಂದು ಸೊಸೆಗೆ ಉಣಬಡಿಸಿದಳು.

ಕೆಲವು ದಿನಗಳು ಕಳೆದುವು ಅತ್ತೆ-ಸೊಸೆ ಇಬ್ಬರೂ ಪರಸ್ಪರ ಪ್ರೀತಿಯನ್ನು ತೋರಿಸಿದಂತೆ ನಟಿಸುತ್ತಿದ್ದರು. ಒಂದು ದಿನ ಇಬ್ಬರೂ ಬಟ್ಟೆ ಒಗೆಯಲು ನದಿ ದಂಡೆಗೆ ಹೋದರು. ಸೊಸೆ ಬಟ್ಟೆ ಒಗೆಯುತ್ತಿದ್ದಳು. ಒಗೆದ ಬಟ್ಟೆಯನ್ನು ಅತ್ತೆ ನದಿ ದಂಡೆಯಲ್ಲಿ ಒಣಗಿಸುತ್ತಿದ್ದಳು. ಆಗ ಮಳೆಗಾಲ. ನದಿ ತುಂಬಿ ಹರಿಯುತ್ತಿತ್ತು. ಬಟ್ಟೆ ಪೂರ್ತಿ ಒಗೆದ ಬಳಿಕ ಮೇಲೆ ಬಂದ ಸೊಸೆ ಅತ್ತೆಯೊಡನೆ "ಅತ್ತೇ ಅತ್ತೇ ನೀವು

ಸ್ವರ್ಗಕ್ಕೆ ಹೋಗುತ್ತೇನೆ ಎಂದಿರಲ್ಲಾ. ಈಗ ಕಳುಹಿಸುತ್ತೇನೆ ನೋಡಿ" ಎಂದು ತೆಗೆದು ನದಿಗೆ ದೂಡಿ ಹಾಕಿದಳು.

ಅತ್ತೆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವಾಗ ನೀರಲ್ಲಿ ಮೇಲೆ ಕೆಳಗೆ ಆಗುತ್ತಿದ್ದಳು. ಅವಳನ್ನು ನೋಡಿದ ಸೊಸೆ "ಅತ್ತೇ ಅತ್ತೇ ಒಮ್ಮೆ ಅಂಗಾತ. ಒಮ್ಮೆ ಬೋರಲಾಗಿ ಹೋಗುತ್ತೀದ್ದೀರಲ್ಲಾ. ಮಧ್ಯಾಹ್ನದ ಊಟಕ್ಕೆ ಎಷ್ಟಕ್ಕಿ ಹಾಕಬೇಕು? ಕತ್ತಲೆಯ ಊಟಕ್ಕೆ ಎಷ್ಟಕ್ಕಿ ಹೇಳಿಬಿಡಿ" ಎಂದಳು. ಪ್ರವಾಹದಲ್ಲಿ ಹೋಗುವ ಅತ್ತೆ ಒಮ್ಮೆ ಬಲಗೈ ಮೇಲಕ್ಕೆತ್ತಿ ಎರಡು ಬೆರಳು ತೋರಿಸಿದಂತೆ ಇನ್ನೊಮ್ಮೆ ಎಡಗೈ ಮೇಲಕ್ಕೆತ್ತಿ ಮೂರು ಬೆರಳು ತೋರಿಸಿದಂತೆ ಸೊಸೆಗೆ ಕಂಡಿತು. ಸೊಸೆ ಒಣಗಿಸಿದ ಬಟ್ಟೆಗಳನ್ನು ಹಿಡಿದುಕೊಂಡು ಮನೆಗೆ ಬಂದು ಗಂಡನೊಡನೆ ಅತ್ತೆಯನ್ನು ಸ್ವರ್ಗಕ್ಕೆ ಕಳುಹಿಸಿಕೊಟ್ಟ ಕತೆ ಹೇಳಿ ಇನ್ನೆರಡು ಮೂರು ದಿನಗಳಲ್ಲಿ ಆಕೆ ಹಿಂತಿರುಗಿ ಬರಬಹುದು ಎಂದಳು. ಮಗನಿಗೆ ತಾಯಿಯನ್ನು ಕಳೆದುಕೊಂಡ ದುಃಖವಾಯಿತಾದರೂ ಏನೂ ಮಾತನಾಡಲಾರದೆ ಸುಮ್ಮನಿದ್ದನು.

ನೀರಲ್ಲಿ ಕೊಚ್ಚಿ ಹೋಗುತ್ತಿದ್ದ ಅತ್ತೆ ಒಂದು ಕೈಯೆತ್ತಿ ಎರಡು ಬೆರಳು ತೋರಿಸಿದ್ದರಿಂದ ಮಧ್ಯಾಹ್ನ ಊಟಕ್ಕೆ ಅತ್ತೆ ಎರಡು ಸೇರು ಅಕ್ಕಿ ಹಾಕಬೇಕೆಂದು ಹೇಳಿರಬಹುದೆಂದು ಸೊಸೆ ಬಗೆದು ಎರಡು ಸೇರು ಅಕ್ಕಿಯ ಅನ್ನ ಬೇಯಿಸಿದಳು. ಇಬ್ಬರು ಊಟ ಮಾಡಿದ ಮೇಲೆಯೂ ಅನ್ನ ಮತ್ತೆ ಮೂರು ದಿನಕ್ಕಾಗುವಷ್ಟು ಉಳಿಯಿತು. ಆ ಮೇಲೆ ಪಕ್ಕದ ಮನೆಗೆ ಹೋಗಿ ಅಲ್ಲಿನ ಹೆಂಗಸರಲ್ಲಿ ಅತ್ತೆ ನೀರಲ್ಲಿ ತೇಲುತ್ತಾ ಹೋಗುವಾಗ ಎರಡು ಬೆರಳು ತೋರಿಸಿದಳೇಕೆ? ಎಂದು ತನ್ನ ಸಂಶಯ ವ್ಯಕ್ತಪಡಿಸಿದಳು. ಅದಕ್ಕವರು "ಅತ್ತೆ ನಿನಗೆ ಎರಡು ಕುಡ್ತೆ ಅಕ್ಕಿ ಹಾಕಲು ಹೇಳಿರಬೇಕು" ಎಂದರು. ಸೊಸೆ ಅದೇ ರೀತಿ ಮುಂದುವರಿದಳು. ಮುಂದೆ ಗಂಡ ಹೆಂಡತಿ ತಮಗೆ ಸಿಕ್ಕಿದ ಸಂಪತ್ತಿನಿಂದ ಮನೆಮಾರು ಮಾಡಿಕೊಂಡು ಹೊಲದಲ್ಲಿ ದುಡಿಯುತ್ತಾ ಸಂತೋಷವಾಗಿದ್ದರು.

ಟಿಪ್ಪಣಿ

೧. ಅಳತೆಮಾನ–೧೦ ಮುಡಿ ಗದ್ದೆ–೧೦ ಮುಡಿ ಬೀಜ ಬಿತ್ತುವ ಗದ್ದೆ.
ಮುಡಿ–೪೨ ಸೇರು, ೧ ಸೇರು–೬ ಕುಡ್ತೆ

***

೨೭

ಹೆಡ್ಡ ದೂಮ ಬುದ್ಧಿವಂತನಾದ

ಒಂದು ಊರಿನಲ್ಲಿ ಒಬ್ಬ ಅಜ್ಜಿ ಇದ್ದಳು. ಅವಳಿಗೊಬ್ಬ ಮೊಮ್ಮಗ ದೂಮ. ದೂಮ ತಂದೆ ತಾಯಿ ಇಲ್ಲದ ಅನಾಥ. ಅಜ್ಜಿ ಮೊಮ್ಮಗನನ್ನು ಬಹಳ ಮುದ್ದಾಗಿ ಸಾಕಿದ್ದಳು. ಹಾಗಾಗಿ ಆತನಿಗೆ ಒಂದು ಕೆಲಸವನ್ನೂ ಸರಿಯಾಗಿ ಮಾಡಲು ಬರುತ್ತಿರಲಿಲ್ಲ. ಶುದ್ಧ ಸೋಮಾರಿಯಾದ ಆತನನ್ನು ಎಲ್ಲರೂ "ಅಜ್ಜಿ ಸಾಕಿದ ಮಗು ಬೊಜ್ಜಕ್ಕೂ ಪ್ರಯೋಜನವಿಲ್ಲ"ವೆಂದು ಹಿಯ್ಯಾಳಿಸುತ್ತಿದ್ದರು.

ಅಜ್ಜಿಗೆ ಮೊಮ್ಮಗನ ಬಗ್ಗೆ ಟೀಕೆ ಟಿಪ್ಪಣಿ ಕೇಳಿ ಸಾಕಾಯಿತು. ಒಂದು ದಿನ ಮೊಮ್ಮಗನನ್ನು ಕರೆದು "ಮಗಾ ದೂಮ ನೀನಿನ್ನು ಸುಮ್ಮನೆ ಮನೆಯಲ್ಲಿ ಕುಳಿತು ಕೊಳ್ಳಬಾರದು. ನಾನೂ ಮುದುಕಿಯಾದೆ, ನನಗೆ ದುಡಿಯಲು ಸಾಧ್ಯವಾಗುವುದಿಲ್ಲ. ನೀನು ದುಡಿದು ಸಂಪಾದಿಸಿ ನಮ್ಮ ಜೀವನ ನಿರ್ವಹಣೆ ಮಾಡುವಂತವನಾಗಬೇಕು. ಹೆಡ್ಡನಾದರು ನೀನು ಒಳ್ಳೆ ಬಡ್ಡಿನಾಗಿ ಬೆಳೆದಿದ್ದೀಯಾ. ನಾಳೆಯಿಂದ ನೆರೆಕರೆಯವರ ಮನೆಗೆ ಕೆಲಸಕ್ಕೆ ಹೋಗು" ಎಂದಳು. ಅಜ್ಜಿ ಹೇಳಿದ ಮಾತಿಗೆ ದೂಮ ಒಪ್ಪಿಕೊಂಡ. ಮರುದಿನ ಎದ್ದು ಬೆಳಗ್ಗೆ ಗಂಜಿ ಊಟ ಮಾಡಿ ನೆರೆಮನೆಗೆ ಹೋಗಿ "ದನಿಗಳೇ ನನಗೆ ಏನಾದರೂ ಕೆಲಸ ಕೊಡಿ ನಾನು ಮಾಡುತ್ತೇನೆ" ಎಂದ. ನೆರೆಕರೆಯವರಿಗೆ ದೂಮ ಕೆಲಸಕ್ಕೆ ಬರುತ್ತಾನೆ ಎನ್ನುವಾಗ ಬಹಳ ಖುಷಿಯಾಯಿತು. "ಹೋಗು ಕೆಲಸ ಮಾಡು. ಆ ತೋಟದ ಬದಿಯ ಮರದಲ್ಲಿ ತುಂಬಾ ಕೊಂಬೆಗಳು ಬೆಳೆದಿವೆ, ಇದರಿಂದಾಗಿ ತೋಟಕ್ಕೆ ತೊಂದರೆಯಾಗುತ್ತದೆ. ನೀನು ಮರ ಹತ್ತಿ ಅದರ ಗೆಲುಗಳನ್ನು ಕಡಿದು ಹಾಕು. ಅದರ ಸೊಪ್ಪನ್ನು ಅಡಿಕೆ ಮರಗಳ ಬುಡಕ್ಕೆ ಹಾಕು" ಎಂದು ಒಂದು ದೊಡ್ಡಕತ್ತಿ ಕೊಟ್ಟು ಕಳುಹಿಸಿದರು. ದೂಮ ಮರದ ಗೆಲ್ಲು ಕಡಿಯಲು ದಣಿ ತೋರಿಸಿದ ಮರದ ಬುಡಕ್ಕೆ ಹೋದ. ಮರವೇರಿ ಒಂದು ರೆಂಬೆಯ ತುದಿಯಲ್ಲಿ ಕುಳಿತುಕೊಂಡು ಅದರ ಬುಡದಿಂದ ಕಡಿಯಲು ಪ್ರಾರಂಭಿಸಿದ.

ಅಷ್ಟರಲ್ಲಿ ಆ ಮರದ ಬದಿಯಿಂದ ಹೋಗುವ ದಾರಿಯಲ್ಲಿ ಯಾರೋ ಒಬ್ಬ ನಡೆದುಕೊಂಡು ಬರುತ್ತಿದ್ದ. ಕಡಿಯುವ ಸದ್ದು ಕೇಳಿ ಆತ ಮುಖವೆತ್ತಿ ಮರದ ಕಡೆಗೆ ನೋಡಿದ. ನೋಡುವಾಗ ದೂಮ ಮರದ ಗೆಲ್ಲಿನ ಮೇಲೆ ಕುಳಿತುಕೊಂಡು ಬುಡದಿಂದ

ಕಡಿಯುವುದು ಕಂಡಿತು. ಆತ "ಹೇ ಹೆಡ್ಡಾ ಕೊಂಬೆಯ ತುದಿಯಲ್ಲಿ ಕುಳಿತು ಬುಡದಿಂದ ಕಡಿಯುತ್ತಾ ಇದ್ದಿಯಾ. ನಿನಗಷ್ಟೂ ಗೊತ್ತಾಗುವುದಿಲ್ಲವೇ?" ಎಂದು ಜೋರು ಮಾಡಿದ ಆಗ ದೂಮ "ಹೋಗು ಹೋಗು, ನಿನ್ನ ಕೆಲಸ ನೀನು ನೋಡು ನನಗೆ ಬುದ್ಧಿ ಹೇಳಲು ಬರಬೇಡ. ನನ್ನ ದಣಿಗಳು ಹೇಳಿದ ಕೆಲಸ ನಾನು ಮಾಡುತ್ತಿದ್ದೇನೆ. ಅವರು ಮರದ ಎಲ್ಲಾ ಕೊಂಬೆ ಕಡಿಯಲು ಹೇಳಿದ್ದಾರೆ" ಎಂದು ಸಿಟ್ಟಿನಲ್ಲಿ ಹೇಳಿದ. ದಾರಿ ಹೋಗುವವನಿಗೆ ಈತ ಪೂರ್ತಿ ಹೆಡ್ಡನೆಂದು ಅರ್ಥವಾಯಿತು. "ಏನು ಬೇಕಾದರೂ ಮಾಡು ನೀನು ಮಾತ್ರ ಕೆಳಗೆ ಬಿದ್ದು ಸಾಯುತ್ತೀಯಾ" ಎಂದು ಹೇಳಿ ಮುಂದೆ ನಡೆದನು.

ಸ್ವಲ್ಪ ಹೊತ್ತಿನಲ್ಲಿ ಕೊಂಬೆ ತುಂಡಾಗಿ ದೂಮ ಮರದಿಂದ ಕೆಳಗೆ ಬಿದ್ದ. ಆತ ಕೊಂಬೆಯ ಸೊಪ್ಪಿನ ಮೇಲೆ ಬಿದ್ದುದರಿಂದ ಆತನಿಗೆ ಹೆಚ್ಚು ಗಾಯಗಳಾಗಿರಲಿಲ್ಲ. ಬಿದ್ದಲ್ಲಿಂದ ಎದ್ದುಕೊಂಡು ದಾರಿ ಹೋಗುವವನನ್ನು ಹಿಂಬಾಲಿಸಿಕೊಂಡು ಓಡಿದ. ಓಡಿ ಹೋಗಿ ಅವನನ್ನು ಅಡ್ಡಗಟ್ಟಿ ಮುಂದೆ ನಿಂತ. "ಸ್ವಾಮೀ ನೀವು ಯಾರು? ಮಹಾತ್ಮರೋ ಜೋಯಿಸರೋ ಇರಬೇಕು. ಮರದಿಂದ ಕೆಳಗೆ ಬೀಳುತ್ತಿ ಎಂದು ನೀವು ಹೇಳಿದ ತಕ್ಷಣವೇ ನಾನು ಕೆಳಗೆ ಬಿದ್ದಿದ್ದೇನೆ. ನೀವು ನನಗೆ ಇನ್ನೊಂದು ಭವಿಷ್ಯ ಹೇಳಬೇಕು. ದಯವಿಟ್ಟು ನಾನು ಸಾಯುವುದು ಯಾವಾಗ ಎಂದು ಹೇಳಬೇಕು" ಎಂದು ಆತನ ಕಾಲಿಗೆ ಅಡ್ಡಬಿದ್ದು ಕೇಳಿಕೊಂಡ. ದಾರಿ ಹೋಗುವವನಿಗೆ ಉಭಯ ಸಂಕಟವಾಯಿತು. "ನೀನಿನ್ನೂ ಯುವಕ ನೀನು ಸಾಯಲು ಬಹಳ ವರ್ಷಗಳಿವೆ ಹೆದರಬೇಡ" ಎಂದು ಹೇಳಿದರೂ ದೂಮ ಕೇಳಲಿಲ್ಲ "ನಿಮಗೆ ಗೊತ್ತು ಯಾವಾಗ ಎಂದು ಹೇಳಿ" ಎಂದು ಮತ್ತೆ ಮತ್ತೆ ಆತನನ್ನು ಪೀಡಿಸಿದ. ದಾರಿ ಹೋಗುವವ ಬೇರೆ ಉಪಾಯ ಕಾಣದೆ "ನಿನ್ನ ಗಡ್ಡ ಮೀಸೆ ಎಲ್ಲಾ ಬಿಳಿಯಾದ ಮೇಲೆ ನೀನು ಸಾಯುತ್ತಿ" ಎಂದ. ದೂಮ ಮತ್ತೂ ಬಿಡಲಿಲ್ಲ. "ನನ್ನ ಗಡ್ಡ ಬಿಳಿಯಾಗುವುದು ಯಾವಾಗ?" ಎಂದು ಕೇಳಿದ "ನೀನು ಕೆಲವು ದಿನ ಗಡ್ಡ ಮೀಸೆ ಬೋಳಿಸಬೇಡ, ಗಡ್ಡ ಚೆನ್ನಾಗಿ ಬಂದ ಮೇಲೆ ಮೊಸರು ಹಾಕಿ ಅನ್ನ ಊಟಮಾಡು. ಕೈ ತೊಳೆಯದೆ ಮುಖ ಒರಸಿಕೊ. ಆ ಮೇಲೆ ಕನ್ನಡಿ ನೋಡು. ಆಗ ಗಡ್ಡ ಮೀಸೆ ಬಿಳಿ ಕಂಡರೆ ನೀನು ಬೇಗನೆ ಸಾಯುತ್ತಿ" ಎಂದು ಹೇಳಿ ದಾರಿ ಹೋಗುವವ ನಿಲ್ಲದೆ ದೂಮನಿಂದ ತಪ್ಪಿಸಿಕೊಂಡು ಮುಂದುವರಿದ.

ಕೆಲವು ದಿವಸ ಕಳೆಯಿತು. ದೂಮ ದಿನನಿತ್ಯ ಗಡ್ಡ ಮೀಸೆ ಎಷ್ಟು ಬಂದಿದೆ ಎಂದು ಕನ್ನಡಿ ನೋಡಿಕೊಳ್ಳುತ್ತಿದ್ದ. ಒಂದು ದಿನ ಅಜ್ಜಿಯನ್ನು ಕರೆದು "ಅಜ್ಜೀ ಅಜ್ಜೀ ನನಗಿವತ್ತು ಮೊಸರು ಹಾಕಿ ಕಲಸಿ ಅನ್ನ ಕೊಡು" ಎಂದ. ಮೊಮ್ಮಗನಿಗೇನೊ ತುಂಬಾ ಆಸೆಯಾಗಿದೆ ಎಂದು ಗ್ರಹಿಸಿ ಅಜ್ಜಿ ಪಕ್ಕದ ಮನೆಯಿಂದ ಮೊಸರು ತಂದು ಅನ್ನ ಕಲಸಿ ದೂಮನಿಗೆ ಉಣ ಬಡಿಸಿದಳು. ದೂಮ ಮೊಸರನ್ನ ಊಟ ಮಾಡಿದ

ಮೇಲೆ ಮುಖ ತೊಳೆಯದೆ ತನ್ನ ಗಡ್ಡದ ಮೇಲೆಲ್ಲಾ ಕೈ ಒರಸಿಕೊಂಡ. ನಂತರ ಹೋಗಿ ಕನ್ನಡಿ ನೋಡಿದ. ಮುಖವೆಲ್ಲ ಬೆಳ್ಳಗಾಗಿತ್ತು. ತಾನು ಸತ್ತೆನೆಂದು ಭಾವಿಸಿಕೊಂಡು ಮಲಗಿದ. ಅಜ್ಜಿ ಎಷ್ಟು ಕರೆದರೂ ಮಾತನಾಡಲಿಲ್ಲ. ಮೊಮ್ಮಗ ಹೀಗೇಕೆ ಮಾಡುತ್ತಿದ್ದಾನೆಂದು ಅಜ್ಜಿಗೆ ಹೆದರಿಕೆಯಾಯಿತು. ನೆರೆಮನೆಯವರನ್ನು ಕರೆದು "ನನ್ನ ಮಗ ಮಾತಾಡುವುದಿಲ್ಲ ಸತ್ತುಹೋಗಿದ್ದಾನೆ" ಎಂದು ಅಳುವುದಕ್ಕೆ ಪ್ರಾರಂಭಿಸಿದಳು. ನೆರೆಮನೆಯವರೆಲ್ಲ ಬಂದು ದೂಮನು ಹೊದ್ದುಕೊಂಡ ಕಂಬಳಿ ತೆಗೆದು ಸತ್ತಿದ್ದಾನೋ ಬದುಕಿದ್ದಾನೋ ಎಂದು ಪರೀಕ್ಷಿಸಿದರು. ಆತ ಬದುಕಿದ್ದಾನೆ ಎಂದು ಗೊತ್ತಾದ ಕೂಡಲೆ ಒಬ್ಬಾತ ಒಂದು ಬೆತ್ತ ತಂದು ಮಲಗಿದ್ದ ದೂಮನಿಗೆ ಎರಡು ಪೆಟ್ಟು ಬಾರಿಸಿದ. ಅಷ್ಟರವರೆಗೆ ಮಾತನಾಡದೆ ಮಲಗಿದ್ದ ದೂಮ "ಅಯ್ಯೋ, ನಾನು ಸತ್ತಿದ್ದೇನೆ, ನೀವು ತೊಂದರೆ ಕೊಡಬೇಡಿ" ಎಂದು ಕವುಚಿ ಮಲಗಿದ ದೂಮ ಅಷ್ಟು ಹೇಳುವಾಗ ಇನ್ನೊಬ್ಬ ಬೆತ್ತದಿಂದ ದೂಮನ ಬೆನ್ನಿಗೆ ಇನ್ನೆರಡು ಬಾರಿಸಿದ. ನೋವು ತಾಳಲಾರದೆ ದೂಮ ಎದ್ದು ಕುಳಿತ. "ನಾನು ಸತ್ತೇ ಹೋಗಿದ್ದೆ. ಹೇಗಾದರೂ ಮಾಡಿ ನೀವು ಬದುಕಿಸಿ ಕೊಟ್ಟಿರಿ. ಅಜ್ಜಿ ಪುಣ್ಯ, ತುಂಬಾ ಉಪಕಾರವಾಯಿತು" ಎಂದು ಎದ್ದು ಹೋಗಿ ಮುಖ ತೊಳೆದುಕೊಂಡು ಬಂದು ಕನ್ನಡಿ ನೋಡಿದ. ಆಗ ಪುನಃ ಮುಖ ಕಪ್ಪಾಗಿತ್ತು. ನಾನಿನ್ನು ಪಕ್ಕನೆ ಸಾಯುವುದಿಲ್ಲವೆಂದು ಸಂತೋಷಪಟ್ಟ. ಬಂದವರೆಲ್ಲ ದೂಮನನ್ನು ತಮಾಷೆ ಮಾಡಿಕೊಂಡು ಹೊರಟುಹೋದರು.

ದೂಮ ಮರುದಿವಸದಿಂದ ಕೆಲಸಕ್ಕೆ ಹೊರಟ. ದಣಿಗಳ ಮನೆಗೆ ಹೋಗಿ "ಇವತ್ತೇನು ಕೆಲಸವಿದೆ?" ಎಂದು ಕೇಳಿದ. ಆಗ ದಣಿಗಳ ಹೆಂಡತಿ "ದೂಮಾ ಎಣ್ಣೆ ಮುಗಿದಿದೆ. ನೀನು ಅಂಗಡಿಗೆ ಹೋಗಿ ಎರಡು ಕುಡ್ತೆ ತೆಂಗಿನ ಎಣ್ಣೆ ತಾ" ಎಂದು ಪಾತ್ರೆಯನ್ನು ಹಣವನ್ನೂ ಕೊಟ್ಟಳು. ದೂಮ ಅಂಗಡಿಗೆ ಹೋಗಿ ಎರಡು ಕುಡ್ತೆ ಎಣ್ಣೆ ಕೇಳಿದ. ವ್ಯಾಪಾರಿ ಎಣ್ಣೆ ಅಳತೆ ಮಾಡಿ ಪಾತ್ರೆಗೆ ಹಾಕಿದ. ಪಾತ್ರೆ ತುಂಬಿದ ಮೇಲೆ ಅಳತೆ ಮಾಡಿದ ಪಾತ್ರೆಯಲ್ಲಿ ಸ್ವಲ್ಪ ಎಣ್ಣೆ ಉಳಿಯಿತು. ವ್ಯಾಪಾರಿ "ನೀನು ಸಣ್ಣ ಪಾತ್ರೆ ತಂದಿದ್ದಿಯಾ. ಎಣ್ಣೆ ಸ್ವಲ್ಪ ಉಳಿಯಿತಲ್ಲಾ ಏನು ಮಾಡುವುದು?" ಎಂದು ಕೇಳಿದ. ಅದಕ್ಕೆ ದೂಮ "ನೋಡಿ ಈ ಪಾತ್ರೆಯ ತಳಭಾಗದಲ್ಲಿ ಹೊರಗಿನಿಂದ ಸ್ವಲ್ಪ ಗುಂಡಿ ಇದೆ. ಆ ಗುಂಡಿಯಲ್ಲಿ ಹಾಕಿ" ಎಂದು ಎಣ್ಣೆಯ ಪಾತ್ರೆಯನ್ನು ಕವುಚಿ ಹಿಡಿದ. ಪಾತ್ರೆಗೆ ತುಂಬಿದ ಎಣ್ಣೆ ಎಲ್ಲಾ ಚೆಲ್ಲಿ ಹೋಯಿತು. ಅಲ್ಲಿದ್ದವರೆಲ್ಲಾ ಚೆನ್ನಾಗಿ ನಗಾಡಿದರು. ವ್ಯಾಪಾರಿ ಉಳಿದ ಎಣ್ಣೆಯನ್ನು ಪಾತ್ರೆಯ ಅಡಿ ತಗ್ಗಿರುವ ಭಾಗಕ್ಕೆ ಹೊಯಿದ. ದೂಮ ಬಹಳ ಜಾಗ್ರತೆಯಿಂದ ಎಣ್ಣೆ ಪಾತ್ರೆಯನ್ನು ಕವುಚಿ ಹಿಡಿದುಕೊಂಡು ಮನೆಗೆ ಹೋದ, ದಣಿಗಳ ಹೆಂಡತಿ ಪಾತ್ರೆ ಕವುಚಿ ಹಿಡಿದುಕೊಂಡು ಬಂದ ದೂಮನನ್ನು ನೋಡಿ "ದೂಮ ಉಳಿದ ಎಣ್ಣೆ ಎಲ್ಲಾ ಎಲ್ಲಿ?" ಎಂದು ಕೇಳಿದಳು. ಆಗ ದೂಮ "ಹೋ ಹೆಚ್ಚಿನ ಎಣ್ಣೆ ಎಲ್ಲಾ ಪಾತ್ರೆಯ ಒಳಗಿದೆ" ಎಂದು ಪಾತ್ರೆಯನ್ನು ಮತ್ತೆ ನೆಟ್ಟಗೆ

ಹಿಡಿದ. ಆಗ ಅಡಿಭಾಗದಲ್ಲಿದ್ದ ಸ್ವಲ್ಪ ಎಣ್ಣೆಯೂ ನೆಲಕ್ಕೆ ಚೆಲ್ಲಿ ಹೋಯಿತು. ದಣಿಯ ಹೆಂಡತಿಗೆ ಕೋಪ ಬಂತು "ನೀನು ಕೆಲಸಕ್ಕೆ ಬರಬೇಡ ಹೋಗು ನೀನು" ಎಂದು ಆತನನ್ನು ಮನೆಗೆ ಕಳುಹಿಸಿಬಿಟ್ಟಳು.

ದೂಮ ಮರುದಿನ ಇನ್ನೊಂದು ಮನೆಗೆ ಕೆಲಸ ಕೇಳಲು ಹೋದ. ಆ ಮನೆಯವರು ದಿನಕ್ಕೆ ಸಂಬಳ ಎಷ್ಟು ಕೊಡಬೇಕೆಂದು ಕೇಳಿದರು. "ನೀವು ಕೊಟ್ಟಷ್ಟು ಸಂಬಳ ಸಾಕು" ಎಂದ. "ಆಗಲಿ" ಎಂದು ಒಪ್ಪಿಕೊಂಡ. ಮನೆಯ ಯಜಮಾನ ಅಷ್ಟರಲ್ಲಿ ಆತನ ಹೆಂಡತಿ "ಇವತ್ತು ಯಾರೂ ಸ್ನಾನ ಮಾಡಲೇ ಇಲ್ಲ. ಹಂಡೆಗೆ ನೀರು ತುಂಬಿಸಿ ಬಚ್ಚಲಿಗೆ ಬೆಂಕಿ ಹಾಕಿ ಬಾ" ಎಂದು ಒಂದು ಕೊಡಪಾನವನ್ನೂ ಉರಿಸಿದ ದೀಪವನ್ನೂ ಅವನ ಕೈಯಲ್ಲಿ ಕೊಟ್ಟಳು. "ಆಯಿತಮ್ಮಾ" ಎಂದು ಹೇಳಿ ದೂಮ ಬಚ್ಚಲಿಗೆ ಹೋದ. ಬಾವಿಯಿಂದ ನೀರು ತಂದು ಹಂಡೆಗೆ ತುಂಬಿಸಿದ. ನಂತರ "ನನ್ನ ಒಂದು ಕೆಲಸವಾಯಿತು. ಬಚ್ಚಲಿಗೆ ಬೆಂಕಿ ಹಾಕುವುದು ಇನ್ನೊಂದು ಕೆಲಸ" ಎಂದು ಹೇಳಿಕೊಂಡು ಬಚ್ಚಲಿನ ಛಾವಣಿಗೆ ದೀಪ ಹಿಡಿದು ಬೆಂಕಿ ಉರಿಸಿದ. ಅದು ಹುಲ್ಲಿನ ಛಾವಣಿಯ ಬಚ್ಚಲು. ಬಚ್ಚಲಿನ ಮಾಡಿಗೆ ಬೆಂಕಿ ಹಚ್ಚಿಕೊಂಡು ಜೋರಾಗಿ ಉರಿಯತೊಡಗಿತು. ನೆರೆಕರೆಯವರೆಲ್ಲಾ ಓಡಿ ಬಂದು ಬೆಂಕಿ ನಂದಿಸಿದರು. ದೂಮನನ್ನು ಚೆನ್ನಾಗಿ ಬೈದು ಮನೆಗೆ ಕಳುಹಿಸಿಕೊಟ್ಟರು.

ದೂಮ ಎಲ್ಲಾದರೂ ಕೆಲಸ ಮಾಡಲೇಬೇಕೆಂದು ಹಠ ಹಿಡಿದಿದ್ದ. ಮಾರನೆ ದಿನ ಮನೆಯಿಂದ ಹೊರಟು ಸ್ವಲ್ಪ ದೂರದ ಹಳ್ಳಿಯ ಮನೆಯೊಂದಕ್ಕೆ ಹೋದ. ಅಲ್ಲಿ ಯಜಮಾನನೊಡನೆ ಕೆಲಸವೇನಾದರೂ ಇದ್ದರೆ ಕೊಡಿ, ನೀವು ಕೊಟ್ಟ ಸಂಬಳ ಸಾಕು ಎಂದ. ಯಜಮಾನನಿಗೆ ಸಂತೋಷವಾಯಿತು. ಆ ಮನೆಯಲ್ಲಿ ಯಜಮಾನ, ಆತನ ತಾಯಿ ಮತ್ತು ಹೆಂಡತಿ ಮಾತ್ರ ಇದ್ದರು. ತಾಯಿ ಮುದುಕಿ ಪಾರ್ಶ್ವವಾಯು ಪೀಡಿತಳಾಗಿ ಏಳಲಾರದೆ ಪ್ರಾಣ ಹೋಗುವ ಸ್ಥಿತಿಯಲ್ಲಿ ಮಲಗಿದ್ದಳು. ಗಂಡ ಹೆಂಡತಿಗೆ ತೀರಾ ಹತ್ತಿರದ ಸಂಬಂಧಿಕರೊಬ್ಬರ ಮನೆಗೆ ಮದುವೆಗೆ ಹೋಗಲಿಕ್ಕಿತ್ತು. ದೂಮ ಬಂದದ್ದು ಅವರಿಗೆ ತುಂಬಾ ಖುಷಿ ಕೊಟ್ಟಿತು. "ದೂಮ ಜಗಲಿಯಲ್ಲಿ ನನ್ನ ತಾಯಿ ಮಲಗಿದ್ದಾರೆ. ನಾವು ಮದುವೆಗೆ ಹೋಗಿ ಬರುತ್ತೇನೆ ನಾವು ಬರುವವರೆಗೆ ನೀನು ತಾಯಿಯ ಬಳಿ ಕುಳಿತಿರಬೇಕು. ತಾಯಿಯ ಮೈಮೇಲೆ ನೊಣಗಳನ್ನು ಕುಳಿತುಕೊಳ್ಳಲು ಬಿಡಬಾರದು" ಎಂದು ಹೇಳಿ ಹೊರಟರು. "ಆಯಿತು ಧಣಿ" ಎಂದೊಪ್ಪಿಕೊಂಡು ಮಲಗಿದ್ದ ಅಜ್ಜಿಯ ಬಳಿ ದೂಮ ಕುಳಿತುಕೊಂಡ. ಆ ಮನೆಯಲ್ಲಿ ನೊಣಗಳ ಕಾಟ ಜೋರಾಗಿತ್ತು. ನೊಣಗಳ ಹಿಂಡೇ ಬಂದು ಅಜ್ಜಿಯ ಮೈಮೇಲೆ ಕುಳಿತುಕೊಳ್ಳಲು ಪ್ರಾರಂಭಿಸಿದವು. ಅವು ಕುಳಿತುಕೊಳ್ಳುತ್ತಿದ್ದಂತೆಯೇ ದೂಮ "ಕುಳಿತುಕೊಳ್ಳಬೇಡಿ, ಅಜ್ಜಿಯ ಮೈಮೇಲೆ ಕುಳಿತುಕೊಳ್ಳಬೇಡಿ, ನೀವು ಕುಳಿತುಕೊಂಡರೆ ನಿಮ್ಮನ್ನು ಹೊಡೆದು ಸಾಯಿಸುತ್ತೇನೆ" ಎನ್ನತೊಡಗಿದ. ಆದರೆ ಈ ನೊಣಗಳು ದೂಮನ ಮಾತು ಕೇಳದೆ

ಇದ್ದಲ್ಲೆಲ್ಲಾ ಬಂದು ಕೂತುಕೊಳ್ಳತೊಡಗಿದವು. ಅಷ್ಟರಲ್ಲಿ ಆತನಿಗೆ ಗೋಡೆಗೆ ಒರಗಿಸಿಟ್ಟ ಒನಕೆ ಕಂಡಿತು. ಆತ ಒನಕೆಯನ್ನೆತ್ತಿಕೊಂಡು ಬಂದು ನೊಣಗಳು ಕುಳಿತ ಜಾಗ ನೋಡಿ ಬಲವಾಗಿ ಹೊಡೆದ. ಅಜ್ಜಿಯ ಅರ್ಧಜೀವ ಹೋಯಿತು. ಸ್ವಲ್ಪ ಹೊತ್ತಾಗುವಾಗ ಒಮ್ಮೆ ಹಾರಿಹೋದ ನೊಣಗಳು ಮತ್ತೆ ಅಜ್ಜಿಯ ಮೈಮೇಲೆ ಮತ್ತೊಂದು ಕಡೆ ಬಂದು ಕುಳಿತವು. ಅದನ್ನು ಕಂಡ ದೂಮ ಇನ್ನೊಮ್ಮೆ ಬಲವಾಗಿ ಹೊಡೆದ. ಅಜ್ಜಿಯ ಜೀವ ಹೋಯಿತು. "ಈ ನೊಣಗಳು ಹೇಳಿದಂತೆ ಕೇಳುವುದಿಲ್ಲ ಹೊಡೆದಷ್ಟು ಮತ್ತೂ ಕೂತುಕೊಳ್ಳುತ್ತವೆ. ಬೇಕಾದಂತೆ ಮಾಡಲಿ, ನನ್ನಿಂದ ಈ ಕೆಲಸವಾಗದು" ಎಂದು ಸುಮ್ಮನಿದ್ದುಬಿಟ್ಟ. ಮದುವೆಗೆ ಹೋದ ಗಂಡ ಹೆಂಡತಿ ಬಂದರು. ಬಂದು ನೋಡುವಾಗ ಅಜ್ಜಿಯ ಪ್ರಾಣ ಹೋಗಿತ್ತು. ಅಜ್ಜಿಯನ್ನು ತಾನೇ ಒನಕೆಯಿಂದ ಹೊಡೆದುದಾಗಿ ದೂಮ ಒಪ್ಪಿಕೊಂಡ. ಇನ್ನು ಗಲಾಟೆ ಮಾಡಿ ಪ್ರಯೋಜನವಿಲ್ಲವೆಂದು ದೂಮನನ್ನು ಕಳುಹಿಸಿಕೊಟ್ಟರು. ಇನ್ನು ಮಾತ್ರ ಈ ಕಡೆ ಬರಬೇಡವೆಂದು ಗದರಿಸಿ ಕಳುಹಿಸಿದರು.

ಮರುದಿನ ಬೆಳಗ್ಗೆ ಎದ್ದು ದೂಮ ಕೆಲಸಕ್ಕೆ ಹೊರಟ. ನೆರೆಬೀದಿಗೆ ಬಂದ. ಪೇಟೆಯಲ್ಲಿ ಏನಾದರೂ ಕೂಲಿ ಕೆಲಸ ಸಿಗಬಹುದೆಂದು ಆತ ಆಲೋಚನೆ ಮಾಡಿದ್ದ. ಪೇಟೆಗೆ ಮುಟ್ಟಿದಾಗ ಆತನಿಗೊಬ್ಬ ಕುದುರೆಸವಾರ ಎದುರಾದ ದೂಮನನ್ನು ನೋಡಿ ಕುದುರೆ ನಿಲ್ಲಿಸಿ "ನೋಡಪ್ಪಾ ಆ ಅಂಗಡಿಯಲ್ಲಿ ನನ್ನದೊಂದು ಹಾಲಿನ ಪಾತ್ರೆ ಇದೆ. ಆ ಹಾಲಿನ ಪಾತ್ರೆಯನ್ನು ಹೊತ್ತುಕೊಂಡು ನನ್ನ ಮನೆಗೆ ಮುಟ್ಟಿಸಬೇಕು. ನಾನು ಕುದುರೆ ಮೇಲೆ ಹೋಗುವುದರಿಂದ ಹಾಲಿನ ಪಾತ್ರೆ ಕೊಂಡುಹೋಗಲು ಆಗುವುದಿಲ್ಲ" ಎಂದ. ದೂಮ ಅದಕ್ಕೆ ಒಪ್ಪಿಕೊಂಡ. ಕುದುರೆಸವಾರ ತನ್ನ ಮನೆಯ ದಾರಿ ಹೇಳಿ ಅಂಗಡಿಯಿಂದ ಹಾಲಿನ ಪಾತ್ರೆ ತೆಗೆದುಕೊಟ್ಟ. ಕುದುರೆಸವಾರ ಹೊರಡುವಾಗ "ನೀವು ನನಗೆಷ್ಟು ಸಂಬಳ ಕೊಡುತ್ತೀರಿ?" ಎಂದು ದೂಮ ಕೇಳಿದ. "ನಾನು ಒಂದು ರೂಪಾಯಿ ಕೊಡುತ್ತೇನೆ" ಎಂದ ಕುದುರೆಸವಾರ. ತಕ್ಷಣ ದೂಮ "ಈ ಕುದ್ರೆಗೆ ಎಷ್ಟು ಬೆಲೆ?" ಎಂದು ಕೇಳಿದ. ಕುದುರೆಸವಾರ ನಗಾಡಿಕೊಂಡು ನೂರು ರೂಪಾಯಿ ಎಂದ.

ಹಾಲಿನ ಪಾತ್ರೆ ತಲೆ ಮೇಲೆ ಹೊತ್ತುಕೊಂಡು ದೂಮ ಕುದುರೆಸವಾರನ ಮನೆಯ ದಾರಿ ಹಿಡಿದ. ದಾರಿ ನಡೆಯುತ್ತ ಹೋಗುವಾಗ ದೂಮನಿಗೆ ಕುದುರೆಸವಾರನಂತೆ ತನಗೂ ಕುದುರೆ ತೆಗೆದುಕೊಂಡು ಸವಾರಿ ಮಾಡಬೇಕೆಂಬ ಮನಸ್ಸಾಯಿತು. ತನಗೆ ಸಿಗುವುದು ಒಂದು ರೂಪಾಯಿ. ಅದನ್ನು ನೂರು ರೂಪಾಯಿ ಹೇಗೆ ಮಾಡುವುದೆಂದು ಆಲೋಚಿಸಿದ. "ಒಂದು ರೂಪಾಯಿಗೆ ಎರಡು ಮೊಟ್ಟೆ ಸಿಗುತ್ತದೆ. ಮೊಟ್ಟೆ ಕೊಂಡುಕೊಂಡು ಮರಿಮಾಡಿ ಬೆಳೆಸಿದರೆ ಒಂದು ಹುಂಜ ಇನ್ನೊಂದು ಹೇಂಟೆ ಕೋಳಿಗಳಾಗುತ್ತವೆ. ಕೆಲವು ದಿವಸದಲ್ಲಿ ಹೇಂಟೆ ಮೊಟ್ಟೆ ಇಡಲು ಪ್ರಾರಂಭಿಸುತ್ತದೆ. ಸುಮಾರು ೨೦ ಮೊಟ್ಟೆಗಳನ್ನಿಡಬಹುದು. ಅವುಗಳನ್ನು ಮರಿಮಾಡಿ ಸಾಕಿದರೆ ೨೦

ಕೋಳಿಗಳಾಗುತ್ತವೆ. ಒಂದೊಂದು ಕೋಳಿಯನ್ನು ಐದೈದು ರೂಪಾಯಿಗೆ ಮಾರಿದ್ರೆ, ನೂರು ರೂಪಾಯಿ ಸಿಗುತ್ತದೆ. ಆಗ ಒಂದು ಕುದ್ರೆ ತೆಗೆದುಕೊಳ್ಳಬಹುದು. ಅದರ ಮೇಲೆ ಕುಳಿತುಕೊಳ್ಳಬೇಕು. ಲಗಾಮು ಹಿಡಿದು ಹೀಗೆ ಓಡಿಸಬೇಕು" ಎಂದಾಲೋಚಿಸಿ ಕೊಂಡು ಎರಡೂ ಕೈಗಳನ್ನು ಮುಂದೆ ಚಾಚಿ ದೂಮ ರಸ್ತೆಯಲ್ಲಿ ಓಡಲು ಪ್ರಾರಂಭಿಸಿದ. ಆತನಿಗೆ ತಲೆ ಮೇಲಿದ್ದ ಹಾಲಿನ ಪಾತ್ರೆ ಮರೆತುಹೋಗಿತ್ತು. ಕೈಬಿಟ್ಟು ಓಡುವಾಗ ಪಾತ್ರೆ ಕೆಳಗೆ ಬಿದ್ದು ಹಾಲೆಲ್ಲ ಚೆಲ್ಲಿಹೋಯಿತು. ಬರಿ ಪಾತ್ರೆಯನ್ನು ಹೊತ್ತುಕೊಂಡು ದೂಮ ಕುದ್ರೆಸವಾರನ ಮನೆಗೆ ಹೋದ. ಹಾಲಿನ ಪಾತ್ರೆ ತಲೆಯಿಂದ ಕೆಳಗಿಟ್ಟಾಗ ಕುದ್ರೆಸವಾರ "ಹಾಲೆಲ್ಲಿ ಹೋಯಿತು?" ಎಂದು ವಿಚಾರಿಸಿದ. ದೂಮ ನಡೆದ ಸಂಗತಿ ಹೇಳಿ "ನನ್ನ ಒಂದು ರೂಪಾಯಿ ಕೊಟ್ಟುಬಿಡಿ. ನನಗೆ ಬೇಗ ಹೋಗಬೇಕು" ಎಂದ ಕುದ್ರೆಸವಾರನಿಗೆ ಸಿಟ್ಟು ಬಂತು. ದೂಮನ ಕೆನ್ನೆಗೆರಡು ಬಾರಿಸಿ 'ನಡಿ ಹೊರಗೆ' ಎಂದು ಹೇಳಿ ಆತನ ಕುತ್ತಿಗೆಗೆ ಕೈ ಹಾಕಿ ಮನೆಯಿಂದ ಹೊರಗೆ ದೂಡಿಬಿಟ್ಟ. ಪೆಟ್ಟು ತಿಂದು ಕೊಂಡು ದೂಮ ಮನೆ ಸೇರಿದ.

ದೂಮನ ಮನೆಯಿಂದ ಸ್ವಲ್ಪ ದೂರದಲ್ಲಿ ಒಬ್ಬ ಧನಿಕ ಕೃಷಿಕನಿದ್ದನು. ಅವನು ತುಂಬಾ ಸಾಧು ಸ್ವಭಾವದವನು. ಅವನಿಗೆ ದೂಮನ ಹೆಡ್ಡುತನದ ಕತೆಯನ್ನೆಲ್ಲ ಯಾರೋ ಹೇಳಿದರು. ಅವನಿಗೆ ದೂಮನ ಕತೆ ಕೇಳಿ ಅವನ ಮೇಲೆ ಕನಿಕರ ಬಂತು. ಹೇಗಾದರೂ ಮಾಡಿ ಆತನಿಗೆ ಕೆಲಸ ಕಲಿಸಿ ಆತನನ್ನೆ ತನ್ನ ಮನೆಯಲ್ಲಿಟ್ಟು ಕೊಳ್ಳಬೇಕೆಂದು ಭಾವಿಸಿದನು. ಒಂದು ದಿನ ದೂಮನ ಮನೆಗೆ ಜನ ಕಳುಹಿಸಿ ಅವನನ್ನು ಬರಮಾಡಿಕೊಂಡ. ದೂಮ ಬಂದೊಡನೆ "ನೀನು ನಮ್ಮ ಮನೆ ಕೆಲಸಕ್ಕೆ ಬರುತ್ತಿಯಾ?" ಎಂದು ಕೇಳಿದ, ದೂಮ ಒಪ್ಪಿಕೊಂಡ.

"ಹಾಗಾದರೆ ನೀನಿವತ್ತು ಕಾಡಿನಿಂದ ಹಟ್ಟಿಗೆ ಸೊಪ್ಪು ತರಲು ಹೋಗು. ಒಂದು ಕಟ್ಟ (ಹೊರೆ) ಸೊಪ್ಪು ತಂದು ಹಾಕು. ಆ ಮೇಲೆ ಬೇರೆ ಕೆಲಸ ಹೇಳುತ್ತೇನೆ ಎಂದ ಜಮೀನ್ದಾರ. ದೂಮನಿಗೆ ಸೊಪ್ಪು ತರುವುದು ಹೇಗೆಂದು ಗೊತ್ತಿಲ್ಲ. ಹೋಗುವಾಗ "ಯಾವ ಜಾತಿಯ ಸೊಪ್ಪು ತರಬೇಕೆಂದು" ದಣಿಯೊಡನೆ ಕೇಳಿದ. ಅದಕ್ಕೆ ಯಜಮಾನ "ಯಾವ ಜಾತಿಯ ಸೊಪ್ಪೂ ಆಗಬಹುದು" ಎಂದ. ದೂಮ ಒಮ್ಮೊಮ್ಮೆ ಅಂಗಡಿಗೆ ಹೋಗಿ ಅಜ್ಜಿಗೆ ವೀಳ್ಯದೆಲೆ ತಂದು ಕೊಡುತ್ತಿದ್ದ. ಆತನಿಗೆ ಬೇರೆ ಸೊಪ್ಪು ತಂದು ಗೊತ್ತಿಲ್ಲ. ಆತ ಮನೆಯ ಹಿಂಬದಿಗೆ ಹೋದ ಅಲ್ಲಿ ಬೆಳೆದ ಪೊದೆಗಳಿಂದ ಒಂದೊಂದು ಎಲೆಗಳನ್ನು ಕಿತ್ತು ಒಂದು ಸೂಡಿ ಕಟ್ಟಿ ತಂದು ಹಟ್ಟಿಗೆ ಎಸೆದು ದಣಿಯ ಎದುರು ಬಂದು ನಿಂತ. ಅಷ್ಟು ಬೇಗ ಬಂದ ದೂಮನನ್ನು ನೋಡಿ ಜಮೀನ್ದಾರನಿಗೆ ಆಶ್ಚರ್ಯ ವಾಯಿತು. "ದೂಮಾ, ಹಟ್ಟಿಗೆ ಸೊಪ್ಪು ಹಾಕಿದೆಯಾ?" ಎಂದು ಕೇಳಿದ. "ಹೌದು ದಣಿಗಳೇ" ಎಂದ ದೂಮ. "ನೀನು ಬಹಳ ಹುಷಾರು ಇಷ್ಟು ಬೇಗ ಒಂದು ಹೊರೆ ಸೊಪ್ಪು ತಂದೆಯೆಲಾ! ಸೊಪ್ಪು ಹಾಕುವಾಗ ಎತ್ತಿ ಹಾಕಬೇಕು. ಆಗ ನನಗೆ ನೀನು

ಬಂದದ್ದು ಗೊತ್ತಾಗುತ್ತದೆ. ಇಲ್ಲದಿದ್ದರೆ ಹೇಗೆ ತಿಳಿಯುತ್ತದೆ" ಎಂದು ಸಮಾಧಾನದಿಂದ ನುಡಿದ. "ಆಗಲಿ ದಣಿಗಳೇ ಇನ್ನು ಮುಂದೆ ಎತ್ತಿ ಹಾಕುತ್ತೇನೆ" ಎಂದು ದೂಮ ಒಪ್ಪಿಕೊಂಡ.

"ನಾಳೆ ನಮ್ಮ ಮನೆಯಲ್ಲೊಂದು ಸಮಾರಾಧನೆ ಇದೆ. ಪಕ್ಕದ ಮನೆ ರಾಮಭಟ್ರು ಮಜ್ಜಿಗೆ ಕೊಡುತ್ತೇನೆ ಎಂದಿದ್ದಾರೆ. ನೀನು ಹೋಗಿ ಮಜ್ಜಿಗೆ ಹೊತ್ತುಕೊಂಡು ಬಾ" ಎಂದು ದಣಿ ದೂಮನನ್ನು ರಾಮಭಟ್ಟರ ಮನೆಗೆ ಕಳುಹಿಸಿದ. ರಾಮಭಟ್ಟರ ಮನೆಗೆ ಹೋಗಿ ದೂಮ ಮಜ್ಜಿಗೆ ಕೇಳಿದಾಗ ಅವರ ಒಂದು ದೊಡ್ಡ ಮಣ್ಣಿನ ಮಡಕೆಯಲ್ಲಿ ಮಜ್ಜಿಗೆ ತುಂಬಿಸಿಕೊಟ್ರು. ಅದನ್ನು ತಲೆ ಮೇಲೆ ಹೊತ್ತುಕೊಂಡು ದೂಮ ದಣಿಗಳ ಮನೆಗೆ ಬಂದ. ಮನೆಯ ಮೆಟ್ಟಲೇರಿ ಚಾವಡಿಗೆ ಬಂದವನೆ ಮಡಕೆಯನ್ನು ಎತ್ತಿ ಹಾಕಿದ. ಮಡಕೆ ಒಡೆದು ಮಜ್ಜಿಗೆ ಎಲ್ಲಾ ಚೆಲ್ಲಿ ಚಾವಡಿ ತುಂಬಿತು. ಒಳಗಿನಿಂದ ಹೆಂಗಸರೆಲ್ಲ ಹೊರಗೋಡಿ ಬಂದರು. ಶಬ್ದ ಕೇಳಿ ದಣಿಗಳೂ ಬಂದು ನೋಡಿದ್ರು 'ದೂಮ ನೀನ್ಯಾಕೆ ಹೀಗೆ ಮಾಡಿದೆ? ಎಂದು ಕೇಳಿದರು. "ನೀವು ಸೊಪ್ಪು ತಂದು ಹಾಕುವಾಗ ಎತ್ತರದಿಂದ ಹಾಕಬೇಕು, ನನಗೆ ಶಬ್ದ ಕೇಳಬೇಕೆಂದು ಹೇಳಿದ್ದೀರಲ್ಲ ಸ್ವಾಮಿ. ಅದಕ್ಕೆ ನಾನು ಹೀಗೆ ಮಾಡಿದೆ ಎಂದ, ಹೆಂಗಸರೆಲ್ಲ ದೂಮನನ್ನು ಬೈದು ಚಾವಡಿ ಸ್ವಚ್ಛ ಮಾಡಿದ್ರು, ದಣಿ ಮಾತ್ರ ಏನೂ ಮಾತಾಡಲಿಲ್ಲ, "ಹೋಗಲಿ ಮಣ್ಣಿನ ಮಡಕೆಯಲ್ಲಾ; ಹೊಸತೊಂದು ತೆಗೆದುಕೊಟ್ಟರಾಯಿತು" ಎಂದು ಸುಮ್ಮನಾದ.

ಮರುದಿನ ದೂಮ ಕೆಲಸಕ್ಕೆ ಬಂದ. ದಣಿಗಳು ದೂಮನೊಡನೆ "ನಿನಗೆ ಗದ್ದೆ ಉಳಲು ಗೊತ್ತಿದೆಯೇ?" ಎಂದು ಕೇಳಿದರು. "ಗೊತ್ತಿದೆ ಸ್ವಾಮಿ ಎತ್ತುಗಳನ್ನು ಕಟ್ಟಿಕೊಟ್ರೆ ಉಳುತ್ತೇನೆ" ಎಂದ. ದಣಿ ಆಳನ್ನು ಕರೆದು "ಎತ್ತುಗಳನ್ನು ಕಟ್ಟಿಕೊಟ್ಟು ಬಾ" ಎಂದರು, ಆಳು ಹಾಗೆ ಮಾಡಿದ. "ನಾನು ಯಾವ ಗದ್ದೆ ಉಳಬೇಕು?" ಎಂದು ದೂಮ ಕೇಳಿದ. ಅಲ್ಲಿ ಗದ್ದೆಗಳಿಗೆಲ್ಲಾ ಹಟ್ಟಿಗೊಬ್ಬರ ಹಾಕಿಟ್ಟಿದ್ದರು. ಗೊಬ್ಬರದ ಹುಳುಗಳನ್ನು ತಿನ್ನಲು ಒಂದು ಗದ್ದೆಯಲ್ಲಿ ಕಾಗೆಗಳು ಕುಳಿತಿದ್ದವು ಆ ಕಾಗೆ ಕುಳಿತ ಗದ್ದೆಯನ್ನು ಉಳು ಎಂದ. ಆಳು ಆ ಗದ್ದೆ ಉಳಲು ದೂಮ ಪ್ರಾರಂಭಿಸಿದ. ಎತ್ತುಗಳಿಗೆ ಅಭ್ಯಾಸ ಇದ್ದುದರಿಂದ ಅವು ತಮ್ಮಷ್ಟಕ್ಕೆ ಕ್ರಮವಾಗಿ ಗದ್ದೆಯಲ್ಲಿ ಸುತ್ತು ತೆಗೆಯುತ್ತಿದ್ದವು. ದೂಮ ಅವುಗಳ ಹಿಂದೆಯೇ ನೇಗಿಲು ಒತ್ತಿಕೊಂಡು ಮುಂದುವರಿಯುತ್ತಿದ್ದ. ಎತ್ತುಗಳು ಕಾಗೆಗಳು ಕುಳಿತಲ್ಲಿಗೆ ಬಂದಾಗ ಕಾಗೆಗಳೆಲ್ಲ ಹಾರಿ ಹೋಗಿ ಮೇಲಿನ ಗದ್ದೆಯಲ್ಲಿ ಕುಳಿತುಕೊಂಡವು. ಕಾಗೆ ಕುಳಿತ ಗದ್ದೆ ಹೂಡಲು ಹೇಳಿದ್ದಾರೆ. ಈಗ ಕಾಗೆಗಳೆಲ್ಲ ಮೇಲಿನ ಗದ್ದೆಯಲ್ಲಿ ಕುಳಿತಿದ್ದಾವೆ. ಇನ್ನು ಮುಂದೆ ಮೇಲಿನ ಗದ್ದೆಯನ್ನು ಹೂಡುವುದೇ ಸರಿ" ಎಂದು ಎತ್ತುಗಳನ್ನು ದೂಮ ಮೇಲಿನ ಗದ್ದೆಗಟ್ಟಿದ. ಆ ಗದ್ದೆಗೆ ಎತ್ತುಗಳನ್ನಟ್ಟಿ ಉಳುಮೆ ಮಾಡಿ ಒಂದೆರಡು ಸುತ್ತು ತೆಗೆದಾಗ ಕಾಗೆಗಳೆಲ್ಲ ಅಲ್ಲಿಂದ ಹಾರಿ ಪಕ್ಕದಲ್ಲಿದ್ದ ಒಂದು ಮರದ ಮೇಲೆ ಹೋಗಿ ಕುಳಿತುಕೊಂಡವು. ದೂಮನಿಗೆ ಮುಂದೇನು

ಮಾಡುವುದೆಂದು ತೋಚಲಿಲ್ಲ. ತುಂಬಾ ಹೊತ್ತು ಕಾಗೆಗಳು ಮತ್ತೆ ಬಂದು ಗದ್ದೆಯಲ್ಲಿ ಕುಳಿತುಕೊಳ್ಳುತ್ತವೋ ಎಂದು ದೂಮ ಕಾದು ನೋಡಿದ. ಆದರೆ ಕಾಗೆಗಳು ಮತ್ತೆ ಗದ್ದೆಗಳಿಗೆ ಬರಲಿಲ್ಲ. ಆ ಮರದಿಂದ ಅವು ದೂರ ಹಾರಿ ಹೋದುವು. ಕಾಗೆಗಳೆಲ್ಲ ಹಾರಿ ಹೋದ ಮೇಲೆ ದೂಮ "ಇನ್ನು ಗದ್ದೆ ಉಳುಮೆ ಸಾಗದು" ಎಂದೆಣಿಸಿಕೊಂಡ. ಎತ್ತುಗಳ ಹೆಗಲಿಂದ ನೊಗ, ನೇಗಿಲು ಬಿಚ್ಚಿ ಅಟ್ಟಿಕೊಂಡು ಗುಡ್ಡೆಗೆ ಹೋಗಲು ಬಿಟ್ಟ, ನೊಗ ನೇಗಿಲನ್ನು ತಂದು ಹಟ್ಟಿಯ ಬದಿಯಲ್ಲಿಟ್ಟು ಮನೆಗೆ ಬಂದ. ದಣಿಗಳಿಗೆ ದೂಮನನ್ನು ನೋಡಿ ಆಶ್ಚರ್ಯವಾಯಿತು. "ಏನು ದೂಮ ಗದ್ದೆ ಎಲ್ಲಾ ಉತ್ತು ಆಯ್ತಾ?"ಎಂದು ಕೇಳಿದ. ಅದಕ್ಕೆ ದೂಮ "ಇಲ್ಲ ಸ್ವಾಮಿ, ನಾಲ್ಕು ಸಾಲು ಉಳುವಾಗ ಕಾಗೆಗಳೆಲ್ಲ ಹಾರಿ ಹೋದವು" ಎಂದ. ನಡೆದ ಸಂಗತಿ ಕೇಳಿ ದಣಿ ದೂಮನ ಹೆಡ್ಡತನಕ್ಕೆ ಚೆನ್ನಾಗಿ ನೆಗಾಡಿದರು. "ಹೋಗು ಊಟ ಮಾಡು. ಮಧ್ಯಾಹ್ನ ಮೇಲೆ ಬೇರೆ ಕೆಲಸ ಕೊಡುತ್ತೇನೆ" ಎಂದ.

ಊಟವಾದ ಮೇಲೆ ದಣಿ ದೂಮನನ್ನು ಕರೆದು "ದೂಮಾ ಮಳೆಗಾಲದಲ್ಲಿ ನಮ್ಮ ಅಡಿಕೆ ತೋಟದ ತುಂಬಾ ಕಳೆ ಗಿಡಗಳು ಬೆಳೆದಿವೆ. ನೀನು ಹೋಗಿ ಅವುಗಳನ್ನೆಲ್ಲ ಕಡಿದು ತೆಗೆದು ಸ್ವಚ್ಛ ಮಾಡಬೇಕು. ಕತ್ತಿಯಲ್ಲಿ ಕಡಿಯುವುದನ್ನೆಲ್ಲ ಕತ್ತಿಯಲ್ಲಿ ಕಡಿ, ಕೊಡಲಿಯಲ್ಲಿ ಕಡಿಯುವಂಥದ್ದನ್ನು ಕೊಡಲಿಯಲ್ಲಿ ಕಡಿ" ಎಂದು ಹೇಳಿ ಒಳಗಿನಿಂದ ಕತ್ತಿ ಮತ್ತು ಕೊಡಲಿ ತಂದುಕೊಟ್ಟು ದೂರದಲ್ಲಿದ್ದ ತೋಟವನ್ನು ತೋರಿಸಿ ತಾವು ವಿಶ್ರಾಂತಿ ಪಡೆಯಲು ಹೋದ.

ದೂಮ ತೋಟಕ್ಕೆ ಹೋದ. ಅದು ಅಡಿಕೆ ತೋಟ. ಎಡೆ ಎಡೆಯಲ್ಲಿ ಬಾಳೆ ಗಿಡಗಳನ್ನು ನೆಟ್ಟಿದ್ದಾರೆ. ಮೊದಲಿಗೆ ಕತ್ತಿಯಲ್ಲಿ ಕಡಿಯುವುದನ್ನು ಕಡಿಯುವ ಎಂದು ಆಲೋಚನೆ ಮಾಡಿದ ದೂಮ. ಬೆಳೆದ ಹುಲ್ಲು ಪೊದೆಗಳನ್ನೆಲ್ಲ ಕತ್ತರಿಸಿದ. ಜೊತೆಗೆ ಬಾಳೆ ಗಿಡಗಳನ್ನು ಕಡಿದು ಹಾಕಿ ತೋಟ ಸ್ವಚ್ಛ ಮಾಡಿದ. ಇನ್ನು ಮುಂದೆ ಕೊಡಲಿಯಲ್ಲಿ ಕಡಿಯುವಂಥದ್ದನ್ನು ಕಡಿಯುವ ಎಂದು ಅಡಿಕೆ ಮರ ಕಡಿಯಲು ಪ್ರಾರಂಭಿಸಿದ. ಒಂದು ಮರ ಕಡಿದು ಹಾಕುವಾಗ ದಣಿ ವಿಶ್ರಾಂತಿಯಿಂದೆದ್ದು ದೂಮನನ್ನು ನೋಡಲು ತೋಟಕ್ಕೆ ಬಂದ. ನೋಡುವಾಗ ತೋಟವೆಲ್ಲ ಸ್ವಚ್ಛ. ನೆಟ್ಟ ಒಂದು ಬಾಳೆ ಗಿಡವೂ ಇಲ್ಲ. ಕಡಿದು ಕಡಿದು ರಾಶಿ ಹಾಕಿದ್ದಾನೆ. ಒಂದೆರಡು ಅಡಿಕೆ ಮರವನ್ನೂ ಕಡಿದು ಹಾಕಿದ್ದಾನೆ. ದಣಿಗೆ ಇದನ್ನು ನೋಡಿ ಎದೆ ದಸಕ್ಕೆಂದಿತು. "ದೂಮಾ, ಸಾಕುಮಾಡು, ನಿನ್ನ ಸ್ವಚ್ಛತೆ ಸಾಕು" ಎಂದ. "ನೀನಿನ್ನು ಮನೆಗೆ ಹೋಗು. ನೀನು ಕೆಲಸಕ್ಕೆ ಬರಬೇಕಾದ್ರೆ ನಾನೇ ಹೇಳಿ ಕಳುಹಿಸುತ್ತೇನೆ" ಎಂದವನನ್ನು ಅವನ ಮನೆಗೆ ಕಳುಹಿಸಿಕೊಟ್ಟ.

ಹೆಡ್ಡ ದೂಮನನ್ನು ಸರಿಪಡಿಸುವ ದಾರಿ ಹೇಗೆಂದು ದಣಿ ತುಂಬಾ ಆಲೋಚನೆ ಮಾಡಿದ. ಆತನಿಗೆ ಮದ್ವೆ ಮಾಡಿದ್ರೆ ಆತ ಸಂಸಾರಿಯಾಗಿ ಬುದ್ಧಿ ಕಲಿತಾನೆಂದು ಆಲೋಚಿಸಿ ಅಜ್ಜಿ ಮತ್ತು ಮೊಮ್ಮಗನನ್ನು ತನ್ನಲ್ಲಿಗೆ ಬರಮಾಡಿಕೊಂಡ. "ದೂಮಾ

ನೀನೊಂದು ಮದ್ವೆಯಾಗಬೇಕು. ನೀನು ಮದ್ವೆಯಾಗಲು ತಯಾರಿದ್ದಿಯಾ?" ಎಂದು ದೂಮನಲ್ಲಿ ಕೇಳಿದ. "ಹೋ ನಾನು ತಯಾರಿದ್ದೇನೆ" ಎಂದ ದೂಮ. "ಹೇಗೆ ಸ್ವಾಮಿ ಮದ್ವೆ ಮಾಡುವುದು ಹುಡುಗಿ ಹುಡ್ಕುಬೇಕು. ಖರ್ಚಿಗೆ ದುಡ್ಡಾಗಬೇಕು" ಎಂದಳು ಅಜ್ಜಿ "ಅದೆಲ್ಲಾ ನಾನು ಮಾಡ್ತೇನೆ" ನೀನು ಹುಡುಗಿ ಹುಡುಕುವ ಏರ್ಪಾಡು ಮಾಡು' ಎಂದು ಅಜ್ಜಿಗೆ ದಣಿ ಹೇಳಿದ.

ಅಜ್ಜಿ ದೂಮನಿಗೆ ಹುಡುಗಿ ನೋಡಿ ಮದ್ವೆ ನಿಶ್ಚಯ ಮಾಡಿದಳು. ಮದ್ವೆ ನಡೆದೇ ಹೋಯಿತು. ದೂಮನಿಗಂತೂ ಖುಷಿಯೇ ಖುಷಿ. ಹೊಸ ಅಂಗಿ, ಪಂಚೆ, ಬಟ್ಟೆಬರೆ, ಗಮ್ಮತ್ತಿನ ಊಟ ಉಪಚಾರ ಎಲ್ಲ ಖರ್ಚನ್ನು ದಣಿಯೇ ವಹಿಸಿದ. ಮದ್ವೆ ಮುಗಿದ ಮೇಲೆ ದೂಮ ಹೆಂಡತಿಯನ್ನು ಕರೆದು ತಂದ. ಒಂದು ದಿವಸ ಆಕೆ ಮನೆಯಲ್ಲಿದ್ದು ಮರುದಿನ ತನ್ನ ತಂದೆ ತಾಯಿಯ ಜೊತೆ ತವರಿಗೆ ಹೋದಳು.

ತವರಿಗೆ ಹೋದ ಹೆಂಡತಿಯನ್ನು ಎರಡು ದಿನ ಕಳೆದ ಬಳಿಕ ಕರೆದು ತರಲು ದೂಮ ಅತ್ತೆ ಮನೆಗೆ ಹೊರಟ. ಹೋಗುವಾಗ ಅಜ್ಜಿಗೆ ದೂಮನ ಬಗ್ಗೆ ಹೆದರಿಕೆ. ಏನಾದರೂ ಅನಾಹುತ ಮಾಡಿ ಬಿಡುತ್ತಾನೋ ಎಂಬ ಭಯ. ಅತ್ತೆ ಮನೆಗೆ ಹೊರಟಿರುವ ದೂಮನಿಗೆ ಅಜ್ಜಿ ಮಾವನ ಮನೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಸಾರಿಸಾರಿ ಹೇಳಿದಳು.

ದೂಮ ಅತ್ತೆ ಮನೆಗೆ ಹೊರಟ. ನಡೆದುಕೊಂಡು ಹೋಗಿ ಹೋಗಿ ಅತ್ತೆ ಮನೆಯ ಅಂಗಳದ ಪಕ್ಕಕ್ಕೆ ಮುಟ್ಟುವಾಗ ಕತ್ತಲೆಯಾಯಿತು. ಆಗ ದೂಮನಿಗೆ "ಮಾವನ ಮನೆಗೆ ಕತ್ತಲೆ ಮಾಡಿಕೊಂಡು ಹೋಗಬೇಡ. ದಾರಿಯಲ್ಲಿ ಕತ್ತಲಾದರೆ ದಾರಿ ಬದಿಯಲ್ಲೇ ತಿಂಡಿ ತಿಂದು ಮಲಗು ಎಂದು ಅಜ್ಜಿ ಹೇಳಿದ್ದು ನೆನಪಾಯಿತು. ದೂಮ ಅಂಗಳದಿಂದ ಹೊರಗಡೆ ಕೂತು ಬಾಳೆ ಎಲೆಯಲ್ಲಿ ಕಟ್ಟಿಕೊಟ್ಟ ತಿಂಡಿ ತಿಂದು ಮುಗಿಸಿದ ಮೇಲೆ ಮಲಗುವ ಅಟ್ಟಣೆ ಮಾಡಿದ. ಆಗ ಅಜ್ಜಿ ಹೇಳಿದ "ನೀನು ಮಾವನ ಮನೆಯಲ್ಲಿ ಎತ್ತರದಲ್ಲಿ ಕುಳಿತುಕೊಳ್ಳಬೇಕು" ಎಂಬ ಮಾತು ನೆನಪಾಯಿತು. ಎಲ್ಲಿ ಎತ್ತರದಲ್ಲಿ ಮಲಗುವುದೆಂದು ಆಲೋಚನೆ ಮಾಡುವಾಗ ಎತ್ತರದ ತೊಂಡೆಕಾಯಿ ಚಪ್ಪರ ಕಂಡಿತು. ಅದರ ಮೇಲೆ ಹತ್ತಿ ಮಲಗಿಕೊಳ್ಳುವ ಎಂದು ಪ್ರಯತ್ನಪಟ್ಟು ದೂಮ ಚಪ್ಪರಕ್ಕೇರಲು ಪ್ರಯತ್ನಿಸಿದ. ಕಂಬ ಹತ್ತುವಾಗ ಚಪ್ಪರ ಬಿತ್ತು. ಚಪ್ಪರದೊಟ್ಟಿಗೆ ದೂಮನೂ ಕೆಳಗೆ ಬಿದ್ದ. ಬಿದ್ದ ಸದ್ದು ಮನೆಯವರಿಗೆ ಕೇಳಿತು. ಮಾವ ಹೊರಗೋಡಿ ಬಂದು ನೋಡಿದ. ನೋಡಿದಾಗ ಅಳಿಯ ಬಿದ್ದಲ್ಲಿಂದ ಮೆಲ್ಲನೆ ಏಳುತ್ತಾ ಇದ್ದುದನ್ನು ಕಂಡ. "ಏನಾಯ್ತು ಅಳಿಯಂದಿರೇ ಏನಾಯ್ತು ಅಳಿಯಂದಿರೇ?" ಎಂದು ಅಳಿಯನನ್ನು ಕೇಳಿದ. ದೂಮ ಏನೂ ಹೇಳದೆ "ಏನಿಲ್ಲ ಏನಿಲ್ಲ" ಎಂದು ಮಾವನ ಹಿಂದಿನಿಂದ ಮನೆಗೆ ಹೋದ. ಕತ್ತಲೆಯಲ್ಲಿ ದಾರಿ ಕಾಣದೆ ತೊಂಡೆಚಪ್ಪರದ ಹೊಂಡಕ್ಕೆ ಅಳಿಯ ಬಿದ್ದಿರಬೇಕೆಂದು ಮನೆಯವರೆಲ್ಲ ಬಗೆದರು.


ರಾತ್ರಿ ಎಲ್ಲರೂ ಊಟಕ್ಕೆ ಕೂತರು. ಊಟ ಮಾಡುವಾಗ ಜಾಗ್ರತೆ ಇರಬೇಕು. ಒಂದೊಂದು ಬಗೆ ಪದಾರ್ಥವನ್ನು ಒಮ್ಮೊಮ್ಮೆಗೇ ಹಾಕಿಸಿಕೊಳ್ಳಬೇಕು ಎಂದು ಅಜ್ಜಿ ಹೇಳಿದ್ದು ದೂಮನಿಗೆ ನೆನಪಾಯಿತು. ಊಟಕ್ಕೆ ಕಣಿಲೆ(ಬಿದಿರು ಮೊಗ್ಗು) ಪಲ್ಯ ಮಾಡಿದ್ರು. ದೂಮ ಒಮ್ಮೆ ಹಾಕಿಸಿಕೊಂಡ. ತಿಂದಾಗ ಬಹಳ ರುಚಿಯಾಗಿತ್ತು. ಎರಡನೇ ಸಲ ತಂದಾಗ ಅಜ್ಜಿ ಹೇಳಿದ ಎಚ್ಚರಿಕೆ ಮಾತು ನೆನಪಾಯಿತು. "ಬೇಡ ಬೇಡ" ಎಂದು ಬಡಿಸುವುದನ್ನು ತಡೆದುಬಿಟ್ಟ. ಊಟ ಮಾಡಿ ರಾತ್ರಿ ಎಲ್ಲರೂ ಮಲಗಿದರು. ದೂಮ ಮತ್ತು ದೂಮನ ಹೆಂಡತಿ ಜಗಲಿಯ ಒಂದು ಬದಿಯಲ್ಲಿ ಮಲಗಿದರು. ಉಳಿದವರೆಲ್ಲ ಒಳಗೆ ಮಲಗಿದ್ದರು. ಎಲ್ಲರೂ ಮಲಗಿದ ಮೇಲೆ ದೂಮ ಹೆಂಡತಿ ಯೊಡನೆ "ಈ ದಿನ ಊಟಕ್ಕೆ ಮಾಡಿದ ಪಲ್ಯವೇನು?" ಎಂದು ಕೇಳಿದ. ಹೊಸ ಮದುಮಗಳಿಗೆ ಮಾತನಾಡಲು ನಾಚಿಕೆ. ಆಕೆ ಮೆಲ್ಲಗೆ 'ಕಣಿಲೆ' ಎಂದಳು. ದೂಮನಿಗೆ ಅರ್ಥವಾಗಲಿಲ್ಲ. 'ಕಣಿಲೆ' ಎಂದರೇನೆಂದು ಕೇಳಿದ. ಜಗಲಿಯ ಪಕ್ಕಕ್ಕೆ ಬಿದಿರಿನ ಗಳ ಕಟ್ಟಿದ್ದರು. ದೂಮನ ಹೆಂಡತಿ ಆ ಗಳವನ್ನು ಮುಟ್ಟಿ ತೋರಿಸಿದಳು. ಹೆಂಡತಿ ನಿದ್ದೆ ಮಾಡುವವರೆಗೆ ದೂಮ ಎಚ್ಚರಿಕೆಯಿಂದ ಇದ್ದು, ಆಕೆಗೆ ನಿದ್ರೆ ಬಂದ ತಕ್ಷಣ ಪಕ್ಕದಲ್ಲಿದ್ದ ಬಿದಿರ ಗಳವನ್ನು ಮೆಲ್ಲಗೆ ಬಿಚ್ಚಿದ. ಅದನ್ನು ಎತ್ತಿಕೊಂಡು ಅತ್ತೆ ಮನೆಯಿಂದ ಹೊರಟೇ ಬಿಟ್ಟ. ರಾತ್ರೋರಾತ್ರಿ ತನ್ನ ಮನೆಗೆ ನಡೆದ. ಬೆಳಗಾಗುವಾಗ ಅಜ್ಜಿ ಮನೆಗೆ ಮುಟ್ಟಿದ. ಅಜ್ಜಿಗೆ ಮೊಮ್ಮಗನನ್ನು ಕಂಡು ಆಶ್ಚರ್ಯವಾಯಿತು. ಬಿದಿರು ಹೊತ್ತುಕೊಂಡು ಬಂದ ತನ್ನ ಮೊಮ್ಮಗನ ಹೆಡ್ಡತನ ಕಂಡು ನಾಚಿಕೆಯೂ ಆಯಿತು. ಇದನ್ನೆಲ್ಲಾ ಆತನ ಹೆಂಡತಿ ಹೇಗೆ ಸಹಿಸಿಕೊಳ್ಳುತ್ತಾಳೋ ಎಂಬ ಹೆದರಿಕೆಯೂ ಆಯಿತು.

ದೂಮನ ಮಾವನ ಮನೆಯವರು ಬೆಳಗಾತ ಎದ್ದು ನೋಡಿದರೆ ಮಲಗಿದ ದೂಮ ಕಾಣೆ. ಎಲ್ಲರೂ ತಮ್ಮಿಂದ ಏನೋ ಅಳಿಯಂದ್ರಿಗೆ ಅಪಚಾರವಾಗಿದೆ. ಅದಕ್ಕಾಗಿ ಅಳಿಯ ಸಿಟ್ಟಿನಿಂದ ಹೋಗಿದ್ದಾರೆ ಎಂದು ಭಾವಿಸಿಕೊಂಡರು. ಅಳುತ್ತಿರುವ ದೂಮನ ಹೆಂಡತಿಯನ್ನು ಸಮಾಧಾನ ಮಾಡಿದರು. ಕೂಡಲೇ ದೂಮನ ಅತ್ತೆ ಮಾವ ತಮ್ಮ ಮಗಳನ್ನು ಕರೆದುಕೊಂಡು ದೂಮನ ಮನೆಗೆ ಬಂದರು. ಅಜ್ಜಿಯೊಡನೆ ಮಾತಾಡಿ ನಮ್ಮದೇನಾದರೂ ಅಳಿಯಂದಿರ ಉಪಚಾರದಲ್ಲಿ ತಪ್ಪಾಗಿದ್ರೆ ಕ್ಷಮಿಸಬೇಕೆಂದು ಕೇಳಿಕೊಂಡರು. ಅಜ್ಜಿ ಅವರನ್ನೆಲ್ಲಾ ಸಮಾಧಾನಪಡಿಸಿ "ಅಂಥದ್ದೇನೂ ಆಗಿಲ್ಲ. ಹೆಚ್ಚು ದಿನ ಅತ್ತೆ ಮನೆಯಲ್ಲೇ ಕೂತುಬಿಡಬೇಡವೆಂದು ನಾನವನಿಗೆ ಹೇಳಿದ್ದೆ. ಎಲ್ಲರೂ ಎದ್ದ ಮೇಲೆ ಹೊರಟರೆ ನೀವು ಅವನನ್ನು ಹೊರಡಲು ಬಿಡಲಾರಿರಿ ಎಂದುಕೊಂಡು ಆತ ಬೆಳಗಾಗುವ ಮೊದಲೇ ಎದ್ದು ಬಂದ. ನನ್ನ ಮೊಮ್ಮಗ ತುಂಬಾ ಸಂಕೋಚದ ಸ್ವಭಾವದವನು" ಎಂದಳು. ಎಲ್ಲರಿಗೂ ಸಮಾಧಾನವಾಯಿತು. ದೂಮನ ಅತ್ತೆ ಮಾವ ತನ್ನ ಮಗಳನ್ನು ಬಿಟ್ಟು ತಮ್ಮೂರಿಗೆ ಹೋದರು.

ಕರೆದುಕೊಂಡು ಹೋಗುತ್ತಿದ್ದಳು. ಎಲ್ಲಾ ಕೆಲಸಗಳನ್ನು ಹೇಳಿಕೊಟ್ಟು ಮಾಡಿಸುತ್ತಿದ್ದಳು. ಕೊನೆಗೆ ಅವನೂ ಬುದ್ಧಿವಂತನಾದ. ಹೆಡ್ಡ ದೂಮನನ್ನು ಆತನ ಹೆಂಡತಿ ಬುದ್ಧಿವಂತ ದೂಮನನ್ನಾಗಿ ಮಾಡಿದಳು. ದೂಮ ತನ್ನ ಹೆಂಡತಿ ಮತ್ತು ಅಜ್ಜಿಯೊಂದಿಗೆ ಸುಖವಾಗಿದ್ದ.

ಟಿಪ್ಪಣಿಗಳು

೧. ಬೊಜ್ಜ – ಉತ್ತರಕ್ರಿಯೆ
೨. ಬಡ್ಡ – ದಡಿಯ, ಸೋಮಾರಿ
೩. ಗೆಲ್ಲು – ರೆಂಬೆ



೨೮

ಕಳ್ಳನನ್ನು ವರಿಸಿದ ರಾಜಕುಮಾರಿ

ಒಂದೂರಲ್ಲಿ ಒಬ್ಬ ಬೆಸ್ತನಿದ್ದ. ಆತನಿಗೊಬ್ಬ ಮಗ. ಬೆಸ್ತ ಮುಂಜಾನೆ ಎದ್ದು ನದಿಯ ಬದಿಗೆ ಹೋಗಿ ಗಾಳ ಹಾಕಿ ಮೀನು ಹಿಡಿದು ಸಂಗ್ರಹಿಸುತ್ತಿದ್ದ. ಸಂಜೆಗೆ ಅದನ್ನು ಆತನ ಮಗ ಪೇಟೆಗೆ ಕೊಂಡೊಯ್ದು ಮಾರಾಟ ಮಾಡಿ ಬಂದ ಹಣದಿಂದ ಅಕ್ಕಿ, ಸಾಮಾನು ತರುತ್ತಿದ್ದ. ಬೆಸ್ತನಿಗೆ ಹೆಂಡತಿ ಇರಲಿಲ್ಲ. ಆಕೆ ಮೊದಲೇ ತೀರಿಹೋಗಿದ್ದಳು. ತಂದೆ ಮಗ ಇಬ್ಬರೂ ಹೀಗೆ ಬಹಳ ಕಷ್ಟದಿಂದ ಜೀವನ ಮಾಡುತ್ತಿದ್ದರು.

ಬೆಸ್ತನ ಮಗನ ಹೆಸರು ಭೀಮಣ್ಣ. ತಂದೆಯೂ ತೀರಿಹೋದ. ಭೀಮಣ್ಣ ಏಕಾಂಗಿಯಾದ. ಭೀಮಣ್ಣ ಸೋಮಾರಿ ಹುಡುಗ. "ಹೀಗೆ ಮೀನು ಹಿಡಿದು ಮಾರಾಟ ಮಾಡಿದರೆ ಜೀವನ ನಿರ್ವಹಣೆ ಕಷ್ಟ. ತನಗೊಂದು ಚಂದದ ಮನೆಯಾಗಬೇಕು. ಮದ್ವೆಯಾಗಬೇಕು. ಇದಕ್ಕೆಲ್ಲ ಈ ಮೀನು ಮಾರಾಟದ ಹಣ ಎಲ್ಲಿಗೆ ಸಾಕು. ಅಷ್ಟೊಂದು ಹಣ ಒಮ್ಮೆಗೇ ಕೈಸೇರಬೇಕಾದರೆ ಕಳ್ಳತನ ಮಾಡುವುದೊಂದೇ ದಾರಿ" ಎಂದಾತ ಬಗೆದ. ಸಂಜೆಯವರೆಗೆ ಮೀನು ಹಿಡಿಯುತ್ತಿದ್ದ. ಮುಸ್ಸಂಜೆಯ ಹೊತ್ತಿಗೆ ಪೇಟೆಗೆ ಹೋಗಿ ಮೀನು ಮಾರಾಟ ಮಾಡಿದ ಬಳಿಕ ರಾತ್ರಿಯಿಡೀ ಕಳ್ಳತನಕ್ಕೆ ಪ್ರಯತ್ನಿಸುತ್ತಿದ್ದ. ಪೇಟೆಯಲ್ಲಿ ಬೆಳಗ್ಗಿನವರೆಗೆ ಕಳ್ಳತನ ಮಾಡಿ ಸಿಕ್ಕಿದ ಒಡವೆ, ಹಣವನ್ನು ತಂದು ಮನೆಯಲ್ಲಿ ಕೂಡಿಟ್ಟು ನಿದ್ದೆ ಮಾಡುತ್ತಿದ್ದ. ಮಧ್ಯಾಹ್ನದವರೆಗೆ ನಿದ್ದೆ ಮಾಡಿ ಮತ್ತೆ ಮೀನು ಹಿಡಿಯಲು ಹೋಗುತ್ತಿದ್ದ. ಇದು ಅವನ ದಿನಚರಿಯಾಗಿ ಮುಂದುವರಿಯಿತು. ಆದರೂ ಆತನಿಂದ ದೊಡ್ಡ ಕಳ್ಳತನ ಮಾಡಲು ಯಾವತ್ತೂ ಸಾಧ್ಯವೇ ಆಗಲಿಲ್ಲ.

ಒಂದು ದಿನ ಆತ ಗಾಳ ಹಾಕಿ ಎಳೆಯುವಾಗ ಗಾಳದಲ್ಲಿ ಒಂದು ದೊಡ್ಡ ಮೀನು ಸಿಕ್ಕಿತು. ಆ ಮೀನು ಸತ್ತಿರಲಿಲ್ಲ. ನೆಲದ ಮೇಲೆ ಹಾಕಿದಾಗ ಗಾಳದ ಕೊಂಡಿಯಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿತ್ತು. ಮೀನನ್ನು ಗಾಳದ ಕೊಂಡಿಯಿಂದ ತೆಗೆದಾಗ ಅದು ಮಾತನಾಡಲು ಪ್ರಾರಂಭಿಸಿತು. "ನಾನು ಸಾಮಾನ್ಯ ಮೀನಲ್ಲ; ನಾನು ಮತ್ಸ್ಯಕನ್ಯೆ. ನಾನು ದಾರಿ ತಪ್ಪಿ ನನ್ನವರಿಂದ ಬೇರಾಗಿ ಈ ನದಿಯಲ್ಲಿ ಬಂದಿದ್ದೇನೆ. ನನ್ನನ್ನು ಕೊಲ್ಲಬೇಡ. ನಾನು ನಿನಗೆ ಮೂರು ವರಗಳನ್ನು ಕೊಡುತ್ತೇನೆ. ನನ್ನನ್ನು ನೆನೆಸಿಕೊಂಡು

ನೀನು ಏನು ಕಾರ್ಯವಾಗಬೇಕೆಂದು ಹೇಳಿದರಾಯಿತು. ಅದು ಕೂಡಲೇ ಆಗುತ್ತದೆ. ನೀನಿನ್ನು ಈ ಊರಲ್ಲಿ ಕಳ್ಳತನ ಮಾಡಬೇಡ. ಏಕೆಂದರೆ ನೀನು ಸಿಕ್ಕಿಬಿದ್ದರೆ ಎಲ್ಲರಿಗೂ ನಿನ್ನ ಪರಿಚಯವಿದೆ. ಕಳ್ಳತನದಲ್ಲಿ ಜಮೆಯಾಗಿರುವ ಹಣ, ಚಿನ್ನಾಭರಣಗಳನ್ನು ತೆಗೆದುಕೊಂಡು ಬೇರೊಂದು ಊರಿಗೆ ಹೋಗು. ಅಲ್ಲಿ ನಿನ್ನ ವೃತ್ತಿಯನ್ನು ಮುಂದು ವರಿಸು. ನನ್ನನ್ನು ನಂಬು. ಖಂಡಿತ ನಿನ್ನ ಕೈಬಿಡುವುದಿಲ್ಲ. ದಯವಿಟ್ಟು ನನ್ನನ್ನೂ ಸಮುದ್ರಕ್ಕೆ ಬಿಟ್ಟುಬಿಡು" ಎಂದಿತು. ಭೀಮಣ್ಣನಿಗೆ ನಂಬಬೇಕೋ, ಬಿಡಬೇಕೋ ಗೊತ್ತಾಗಲಿಲ್ಲ. "ಹೋದರೆ ಒಂದು ಮೀನು ತಾನೇ ಸಿಕ್ಕಿದರೆ ಮೂರು ವರಗಳಲ್ಲಿ ಬೇಕಾದುದನ್ನೆಲ್ಲ ಮಾಡಿಕೊಳ್ಳಬಹುದು" ಎಂದು ಬಗೆದು ಭೀಮಣ್ಣ ಮೀನನ್ನು ಕೊಲ್ಲದೆ ಎತ್ತಿಕೊಂಡು ಹೋಗಿ ಸಮುದ್ರದಲ್ಲಿ ಬಿಟ್ಟ. ಆ ದಿನ ತನಗೆ ಸಿಕ್ಕಿದ ಮೀನುಗಳನ್ನು ಮಾರಾಟ ಮಾಡಿ ರಾತ್ರಿ ಕಳ್ಳತನಕ್ಕೆ ಹೋಗದೆ ಮನೆಯಲ್ಲಿ ಬಂದು ಮಲಗಿದ. ಬೆಳಗಾದೊಡನೆ ಎದ್ದು ತಾನೇ ಗಂಜಿ ಬೇಯಿಸಿ ಉಂಡು ತನ್ನಲ್ಲಿರುವ ಚಿನ್ನಾಭರಣ, ಹಣವನ್ನೆಲ್ಲ ಹಿಡಿದುಕೊಂಡು ಪರವೂರಿನ ದಾರಿ ಹಿಡಿದ.

ಭೀಮಣ್ಣ ನಡೆದು ನಡೆದು ಸಂಜೆಯ ವೇಳೆಗೆ ಒಂದು ಪಟ್ಟಣಕ್ಕೆ ಮುಟ್ಟಿದ. ತನ್ನಲ್ಲಿದ್ದ ಚಿನ್ನಾಭರಣದಲ್ಲಿ ಖರ್ಚಿನ ಹಣಕ್ಕೆ ಬೇಕಾಗುವಷ್ಟು ಮಾರಿದ. ತನ್ನ ಪ್ರಯಾಣಕ್ಕೆ ಅನುಕೂಲವಾಗಲೆಂದು ಒಂದು ಒಳ್ಳೆಯ ಕುದುರೆಯನ್ನು ಖರೀದಿಸಿದ. ರಾತ್ರಿ ವೇಳೆಗೆ ಉಳಿದುಕೊಳ್ಳಲು ಒಂದು ಅಡುಗೂಲಜ್ಜಿಯ ಮನೆಗೆ ಹೋದ. ಕುದುರೆಯನ್ನು ಹೊರಗೆ ಕಟ್ಟಿಹಾಕಿ ಅಡುಗೂಲಜ್ಜಿಯೊಡನೆ ಅಲ್ಲಿ ಉಳಿದುಕೊಳ್ಳಲು ಆಸರೆ ಕೇಳಿದ. ಕುದುರೆಯ ಮೇಲೆ ಬಂದ ಭೀಮಣ್ಣನನ್ನು ಅಜ್ಜಿ ಯಾವುದೋ ರಾಜಕುಮಾರನೆಂದು ಬಗೆದು ತನ್ನ ಮನೆಯಲ್ಲಿ ಉಳಿದುಕೊಳ್ಳಲು ಒಪ್ಪಿಕೊಂಡಳು.

ರಾತ್ರಿ ಊಟವಾದ ಮೇಲೆ ಭೀಮಣ್ಣ ಅಜ್ಜಿಯೊಡನೆ ಆ ಊರಿನ ಸ್ಥಿತಿಗತಿ ಏನೆಂದು ಕೇಳಿದ. ಹಾಗೋ ಮಗಾ ಈ ಊರಲ್ಲೊಬ್ಬ ರಾಜನಿದ್ದಾನೆ. ಆತನಿಗೆ ಮೂವರು ಹೆಣ್ಣುಮಕ್ಕಳು. ಹೆಣ್ಣುಮಕ್ಕಳನ್ನು ಬಹಳ ಅಕ್ಕರೆಯಿಂದ ಸಾಕುತ್ತಿದ್ದ. ವಿದ್ಯೆ ಬುದ್ಧಿ ಎಲ್ಲವನ್ನೂ ಕಲಿಸಿದ. ಎಲ್ಲರೂ ಚಂದ ಚಂದದ ಹುಡುಗಿಯರು.

ಒಂದು ಹುಣ್ಣಿಮೆಯ ದಿನ ಅರಮನೆಯ ಹೊರಗಿನ ಹೂತೋಟದಲ್ಲಿ ಅರಸ ಕುಳಿತುಕೊಂಡಿದ್ದ. ತಂಗಾಳಿ ಬೀಸುತ್ತಿತ್ತು. ಆಕಾಶದಲ್ಲಿ ಚಂದ್ರ ಹೊಳೆಯುತ್ತಿದ್ದ. ತಿಂಗಳ ಬೆಳಕು ಎಲ್ಲೆಲ್ಲೂ ಹರಡಿತು. ಅರಸ ಈ ವಾತಾವರಣದಲ್ಲಿ ಕುಳಿತುಕೊಂಡು ಆನಂದಪಟ್ಟ, ತನ್ನ ಮೂವರು ರಾಜಕುಮಾರಿಯರನ್ನು ಅಲ್ಲಿಗೆ ಬರಮಾಡಿಕೊಂಡ. ಎಲ್ಲರನ್ನೂ ಕುಳ್ಳಿರಿಸಿ "ಹೇಗಿದೆ ವಾತಾವರಣ?" ಎಂದವರನ್ನು ಪ್ರಶ್ನಿಸಿದ. ಬಹಳ ಸುಂದರವಾಗಿದೆ ಎಂದೆಲ್ಲರೂ ಉತ್ತರಿಸಿದರು. ಈ ವಾತಾವರಣ ಯಾವುದಕ್ಕೆ ಒಳ್ಳೆಯದು ಎಂದು ದೊಡ್ಡ ಮಗಳನ್ನು ಕೇಳಿದ. ಅದಕ್ಕವಳು "ಅಪ್ಪಾ ಈ ವಾತಾವರಣ ಕೃಷಿಕರಿಗೆ ಬಹಳ ಒಳ್ಳೆಯದು. ರಾತ್ರಿ ಹೊತ್ತು ಸುಂದರವಾದ ಬೆಳದಿಂಗಳಲ್ಲಿ ಎಷ್ಟು ದುಡಿದರೂ

ಆಯಾಸವೇ ಆಗುವುದಿಲ್ಲ. ಮೈ ಬೇಯುವುದಿಲ್ಲ, ಸೆಕೆಯಾಗುವುದಿಲ್ಲ, ಬೆವರುವುದಿಲ್ಲ. ಆಯಾಸವಾಗುವುದಿಲ್ಲ. ಸಸ್ಯಗಳೆಲ್ಲ ಚಿಗುರಿಕೊಳ್ಳುತ್ತಿರುವ ರಾತ್ರಿ ಹೊತ್ತು ಉಳುವುದು, ಅಗೆಯುವುದು, ಬೀಜ ಹಾಕುವುದು, ಗಿಡ ನೆಡುವುದು–ಎಲ್ಲಾ ಕೃಷಿ ಕೆಲಸಕ್ಕೂ ಬೆಳದಿಂಗಳ ರಾತ್ರಿ ಅತ್ಯಂತ ಒಳ್ಳೆಯದು" ಎಂದಳು.

ಸರಿ ಒಳ್ಳೆಯದು, ಒಳ್ಳೆಯ ವಿಚಾರವನ್ನೇ ಹೇಳಿದೆ. ನೀನು ಏನು ಹೇಳುತ್ತಿಯಾ ಮಗೂ? ಎಂದು ಅರಸ ಎರಡನೆಯ ಮಗಳನ್ನು ಪ್ರಶ್ನಿಸಿದ. ಆಕೆ "ಎಂತಹ ನಿಶ್ಶಬ್ಧ ಶಾಂತ ವಾತಾರಣ. ಸದ್ದುಗದ್ದಲವಿಲ್ಲದ ಇಂತಹ ವಾತಾವರಣದಲ್ಲೇ ಕವಿಗಳಿಗೆ ಕಾವ್ಯ ಹೊಳೆಯುತ್ತದೆ. ಕಲಾವಿದರಿಗೆ ಕಲೆಯ ಬಗ್ಗೆ ಚಿಂತನೆ ಹೊಳೆಯುತ್ತದೆ. ಇಂತಹ ವಾತಾವರಣ ಕವಿ, ಕಲಾವಿದರಿಗೆ ತಮ್ಮ ಕೃತಿ ರಚನೆಗೆ ಅತ್ಯುತ್ತಮವಾದ ವಾತಾವರಣ. ಅವರ ಕೃತಿ ರಚನೆಗೆ ಈ ವಾತಾವರಣವೇ ಪ್ರೇರಣೆ ನೀಡುತ್ತದೆ" ಎಂದಳು. ಅರಸ ಆಕೆಯ ಅಭಿಪ್ರಾಯವನ್ನು ಬಹಳವಾಗಿ ಮೆಚ್ಚಿಕೊಂಡು ಕೊನೆಯವಳಲ್ಲಿ "ನಿನ್ನ ಅಭಿಪ್ರಾಯ ಹೇಳು" ಎಂದ. ಆಗ ಕೊನೆಯ ರಾಜಕುಮಾರಿ "ಈ ಶಬ್ದರಹಿತ ವಾತಾವರಣ ಮಸುಕು ಬೆಳಕು ಕಳ್ಳತನಕ್ಕೆ ಬಹಳ ಒಳ್ಳೆಯದು. ಅಡಗಿಕೊಂಡು ಬರುವ ಕಳ್ಳರಿಗೆ ಮನೆಯೊಳಗೆ ಪ್ರವೇಶಿಸಲು ಸುಲಭ. ಎಲ್ಲರೂ ಗಾಢನಿದ್ದೆಯಲ್ಲಿರುವ ಹೊತ್ತು. ಕದಿಯುವುದಂತೂ ಬಹಳ ಸುಲಭ. ಒಂದು ವೇಳೆ ಕಳ್ಳನನ್ನು ಯಾರಾದರೂ ಕಂಡುಬಿಟ್ಟರೂ ಕೂಡ ಆತನ ಗುರುತು ಸಿಗಲಾರದು. ಆತ ಮರೆಯಲ್ಲಿ ಅಡಗಿಬಿಟ್ಟರೆ ಯಾರಿಂದಲೂ ಪತ್ತೆ ಹಚ್ಚಲು ಅಸಾಧ್ಯ" ಎಂದಳು.

ರಾಜನಿಗೆ ಕಿರಿಯ ರಾಜಕುಮಾರಿಯೊಡನೆ ವಿಪರೀತ ಸಿಟ್ಟು ಬಂತು ಕಪಾಳಕ್ಕೆರಡು ಬಾರಿಸಿ ಬಿಡಬೇಕೆಂದೆನಿಸಿತು. ಆದರೂ ಸಹಿಸಿಕೊಂಡು "ನಿಮ್ಮ ಅಭಿಪ್ರಾಯ ಕೇಳಿ ಸಂತೋಷವಾಯಿತು. ನಿಮ್ಮ ಯೋಗ್ಯತೆ ಮತ್ತು ಆಸಕ್ತಿಗೆ ತಕ್ಕಂತೆ ನಿಮ್ಮನ್ನು ಮದುವೆ ಮಾಡಿ ಕೊಡಲು ಸಿದ್ಧನಿದ್ದೇನೆ. ಹಿರಿಮಗಳು ಕೃಷಿಕನನ್ನು ಬಯಸಿದಳು. ಪರರಾಜ್ಯದಲ್ಲಿ ರುವ ಕೋಟ್ಯಾಧೀಶ ಜಮೀನ್ದಾರನೊಬ್ಬನನ್ನು ಹುಡುಕಿ ತಂದು ಅವಳಿಗೆ ಮದುವೆ ಮಾಡಿಸುತ್ತೇನೆ. ಎರಡನೆಯವಳಿಗೆ ಸಾಹಿತ್ಯ, ಕಲೆ, ಎಂದರೆ ಇಷ್ಟ. ದೇಶದಲ್ಲಿರುವ ಕೀರ್ತಿ ಪಡೆದ ಸಾಹಿತಿ–ಕಲಾವಿದನನ್ನು ಹುಡುಕಿಸಿ ತಂದು ಅವಳಿಗೆ ಮದುವೆ ಮಾಡಿಸುತ್ತೇನೆ. ಆದರೆ ನನ್ನ ಕಿರಿಯ ಮಗಳಿಗೆ ಚತುರ ಕಳ್ಳನನ್ನು ಹುಡುಕುವುದು ಕಷ್ಟ. ಅದಕ್ಕಾಗಿ ನಾನೊಂದು ಉಪಾಯ ಮಾಡುತ್ತೇನೆ. ಮೊದಲ ಇಬ್ಬರು ಮಕ್ಕಳಿಗೆ ನನ್ನ ಅರಮನೆಯ ಪಕ್ಕದಲ್ಲಿ ಚಿಕ್ಕಚಿಕ್ಕ ಎರಡು ಅರಮನೆ ಕಟ್ಟಿಸಿಕೊಡುತ್ತೇನೆ. ಕಳ್ಳನನ್ನು ಪತಿಯಾಗಿ ಪಡೆಯುವವಳಿಗೆ ಅರಮನೆ ಯಾಕೆ? ಅವಳಿಗೆ ಕಾಡಿನಲ್ಲೊಂದು ಗುಡಿಸಲು ಕಟ್ಟಿಸಿಕೊಡುತ್ತೇನೆ. ಆ ಕಡೆಗೆ ಕಳ್ಳರು ಬರುತ್ತಲೇ ಇರುತ್ತಾರೆ. ಆಕೆ ಬೇಕಾದವರನ್ನು ಆಯ್ಕೆ ಮಾಡಿಕೊಂಡು ಮದುವೆ ಆಗಬಹುದು ಎಂದ. ಮರುದಿನವೇ ಮೂವರು ಮಕ್ಕಳಿಗೂ ವಸತಿಯ ವ್ಯವಸ್ಥೆ ಮಾಡಿ, ಮನೆಯಿಂದ ಕಳುಹಿಸಿಕೊಟ್ಟ. ಇಷ್ಟು ಹೇಳಿ

ಅಜ್ಜಿ ಆ ಊರಿನಲ್ಲಿ ನಡೆದ ಕಥೆ ಮುಗಿಸಿದಳು. ಭೀಮಣ್ಣ ಕಾಡಿನ ಬದಿಯಲ್ಲಿರುವ ಕಿರಿಯ ರಾಜಕುಮಾರಿ ಗುಡಿಸಲಿಗೆ ಹೋಗುವ ದಾರಿಯನ್ನು ಅಜ್ಜಿಯಿಂದ ಕೇಳಿ ತಿಳಿದುಕೊಂಡ. ಇಬ್ಬರೂ ರಾತ್ರಿ ಮಲಗಿ ನಿದ್ದೆ ಮಾಡಿದರು.

ಮರುದಿನ ಮುಂಜಾನೆ ಎದ್ದ ಭೀಮಣ್ಣ ತನ್ನ ನಿತ್ಯವಿಧಿಗಳನ್ನು ಮುಗಿಸಿ, ಹೊಟ್ಟೆ ತಣಿಸಿಕೊಂಡು ಕೈಯಲ್ಲೊಂದು ವಜ್ರದ ಸರವನ್ನು ಹಿಡಿದುಕೊಂಡು ತಾನೂ ಕೆಲವು ಆಭರಣಗಳನ್ನು ಧರಿಸಿಕೊಂಡು ಕುದುರೆ ಏರಿದ. ಕುದುರೆ ಸವಾರಿ ಮಾಡಿಕೊಂಡು ಕಾಡಿನ ಪಕ್ಕದಲ್ಲಿರುವ ರಾಜಕುಮಾರಿಯ ಗುಡಿಸಲ ಬಳಿಗೆ ಬಂದು ಕುದುರೆಯಿಂದ ಇಳಿದು ನಿಂತ. ರಾಜಕುಮಾರಿಯು ಗುಡಿಸಲಿನಿಂದ ಹೊರಗೆ ಬಂದು ಯಾರು ನೀವು ಎಂದು ಕೇಳಿದಳು. "ನಾನೊಬ್ಬ ರಾಜಕುಮಾರ, ಬೇಟೆಯಾಡಲು ಬಂದಿದ್ದೇನೆ. ಊರಿಗೆ ಹೋಗುವ ದಾರಿ ತಪ್ಪಿತು. ಬಹಳ ಬಾಯಾರಿಕೆಯಾಗಿದೆ. ಒಳಗೆ ಬರಬಹುದೆ?" ಎಂದು ಕೇಳಿದ. ರಾಜಕುಮಾರಿ ಆತನನ್ನು ಒಳಗೆ ಕರೆದು ಬಾಯಾರಿಕೆ ತಣಿಸಲು ಪಾನೀಯ ಕೊಟ್ಟಳು. ನಂತರ ಊಟ ಮಾಡಿ ಹೋಗಬಹುದೆಂದು ಒತ್ತಾಯಿಸಿದಳು. ಮಧ್ಯಾಹ್ನದ ಊಟವೂ ಆಯಿತು. ಕುದುರೆಗೆ ನೀರು ಕೊಟ್ಟು ಅಲ್ಲೇ ಮೇಯಲು ಬಿಟ್ಟು ಕಟ್ಟಿ ಹಾಕಿದ. ಊಟ ಮಾಡಿ ವಿಶ್ರಾಂತಿಗಾಗಿ ಮಲಗಿದವನಿಗೆ ಅಲ್ಲೇ ಸ್ವಲ್ಪ ಹೊತ್ತು ನಿದ್ರೆ ಬಂತು. ನಿದ್ರೆಯಿಂದ ಎಚ್ಚರವಾಗುವಾಗ ಸಂಜೆಯಾಗಿತ್ತು. ಎದ್ದು "ನಾನಿನ್ನು ಹೊರಡುತ್ತೇನೆ" ಎಂದಾಗ ರಾಜಕುಮಾರಿ ಆತನನ್ನು ಆ ದಿನ ನಿಂತು ಹೋಗುವಂತೆ ಕೇಳಿಕೊಂಡಳು. ಭೀಮಣ್ಣ ಅದಕ್ಕೆ ಒಪ್ಪಿದ.

ರಾಜಕುಮಾರಿಗೆ ಭೀಮಣ್ಣನನ್ನು ಮದುವೆಯಾಗುವ ಮನಸ್ಸಾಯಿತು. ತನ್ನ ಮನಸ್ಸಿನ ಆಸೆಯನ್ನು ಆಕೆ ಭೀಮಣ್ಣನ ಮುಂದಿಟ್ಟಳು. ಭೀಮಣ್ಣನು ಅದೇ ಆಸೆಯನ್ನಿಟ್ಟುಕೊಂಡು ಅಲ್ಲಿಗೆ ಬಂದಿದ್ದ. ರಾಜಕುಮಾರಿಯೊಡನೆ ಈಗ ಸತ್ಯವನ್ನೇ ಹೇಳುವುದು ಒಳ್ಳೆಯದೆಂದು ಬಗೆದ. ನಿಜವಾಗಿ ತಾನು ರಾಜಕುಮಾರನಲ್ಲ ತಾನೊಬ್ಬ ಕಳ್ಳನೆಂದು ಆಕೆಯೊಡನೆ ಸತ್ಯವನ್ನು ಹೇಳಿದ. ಆಕೆಗೆ ಇದರಿಂದ ಬೇಸರವಾಗಲಿಲ್ಲ. ಭೀಮಣ್ಣ ಕಟ್ಟುಮಸ್ತಾದ ಆಳು. ಆತನದೇ ದೇಹದಾರ್ಢ್ಯತೆ ನೋಡಿ ಆಕೆ ಮನಸೋತಿದ್ದಳು. "ಕಳ್ಳನನ್ನು ಮದುವೆಯಾಗುವುದು ನನ್ನ ಯೋಗ, ಈಗ ಯೋಗಾಯೋಗ ಕೂಡಿಬಂದಿದೆ" ಎಂದಳು. ರಾಜಕುಮಾರ ಸಂತೋಷದಿಂದ ಮತ್ಸ್ಯಕನ್ಯೆಯನ್ನು ನೆನಪಿಸಿಕೊಂಡ. "ಕಾಡಿನ ಪಕ್ಕದಲ್ಲಿ ನನಗೊಂದು ಅತ್ಯಂತ ಸುಂದರವಾದ ಅರಮನೆ ಆಗಬೇಕು. ಧನಧಾನ್ಯ, ದಾಸ-ದಾಸಿಯರಿಂದ ಅದು ತುಂಬಿರಬೇಕು" ಎಂದು ಪ್ರಾರ್ಥಿಸಿಕೊಂಡು ರಾಜಕುಮಾರಿಯೊಡನೆ ಆ ರಾತ್ರಿಯನ್ನು ಕಳೆದ.

ಮರುದಿನ ಬೆಳಗ್ಗೆ ರಾಜಕುಮಾರಿ ಎದ್ದು ನೋಡುವಾಗ ತನ್ನ ಗುಡಿಸಲು ಭವ್ಯ ಅರಮನೆಯಾಗಿ ಪರಿವರ್ತನೆಗೊಂಡಿದೆ. ದಾಸ-ದಾಸಿಯರೆಲ್ಲ ಅತ್ತಿಂದಿತ್ತ ಓಡಾಡುತ್ತಿದ್ದಾರೆ. ಅಡುಗೆ ಕೋಣೆಯಿಂದ ಘಮಘಮ ಪರಿಮಳ ಬರುತಿತ್ತು. ಭೀಮಣ್ಣನಿನ್ನೂ ಮಲಗಿದವ ಎದ್ದಿರಲಿಲ್ಲ. ಇದೇನು ಕನಸೋ–ನನಸೋ ಆಕೆಗೆ

ಬಹಳ ಆಶ್ಚರ್ಯವಾಯಿತು. ಮೈಗೆಲ್ಲಾ ಚಿವುಟಿ ನೋಡಿಕೊಂಡಳು. ಕನಸಲ್ಲ ನನಸು; ಎಂಬುದು ದಿಟವಾಯಿತು. ರಾಜಕುಮಾರನನ್ನು ಎಬ್ಬಿಸಿದಳು; ಗುಡಿಸಲು ಅರಮನೆಯಾಗಿ ಬದಲಾದುದನ್ನು ತೋರಿಸಿದಳು. ಆತನಿಗೆ ಇದು ಅಷ್ಟೇನು ವಿಶೇಷವಾಗಿ ಕಾಣಲಿಲ್ಲ. ಮನಸಾರೆ ಮತ್ಸ್ಯಕನ್ಯೆಗೆ ವಂದಿಸಿಕೊಂಡ. ಫಲಾಹಾರ ಮುಗಿಸಿ ತಾನಿನ್ನು ಹೊರಡುತ್ತೇನೆ ಎಂದ. ರಾಜಕುಮಾರಿ ಅರಮನೆಯಲ್ಲಿ ನಿಲ್ಲಬೇಕೆಂದು ಒತ್ತಾಯಪಡಿಸಿದಳು. ಭೀಮಣ್ಣ ಅದಕ್ಕೊಪ್ಪದೆ ತಾನು ತಂದಿದ್ದ ವಜ್ರದ ಸರವನ್ನು ಆಕೆಯ ಕೊರಳಿಗಿಟ್ಟು, "ನಿನ್ನನ್ನು ಬೇಗದಲ್ಲೇ ಮದುವೆಯಾಗುತ್ತೇನೆ ಆವರೆಗೆ ನಾನು ನನ್ನೂರಿಗೆ ಹೋಗಿ ಬರುತ್ತಿರುತ್ತೇನೆ" ಎಂದು ಹೇಳಿ ಅಡುಗೂಲಜ್ಜಿಯ ಮನೆಗೆ ಹೊರಟನು.

ಹೊಸದಾಗಿ ನಿರ್ಮಾಣಗೊಂಡ ಅರಮನೆಯ ಬೇರೆ ಬೇರೆ ಭಾಗಗಳನ್ನೆಲ್ಲ ರಾಜಕುಮಾರಿ ನೋಡಿಕೊಂಡು ಬಂದಳು. ತಾನು ಮತ್ತು ರಾಜಕುಮಾರ ಮಲಗಿದ ಹಂಸತೂಲಿಕತಲ್ಪದ ಮಂಚವಿರುವ ಶಯನಗೃಹಕ್ಕೆ ಬೀಗ ಹಾಕಿದಳು. ದಾಸದಾಸಿಯರನ್ನೆಲ್ಲಾ ಪರಿಚಯ ಮಾಡಿಕೊಂಡು ಅವರನ್ನು ಬೇರೆ ಬೇರೆ ಕೆಲಸಗಳಿಗೆ ನೇಮಕಗೊಳಿಸಿದಳು.

ಕಾಡಿನ ಪಕ್ಕದಲ್ಲೇ ಅರಮನೆ ಎದ್ದು ನಿಂತ ಸುದ್ದಿ ಊರಲೆಲ್ಲಾ ಹಬ್ಬಿತು. ಊರಿನಿಂದ ಜನರು ಬಂದು ನೋಡಿ ಹೋಗಲು ಪ್ರಾರಂಭಿಸಿದರು. ರಾಜನ ಜೊತೆಯಿದ್ದ ರಾಜಕುಮಾರಿಯರಿಗೂ ತಮ್ಮ ತಂಗಿಯ ಅರಮನೆ ನೋಡಬೇಕೆಂದಾಯಿತು. ಅವರಿಬ್ಬರೂ ಅರಮನೆಯ ಕಡೆಯ ಹೊರಟರು. ಬಂದಿರುವ ಅಕ್ಕಂದಿರನ್ನು ತಂಗಿ ಸಂತೋಷದಿಂದ ಸ್ವಾಗತಿಸಿದಳು. ಇದೆಲ್ಲಾ ಹೇಗಾಯಿತೆಂದು ತಂಗಿಯನ್ನು ಪ್ರಶ್ನಿಸಿದರು. ಅದೆಲ್ಲಾ ನನ್ನ ದೇವರ ದಯೆ ಎಂದಷ್ಟೆ ರಾಜಕುಮಾರಿ ಉತ್ತರಿಸಿದಳು. ಅಕ್ಕಂದಿರಿಗೆ ತಮ್ಮ ಅರಮನೆಗಿಂತಲೂ ದೊಡ್ಡದಾದ ತಂಗಿಯ ಅರಮನೆ ನೋಡಿ ಹೊಟ್ಟೆಕಿಚ್ಚು ಹೆಚ್ಚಾಯಿತು. ಇವಳನ್ನು ಹೇಗಾದರೂ ನಾಶ ಮಾಡಬೇಕೆಂದು ಬಗೆದರು. ರಾಜಕುಮಾರಿ ಅಕ್ಕಂದಿರನ್ನು ಊಟಕ್ಕೆ ಒತ್ತಾಯಿಸಿದಳು. ತಾವು ಮರುದಿವಸ ಊಟಕ್ಕೆ ಬರುವುದಾಗಿ ಹೇಳಿ ಅವರು ತಮ್ಮ ಅರಮನೆಗೆ ಹಿಂತಿರುಗಿದರು. ಇಬ್ಬರೂ ಸೇರಿ ಕಿರಿಯವಳನ್ನು ಕೊಲ್ಲುವ ಆಲೋಚನೆ ಮಾಡಿದರು. ಆ ಕಾಲದಲ್ಲಿ ಯುದ್ಧ ಸಂದರ್ಭದಲ್ಲಿ ಬಾಣದ ತುದಿಗೆ ಕನ್ನಡಿ ಹಾವಿನ[೧] ಬೆನ್ನುಮೂಳೆಯ ಮುಳ್ಳನ್ನು ಕಟ್ಟುತ್ತಿದ್ದುದು ಅವರಿಗೆ ನೆನಪಾಯಿತು. ಕನ್ನಡಿ ಹಾವಿನ ಮುಳ್ಳು ಮನುಷ್ಯನ ದೇಹಕ್ಕೆ ಚುಚ್ಚಿದರೆ ಶರೀರವೇ ಕೊಳೆತುಕೊಂಡು ಹೋಗುತ್ತದೆ. ಮತ್ತೆ ಆತ ಹೆಚ್ಚು ಕಾಲ ಬದುಕುವುದಿಲ್ಲ. ಅದಕ್ಕಾಗಿ ಬಾಣದ ತುದಿಗೆ ಈ ಹಾವಿನ ಮುಳ್ಳನ್ನು ಕಟ್ಟಿ ಯುದ್ಧದಲ್ಲಿ ಬಳಸುತ್ತಿದ್ದರು. ಇದನ್ನೇ ಬಳಸಿ ತಂಗಿಯನ್ನು ಕೊಲ್ಲಬಹುದೆಂದು ಇಬ್ಬರೂ ಬಗೆದರು. ಅಕ್ಕ ತಂಗಿಯರಿಬ್ಬರೂ ಶಸ್ತ್ರಾಗಾರಕ್ಕೆ ಹೋಗಿ ಒಂದೆರಡು ಮುಳ್ಳುಗಳನ್ನು ಸಂಗ್ರಹಿಸಿದರು. ಯಾರಿಗೂ ತಿಳಿಯದಂತೆ ಅದನ್ನು ಗುಟ್ಟಾಗಿ ಕೈಯಲ್ಲಿಟ್ಟುಕೊಂಡು ಮರುದಿನ ಮಧ್ಯಾಹ್ನದ ಊಟಕ್ಕೆ ತಂಗಿಯ ಮನೆಗೆ ಬಂದರು.

ಊಟವಾದ ಮೇಲೆ ಅಕ್ಕಂದಿರು ತಂಗಿಯೊಡನೆ "ನಾವು ನಿನ್ನ ಅರಮನೆಯ ಎಲ್ಲಾ ಭಾಗಗಳನ್ನು ನೋಡಿದೆವು. ಆದರೆ ಒಂದು ಕೋಣೆಗೆ ಮಾತ್ರ ನೀನು ಬೀಗ ಹಾಕಿಬಿಟ್ಟಿದ್ದಿಯಾ ಅದನ್ನೊಮ್ಮೆ ಬೇಗ ತೆಗೆದು ತೋರಿಸು" ಎಂದು ಕೇಳಿದರು. ಅದಕ್ಕೆ ತಂಗಿ "ಅದು ನನ್ನ ಮಲಗುವ ಕೋಣೆ, ಅದರಲ್ಲೇನಿದೆ ನೋಡಲು ಎಂದುಬಿಟ್ಟಳು. ಆದರೆ ಅಕ್ಕಂದಿರು ಬಿಡಲಿಲ್ಲ. ನಿನ್ನ ಶಯನಗೃಹದ ಅಲಂಕಾರವನ್ನೊಮ್ಮೆ ನಾವು ನೋಡಲೇಬೇಕು" ಎಂದು ಹಠಹಿಡಿದರು. ರಾಜಕುಮಾರಿ ದಾಸಿಯರನ್ನು ಕರೆದು ಕೋಣೆಯ ಬೀಗ ತೆಗೆದು ತೋರಿಸುವಂತೆ ಹೇಳಿದಳು. ನೀವು ನೋಡಿಬಿಟ್ಟು ಬನ್ನಿ ನಾನು ಚಾವಡಿಯಲ್ಲಿ ಕುಳಿತಿರುತ್ತೇನೆ ಎಂದು ಹೇಳಿ ತಂಗಿ ಚಾವಡಿಗೆ ಹೊರಟು ಹೋದಳು. ಅಕ್ಕಂದಿರಿಬ್ಬರು ಕೋಣೆಯ ಒಳಹೊಕ್ಕು ತಾವು ತಂದ ಕನ್ನಡಿ ಹಾವಿನ ಮುಳ್ಳುಗಳನ್ನು ರಾಜಕುಮಾರಿ ಮಲಗುವ ಹಾಸಿಗೆ ಅಡಿಯಿಂದ ಮೇಲ್ಮುಖವಾಗಿ ಮಲಗಿದವರ ಬೆನ್ನಿಗೆ ತಾಗುವಂತೆ ಚುಚ್ಚಿ ಇಟ್ಟರು. ನಂತರ ಹೊರಗೆ ಬಂದು ತಂಗಿಗೆ ಕೃತಜ್ಞತೆ ಸಲ್ಲಿಸಿ, ತಮ್ಮತಮ್ಮ ಅರಮನೆಗೆ ಹೊರಟುಹೋದರು.

ಆ ದಿನ ರಾತ್ರಿ ಹೊತ್ತು ಭೀಮಣ್ಣ ರಾಜಕುಮಾರಿಯ ಅರಮನೆಗೆ ಬಂದ. ಅತಿ ಪ್ರೀತಿಯಿಂದ ರಾಣಿ ಆತನನ್ನು ಸ್ವಾಗತಿಸಿದಳು. ಊಟವಾದ ಬಳಿಕ ತನ್ನ ಮಲಗುವ ಕೋಣೆಗೆ ಕರೆದುಕೊಂಡು ಹೋಗಿ ಹಾಲು ಕುಡಿಸಿ ಹಾಸಿಗೆಯಲ್ಲಿ ಮಲಗಿಸಿದಳು. ಮಲಗಿದ ಭೀಮಣ್ಣ ಆಚೀಚೆ ಹೊರಳುವಾಗ ಆತನ ಬೆನ್ನಿಗೆ ಹಾವಿನ ಮುಳ್ಳು ಚುಚ್ಚಿತು. ಒಮ್ಮೆಗೆ ತಾಳಲಾರದಷ್ಟು ನೋವಾಯಿತು. ಆತ ಬಡ್ಕನೆ ಎದ್ದು ಇದು ತನ್ನನ್ನು ಕೊಂದುಬಿಡಲು ರಾಜಕುಮಾರಿ ಹೂಡಿದ ಆಟವೆಂದು ಬಗೆದು ಕೋಪಗೊಂಡ.

ಮತ್ಸ್ಯಕನ್ಯೆಯನ್ನು ನೆನಪಿಸಿಕೊಂಡು "ಈ ಅರಮನೆಯೆಲ್ಲಾ ಮಾಯವಾಗಿ ಇಲ್ಲಿ ಮೊದಲಿನ ಗುಡಿಸಲು ಎದ್ದು ನಿಲ್ಲಲಿ" ಎಂದು ಪ್ರಾರ್ಥಿಸಿಕೊಂಡ. ತನ್ನ ಕುದುರೆ ಏರಿ ಅಜ್ಜಿಯ ಮನೆಗೆ ವಾಪಾಸಾದ. ಮನೆಗೆ ಬಂದ ಭೀಮಣ್ಣನ ಬೆನ್ನಿಗೆ ಚುಚ್ಚಿದ ಮುಳ್ಳನ್ನು ಅಜ್ಜಿ ತೆಗೆದು ನೋಡಿದಳು. ಇದು ವಿಷಭರಿತವಾದ ಕನ್ನಡಿಹಾವಿನ ಮುಳ್ಳೆಂದು ಆಕೆಗೆ ಗೊತ್ತಾಯಿತು. ಬಗೆಬಗೆಯ ರೀತಿಯ ಔಷಧಗಳನ್ನೆಲ್ಲ ತಂದು ಆತನ ಬೆನ್ನಿಗೆ ಹಚ್ಚಿದಳು. ಆದರೆ ಗಾಯ ಗುಣವಾಗಲೇ ಇಲ್ಲ. ಉರಿ ಕಡಿಮೆಯಾಗಲೇ ಇಲ್ಲ. ಬೇರೆ ಬೇರೆ ವೈದ್ಯರನ್ನು ಕರೆಸಿ ಮದ್ದು ಮಾಡಿಸಿದಳು. ಹುಣ್ಣು ಕೆದರುತ್ತಾ ಹೋಯಿತು.

ಭೀಮಣ್ಣ ಸಿಟ್ಟಿನಿಂದ ಹೋದ ಬಳಿಕ ರಾಜಕುಮಾರಿ ಕಂಗಾಲಾದಳು. ಆಕೆಯ ಅಕ್ಕಂದಿರು ಕನ್ನಡಿ ಹಾವಿನ ಮುಳ್ಳು ತಂದಿಟ್ಟು ಭೀಮಣ್ಣನ ಬೆನ್ನಿಗೆ ಚುಚ್ಚುವಂತೆ ಮಾಡಿದರು ಎಂಬ ಸಂಗತಿ ಆಕೆಗೆ ತಿಳಿಯಿತು. ಆಕೆ ಗುಡಿಸಲು ಬಿಟ್ಟು "ಎಷ್ಟೇ ಕಷ್ಟವಾದರೂ ಭೀಮಣ್ಣನನ್ನು ಹುಡುಕಲೇಬೇಕು" ಎಂದು ಆಲೋಚಿಸಿ ವೇಷ ಮರೆಸಿ ಕೊಂಡು ಪಟ್ಟಣದ ದಾರಿ ಹಿಡಿದಳು. ಹೊತ್ತು ನೆತ್ತಿಗೇರುವಾಗ ಆಕೆ ಒಂದು ದೊಡ್ಡ ಕೆರೆಯ ಹತ್ತಿರ ಮುಟ್ಟಿದಳು. ಆ ಕೆರೆಯ ಪಕ್ಕದಲ್ಲೊಂದು ದೊಡ್ಡ ಮರವಿತ್ತು.

ಹೊತ್ತು ಮಲಗಿ ಬಿಡೋಣವೆಂದು ತಲೆಯಡಿಗೆ ತೋಳುಕೊಟ್ಟು ಮಲಗಿದಳು.

ಆ ಮರದ ಮೇಲೆ ಹಕ್ಕಿಗಳು ಗೂಡುಕಟ್ಟಿ ವಾಸಿಸುತ್ತಿದ್ದವು. ಮರಿಗಳಿಗೆ ಆಹಾರ ಕೊಡಲು ಗೂಡಿಗೆ ಬಂದ ಹಕ್ಕಿಗಳು ತಮ್ಮೊಳಗೇ ಮಾತಾಡತೊಡಗಿದವು. "ಈ ಊರಿನ ಅರಸನ ಕಿರಿಯಮಗಳು ಒಬ್ಬಾತನನ್ನು ಪ್ರೀತಿಸಿದ್ದಾಳಂತೆ. ಅವನ ಬೆನ್ನಿಗೆ ಕನ್ನಡಿ ಹಾವಿನ ಮುಳ್ಳು ಚುಚ್ಚಿದೆ. ಅದು ಬಹಳ ಜೋರಾಗಿದೆ. ಸರಿಯಾದ ಮದ್ದು ಮಾಡದಿದ್ದರೆ ಆತ ಇನ್ನು ಕೆಲವೇ ದಿನಗಳಲ್ಲಿ ಸಾಯುತ್ತಾನೆ" ಎಂದು ಒಂದು ಹಕ್ಕಿ ಹೇಳಿತು. "ಅದಕ್ಕೇನಾದರೂ ಮದ್ದು ನಿನಗೆ ಗೊತ್ತಿದೆಯೇ?" ಎಂದು ಇನ್ನೊಂದು ಹಕ್ಕಿ ಕೇಳಿತು. "ಗೊತ್ತಿದೆ ಈ ಮರದಿಂದ ಉದುರಿದ ಕಾಯಿಗಳನ್ನು ಗುದ್ದಿ ಕಷಾಯ ಮಾಡಿ ಆತನನ್ನು ಸ್ನಾನ ಮಾಡಿಸಬೇಕು. ಕಾಯಿಯ ಬೀಜಗಳನ್ನು ಅರೆದು ಎಣ್ಣೆಯಲ್ಲಿ ಕಾಯಿಸಿ ಗಾಯಕ್ಕೆ ಹಚ್ಚಬೇಕು" ಎಂದಿತು ಮತ್ತೊಂದು ಹಕ್ಕಿ.

ಇದನ್ನು ಕೇಳಿದ ತಕ್ಷಣ ರಾಜಕುಮಾರಿ ಎದ್ದು ಮರದ ಕೆಳಗೆ ಬಿದ್ದಿರುವ ಕಾಯಿಗಳನ್ನೆಲ್ಲ ಹೆಕ್ಕಿ ಬಟ್ಟೆಯಲ್ಲಿ ಕಟ್ಟಿಕೊಂಡಳು. ಇನ್ನು ತಡ ಮಾಡಬಾರದೆಂದು ಅಜ್ಜಿಯ ಮನೆ ಹುಡುಕಿಕೊಂಡು ಪಟ್ಟಣದ ಕಡೆಗೆ ವೇಗವಾಗಿ ನಡೆದಳು. ಅಜ್ಜಿಯ ಮನೆ ಹುಡುಕಿಕೊಂಡು ಬಂದ ರಾಜಕುಮಾರಿಗೆ ಕತ್ತಲಾಗುವ ಹೊತ್ತಿಗೆ ಮನೆ ಸಿಕ್ಕಿತು. ಆಕೆ ಅಜ್ಜಿಯನ್ನು ಕರೆದು "ಅಜ್ಜಿ ನಾನು ಒಬ್ಬಂಟಿ ಹೆಣ್ಣು. ಪಟ್ಟಣದಲ್ಲಿ ಕತ್ತಲಾಗಿಬಿಟ್ಟಿತು. ನನ್ನೂರಿಗೆ ಇನ್ನು ಈ ದಿನ ಹೋಗಲು ಸಾಧ್ಯವಿಲ್ಲ. ದಯಮಾಡಿ ಇವತ್ತೊಂದು ರಾತ್ರಿ ಮಲಗಲು ನನಗೆ ಜಾಗ ಕೊಡುತ್ತೀರಾ" ಎಂದು ಕೇಳಿದಳು. ಅದಕ್ಕೆ ಅಜ್ಜಿ "ಇಲ್ಲ ಇಲ್ಲ ಇಲ್ಲಿ ಮಲಗಲು ಜಾಗವೆಲ್ಲಿದೆ? ಇದ್ದ ಒಂದು ಕೋಣೆಯಲ್ಲಿ ನನ್ನ ಮೊಮ್ಮಗ ನರಳುತ್ತಾ ಮಲಗಿದ್ದಾನೆ. ಆತನ ಬೆನ್ನಿಗೆ ಕನ್ನಡಿಹಾವಿನ ಮುಳ್ಳು ಚುಚ್ಚಿದೆ. ಯಾರ್ಯಾರದೆಲ್ಲಾ ಮದ್ದು ಮಾಡಿಯಾಯಿತು. ಆದರೆ ಗುಣ ಕಾಣುವುದಿಲ್ಲ. ನಿನಗೆ ಮಲಗಲು ಜಾಗವೆಲ್ಲಿದೆ?" ಎಂದಳು ಅಜ್ಜಿ. ರಾಜಕುಮಾರಿ ಹಠ ಬಿಡಲಿಲ್ಲ. "ನಾನು ಬೇಕಾದರೆ ಜಗಲಿಯಲ್ಲಿ ಮಲಗುತ್ತೇನೆ. ನನಗೂ ಕೂಡ ನಾಟಿಮದ್ದು ಚೆನ್ನಾಗಿ ಗೊತ್ತು. ನಿಮ್ಮ ಮೊಮ್ಮಗನಿಗೆ ನಾನು ಮದ್ದು ಮಾಡಿ ನೋಡುತ್ತೇನೆ" ಎಂದು ಒತ್ತಾಯಿಸಿದಳು. ಕೊನೆಗೆ ಅಜ್ಜಿ ರಾಜಕುಮಾರಿಯನ್ನು ಮನೆಯೊಳಗೆ ಬಿಟ್ಟಳು. ರಾಜಕುಮಾರಿ ತಾನು ತಂದ ಕಾಯಿಯ ಬೀಜ ತೆಗೆದು ಎಣ್ಣೆಯಲ್ಲಿ ಅರೆದು ಗಾಯಕ್ಕೆ

ಗುಣಪಡಿಸಿಯೇ ಹೋಗಬೇಕೆಂದು ಮದ್ದು ಮಾಡಲು ಬಂದವಳೊಡನೆ ಹೇಳಿ ನಿಲ್ಲಿಸಿಕೊಂಡಳು. ಮೂರು ನಾಲ್ಕು ದಿವಸಗಳು ಕಳೆಯುವಾಗ ಭೀಮಣ್ಣನ ಗಾಯ ಪೂರ್ತಿ ಗುಣವಾಯಿತು. ಮರುದಿನ ಆತ ಎದ್ದು ತನ್ನ ಉಡುಪುಗಳನ್ನು ಧರಿಸಿಕೊಂಡು ಕಾಡಿನ ಪಕ್ಕದ ಗುಡಿಸಲಲ್ಲಿ ವಾಸಿಸುತ್ತಿದ್ದ ರಾಜಕುಮಾರಿಯನ್ನು ಕೊಂದುಬಿಟ್ಟೇ ಬರುತ್ತೇನೆಂದು ಸಿಟ್ಟಿನಿಂದ ಹೊರಟ. ಆಗ ಮಾರುವೇಷದಲ್ಲಿದ್ದ ರಾಜಕುಮಾರಿ ತನಗೆ ಭೀಮಣ್ಣ ನೀಡಿದ ವಜ್ರದ ಹಾರವನ್ನು ಆತನಿಗೆ ತೆಗೆದು ತೋರಿಸಿದಳು. ನಾನೇ ನಿನ್ನ ರಾಜಕುಮಾರಿ ಎಂದಳು. ಅಕ್ಕಂದಿರು ಮಾಡಿದ ಕುತಂತ್ರವನ್ನೆಲ್ಲ ವಿವರಿಸಿದಳು. ಭೀಮಣ್ಣನಿಗೆ ಸಮಾಧಾನವಾಯಿತು. ಕುದುರೆ ಮೇಲೆ ಆಕೆಯನ್ನು ಏರಿಸಿಕೊಂಡು ಆತ ರಾಜಕುಮಾರಿ ಮೊದಲಿದ್ದ ಗುಡಿಸಲಿನ ಬಳಿಗೆ ಬಂದ. ತನ್ನ ಮತ್ಸ್ಯಕನ್ಯೆಯನ್ನು ನೆನೆಸಿಕೊಂಡು "ಮೊದಲಿದ್ದ ರೀತಿಯ ಅರಮನೆಯನ್ನೇ ನನಗೆ ಸೃಷ್ಟಿಸಿಕೊಡು" ಧನಧಾನ್ಯ, ದಾಸ-ದಾಸಿಯರಿಂದ ತುಂಬಿರುವ ಈ ಅರಮನೆ ಯಾವತ್ತೂ ಸಂತೋಷದ ನೆಲೆಮನೆಯಾಗಿರಲಿ ಎಂದು ಪ್ರಾರ್ಥಿಸಿದ. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಅರಮನೆ ಮತ್ತೆ ಎದ್ದು ನಿಂತಿತು. ದಾಸ-ದಾಸಿಯರು ಓಡೋಡಿ ಬಂದು ರಾಜಕುಮಾರಿ ಮತ್ತು ಭೀಮಣ್ಣನನ್ನು ಮನೆಯೊಳಗೆ ಸ್ವಾಗತಿಸಿದರು.

ಅರಸನಿಗೆ ಈ ಸುದ್ದಿ ಮುಟ್ಟಿತು. ರಾಜ-ರಾಣಿಯರು ಕಿರಿಯ ರಾಜಕುಮಾರಿಯ ಅರಮನೆಗೆ ಬಂದರು. ಆಗ ಭೀಮಣ್ಣ ಭೀಮಕುಮಾರನಾಗಿದ್ದ. ತಮ್ಮ ಮಗಳನ್ನು ಭೀಮಕುಮಾರನಿಗೆ ಅದ್ದೂರಿಯಾಗಿ ಮದುವೆ ಮಾಡಿಕೊಡಲು ನಿರ್ಧರಿಸಿದರು. ಅಕ್ಕಂದಿರನ್ನು ಮಾತ್ರ ತಮ್ಮ ಮದುವೆಗೆ ಕರೆಯಬಾರದೆಂದು ತಂಗಿ ತನ್ನ ತಂದೆ ತಾಯಿಯೊಡನೆ ಕೇಳಿಕೊಂಡಳು. ತಂದೆ ತಾಯಿಗೆ ಅಕ್ಕಂದಿರು ಮಾಡಿದ ಅನ್ಯಾಯದ ಸಂಗತಿ ತಿಳಿಯಿತು. ಅದಕ್ಕೆ ಪ್ರತಿಕಾರವಾಗಿ ಅರಸ ತನ್ನ ಅರ್ಧರಾಜ್ಯವನ್ನು ಅಳಿಯನಿಗೆ ಬಿಟ್ಟುಕೊಟ್ಟು ಭೀಮಕುಮಾರನಿಗೆ ಪಟ್ಟಾಭಿಷೇಕ ಮಾಡಿದ. ಭೀಮಕುಮಾರ ಮತ್ತು ಆತನ ಮಡದಿ ರಾಜ್ಯಭಾರ ಮಾಡುತ್ತಾ ಸುಖವಾಗಿದ್ದರು. ಭೀಮಕುಮಾರನು ಅಡುಗೂಲಜ್ಜಿಯನ್ನು ಕರೆಸಿ ತನ್ನರಮನೆಯಲ್ಲಿ ಉಳಿಸಿಕೊಂಡನು.

ಟಿಪ್ಪಣಿ

೧. ಕನ್ನಡಿ ಹಾವು – ಅತ್ಯಂತ ವಿಷದ ಹಾವು (ಕಂದಡಿ– ತುಳು)

***

೨೯

ಕೂದಲುದ್ದದ ಮಹಾರಾಣಿ

ಒಂದಾನೊಂದು ಊರು. ಆ ಊರಿಗೊಬ್ಬ ಅರಸ. ಆತನಿಗೆ ಒಬ್ಬನೇ ಒಬ್ಬ ಮಗ. ಮಗ ಬೆಳೆದು ದೊಡ್ಡವನಾದ. ಮಗನಿಗೆ ಒಳ್ಳೆ ಹುಡುಗಿ ನೋಡಿ ಮದುವೆ ಮಾಡಿಸಬೇಕೆಂದು ತಂದೆ ಬಯಸಿದ್ದ. ಹಲವಾರು ರಾಜಕುಮಾರಿಯರನ್ನೆಲ್ಲಾ ಹೋಗಿ ನೋಡಿಯಾಯ್ತು. ಆದರೆ ರಾಜಕುಮಾರನಿಗೆ ಯಾವುದೂ ಇಷ್ಟವಾಗಲಿಲ್ಲ. ಅಷ್ಟರಲ್ಲಿ ಅರಸ ತೀರಿಹೋದ.

ಅರಸನ ಉತ್ತರಕ್ರಿಯೆ ಎಲ್ಲ ಮುಗಿದ ಬಳಿಕ ಪ್ರಧಾನಿ ರಾಜಕುಮಾರನೊಡನೆ ಆತನ ಮದ್ವೆ ವಿಷಯ ಪ್ರಸ್ತಾವ ಮಾಡಿದ. "ರಾಜಕುಮಾರ, ನೀನು ಈ ರಾಜ್ಯದ ಉತ್ತರಾಧಿಕಾರಿ. ನೀನು ಆದಷ್ಟು ಬೇಗನೆ ಪಟ್ಟವೇರಿ ಈ ಊರಿಗೆ ಅರಸನಾಗು. ಆದರೆ ಅದರ ಮೊದಲು ನೀನು ಮದ್ವೆಯಾಗಬೇಕು. ನಿನಗೆ ಯಾವ ರೀತಿಯ ಹುಡುಗಿಬೇಕೆಂದು ಹೇಳು, ನಾನು ಎಲ್ಲಿದ್ದರೂ ತರಿಸಿ ನಿನ್ನೊಂದಿಗೆ ಮದ್ವೆ ಮಾಡಿಸುತ್ತೇನೆ" ಎಂದ. ರಾಜಕುಮಾರ ಮದ್ವೆಯಾಗಲು ಒಪ್ಪಿದ. "ನನಗೆ ಉದ್ದ ಕೂದಲಿನ ಹುಡುಗಿಯೆಂದರೆ ಇಷ್ಟ. ಬೇರೆ ರಾಜ್ಯಕ್ಕೆಲ್ಲಾ ಹುಡುಗಿ ಹುಡುಕಿಕೊಂಡು ಹೋಗುವುದು ಬೇಡ. ನಮ್ಮ ರಾಜ್ಯದಲ್ಲೇ ಇರುವ ಅತ್ಯಂತ ಉದ್ದದ ತಲೆಕೂದಲಿನವಳನ್ನು ಹುಡುಕಿ ತನ್ನಿ. ಅವಳು ಬಡವಳಾದರೂ ಚಿಂತೆಯಿಲ್ಲ. ನಾನಾಕೆಯನ್ನು ಮದ್ವೆಯಾಗುತ್ತೇನೆ" ಎಂದು ಹೇಳಿ ಮದ್ವೆಯ ಜವಾಬ್ದಾರಿಯನ್ನು ಪ್ರಧಾನಿಗೆ ಒಪ್ಪಿಸಿಬಿಟ್ಟ.

ಕೂಡಲೇ ಪ್ರಧಾನಿ ದೂತರನ್ನು ಕರೆದು ರಾಜ್ಯದಲ್ಲಿರುವ ಹದಿಹರೆಯದ ಉದ್ದ ಕೂದಲಿನ ಎಲ್ಲ ಹುಡುಗಿಯರನ್ನೂ ಅವರವರ ತಂದೆ ತಾಯಿ ಮಂಗಳವಾರ ದಿನ ಪ್ರಧಾನಿಯವರ ಮನೆಗೆ ಕರೆತರಬೇಕೆಂದು ಡಂಗುರ ಸಾರಿಸಲು ಆಣತಿ ನೀಡಿದ. ದೂತರು ಪ್ರಧಾನಿಯ ಆಜ್ಞೆಯನ್ನು ಪಾಲಿಸಿದರು.

ಸಿದ್ದು ಆ ಊರಿನ ಸುಪ್ರಸಿದ್ಧ ವಾರಾಂಗನೆ. ಆಕೆಗೊಬ್ಬಳು ಮಗಳು. ಸುರಸುಂದರಿ ಬಂಗಾರಿ. ಬಂಗಾರಿ ಅತ್ಯಂತ ಚಂದದ ಹುಡುಗಿಯಾದರೂ ಉದ್ದಕೂದಲಿನವಳಲ್ಲ. ಹೇಗಾದರೂ ಮಾಡಿ ಆಕೆಯನ್ನು ರಾಜಕುಮಾರನಿಗೆ ಒಪ್ಪಿಸಿಬಿಡಬೇಕೆಂದು ಸಿದ್ದು ಆಲೋಚನೆ ಮಾಡುತ್ತಿದ್ದಳು. ಡಂಗುರ ಸಾರಿದವರ ಮಾತು ಕೇಳಿ ಆಕೆಗೆ ಬಹಳ ಸಂತೋಷವಾಯಿತು.

ಮಂಗಳವಾರ ದಿನ ಸಿದ್ದು ತನ್ನ ಮಗಳನ್ನು ಮುಂಜಾನೆ ಎಬ್ಬಿಸಿ ಪನ್ನೀರಿನಲ್ಲಿ ಸ್ನಾನ ಮಾಡಿಸಿದಳು. ಜರಿಸೀರೆ, ಕುಪ್ಪಸ ತೊಡಿಸಿದಳು. ಅತ್ಯುತ್ತಮವಾದ ಅತಿ ಉದ್ದದ ಕಪ್ಪುಬಣ್ಣದ ಚೌರಿ(ಉದುರಿ)ಯನ್ನು ತರಿಸಿ ಮಗಳ ಕೂದಲಿಗೆ ಜೋಡಿಸಿ ಸುಂದರವಾಗಿ ಜಡೆ ಹೆಣೆದು ಹೂ ಮುಡಿಸಿ ಜಲ್ಲಿ ಹಾಕಿಸಿಬಿಟ್ಟಳು. ಅವಳ ಉದ್ದದ ಜಡೆ ಈಗ ನೆಲಕ್ಕೆ ಮುಟ್ಟುತ್ತಿತ್ತು. ಅಂದವಾಗಿ ಮುಖಾಲಂಕಾರ ಮಾಡಿ ಆ ಮುಖಕ್ಕೊಪ್ಪುವಂತೆ ಕಿವಿಗೆ ಓಲೆ, ಮೂಗಿಗೆ ನತ್ತು, ನೆತ್ತಿಗೆ ಮುತ್ತು ಬೈತಲೆ, ಕುತ್ತಿಗೆಗೆ ಸರಗಳು, ಕೈಗೆ ಬಳೆ, ತೋಳಿಗೆ ತೋಳಬಂಧಿ, ಮುಂಗೈ ಸರಪಳಿ, ಬೆರಳಿಗೆ ಉಂಗುರ, ಸೊಂಟಕ್ಕೆ ಉಡ್ಯಾಣ, ಕಾಲಿಗೆ ಕಡಗ, ಪಾದಕ್ಕೆ ಹಾವುಗೆ ಎಲ್ಲವನ್ನೂ ತೊಡಿಸಿ ಜರಿಸೀರೆ ಕಣ ರವಕೆಯಿಂದ ಸಿಂಗರಿಸಿ ಮಗಳ ಸೌಂದರ್ಯಕ್ಕೆ ತಾನೇ ಮಾರು ಹೋದಳು. ತನ್ನ ಮಗಳನ್ನು ರಾಜಕುಮಾರ ನೋಡಿದರೆ ಸಾಕು ಮರುಳಾಗಿಯೇ ಬಿಡುತ್ತಾನೆಂದು ಭಾವಿಸಿಕೊಂಡು ಮಗಳ ಜೊತೆಗೂಡಿ ಕುದುರೆ ಸಾರೋಟು ಏರಿ ಪ್ರಧಾನಿಯ ಅರಮನೆಗೆ ಹೊರಟಳು.

ಮಂಗಳವಾರ ದಿನ ಪ್ರಧಾನಿಯವರ ಮನೆ ಮುಂದೆ ಬಹಳಷ್ಟು ಮಂದಿ ನೆರೆದಿದ್ದರು. ಬಂದವರಿಗೆ ಬಾಯಾರಿಕೆ ನೀಡಿ ಕುಳ್ಳಿರಿಸಲಾಯಿತು. ಅಷ್ಟು ಹೊತ್ತಿಗೆ ರಾಜಮಾತೆ ಅಲ್ಲಿಗೆ ತನ್ನ ದಾಸಿಯರೊಂದಿಗೆ ಬಂದರು. ಆಕೆ ಎಲ್ಲಾ ಹುಡುಗಿಯರನ್ನು ಸಾಲಾಗಿ ನಿಲ್ಲುವಂತೆ ಹೇಳಿದರು. ದಾಸಿಯರೊಡನೆ ಹೇಳಿ ಎಲ್ಲರ ಜಡೆ ಬಿಚ್ಚಿಸಿ ಹಾಕಿಸಿದಳು. ಅಷ್ಟಾಗುವಾಗ ಎಲ್ಲರ ಕೃತಕ ಜಡೆಯ ಗುಟ್ಟು ರಟ್ಟಾಯಿತು. ಉದುರಿಗಳು ಕಳಚಿ ಹೋದಾಗ ಮೋಟು ಜಡೆಗಳು ಕಾಣಿಸಿಕೊಂಡವು. ಸಿದ್ದುವಿನ ಮಗಳು ಬಂಗಾರಿಯೂ ಸ್ಪರ್ಧೆಯಿಂದ ಹಿಂದೆ ಸರಿಯಬೇಕಾಯಿತು. ರಾಜಮಾತೆ ಬಂದ ಹುಡುಗಿಯರಲ್ಲಿ ಮೂವರನ್ನು ಆಯ್ಕೆಗೊಳಿಸಿದಳು. ಎದ್ದು ನಿಂತಾಗ ಆ ಮೂವರ ಕೂದಲು ನೆಲ ಮುಟ್ಟುತ್ತಿತ್ತು. ಅವರಲ್ಲಿ ಒಬ್ಬಳದ್ದು ನರೆಕೂದಲು, ಇನ್ನೊಬ್ಬಳದ್ದು ಕೆಂಚಿಕೂದಲು, ಮೂರನೆಯವಳದ್ದು ಕಪ್ಪುಕೂದಲು. ಈ ಮೂವರಲ್ಲಿ ಬೇಕಾದವರನ್ನು ರಾಜಕುಮಾರನೇ ಆಯ್ಕೆ ಮಾಡಿಕೊಳ್ಳಲಿ ಎಂದೆಣಿಸಿಕೊಂಡು ಅವರನ್ನುಳಿಸಿಕೊಂಡು ಉಳಿದವರನ್ನೆಲ್ಲಾ ಊಟ ಮಾಡಿಕೊಂಡು ಮನೆಗೆ ಹೋಗುವಂತೆ ಹೇಳಿದಳು. ಎಲ್ಲರೂ ನಿರಾಶೆಯಿಂದ ಹೊರಟು ಹೋದರು. ವಾರಾಂಗನೆ ಸಿದ್ದುವಿಗೆ ತನ್ನ ಮಗಳು ಆಯ್ಕೆಗೊಳ್ಳಲಿಲ್ಲವೆಂದು ಬಹಳಷ್ಟು ಸಿಟ್ಟು ಬಂತು. ರಾಜಕುಮಾರನ ಮದ್ವೆ ಮುಗಿಯಲಿ, ಇವರಿಗೆಲ್ಲ ಬುದ್ಧಿ ಕಲಿಸದೆ ಬಿಡುವುದಿಲ್ಲವೆಂದು ಶಪಥ ಹಾಕಿಕೊಂಡು ಮಗಳೊಂದಿಗೆ ಹೊರಟುಹೋದಳು.

ಮೂವರು ಕನ್ಯೆಯರನ್ನು ರಾಜಮಾತೆ ಅರಮನೆಗೆ ಕರೆದೊಯ್ದು ರಾಜಕುಮಾರನಿಗೆ ತೋರಿಸಿದಳು. ಮೂವರು ಚೆಲುವೆಯರು ಮಾತ್ರವಲ್ಲ ಮೂವರೂ ತಲೆಬಿಚ್ಚಿ ಹಾಕಿದಾಗ ಅವರ ತಲೆಕೂದಲು ತುದಿನೆಲ ಸಾರಿಸುವಂತಿತ್ತು. ಕೂದಲ ತುದಿಗೆ ಮಣ್ಣಾಗಬಾರದೆಂದು ಅವರು ಕುಳಿತುಕೊಂಡಾಗ, ನಡೆದಾಡುವಾಗ ಕೂದಲನ್ನೆತ್ತಿ ಎದೆ ಮೇಲೆ ಹಾಕಿ ಕೊಳ್ಳುತ್ತಿದ್ದರು.

ರಾಜಕುಮಾರನಿಗೆ ಯಾರನ್ನು ಆಯ್ಕೆ ಮಾಡುವುದೆಂದು ಕಸಿವಿಸಿಯಾಯಿತು. ಒಬ್ಬಳನ್ನು ಆಯ್ಕೆಗೊಳಿಸಿದರೆ ಇನ್ನಿಬ್ಬರಿಗೆ ಬೇಸರವಾಗುತ್ತದಲ್ಲಾ ಎಂದು ಬಗೆದ ಆತ ಮೂವರನ್ನೂ ಮದುವೆಯಾಗುತ್ತೇನೆ ಎಂದುಬಿಟ್ಟ.

ರಾಜಕುಮಾರನ ಮದ್ವೆ ದಿನ ನಿಶ್ಚಯವಾಯಿತು. ಪ್ರಧಾನಿ ಮದ್ವೆಯ ಏರ್ಪಾಡು ನಡೆಸಿದ. ಅರಮನೆ ಎದುರಿನ ಬಾಕ್ಯಾರು ಹತ್ತುಮುಡಿ ಗದ್ದೆಗೆ ಚಪ್ಪರ ಹಾಕಿಸಿ ಸಿಂಗರಿಸಲಾಯಿತು. ಅತ್ಯಂತ ಸುಂದರ ಮಂಟಪ ರಚಿಸಲಾಯಿತು. ಹಿರಿಯರಿಗೆಲ್ಲಾ ಹೇಳಿಕೆ ನೀಡಲಾಯಿತು. ಊರವರಿಗೆ ಡಂಗುರ ಸಾರಲಾಯಿತು. ಪರವೂರಿಗೆ ಓಲೆ ಕಳುಹಿಸಲಾಯಿತು. ಊಟದಟ್ಟಣೆಗೆ ಬೇಕಾದ ಸಾಮಗ್ರಿಗಳನ್ನೆಲ್ಲಾ ತರಿಸಿಕೊಳ್ಳಲಾಯಿತು. ಭೋಜನಶಾಲೆಗೆ ಅಡುಗೆ ಭಟ್ಟರನ್ನೆಲ್ಲಾ ಬರಮಾಡಿಕೊಳ್ಳಲಾಯಿತು. ಮದುಮಗಳಂದಿರಿಗೆ ಬೇಕುಬೇಕಾದ ಅಮೂಲ್ಯವಾದ ಸೀರೆ, ರವಕೆ, ಒಡವೆ, ವಜ್ರಾಭರಣಗಳನ್ನು ಪರವೂರಿನಿಂದ ತರಿಸಿಕೊಳ್ಳಲಾಯಿತು.

ಬ್ಯಾಂಡು, ವಾಲಗ, ಕೊಂಬು, ಕಹಳೆ, ಗರ್ನಾಲ್‌ನವರೆಲ್ಲಾ ಎಲ್ಲಾ ಕಡೆಯಿಂದ ಬಂದು ಸೇರಿದರು. ಗೌಜಿ, ಗದ್ದಲ, ಗಮ್ಮತ್ತಿನೊಂದಿಗೆ ಮದ್ವೆ ವಿಜೃಂಭಣೆಯಿಂದ ನೆರವೇರಿತು. ರಾಜಕುಮಾರ ಮೂವರು ಕನ್ಯೆಯರನ್ನು ಮದ್ವೆಯಾಗಿ ರಾಜ್ಯದ ಪಟ್ಟವೇರಿ ರಾಜ್ಯಾಡಳಿತ ಪ್ರಾರಂಭಿಸಿದನು.

ರಾಣಿಯವರಲ್ಲಿ ಒಬ್ಬಳು ನರೆಕೂದಲಿನವಳು, ಇನ್ನೊಬ್ಬಳು ಕೆಂಚಿಕೂದಲಿನವಳು, ಮತ್ತೊಬ್ಬಳು ಕರಿ ಕೂದಲಿನವಳು – ಈ ಮೂವರಲ್ಲಿ ಪಟ್ಟದ ರಾಣಿಯಾಗಿ ಯಾರನ್ನು ಮಾಡುವುದೆಂಬ ಸಮಸ್ಯೆ ಬಂತು. ಸಮಸ್ಯೆ ಪರಿಹಾರಕ್ಕೆ ರಾಜಕುಮಾರನು ಒಂದು ಪಂಥವನ್ನು ಏರ್ಪಡಿಸಿದನು. “ಇನ್ನೊಂದು ತಿಂಗಳೊಳಗೆ ಇವರಲ್ಲಿ ಯಾರ ತಲೆ ಕೂದಲು ಅತಿಹೆಚ್ಚು ಬೆಳೆಯುವುದೋ ಅವರನ್ನೇ ನಾನು ಪಟ್ಟದ ರಾಣಿಯನ್ನಾಗಿ ಆಯ್ಕೆ ಮಾಡಿಕೊಳ್ಳುತ್ತೇನೆ” ಎಂದು ಹೇಳಿ ಮೂವರಿಗೂ ಒಂದು ತಿಂಗಳ ಅವಧಿ ಕೊಟ್ಟನು.

ಈ ಸುದ್ದಿ ರಾಜ್ಯದಲ್ಲೆಲ್ಲಾ ಹಬ್ಬಿತು. ಉದ್ದ ಕೂದಲು ಬೆಳೆಯುವ ಔಷಧಿ ಎಣ್ಣೆ ಮಾರುವ ಅನೇಕ ಪಂಡಿತರುಗಳು, ವೈದ್ಯರುಗಳು, ಅರಮನೆಗೆ ಬಂದು ರಾಣಿಯರನ್ನು ಭೇಟಿ ಮಾಡಿ ಮುಲಾಮು ಎಣ್ಣೆ ಕೊಟ್ಟು ಹೋಗತೊಡಗಿದರು. ಹೀಗೆ ೧೦–೧೫ ದಿನಗಳು ಕಳೆದವು. ಯಾರ ಮದ್ದು ಕೂಡ ಪ್ರಯೋಜನಕ್ಕೆ ಬೀಳಲಿಲ್ಲ. ಕೂದಲು ಒಂದು ಅಂಗುಲವೂ ಉದ್ದ ಬೆಳೆಯಲಿಲ್ಲ.

ಈ ಸುದ್ದಿ ಊರಿನ ವಾರಾಂಗನೆ ಸಿದ್ದುಗೆ ಮುಟ್ಟಿತು. ರಾಜನಿಗೆ ಬುದ್ಧಿ ಕಲಿಸಲು ಇದು ತಕ್ಕ ಸಮಯವೆಂದು ಆಕೆ ಭಾವಿಸಿದಳು. ಕೂದಲು ಉದುರುವ ಔಷಧವನ್ನು ಆಕೆ ಪರವೂರಿನಿಂದ ಗುಟ್ಟಾಗಿ ತರಿಸಿಕೊಂಡಳು. ಔಷಧವನ್ನು ಮೂರು ಪೊಟ್ಟಣಗಳಲ್ಲಿ ಕಟ್ಟಿಕೊಂಡು ತಾನು ಕೊರವಂಜಿಯ ಮಾರುವೇಷ ಧರಿಸಿ ಇನ್ನಿತರ ಎಣ್ಣೆ ಬಾಟಲಿಗಳನ್ನು

ಬುಟ್ಟಿಯಲ್ಲಿ ತುಂಬಿಸಿ ಹೊತ್ತುಕೊಂಡು ಅರಮನೆ ಎದುರಿನಿಂದ "ಔಷಧಿ ಬೇಕೇ? ಔಷಧಿ, ಕೂದಲು ಬೆಳೆಸುವ ಔಷಧಿ" ಎಂದು ಗಟ್ಟಿಯಾಗಿ ಹೇಳುತ್ತಾ ಆಚೆ ಈಚೆ ಓಡಾಡತೊಡಗಿದಳು. ಇದನ್ನು ಕಂಡ ದಾಸಿಯರು ಅಂತಃಪುರಕ್ಕೆ ಹೋಗಿ ರಾಣಿಯರಿಗೆ ಸುದ್ದಿ ಮುಟ್ಟಿಸಿದರು. ರಾಣಿಯರು ಅವಳನ್ನು ತಮ್ಮ ತಮ್ಮ ಕೋಣೆಗಳಿಗೆ ಬರಮಾಡಿ ಕೊಂಡರು. "ಈ ಔಷಧ ತಲೆಗೆ ಹಚ್ಚಿಕೊಂಡರೆ ತಲೆ ಕೂದಲು ಒಂದು ದಿನದಲ್ಲಿ ಒಂದು ಅಂಗುಲ ಉದ್ದ ಬೆಳೆಯುತ್ತದೆ. ಮುಂದಿನ ೧೨ ದಿನಗಳಲ್ಲಿ ಒಂದು ಅಡಿಯಷ್ಟು ಬೆಳೆಯುತ್ತದೆ" ಎಂದು ಹೇಳಿ ರಾಣಿಯರನ್ನು ನಂಬಿಸಿದಳು. ಬೇರೆ ಬೇರೆಯಾಗಿ ಭೇಟಿಮಾಡಿ ಪುಸಲಾಯಿಸಿ ಒಬ್ಬರಿಗೆ ಔಷಧಿ ಕೊಟ್ಟದ್ದು ಇನ್ನೊಬ್ಬರಿಗೆ ತಿಳಿಯ ಬಾರದೆಂದು ಹೇಳಿ ಮೂವರಿಗೂ ಬೇರೆ ಬೇರೆಯಾಗಿ ಔಷಧ ಕೊಟ್ಟು ಅವರಿಂದ ಪ್ರತ್ಯೇಕ ಸಂಭಾವನೆ ಪಡೆದು ಹೊರಟುಹೋದಳು.

ರಾಣಿಯರು ಕೊರವಂಜಿ ಹೇಳಿದಂತೆ ತಲೆಕೂದಲಿನ ಬುಡಕ್ಕೆ ಆಕೆ ಕೊಟ್ಟ ಮುಲಾಮನ್ನು ಹಚ್ಚಿ ಕೂದಲು ಉದ್ದ ಬೆಳೆಯುವ ಸಲುವಾಗಿ ಕೂದಲನ್ನು ಹಿಡಿದು ನಿಧಾನವಾಗಿ ಎಳೆಯತೊಡಗಿದರು. ಹೀಗೆ ಎಳೆಯುವಾಗ ಕೂದಲು ಒಂದೊಂದಾಗಿ ಕಿತ್ತು ಬರತೊಡಗಿತು. ರಾಣಿಯರಿಗೆ ಹೆದರಿಕೆ ಆಯಿತು. ತಲೆಗೆ ಹಚ್ಚಿದ ಮುಲಾಮು ಎಲ್ಲಾ ಕೂದಲನ್ನು ಕಿತ್ತು ಬಿಡುತ್ತದೆ ಎಂದು ಹೆದರಿದ ರಾಣಿಯರು ಬಚ್ಚಲಿಗೆ ಹೋಗಿ ತಲೆ ತೊಳೆದು ಸ್ನಾನ ಮಾಡತೊಡಗಿದರು. ಆಗ ತಲೆಯ ಎಲ್ಲ ಕೂದಲು ಕಿತ್ತು ಹೋಗಿ ಎಲ್ಲರ ತಲೆಯೂ ಬೋಳುಮಂಡೆಯಾಯಿತು. ನರೆಕೂದಲಿನವಳ ತಲೆಯಲ್ಲಿ ಒಂದು ಕೂದಲು ಉಳಿಯಿತು. ಕೆಂಚಿ ಕೂದಲಿನವಳ ತಲೆಯಲ್ಲಿ ಎರಡು ಕೂದಲು ಉಳಿಯಿತು. ಕಪ್ಪುಕೂದಲಿನವಳ ತಲೆಯಲ್ಲಿ ಮೂರು ಕೂದಲು ಉಳಿಯಿತು. ಒಬ್ಬರು ಇನ್ನೊಬ್ಬರಿಗೆ ತಿಳಿಯದಂತೆ ಮಾಡಿದ ಔಷಧೋಪಚಾರದಿಂದ ಮೂವರೂ ಕಂಗಾಲಾದರು. ಮೂವರೂ ತಮ್ಮ ಗೋಳನ್ನು ರಾಜನಲ್ಲಿ ಭಿನ್ನವಿಸಿಕೊಂಡರು.

ರಾಜನಿಗೆ ಕೊರವಂಜಿಯ ಮೇಲೆ ತಾಳಲಾರದ ಸಿಟ್ಟು ಬಂತು. ದೂತರನ್ನು ಕರೆದು "ಮದ್ದು ಮಾರಾಟ ಮಾಡಿದ ಆಕೆ ಯಾರೆಂದು ತಿಳಿದಕೂಡಲೇ ಹಿಡಿದು ತನ್ನಿ. ಆಕೆಯ ತಲೆ ಕಡಿಯಿರಿ" ಎಂದು ಆಣತಿ ನೀಡಿದನು. ಹಾಗೆಯೇ ರಾಜ ವೈದ್ಯರನ್ನು ಕೂಡಲೇ ಅರಮನೆಗೆ ಕರೆತರುವಂತೆ ಹೇಳಿ ಕಳುಹಿಸಿದನು. ರಾಜವೈದ್ಯರು ಅರಮನೆಗೆ ಬಂದು ರಾಣಿಯರ ತಲೆಯನ್ನು ಪರೀಕ್ಷಿಸಿ "ಕೂಡಲೇ ಕೂದಲು ಬರುವ ಔಷಧ ತರಬೇಕಾದರೆ ಬಹಳ ಸಾಧನೆ ಮಾಡಬೇಕಾಗುತ್ತದೆ. ಈ ರಾಜ್ಯದ ಗಡಿಯಲ್ಲಿ ಒಂದು ನದಿ ಹರಿಯುತ್ತದೆ. ಆ ನದಿಯನ್ನು ದಾಟಿ ಮುಂದೆ ಹೋದರೆ ದಟ್ಟವಾದ ಕಾಡುಗಳಿಂದ ತುಂಬಿದ ಒಂದು ಬೆಟ್ಟವಿದೆ. ಕಾಡು ದಾಟಿ ಬೆಟ್ಟ ಏರಿದಾಗ ಅಲ್ಲೊಂದು ಅರಳಿ ಮರವಿದೆ, ಮರದ ಪಕ್ಕದಲ್ಲಿ ದೇವಿಯ ಗುಡಿಯಿದೆ. ಗುಡಿಯ ಎದುರುಗಡೆ ಒಂದು ಬಿಸಿನೀರಿನ ಕೊಳವಿದೆ. ಇನ್ನೊಂದು ತಣ್ಣೀರಿನ ಕೊಳವಿದೆ. ಬಿಸಿನೀರಿನಲ್ಲಿ

ಮಿಂದು ಪರಿಶುದ್ಧಳಾಗಿ ಗುಡಿಯ ಕೇಶವಣಿದೇವಿಗೆ ಪೂಜೆ ಸಲ್ಲಿಸಿ ತಣ್ಣೀರಿನ ಕೊಳದಲ್ಲಿ ಮುಳುಗಿ ಎದ್ದಾಗ ನಿಮ್ಮ ತಲೆಯಲ್ಲಿ ಮೊದಲಿದ್ದುದಕ್ಕಿಂತಲೂ ಉದ್ದದ ಕೂದಲು ಬೆಳೆಯುತ್ತದೆ. ಅಲ್ಲಿಗೆ ಒಬ್ಬೊಬ್ಬರಾಗಿ ಹೋಗಬೇಕು, ಎಲ್ಲರೂ ಒಟ್ಟಾಗಿ ಹೋಗಬಾರದು" ಎಂದು ಹೇಳಿದರು.

ಮೊದಲು ಯಾರು ಬೆಟ್ಟಕ್ಕೆ ಹೋಗುವುದು ಎಂದು ಚರ್ಚೆಯಾಯಿತು. ನರೆಕೂದಲಿನವಳು ತಾನು ಹೋಗುತ್ತೇನೆ ಎಂದು ಹಟಮಾಡಿದಳು. ರಾಜನು ಮೊದಲು ಹೋಗಲು ಅವಳಿಗೆ ಅವಕಾಶ ಮಾಡಿಕೊಟ್ಟನು. ರಾಜವೈದ್ಯರು ಹೇಳಿದಂತೆ ಆಕೆ ತುಂಬಾ ದೂರ ನಡೆದು ಹೋಗುವಾಗ ಅಲ್ಲೊಂದು ತುಂಬಿ ಹರಿಯುವ ನದಿ ಕಂಡಿತು. ಈ ನದಿಯನ್ನು ದಾಟಿ ಹೋಗಲು ಅಲ್ಲಿ ಯಾವ ವ್ಯವಸ್ಥೆಯೂ ಇರಲಿಲ್ಲ. ಯಾರೊಬ್ಬರು ಜನರೂ ಇರಲಿಲ್ಲ. ಆಕೆಗೆ ಈಜು ಬರುತ್ತಿರಲಿಲ್ಲ. ಆಕೆ ಕುಳಿತು "ನದಿ ದಾಟುವುದು ಹೇಗಪ್ಪಾ?" ಎಂದು ಚಿಂತಿಸತೊಡಗಿದಳು. ಅಷ್ಟರಲ್ಲಿ ಆಕೆಯ ಹಿಂದಿನಿಂದ ಒಂದು ದನವು ಬಂದು ಆಕೆಯ ಬೆನ್ನು ನೆಕ್ಕತೊಡಗಿತು. ಹೆದರಿಕೆಯಿಂದ ಒಮ್ಮೆಲೆ ಎದ್ದು ನಿಂತ ಅವಳು ದನಕ್ಕೊಂದು ಬಾರಿಸಿ ಮುಂದೆ ಹೋದಳು. ದನವು ಅವಳ ಹಿಂದಿನಿಂದ ಹೋಯಿತು. ದನವು ತನಗೆ ಹಾಯಲು ಬರುತ್ತದೆ ಎಂದು ಭಾವಿಸಿದ ಅವಳು ಓಡತೊಡಗಿದಳು. ದನವು ಆಕೆಯನ್ನು ಹಿಂಬಾಲಿಸಿತು. ಇನ್ನು ನಿಧಾನ ನಡೆದರೆ ತನ್ನನ್ನು ತಿವಿದುಬಿಡುತ್ತದೆ ಎಂದು ಆಲೋಚಿಸಿ, ಬಂದ ದಾರಿ ಹಿಡಿದು ಅರಮನೆಗೆ ವೇಗವಾಗಿ ಹಿಂತಿರುಗಿ ಬಂದುಬಿಟ್ಟಳು.

ಮಾರನೇ ದಿನ ಕೆಂಚು ಕೂದಲಿನವಳು ಬೆಟ್ಟಕ್ಕೆ ಹೊರಟಳು. ಅವಳು ನದಿ ದಂಡೆಗೆ ಮುಟ್ಟಿದಾಗ ದನವು ಅಲ್ಲೇ ನಿಂತಿತ್ತು. ನರೆಕೂದಲಿನ ರಾಣಿ ದನದ ಕತೆಯನ್ನು ಅವಳಿಗೆ ಮೊದಲೇ ಹೇಳಿದ್ದಳು. ಹಾಗಾಗಿ ಇವಳಿಗೆ ದನವನ್ನು ನೋಡಿದ ಕೂಡಲೇ ಹೆದರಿಕೆ ಪ್ರಾರಂಭವಾಯಿತು. ದನವು ತನ್ನನ್ನು ನೋಡಿದರೆ ಹಾಯ್ದು ಕೊಂದುಬಿಡುತ್ತದೆ; ನಾನದರ ಕಣ್ಣಿಗೆ ಬೀಳುವುದು ಬೇಡ ಎಂದು ಮರೆಯಾಗಿ, ಬಂದ ದಾರಿ ಹಿಡಿದಳು. "ಬಂದ ದಾರಿಗೆ ಸುಂಕವಿಲ್ಲ" ಎಂದು ಬಗೆದು ಅರಮನೆಗೆ ಹಿಂತಿರುಗಿದಳು.

ಮೂರನೇ ದಿನ ಕಪ್ಪು ಕೂದಲಿನವಳು ಬೆಟ್ಟಕ್ಕೆ ಹೊರಟಳು. ಆಕೆ ನದಿ ದಂಡೆಗೆ ಬಂದಾಗ ಅಲ್ಲಿ ಮೇಯುತ್ತಿರುವ ದನವನ್ನು ಕಂಡಳು. ಆಕೆ ದನದ ಹತ್ತಿರ ಹೋಗಿ ದನದ ಮೈ ನೇವರಿಸಿದಳು. ದನವು ಪ್ರೀತಿಯಿಂದ ಆಕೆಯ ಕೈಯನ್ನು ನೆಕ್ಕುತ್ತಾ ಮಾತನಾಡತೊಡಗಿತು. "ನೀನು ಬೆಟ್ಟದ ಕಡೆ ಹೋಗುವವಳೆಂದು ನನಗೆ ಗೊತ್ತು, ನಾನು ಕಣ್ಣುಗಳಿಲ್ಲದ ಕುರುಡಿ, ನನಗೆ ಜೋರು ಬಾಯಾರಿಕೆಯಾಗುತ್ತದೆ ನೀರು ಕುಡಿಯಬೇಕು, ನದಿ ಎಲ್ಲಿದೆ ಎಂದು ಗೊತ್ತಿಲ್ಲ, ನನ್ನ ಕರು ನದಿಯಿಂದ ಆಚೆ ದಂಡೆಯಲ್ಲಿದೆ. ನಾನು ಕರುವನ್ನು ಕಂಡು ಅದಕ್ಕೆ ಹಾಲು ಕುಡಿಸಬೇಕು. ನನಗೆ ಸಹಾಯ ಮಾಡುತ್ತಿಯಾ?" ಎಂದು ಕೇಳಿತು. ಆಗ ರಾಣಿ "ನನ್ನೊಂದಿಗೆ ಬಾ

ನಾನು ನದಿ ತೋರಿಸುತ್ತೇನೆ" ಎಂದು ದನವನ್ನು ನದಿಯ ಬದಿಗೆ ಕರೆದುಕೊಂಡು ಹೋದಳು. ದನವು ಹೊಟ್ಟೆ ತುಂಬಾ ನೀರು ಕುಡಿಯಿತು. ನಂತರ "ನಾನು ಈಜಾಡಿ ಕೊಂಡು ನದಿ ದಾಟುತ್ತೇನೆ ನೀನು ನನ್ನ ಬೆನ್ನಿನ ಮೇಲೆ ಕುಳಿತುಕೋ"ಎಂದು ಮಂಡಿಯೂರಿತು. ರಾಣಿ ದನದ ಬೆನ್ನಿನ ಮೇಲೆ ಕುಳಿತುಕೊಂಡಳು. ದನವು ಈಜಾಡಿ ನದಿ ದಾಟಿತು. ಇಬ್ಬರೂ ಆಚೆ ದಂಡೆಯನ್ನು ಸೇರಿದರು. ದನವು ಅಂಬಾ" ಎಂದು ಕರುವನ್ನು ಕರೆಯಿತು. ಕರು ಓಡಿ ಬಂದು ದನದ ಹಾಲು ಕುಡಿಯಿತು. "ನೀನು ಒಂದು ಎಲೆಯಲ್ಲಿ ದೊನ್ನೆ ಮಾಡಿಕೊಂಡು ಬಾ, ಅದ್ರಲ್ಲಿ ನನ್ನ ಹಾಲನ್ನು ಕರೆದು ಬೇಕಾಗುವಷ್ಟು ಕುಡಿ. ನೀನು ಈ ಕಾಡು ದಾರಿಯಿಂದ ಮುಂದೆ ಹೋಗು, ಮುಂದೆ ಹೋಗಿ ಬೆಟ್ಟ ಏರಿದಾಗ ಅಲ್ಲಿ ದೇವಿಯ ಗುಡಿ ಕಾಣುತ್ತದೆ. ಕೆರೆಯಲ್ಲಿ ಮಿಂದು ಪೂಜೆ ನಡೆಸಿ ಬರುವವರೆಗೆ ನಾನಿಲ್ಲೇ ಕಾಯುತ್ತೇನೆ. ನಿನ್ನನ್ನು ನದಿ ದಾಟಿಸುತ್ತೇನೆ" ಎಂದು ದನವು ರಾಣಿಗೆ ಹೇಳಿತು. ರಾಣಿ ದೊನ್ನೆಯಲ್ಲಿ ಹಾಲು ಕರೆದು ಕುಡಿದು ಹೊಟ್ಟೆ ತುಂಬಿಸಿಕೊಂಡಳು. ನಂತರ ದನಕ್ಕೆ ಕೃತಜ್ಞತೆ ಸಲ್ಲಿಸಿ ಕಾಡುದಾರಿ ಹಿಡಿದಳು.

ಸ್ವಲ್ಪ ದೂರ ಮುಂದೆ ಹೋಗುವಾಗ ಆಕೆಗೆ ಆನೆಯೊಂದು ಘೀಳಿಡುವ ಸದ್ದು ಕೇಳಿತು. ರಾಣಿಗೆ ಹೆದರಿಕೆಯಾದರೂ ಧೈರ್ಯ ಮಾಡಿಕೊಂಡು ಮುಂದೆ ಹೋದಳು. ಆಗ ದೊಡ್ಡ ಆನೆಯೊಂದು ಆಕೆಯ ದಾರಿಗೆ ಅಡ್ಡ ಬಂದು ನಿಂತುಕೊಂಡಿತು. ರಾಣಿ ಧೈರ್ಯದಿಂದ ಆನೆಯ ಸೊಂಡಿಲನ್ನು ನೇವರಿಸಿದಳು. ಆನೆಯ ಸೊಂಡಿಲಿಗೆ ದೊಡ್ಡದೊಂದು ಬಿದಿರು ಚುಚ್ಚಿಕೊಂಡಿರುವುದನ್ನು ಆಕೆ ಕಂಡು ಅದನ್ನು ಕೈಯಿಂದ ಕಿತ್ತು ತೆಗೆದು ಬಿಸಾಡಿದಳು. ಪಕ್ಕದಲ್ಲಿದ್ದ ಮದ್ದು ಸೊಪ್ಪಿನ ಎಲೆಗಳನ್ನು ಹಿಸುಕಿ ಗಾಯದ ಮೇಲೆ ಇಟ್ಟು ತನ್ನ ಸೀರೆಯ ಸೆರಗು ಹರಿದು ರಕ್ತ ಬಾರದಂತೆ ಸೊಂಡಿಲಿಗೆ ಸುತ್ತಿ ಕಟ್ಟಿದಳು. ಆಗ ಆನೆಯು "ನೀನು ಬೆಟ್ಟದ ಮೇಲಿನ ಗುಡಿಗೆ ಹೋಗುವವಳೆಂದು ನನಗೆ ಗೊತ್ತು. ನನ್ನ ಬೆನ್ನಿನ ಮೇಲೇರಿ ಕುಳಿತುಕೋ ನಿನ್ನನ್ನು ಬೆಟ್ಟದ ಮೇಲೆ ಕೊಂಡೊಯ್ದು ಹಿಂದಕ್ಕೆ ಕರೆತಂದು ಬಿಡುತ್ತೇನೆ" ಎಂದಿತು. ರಾಣಿಗೆ ಬಹಳ ಸಂತೋಷ ವಾಯಿತು. ಆನೆ ಮಂಡಿಯೂರಿತು. ರಾಣಿ ಆನೆಯ ಬೆನ್ನೇರಿದಳು. ನಿಧಾನವಾಗಿ ನಡೆದುಕೊಂಡು ಆನೆ ಬೆಟ್ಟದ ಕಡೆ ಹೋಯಿತು. ಹೋಗುವ ದಾರಿಯಲ್ಲಿ ಕೆಲವೊಂದು ಹಣ್ಣುಗಳಿಂದ ತುಂಬಿದ ಮರಗಳಿದ್ದವು. ಆನೆ ಮರದಡಿಯಲ್ಲಿ ನಿಂತು ಹಣ್ಣುಗಳನ್ನು ಕೊಯ್ದು ಹೊಟ್ಟೆ ತುಂಬಿಸಿಕೊಳ್ಳುವಂತೆ ರಾಣಿಗೆ ಹೇಳಿತು.

ರಾಣಿ ಬೆಟ್ಟದ ತುದಿಗೆ ಮುಟ್ಟಿದಳು. ಬಿಸಿನೀರಿನ ಕೊಳಕ್ಕಿಳಿದು ಸ್ನಾನ ಮಾಡಿದಳು. ಕಾಡು ಹೂಗಳನ್ನು ಕೊಯ್ದು ಗುಡಿಯೊಳಗಿದ್ದ ದೇವಿಗೆ ಸಮರ್ಪಿಸಿ ಪೂಜೆ ಸಲ್ಲಿಸಿ, ತನ್ನ ಕೂದಲು ಮೊದಲಿಗಿಂತಲೂ ಹೆಚ್ಚು ಉದ್ದ ಬೆಳೆಯುವಂತೆ ವರ ನೀಡಲು ಪ್ರಾರ್ಥಿಸಿಕೊಂಡು ಬಂದು ತಣ್ಣೀರಿನ ಕೊಳದಲ್ಲಿ ಮಿಂದು ಪರಿಶುದ್ಧಳಾದಳು. ಆಗ ತಲೆ ಮೇಲೆಲ್ಲ ಕೂದಲು ಮೊಳಕೆಯೊಡೆದಿತ್ತು. ಹೀಗೆ ನೂರೆಂಟು ಸಲ ಮುಳುಗಿ

ಎದ್ದಾಗ ಅವಳ ತಲೆಕೂದಲು ಮೊದಲಿಗಿಂತಲೂ ಒಂದು ಅಡಿ ಹೆಚ್ಚು ಉದ್ದ ಬೆಳೆಯಿತು. ನಂತರ ಗುಡಿಗೆ ಹೋಗಿ ದೇವರಿಗೆ ಮತ್ತೊಮ್ಮೆ ಅಡ್ಡ ಬಿದ್ದು ಬಂದು ಆಕೆಗಾಗಿ ಕಾದು ಕುಳಿತಿದ್ದ ಆನೆಯ ಬೆನ್ನೇರಿದಳು.

ಆನೆಯು ಆಕೆಯನ್ನು ನದಿ ದಂಡೆಯವರೆಗೆ ಕರೆತಂದಿತು. ಅಲ್ಲಿ ದನ ಮತ್ತು ಕರು ಆಕೆಗೆ ಕಾದು ಕುಳಿತಿದ್ದವು. ರಾಣಿಯು ತನಗೆ ಉಪಕಾರ ಮಾಡಿದ ಆನೆ ಮತ್ತು ದನ ಕರುಗಳನ್ನು ತನ್ನ ಅರಮನೆಗೆ ಬಂದು ಇರಬೇಕೆಂದು ಕೇಳಿಕೊಂಡಳು. ಅದಕ್ಕೆ ಅವರೆಲ್ಲರೂ ಒಪ್ಪಿಕೊಂಡರು. ಆನೆಯ ಬೆನ್ನ ಮೇಲೇರಿ ರಾಣಿ ನದಿ ದಾಟಿದಳು. ದನ ಮತ್ತು ಕರು ಅದರ ಹಿಂದಿನಿಂದಲೇ ಈಜಾಡಿಕೊಂಡು ಬಂದವು. ನದಿ ದಾಟಿ ಎಲ್ಲರೂ ಅರಮನೆ ಕಡೆಗೆ ಹೊರಟರು.

ಅರಮನೆಯ ಬಾಗಿಲಿಗೆ ಆನೆಯ ಮೇಲೆ ಕುಳಿತುಕೊಂಡು ಬರುತ್ತಿರುವ ಕೇಶ ಸುಂದರಿ ಮಹಾರಾಣಿಯನ್ನು ಕಂಡ ರಾಜನು, ತನ್ನ ಮಂತ್ರಿಗಳೊಡನೆ ಕೂಡಿಕೊಂಡು ಬಂದು ಸ್ವಾಗತಿಸಿದನು. ರಾಜನೇ ಆಕೆಯ ಕೈಹಿಡಿದು ಕೆಳಗೆ ಇಳಿಸಿದನು. ಮುತ್ತೈದೆಯರು ಆರತಿ ಬೆಳಗಿ ಒಳಗೆ ಕರೆದೊಯ್ದರು. ಕೇಶಸುಂದರಿ ರಾಣಿಗೆ ಪಟ್ಟಮಹಿಷಿಯ ಸ್ಥಾನ ನೀಡಿ ಗೌರವಿಸಲಾಯಿತು. ಉಳಿದ ರಾಣಿಯರ ಕೂದಲು ನಿಧಾನವಾಗಿ ಬೆಳೆಯುತ್ತಿತ್ತು. ಅವರು ತಮ್ಮ ಅಹಂಕಾರವನ್ನು ಬಿಟ್ಟು ಪಟ್ಟದ ರಾಣಿಯ ಸೇವೆಗೆ ಮುಂದಾದರು. ರಾಜನು ರಾಣಿಯರೊಡಗೂಡಿ ಪ್ರಧಾನಿಯ ಮಾರ್ಗದರ್ಶನದಲ್ಲಿ ರಾಜ್ಯವನ್ನು ಉತ್ತಮ ರೀತಿಯಲ್ಲಿ ಆಳತೊಡಗಿದನು. ಪ್ರಜೆಗಳೆಲ್ಲ ಸುಖ ಸಂತೋಷದಲ್ಲಿದ್ದರು. ಕೂದಲುದುರುವ ಔಷಧಿ ಮಾರಿಕೊಂಡು ಬಂದ ಕೊರವಂಜಿ ವೇಷದ ವಾರಾಂಗನೆ ಸಿದ್ದುವನ್ನು ಗುಪ್ತಚಾರರು ಪತ್ತೆಹಚ್ಚಿದರು. ಅವಳನ್ನು ಕರೆತಂದು ರಾಜನ ಮುಂದೆ ನಿಲ್ಲಿಸಿದರು. ರಾಜನು ಆಕೆಗೆ ಕಾರಾಗೃಹ ಶಿಕ್ಷೆ ವಿಧಿಸಿದನು.



೩೦

ದಾಸಯ್ಯನ ದೋಸೆ ಪ್ರಸಂಗ

ಒಂದು ಊರಲ್ಲಿ ಒಬ್ಬ ಬ್ರಾಹ್ಮಣನಿದ್ದ. ಆತ ವೆಂಕಟ್ರಮಣಯ್ಯ. ಅವನ ಹೆಂಡತಿ ಸಾವಿತ್ರಿ. ಒಂದು ದಿನ ವೆಂಕಟ್ರಮಣ ಕಾಶಿಗೆ ಹೊರಟ. ಹಿಂದಿನ ಕಾಲದಲ್ಲಿ ಕಾಶಿಗೆ ಹೋಗಿ ಬರುವಾಗ ನಾಲ್ಕೈದು ತಿಂಗಳು ಕಳೆಯುತ್ತಿತ್ತು. ಬ್ರಾಹ್ಮಣನ ಪಕ್ಕದ ಮನೆ ಕುಟ್ಯಾಲಿಯದ್ದು. ಕುಟ್ಯಾಲಿಯನ್ನು ಕರೆದು ಬ್ರಾಹ್ಮಣ "ನನ್ನ ಮನೆಯಲ್ಲಿ ಹೆಂಡತಿ ಒಬ್ಬಳೇ ಇರುತ್ತಾಳೆ. ನೀನು ಸ್ವಲ್ಪ ಮನೆಕಡೆ ನೋಡಿಕೋ" ಎಂದು ಹೇಳಿದ. ಕುಟ್ಯಾಲಿ ಆ ಬಗ್ಗೆ ನೀವು ಏನೂ ಭಯಪಡಬೇಡಿ. ಎಲ್ಲಾ ನಾನು ನೋಡಿಕೊಳ್ಳುತ್ತೇನೆ ಎಂದ. ವೆಂಕಟ್ರಮಣಯ್ಯ ಧೈರ್ಯದಿಂದ ಹೊರಟ. ಸಾವಿತ್ರಿ ಆತನನ್ನು ಬೀಳ್ಕೊಟ್ಟಳು.

ಆ ಊರಿನಲ್ಲಿ ಗೋಪಾಲನೆಂಬ ಒಬ್ಬ ದಾಸಯ್ಯನಿದ್ದ. ಆತ ಯಾರೂ ಇಲ್ಲದ ಅನಾಥ. ಊರಲ್ಲೊಂದು ಅಜ್ಜಿ ಮನೆಯಲ್ಲಿ ಆತನ ವಾಸ. ಬೆಳಗಾತ ಎದ್ದು ಶಂಖ ಊದಿಕೊಂಡು ಜಾಗಟೆ ಬಡಿದುಕೊಂಡು ಮನೆಮನೆಗೆ ಹೋಗುತ್ತಿದ್ದ. ಸಿಕ್ಕಿದ ಅಕ್ಕಿ ತೆಂಗಿನಕಾಯಿಯನ್ನು ತಂದು ಅಜ್ಜಿಗೆ ಕೊಡುತ್ತಿದ್ದ. ಅಜ್ಜಿ ಆತನಿಗೆ ಊಟ ಹಾಕುತ್ತಿದ್ದಳು. ಒಂದು ಸಲ ದಾಸಯ್ಯನಿಗೆ ದೋಸೆ ತಿನ್ನಬೇಕೆಂಬ ಮನಸ್ಸಾಯಿತು. ದೋಸೆ ಹೇಗಿರುತ್ತದೆಂದು ಆತನಿಗೆ ಗೊತ್ತಿಲ್ಲ. ಆತ ಆ ದಿನ ಸಂಜೆ ಅಜ್ಜಿಯ ಕೈಯಲ್ಲಿ ಅಕ್ಕಿ ತಂದುಕೊಡುವಾಗ "ಅಜ್ಜಿ ಅಜ್ಜೀ ನನಗೆ ಈ ದಿನ ದೋಸೆ ತಿನ್ನಬೇಕೆಂದು ಆಸೆಯಾಗಿದೆ. ನನಗೆರಡು ದೋಸೆ ಮಾಡಿಕೊಡು" ಎಂದ. ಅದಕ್ಕೆ ಅಜ್ಜಿಯು "ದೋಸೆ ಮಾಡಲು ನನ್ನಲ್ಲಿ ಕಾವಲಿ ಇಲ್ಲ. ನೀನು ಅಕ್ಕಿಯನ್ನು ಕೊಂಡುಹೋಗಿ, ಸಾವಿತ್ರಿ ಅಮ್ಮನ ಕೈಯಲ್ಲಿ ಕೊಡು, ಅವರಿಗೆ ಬಗೆಬಗೆಯ ತಿಂಡಿ ಮಾಡಲು ಬರುತ್ತದೆ" ಎಂದಳು.

ದಾಸಯ್ಯ ಮರುದಿನ ಎದ್ದು ಸಾವಿತ್ರಿ ಅಮ್ಮನ ಮನೆಗೆ ಹೋದ. ಬಾಗಿಲಲ್ಲಿ ನಿಂತು ಅಮ್ಮ ಅಮ್ಮಾ ಎಂದು ಕರೆದ. ಸಾವಿತ್ರಿ ಹೊರಗೆ ಬಂದಾಗ ಅವಳ ಕೈಯಲ್ಲಿ ಅಕ್ಕಿಯನ್ನು ಕೊಟ್ಟು 'ಅಮ್ಮ ನನಗಿದರ ದೋಸೆ ಮಾಡಿಕೊಡಿ ಎಂದ' ಆಗ ಆಕೆ 'ನೀನು ಮೊದಲು ಎಲ್ಲಾದರೂ ದೋಸೆ ತಿಂದಿದ್ದೀಯಾ?' ಎಂದು ಕೇಳಿದಳು. 'ಇಲ್ಲಮ್ಮ ನನಗೆ ದೋಸೆ ಎಂದರೇನೆಂದು ಗೊತ್ತಿಲ್ಲ' ಎಂದ ದಾಸಯ್ಯ. 'ಹಾಗಾದರೆ ನೀನು ಮುಸ್ಸಂಜೆ ಬಾ ದೋಸೆ ಮಾಡಿಡುತ್ತೇನೆ' ಎಂದಳು. ದಾಸಯ್ಯ ಅಜ್ಜಿ ಮನೆಗೆ ಬಂದು ನಡೆದ ಸಂಗತಿ ಹೇಳಿ ಆ ದಿನದ ತಿರುಗಾಟಕ್ಕೆ ಹೊರಟು ಹೋದ. ಸಂಜೆಯ

ಹೊತ್ತಿಗೆ ಸಾವಿತ್ರಿ ಅಮ್ಮನ ಮನೆಗೆ ತಲುಪಿದ. ಸಾವಿತ್ರಿ ದಾಸಯ್ಯ ಕೊಟ್ಟ ಅಕ್ಕಿಯಿಂದ ದೋಸೆ ಮಾಡಿ ತೆಗೆದಿಟ್ಟಿದ್ದಳು. ಕೊನೆಗೆ ಪಾತ್ರೆಯಲ್ಲಿ ಉಳಿದ ಹಿಟ್ಟಿಗೆ ನೀರು ಸೇರಿಸಿ ಅದಕ್ಕೊಂದಿಷ್ಟು ಉಪ್ಪು ಬೆರೆಸಿ ಬಿಸಿಮಾಡಿ ಲೋಟದಲ್ಲಿ ಹಾಕಿ ದಾಸಯ್ಯನಿಗೆ ಕುಡಿಯಲು ಕೊಟ್ಟಳು. 'ಇದುವೇನಮ್ಮ ದೋಸೆ?' ಎಂದು ಆತ ಕೇಳಿದ 'ಹೌದಪ್ಪಾ ಚೆನ್ನಾಗಿ ಕುಡಿ' ಎಂದಳು ಸಾವಿತ್ರಿ. ದಾಸಯ್ಯ ಲೋಟದಲ್ಲಿದ್ದ ಹಿಟ್ಟಿನ ನೀರನ್ನು ಕುಡಿದು 'ಬಹಳ ಚೆನ್ನಾಗಿದೆ' ಎಂದು ಹೇಳಿ ಹೊರಟುಹೋದ. ಕತ್ತಲಾಗುವಾಗ ದಾಸಯ್ಯ ಅಜ್ಜಿಯ ಮನೆಗೆ ಬಂದ. 'ದೋಸೆ ತಿಂದಿಯೇನಾ ಮಗಾ?' ಎಂದು ಅಜ್ಜಿ ಕೇಳಿದಳು. 'ದೋಸೆ ತಿಂದದ್ದಲ್ಲಾ ಅಜ್ಜಿ ಕುಡಿದದ್ದು' ಎಂದ ದಾಸಯ್ಯ. ಅಜ್ಜಿಗೆ ಸಾವಿತ್ರಮ್ಮನ ಮೋಸಗಾರಿಕೆಯ ಅರಿವಾಯಿತು. 'ಗೋಪಾಲ, ದೋಸೆ ತಿನ್ನುವ ತಿಂಡಿ, ಕುಡಿಯುವಂತದಲ್ಲ. ನಿನಗೆ ಸಾವಿತ್ರಿ ಮೋಸ ಮಾಡಿದ್ದಾಳೆ. ಅವಳ ಗುಟ್ಟು ನನಗೆ ಗೊತ್ತು. ನೀನು ಈ ದಿನವೇ ರಾತ್ರಿ ಸುಮಾರು ಎಂಟು ಗಂಟೆಗೆ ಸಾವಿತ್ರಿ ಅಮ್ಮನ ಮನೆಗೆ ಮುಖಕ್ಕೆ ಮುಸುಕು ಹಾಕಿಕೊಂಡು ಹಿಂಬಾಗಿಲಿನಿಂದ ಹೋಗು. ಬಾಗಿಲು ತಟ್ಟು. ಆಗ ಆಕೆ ಯಾರದು? ಕುಟ್ಯಾಲಿಯೇ" ಎಂದು ಕೇಳುತ್ತಾಳೆ. ನೀನು ಮಾತನಾಡದೆ "ಉ ಉಂ" ಎನ್ನಬೇಕು. ಆಗ ಆಕೆ ಬಾಗಿಲು ತೆರೆಯುತ್ತಾಳೆ. ನೀನು ಒಳಗೆ ಹೋಗಿ ಕುಳಿತುಕೋ ನಿನಗೆ ದೋಸೆ ಕೊಡುತ್ತಾಳೆ. ಅದನ್ನು ತಿಂದು ಮಾತ ನಾಡದೇ ಹೊರಗೆ ಬಂದುಬಿಡು' ಎಂದು ಹೇಳಿಕೊಟ್ಟಳು.

ಅಜ್ಜಿ ಹೇಳಿದಂತೆ ಗೋಪಾಲ ರಾತ್ರಿ ಸುಮಾರು ಎಂಟು ಗಂಟೆಯ ಹೊತ್ತಿಗೆ ಸಾವಿತ್ರಿ ಅಮ್ಮನ ಮನೆಯ ಹಿಂಬಾಗಿಲಿಗೆ ಹೋಗಿ ಬಾಗಿಲು ತಟ್ಟಿದ. ಒಳಗಿನಿಂದ ಸಾವಿತ್ರಿ "ಕುಟ್ಯಾಲಿಯೋ?" ಎಂದು ಕೇಳಿದಳು. ದಾಸಯ್ಯ 'ಉ ಉಂ' ಎಂದ. ಆತ ತನ್ನ ಮುಖಪೂರ್ತಿ ಕಾಣದಂತೆ ಶಾಲು ಮುಚ್ಚಿಕೊಂಡಿದ್ದ. ಸಾವಿತ್ರಿ ಬಾಗಿಲು ತೆಗೆದಳು. ಗೋಪಾಲ ಒಳಗೆ ಹೋಗಿ ಮಣೆಯ ಮೇಲೆ ಕುಳಿತುಕೊಂಡ. ಸಾವಿತ್ರಿ ಎಲೆಯಲ್ಲಿ ಎರಡು ದೋಸೆ ಮತ್ತು ಚಟ್ನಿ ತಂದಿಟ್ಟಳು. ದಾಸಯ್ಯ ದೋಸೆ ತಿಂದು ಮುಗಿಯು ವಷ್ಟರಲ್ಲಿ ಹೊರಗಿನಿಂದ ಮತ್ತೆ ಬಾಗಿಲು ಬಡಿದ ಸದ್ದಾಯಿತು. ಸಾವಿತ್ರಿ ಒಳಗಿನಿಂದ "ಯಾರದು?" ಎಂದು ಕೇಳಿದಳು ಆಗ ಹೊರಗಿನಿಂದ ಬಂದಾತ 'ನಾನು ಕುಟ್ಯಾಲಿ' ಎಂದ. ಅಷ್ಟರಲ್ಲಿ ದೋಸೆ ತಿಂದು ಮುಗಿಸಿದ್ದ ದಾಸಯ್ಯನನ್ನು ಸಾವಿತ್ರಿ ಮೆಲ್ಲ ಒಳಗೆ ಕರೆದೊಯ್ದು ಅಟ್ಟಕ್ಕೆ ಹತ್ತಿಸಿ ಕುಳಿತುಕೊಳ್ಳುವಂತೆ ಹೇಳಿದಳು. ದಾಸಯ್ಯ ಸಾವಿತ್ರಿ ಹೇಳಿದಂತೆ ಅಟ್ಟಕ್ಕೇರಿ ಕುಳಿತುಕೊಂಡ.

ನಂತರ ಸಾವಿತ್ರಿ ಬಾಗಿಲು ತೆರೆದು ಕುಟ್ಯಾಲಿಯನ್ನು ಒಳಗೆ ಬರಮಾಡಿಕೊಂಡಳು. ಆತನನ್ನು ಕುಳ್ಳಿರಿಸಿ ಅವನಿಗೆ ಎರಡು ದೋಸೆ, ಚಟ್ನಿ ಮತ್ತು ಕುಡಿಯಲು ನೀರು ಕೊಟ್ಟಳು. ಆತ ದೋಸೆ ತಿಂದು ನೀರು ಕುಡಿದ. ಆತ ದೋಸೆ ತಿಂದು ನೀರು ಕುಡಿಯುವಷ್ಟರಲ್ಲಿ ಎದುರಿನಿಂದ ಬಾಗಿಲು ಬಡಿದ ಸದ್ದಾಯಿತು. ಸಾವಿತ್ರಿ ಕುಟ್ಯಾಲಿಯನ್ನು

ಒಳಗೆ ಕರೆದು ಅಟ್ಟಕ್ಕೆ ಹತ್ತಿ ಕುಳಿತುಕೊಳ್ಳುವಂತೆ ಹೇಳಿ ಅಟ್ಟಕ್ಕೆ ಹತ್ತಿಸಿಬಿಟ್ಟಳು. ಹೊರಗಡೆ ಬಂದು 'ಯಾರದು?' ಎಂದು ಕೇಳಿದಳು. 'ನಾನು ವೆಂಕಟ್ರಮಣಯ್ಯ ಬಾಗಿಲು ತೆಗಿ' ಎಂದ ಆಕೆಯ ಗಂಡ. ಸಾವಿತ್ರಿ ಬಾಗಿಲು ತೆಗೆದು ಗಂಡನನ್ನು ಒಳಗೆ ಬರಮಾಡಿ ಕೊಂಡಳು. ವೆಂಕಟ್ರಮಣಯ್ಯ ತಂದ ತೀರ್ಥ ಪ್ರಸಾದವನ್ನೆಲ್ಲ ದೇವರ ಕೋಣೆಯಲ್ಲಿಟ್ಟು ಹೆಂಡತಿಗೂ ತೀರ್ಥ ಪ್ರಸಾದ ನೀಡಿದ. 'ನನಗೆ ಬಹಳ ಹಸಿವಾಗುತ್ತಿದೆ. ಊಟ ಮಾಡುವ, ಕೈಕಾಲು ತೊಳೆದುಕೊಂಡು ಬರುತ್ತೇನೆ' ಎಂದು ಹೇಳಿ ಅಂಗಳಕ್ಕೆ ಹೋಗಿ ಕೈಕಾಲು ತೊಳೆದು ಬಂದು ಜಪ ಮುಗಿಸಿ ಊಟಕ್ಕೆ ಮಣೆ ಹಾಕಿ ಕುಳಿತುಕೊಂಡ. ಸಾವಿತ್ರಿ ಎಲೆ ಹಾಕಿ ಊಟ ಬಡಿಸತೊಡಗಿದಳು.

ಇತ್ತ ಅಟ್ಟವೇರಿ ಕುಳಿತ ದಾಸಯ್ಯ ಬರಿಯ ದೋಸೆ ಮಾತ್ರ ತಿಂದಿದ್ದ. ಆತನಿಗೆ ಹೊಸದಾಗಿ ದೋಸೆಯ ರುಚಿ ನೋಡಿದ್ದರಿಂದ ಜೋರಾಗಿ ಬಾಯಾರಿಕೆಯಾಗ ತೊಡಗಿತು. 'ನೀರೋ... ನೀರು ನೀರೋ... ನೀರು' ಎಂದು ಬೊಬ್ಬಿಟ್ಟ. ವೆಂಕಟರಮಣ ಯ್ಯನಿಗೆ ಆಶ್ಚರ್ಯವಾಯಿತು. ಏನದು ಬೊಬ್ಬೆ ಅಟ್ಟದಕಡೆಯಿಂದ ಕೇಳ್ತಾ ಇದೆ' ಎಂದು ಹೆಂಡತಿಯನ್ನು ಪ್ರಶ್ನಿಸಿದ. ಆಗ ಸಾವಿತ್ರಿ ನೀವು ಕಾಶಿಗೆ ಹೋಗಿ ಒಳ್ಳೆರೀತಿಯಲ್ಲಿ ಹಿಂತಿರುಗಿ ಬಂದರೆ ನಮ್ಮ ದೈವಗಳಿಗೆ ಹೂ–ನೀರು ಕೊಡ್ತೇನೆ ಎಂದು ಹರಕೆ ಹೇಳಿ ಕೊಂಡಿದ್ದೆ ಈಗ ಭೂತಗಳು[೧] ಹೂ ನೀರು[೨] ಕೇಳ್ತವೆ ಎಂದಳು. ಆಗ ವೆಂಕಟ್ರಮಣಯ್ಯ ನನ್ನ ಜೋಳಿಗೆಯಲ್ಲಿ ಒಂದು ತೆಂಗಿನಕಾಯಿಯಿದೆ. ಅದನ್ನು ಒಡೆದು ದೈವಗಳಿಗೆ ಸಮರ್ಪಿಸಿ ಬಾ' ಎಂದು ಊಟ ಮಾಡತೊಡಗಿದ.

ಸಾವಿತ್ರಿ ಜೋಳಿಗೆಯಿಂದ ತೆಂಗಿನಕಾಯಿ ತೆಗೆದು ಅಟ್ಟದ ಏಣಿಯ ಬಳಿಗೆ ಬಂದು 'ಮೇಲೆ ತೆಂಗಿನಕಾಯಿ ಎಸೆಯುತ್ತೇನೆ. ಅಲ್ಲಿ ಬೀಸುವ ಕಲ್ಲಿದೆ, ದೈವಗಳು ಕಾಯಿ ಒಡೆದು ನೀರು ಕುಡಿದು ತೃಪ್ತಿಪಟ್ಟುಕೊಳ್ಳಬೇಕು' ಎಂದು ತೆಂಗಿನಕಾಯಿಯನ್ನು ಅಟ್ಟಕ್ಕೆ ಬಿಸಾಡಿದಳು. ಬಿಸಾಡಿದ ತೆಂಗಿನ ಕಾಯಿಯನ್ನು ದಾಸಯ್ಯ ಹಿಡಿದುಕೊಂಡ. ಆದರೆ ಆತನಿಗೆ ಅದನ್ನು ಒಡೆಯಲು ಕತ್ತಲೆಯಲ್ಲಿ ಕಲ್ಲು ಕಾಣಲಿಲ್ಲ. ಪಕ್ಕದಲ್ಲಿ ಕುಳಿತಿದ್ದ ಕುಟ್ಯಾಲಿಯ ಬೋಳುಮಂಡೆಯನ್ನೇ ಕಲ್ಲೆಂದು ಭಾವಿಸಿ ತೆಂಗಿನಕಾಯಿಯನ್ನು ಹಿಡಿದು ಅದಕ್ಕೊಡೆದು ಗಳಗಳನೇ ನೀರು ಕುಡಿದುಬಿಟ್ಟ. ಅಷ್ಟರಲ್ಲಿ ಕುಟ್ಯಾಲಿ 'ಅಯ್ಯಯ್ಯೋ' ಎಂದು ಬೊಬ್ಬಿಟ್ಟ.

ಬೊಬ್ಬೆ ಕೇಳಿದ ವೆಂಕಟ್ರಮಣಯ್ಯ ತಳಮಳಗೊಂಡು 'ಏನದು ಬೊಬ್ಬೆ' ಎಂದು ಹೆಂಡತಿಯೊಡನೆ ಕೇಳಿದ. ಆಗ ಆಕೆ ನಾನು ಒಂದು ದೈವಕ್ಕೆ ತೆಂಗಿನಕಾಯಿ ಒಡೆದು ಬಂದೆ. ಬಹುಶಃ ಎಲ್ಲಾ ಭೂತಗಳು ಎದ್ದಿರಬೇಕು. ಏನು ಮಾಡುವುದು! "ದೈವಗಳೇ ನಮ್ಮದು ಏನು ತಪ್ಪಿದ್ದರೂ ಕ್ಷಮಿಸಿಬಿಡಿ. ಬರುವ ಸಂಕ್ರಾಂತಿ ಮೊದಲು ಎಲ್ಲಾ ದೈವಗಳಿಗೂ ಕೋಲ[೩] ಕೊಡುತ್ತೇವೆ. ನೀವು ಒಳಗೆ ಬಂದು ಸೇರಿದವರು ದಯವಿಟ್ಟು ಹಿಂಬದಿಯ ಬಾಗಿಲಿನಿಂದ ಹೋಗಿಬಿಡಿ. ಕಾಶಿಯಿಂದ ದೇವರು ಒಳಗೆ ಬಂದಿದ್ದಾರೆ.

ದೇವರು ಬಂದ ಮೇಲೆ ದೈವಗಳಿಗೆ ಸ್ಥಾನವಿಲ್ಲ. ದಯವಿಟ್ಟು ಹೋಗಿ" ಎಂದು ಕೈ ಮುಗಿದು ಗಟ್ಟಿಯಾಗಿ ಪ್ರಾರ್ಥಿಸಿಕೊಂಡಳು. ಇದನ್ನು ಕೇಳಿದ ಅಟ್ಟದಲ್ಲಿ ಕುಳಿತ ಗೋಪಾಲ ಮತ್ತು ಕುಟ್ಯಾಲಿ ಇಬ್ಬರೂ ಬಡಬಡನೆ ಕೆಳಗಿಳಿದು ಹಿಂಬದಿಯ ಬಾಗಿಲು ತೆರೆದು ಹೊರಗೋಡಿದರು. ಸಾವಿತ್ರಿ ಒಳಗಡೆ ಹೋಗಿ ಹಿಂಬದಿಯ ಬಾಗಿಲು ಹಾಕಿಕೊಂಡು ಬಂದು 'ಎಲ್ಲಾ ದೈವ ದೇವರುಗಳಿಗೆ ಸಮಾಧಾನವಾಯಿತು. ಇನ್ನೇನು ಹೆದರಿಕೆಯಿಲ್ಲ. ನೀವು ಚೆನ್ನಾಗಿ ಊಟಮಾಡಿ' ಎಂದು ಗಂಡನಿಗೆ ಮತ್ತಷ್ಟು ಬಡಿಸಿ ತಾನು ಊಟಕ್ಕೆ ಕುಳಿತುಕೊಂಡಳು.

ಟಿಪ್ಪಣಿಗಳು

೧. ದೈವ – ಭೂತ,

೨. ಹೂ–ನೀರು – ಆರಾಧನೆ

೩. ಕೋಲ – ದೊಡ್ಡ ಮಟ್ಟದ ಸೇವೆ



೩೧

ಹಟವಾದಿ ಗುಬ್ಬಿ

ಒಂದು ಗುಬ್ಬಿಗೆ ಎಲ್ಲಿಂದಲೋ ಒಂದು ಕಾಳು ಸಿಕ್ಕಿತು. ಕಾಳನ್ನು ಕಚ್ಚಿಕೊಂಡು ಒಂದು ಮರದಲ್ಲಿ ಕುಳಿತು ತಿನ್ನತೊಡಗಿತು. ಆಗ ಆ ಕಾಳು ಮರದ ಪೊಟರೆಯೊಳಗೆ ಬಿತ್ತು. ಎಷ್ಟು ಪ್ರಯತ್ನಿಸಿದರೂ ಗುಬ್ಬಚ್ಚಿಗೆ ಕಾಳನ್ನು ಪೊಟರೆಯಿಂದ ಹೊರಕ್ಕೆ ತೆಗೆಯಲು ಸಾಧ್ಯವಾಗಲಿಲ್ಲ. ಕಡೆಗೆ ಅದು ಒಬ್ಬ ಬಡಗಿಯ ಬಳಿಗೆ ಹೋಗಿ ಮರವನ್ನು ಕಡಿಯುವಂತೆ ಕೇಳಿಕೊಂಡಿತು. ಅದಕ್ಕೆ ಬಡಗಿ "ಅಯ್ಯೋ ಅದು ಒಳ್ಳೆಯ ಜಾತಿಯ ಮಾವಿನ ಮರ. ಅದನ್ನು ಕಡಿಯಲಾರೆನಪ್ಪಾ" ಅಂದ. ಗುಬ್ಬಚ್ಚಿ ಅಲ್ಲಿಂದ ರಾಜನ ಬಳಿಗೆ ಹೋಗಿ "ಮಹಾರಾಜ ನಿನ್ನ ರಾಜ್ಯದಿಂದ ಬಡಗಿಯನ್ನು ಗಡಿಪಾರುಮಾಡು" ಎಂದು ಕೇಳಿಕೊಂಡಿತು. ಮಹಾರಾಜನು "ಅದೊಂದು ನನ್ನಿಂದ ಆಗದ ಕೆಲಸ. ಅವನು ನಮ್ಮ ರಾಜ್ಯದಲ್ಲಿರುವ ಒಬ್ಬನೇ ಒಬ್ಬ ಬಡಗಿ. ಅವನನ್ನು ನಮ್ಮೂರಿನಿಂದ ಗಡಿಪಾರು ಮಾಡಿದರೆ ಇಲ್ಲಿ ಮರಗೆಲಸ ಮಾಡುವವರಾರು?" ಎಂದ.

ಗುಬ್ಬಚ್ಚಿ ಉಪಾಯ ಕಾಣದೆ ಅಲ್ಲಿಂದ ಹೊರಟಿತು. ದಾರಿಯಲ್ಲಿ ಅದಕ್ಕೊಂದು ಇಲಿ ಸಿಕ್ಕಿತು. "ಏನು ಗುಬ್ಬಕ್ಕಾ, ನಿನ್ನ ಮುಖ ಬಾಡಿಹೋಗಿದೆ?" ಎಂದು ಇಲಿ ಕೇಳಿತು. ಗುಬ್ಬಿ ನಡೆದ ಸಂಗತಿಯನ್ನೆಲ್ಲ ಹೇಳಿ "ನೀನು ರಾಜನ ಹಾಸಿಗೆಯನ್ನು ಕಚ್ಚಿ ಚಿಂದಿ ಮಾಡು" ಎಂದಿತು. "ಅಯ್ಯೋ ರಾಜನ ಗೊಡವೆ ನಮಗೇಕಪ್ಪಾ. ರಾಜರು ಇದ್ದರೇನೇ ಅರಮನೆ. ಅರಮನೆಯಲ್ಲಿ ನನಗೆ ಬೇಕಾದಷ್ಟು ತಿಂಡಿ ಸಿಗುತ್ತದೆ" ಎನ್ನುತ್ತ ಇಲಿ ಬಿಲದೊಳಗೆ ನುಗ್ಗಿತು. ಗುಬ್ಬಚ್ಚಿ ಅಲ್ಲಿಂದ ನೇರವಾಗಿ ಬೆಕ್ಕಿನ ಬಳಿಗೆ ಹೋಗಿ "ಬೆಕ್ಕೇ ಬೆಕ್ಕೇ ಇಲಿಗಳೆಲ್ಲ ನಿನ್ನ ಹೆದರಿಕೆ ಇಲ್ಲದೆ ಸೊಕ್ಕಿವೆ. ನೀನು ಅವುಗಳನ್ನೇ ಹಿಡಿದು ತಿನ್ನು" ಎಂದಿತು. ಅದಕ್ಕೆ ಬೆಕ್ಕು "ನನಗೆ ನನ್ನ ಮನೆಯಲ್ಲಿ ಬೇಕಾದಷ್ಟು ಹಾಲು ಬೆಣ್ಣೆ ಸಿಗುವಾಗ ಆ ಪಾಪದ ಇಲಿಯನ್ನೇಕೆ ಹಿಡಿಯಬೇಕು" ಎಂದಿತು.

ಗುಬ್ಬಚ್ಚಿ ನೇರವಾಗಿ ಬೆಕ್ಕಿನ ಒಡತಿ ಅಜ್ಜಿಯ ಬಳಿಗೆ ಹೋಯಿತು. "ಆ ಏನು ಬಂದೆ ಗುಬ್ಬಕ್ಕಾ?" ಎಂದು ಅಜ್ಜಿ ಕೇಳಿದಳು. "ಅಜ್ಜೀ ನೀನು ನಿನ್ನ ಬೆಕ್ಕಿಗೆ ಹಾಲು ಕೊಡಬೇಡ. ಹಾಲು ಕುಡಿದು ಸೊಕ್ಕಿ ಅದು ಇಲಿಗಳನ್ನೇ ಹಿಡಿಯುವುದಿಲ್ಲ" ಎಂದಿತು ಗುಬ್ಬಿ. "ಅದು ನನ್ನ ಮುದ್ದಿನ ಬೆಕ್ಕು, ಅದಕ್ಕೆ ಹಾಲು ಕೊಡದೆ ನಾನು ಹೇಗೆ

ಕುಡಿಯಲಿ" ಎಂದಳು ಅಜ್ಜಿ. ಗುಬ್ಬಚ್ಚಿ ಅಜ್ಜನ ಬಳಿಗೆ ಹೋಗಿ "ಅಜ್ಜಜ್ಜಾ, ನೀನು ಅಜ್ಜಿಗೆ ಗುದ್ದು. ಆಕೆ ಕರೆದ ಹಾಲನ್ನೆಲ್ಲ ನಿನಗೆ ಕೊಡದೆ ಬೆಕ್ಕಿಗೆ ಕೊಡುತ್ತಾಳೆ" ಎಂದಿತು. "ಗುಬ್ಬಕ್ಕಾ ಆಕೆ ನನ್ನ ಪ್ರೀತಿಯ ಮಡದಿ. ಅವಳಿಗೆ ಇಷ್ಟರವರೆಗೆ ನಾನು ಹೊಡೆದವನಲ್ಲ. ಇನ್ನು ಹೇಗೆ ಹೊಡೆಯಲಿ?" ಎಂದನು ಅಜ್ಜ. ಗುಬ್ಬಿ ನಂತರ ದನದ ಬಳಿಗೆ ಹೋಗಿ "ದನವೇ ದನವೇ ನೀನು ಅಜ್ಜನಿಗೆ ಹಾಲು ಕೊಡಬೇಡ" ಎಂದಿತು ಅದಕ್ಕೆ ದನವು "ಅಯ್ಯೋ, ನನಗೆ ಹುಲ್ಲು ತಂದು ಹಾಕುವವರು ಅಜ್ಜ, ಅಜ್ಜನಿಗೆ ಹಾಲು ಕೊಡದಿದ್ದರೆ ಹೇಗೆ?" ಎಂದಿತು. ಗುಬ್ಬಿ ಕರುವಿನ ಬಳಿಗೆ ಹೋಗಿ "ಕರುವೇ ಕರುವೇ ನಿನ್ನ ತಾಯಿ ನಿನಗೆ ಸಂಪೂರ್ಣ ಹಾಲು ಕೊಡದೆ ಅಜ್ಜನಿಗೆ ಕೊಡುತ್ತಾಳೆ. ನೀನು ಆಕೆಯ ಕೆಚ್ಚಲು ಜಗಿಯಬೇಡ" ಎಂದಿತು. ಅದಕ್ಕೆ ಕರುವು "ನಾನು ಕೆಚ್ಚಲು ಜಗಿಯದಿದ್ದರೆ ನನಗೆ ಉಪವಾಸವಲ್ಲವೇ? ನನಗೆ ಬೇರೆ ಯಾರು ಹಾಲು ಕೊಡುತ್ತಾರೆ" ಎಂದಿತು. ಹೇಳಿದ ಕೆಲಸವನ್ನು ಎಲ್ಲರೂ ನಿರಾಕರಿಸಿದ್ದರಿಂದ ಗುಬ್ಬಚ್ಚಿಗೆ ಬಹಳ ನಿರಾಶೆಯಾಯಿತು. "ಇನ್ನು ಯಾರಲ್ಲಿಯೂ ಹೇಳಿ ಪ್ರಯೋಜನವಿಲ್ಲ ಕಳೆದುಹೋದ ಕಾಳಿನ ಆಸೆಯನ್ನು ಬಿಡುವುದೇ ಒಳ್ಳೆಯದು" ಎಂದು ಆಲೋಚಿಸುತ್ತಾ ತನ್ನ ಗೂಡಿನ ಕಡೆಗೆ ಹಿಂತಿರುಗಿತು. ದಾರಿಯಲ್ಲಿ ಅದಕ್ಕೊಂದು ಕಣಜದ ಹುಳು ಸಿಕ್ಕಿತು. ನಡೆದ ಸಂಗತಿಯನ್ನೆಲ್ಲ ಅದರೊಡನೆ ಹೇಳಿಕೊಂಡು ಗುಬ್ಬಚ್ಚಿ ದುಃಖಪಟ್ಟಿತು.

ಆಗ ಕಣಜದ ಹುಳು "ನೀನೇಕೆ ದುಃಖಿಸುವಿ ಎಲ್ಲಾ ಕೆಲಸವನ್ನೂ ನಾನು ಮಾಡಿಕೊಡುತ್ತೇನೆ" ಎಂದು ನೇರವಾಗಿ ಕರುವಿನ ಬಳಿಗೆ ಹೋಗಿ "ಕರುವೇ ಕರುವೇ ನೀನು ನಿನ್ನ ತಾಯಿಯ ಕೆಚ್ಚಲು ಜಗಿದೆಯಾದರೆ ನಿನ್ನನ್ನೀಗ ಕಚ್ಚಿಬಿಡುತ್ತೇನೆ" ಎಂದಿತು. ಕರುವು ಹೆದರಿಕೆಯಿಂದ ತಾಯಿಯ ಬಳಿಗೆ ಓಡಿ "ಅಮ್ಮಾ, ಅಮ್ಮಾ ನೀನು ಅಜ್ಜನಿಗೆ ಹಾಲು ಕೊಡುವೆಯಾದರೆ ನಿನ್ನ ಕೆಚ್ಚಲನ್ನು ಜಗಿಯಲಾರೆ" ಎಂದಿತು. ದನದ ಕೆಚ್ಚಲನ್ನು ಕರು ಜಗಿಯದಿದ್ದರೆ ಹಾಲು ಸುರಿಯುತ್ತದೆಯೇ? ದನವು ಅಜ್ಜನ ಬಳಿಗೆ ಹೋಗಿ "ಅಜ್ಜಾ, ಅಜ್ಜಾ ನಾನು ಕೊಟ್ಟ ಹಾಲನ್ನೆಲ್ಲಾ ಅಜ್ಜಿ ಬೆಕ್ಕಿಗೆ ಕೊಡುತ್ತಾಳೆ. ನೀನು ಅಜ್ಜಿಗೆ ಗುದ್ದದಿದ್ದರೆ ನಾನು ಹಾಲು ಕೊಡುವುದಿಲ್ಲ" ಎಂದಿತು. ಅಜ್ಜನು ಅಜ್ಜಿಯನ್ನು ಕರೆದು "ನೀನು ಬೆಕ್ಕಿಗೆ ಹಾಲು ಕೊಟ್ಟರೆ ಹೊಟ್ಟೆ ತುಂಬಿದ ಬೆಕ್ಕು ಇಲಿ ಹಿಡಿಯುವುದಿಲ್ಲ. ನೀನು ಬೆಕ್ಕಿಗೆ ಹಾಲು ಹಾಕಬೇಡ. ಹಾಕಿದರೆ ನಿನಗೆ ಗುದ್ದುತ್ತೇನೆ" ಎಂದ. ಆಗ ಅಜ್ಜಿಯು ಬೆಕ್ಕಿನ ಬಳಿಗೆ ಹೋಗಿ "ಬೆಕ್ಕೇ ಬೆಕ್ಕೇ ನೀನು ಇಲಿ ಹಿಡಿಯದಿದ್ದರೆ ನಿನಗೆ ಹಾಲು ಹಾಕುವುದಿಲ್ಲ" ಎಂದಿತು. ಬೆಕ್ಕು ಇಲಿಯ ಬಳಿಗೆ ಹೋಗಿ "ರಾಜನ ಹಾಸಿಗೆಯನ್ನು ಕಚ್ಚಿ ಚಿಂದಿಚಿಂದಿ ಮಾಡದಿದ್ದರೆ ನಿನ್ನನ್ನು ಹಿಡಿದು ತಿನ್ನುತ್ತೇನೆ" ಎಂದಿತು. ಇಲಿಯು ರಾಜನಲ್ಲಿಗೆ ಹೋಗಿ "ನೀನು ಬಡಗಿಯನ್ನು ಗಡಿಪಾರು ಮಾಡದಿದ್ದರೆ ನಿನ್ನ ಹಾಸಿಗೆಯನ್ನೆಲ್ಲ ಕಚ್ಚಿ ಚೂರುಚೂರು ಮಾಡುತ್ತೇನೆ" ಎಂದಿತು. ರಾಜನು ಬಡಗಿಯಲ್ಲಿಗೆ ಹೋಗಿ ನೀನು ಗುಬ್ಬಚ್ಚಿಯ ಬಾಯಿಯಿಂದ ಬಿದ್ದ ಕಾಳು

ಸೇರಿಕೊಂಡಿರುವ ಪೊಟರೆಯ ಮರವನ್ನು ಕಡಿಯದಿದ್ದರೆ ನಿನ್ನನ್ನು ಗಡಿಪಾರು ಮಾಡುತ್ತೇನೆ ಎಂದ.

ಬಡಗಿಗೆ ಹೆದರಿಕೆಯಾಯಿತು "ಅಯ್ಯೋ ಹಾಗೆ ಮಾಡಬೇಡಿ. ಈ ಊರು ಬಿಟ್ಟರೆ ನನಗೆ ಬೇರೆ ಗತಿ ಇಲ್ಲ. ರಾಜಾಜ್ಞೆಯನ್ನು ಖಂಡಿತಾ ಪಾಲಿಸುತ್ತೇನೆ" ಎಂದು ಹೇಳಿ ಮರವನ್ನು ಕಡಿದು ಅದರ ಪೊಟರೆಯಲ್ಲಿ ಸಿಕ್ಕಿಕೊಂಡಿದ್ದ ಕಾಳನ್ನು ಹೆಕ್ಕಿ ತೆಗೆದು ಗುಬ್ಬಚ್ಚಿಗೆ ನೀಡಿದ. ಗುಬ್ಬಚ್ಚಿಯು ಅದನ್ನು ತಿಂದು ಸಂತೋಷದಿಂದ ಹಾರಿ ಹೋಯಿತು.



೩೨

ಮುಗಿಯದ ಕತೆ

ರಾತ್ರಿಯ ಊಟವಾದ ಮೇಲೆ ಮಕ್ಕಳೆಲ್ಲಾ ಮಲಗಲು ಜಗಲಿಯ ಮೇಲೆ ಚಾಪೆ ಹಾಸಿದ್ದರು. ಅಜ್ಜಿ ಚಾಪೆಯಲ್ಲಿ ಬಂದು ಕುಳಿತುಕೊಂಡರು. ಅಜ್ಜಿಯ ಸುತ್ತ ಮಕ್ಕಳು ನೆರೆದರು.

"ಅಜ್ಜಿ... ಅಜ್ಜಿ ಕತೆ ಹೇಳಜ್ಜೀ" ಸುಹೃತ್ ಅಜ್ಜಿಯನ್ನು ಕೇಳಿದ.

"ಕತೆ ಹೇಳಜ್ಜೀ" ಎಲ್ಲರೂ ಬೊಬ್ಬಿಟ್ಟರು.

"ಯಾವ ಕತೆ ಹೇಳಬೇಕು. ಮುಗಿಯದ ಕತೆ ಹೇಳಲಾ" ಅಜ್ಜಿ ಕೇಳಿದರು.

"ಹೇಳಿ ಬೆಳಗಾಗುವಷ್ಟರವರೆಗೂ ಹೇಳಿ ನಾವು ನಿದ್ದೆ ಮಾಡುವುದಿಲ್ಲ" ನಲ್ಮೆ ನುಡಿದಳು.

"ನಾನು ಕತೆ ಹೇಳುತ್ತೇನೆ ನೀವು ಹೂಂಗುಟ್ಟಬೇಕು"

"ನಾವು ಹೂಂಗುಟ್ಟುತ್ತೇವೆ" ಎಂದನು ಸಹಜ.

"ನೀವು ಹೂಂಗುಟ್ಟದೇ ಹೋದರೆ ನಾನು ಕತೆ ಹೇಳುವುದನ್ನು ನಿಲ್ಲಿಸುತ್ತೇನೆ" ಎಂದು ಅಜ್ಜಿ ಬೆದರಿಕೆ ಹಾಕಿದರು.

ಅಜ್ಜಿ ಕತೆ ಸುರು ಮಾಡಿದರು. "ಒಂದು ಮನೆಯ ಮಾಡಿನಲ್ಲಿ ಒಂದು ಗುಬ್ಬಿ ಹಕ್ಕಿ ಗೂಡು ಕಟ್ಟಿತ್ತು"

"ಹೂಂ..... ಹೂಂ....." ಮಕ್ಕಳೆಲ್ಲ ಹೂಂಗುಟ್ಟಿದರು.

"ಆ ಮನೆಯ ಚಾವಡಿಯ ಮೂಲೆಯಲ್ಲಿ ಒಂದು ಭತ್ತದ ಕಣಜವಿತ್ತು"

"ಹೂಂ....... ಹೂಂ....."

"ಗುಬ್ಬಿ ಹಕ್ಕಿ ಒಂದು ದಿನ ಭತ್ತದ ಕಣಜದಲ್ಲಿ ತುಂಬಿದ್ದ ಭತ್ತವನ್ನು ನೋಡಿತು."

"ಹೂಂ... ಹೂಂ..........."

"ಕಣಜದಿಂದ ಒಂದು ಭತ್ತವನ್ನು ಕಚ್ಚಿಕೊಂಡು ಬಂದು ತನ್ನ ಗೂಡಲ್ಲಿ ಕುಳಿತು, ಕೊಕ್ಕಿನಿಂದ ಕುಕ್ಕಿ, ಭತ್ತದ ಹೊಟ್ಟನ್ನು ಸುಲಿದು, ಅಕ್ಕಿಯನ್ನು ನುಂಗಿತು."

"ಹೂಂ...... ಹೂಂ...."

"ಮತ್ತೆ..... ಗುಬ್ಬಿ ಹಕ್ಕಿ ಕಣಜಕ್ಕೆ ಹಾರಿ ಹೋಗಿ ಒಂದು ಭತ್ತವನ್ನು ಕಚ್ಚಿಕೊಂಡು ಬಂದು, ಗೂಡಿನಲ್ಲಿ ಕುಳಿತು, ಕೊಕ್ಕಿನಿಂದ ಹೊಟ್ಟನ್ನು ಸುಲಿದು ಅಕ್ಕಿಯನ್ನು ನುಂಗಿತು."

"ಹೂಂ...... ಹೂಂ....."

"ಪುನಃ ಗುಬ್ಬಿ ಹಕ್ಕಿ ಕಣಜಕ್ಕೆ ಹಾರಿ ಹೋಗಿ ಬಂದು ಭತ್ತವನ್ನು ಕಚ್ಚಿಕೊಂಡು ಬಂದು, ಗೂಡಲ್ಲಿ ಕುಳಿತು, ಕೊಕ್ಕಿನಿಂದ ಹೊಟ್ಟನ್ನು ಸುಲಿದು ಅಕ್ಕಿಯನ್ನು ನುಂಗಿತು"

"ಹೂಂ..... ಹೂಂ....."

"ಮತ್ತೆ ಗುಬ್ಬಿ ಹಕ್ಕಿ....."

"ಅಜ್ಜೀ ನಿಲ್ಲಿಸಿ, ನೀವೇನು ಹೇಳಿದನ್ನೇ ಹೇಳುತ್ತೀರಿ; ಕತೆ ಮುಂದುವರಿಸಿ" ಎಂದನು ನಿಸ್ವನ.

"ಕತೆ ಮುಂದುವರಿಸಲು ಕಣಜದಲ್ಲಿದ್ದ ಎಲ್ಲಾ ಭತ್ತವು ಮುಗಿಯಬೇಕಲ್ಲಾ?"

"ಭತ್ತ ಮುಗಿಯುವಾಗ ಬೆಳಗಾಗಬಹುದಜ್ಜಿ. ನೀವು ಬೇರೆ ಕತೆ ಹೇಳಿ"ಎಂದನು ಆದಿತ್ಯ.

"ಒಂದು ಕತೆ ಮುಗಿಯದೆ ಇನ್ನೊಂದು ಕತೆಯಾದರೂ ಹೇಳುವುದು ಹೇಗೆ? ಈ ಕತೆ ಮುಗಿಸೋಣ, ಹೂಂಗುಟ್ಟಿ"

"ಇದು ಮುಗಿಯದ ಕತೆ ಅಜ್ಜಿ. ಈ ಕತೆ ಬೇಡ ನೀವು ನಾಳೆ ಮುಗಿಯುವ ಕತೆ ಹೇಳಿ. ನಾವು ಇವತ್ತು ನಿದ್ದೆ ಮಾಡುತ್ತೇವೆ" ಎಂದಳು ಅಪೂರ್ವ. ಮಕ್ಕಳು ಮಲಗಿ ನಿದ್ದೆಹೋದರು. ಅಜ್ಜಿ ನಗೆ ಬೀರುತ್ತಾ ತಾನೂ ಮಲಗಿಕೊಂಡರು. ಮುಗಿಯದ ಕತೆ ಮುಗಿಯಿತು.



ಕನ್ನಡ ನಾಡು ಜನಪದ ಕತೆಗಳ ಕಣಜ. ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಸಾಕ್ಷೀಕರಿಸುವ ಜನಪದ ಕತೆಗಳ ಒಡಲಲ್ಲಿ ಮಾನವೀಯ ಮೌಲ್ಯಗಳು ತುಂಬಿಕೊಂಡಿರುತ್ತವೆ. ನಾಡು ಪ್ರಾದೇಶಿಕವಾಗಿ ಭಿನ್ನತೆ ಹೊಂದಿರುವಂತೆ ಆಯಾಯ ಪ್ರದೇಶಗಳಲ್ಲಿ ಸೃಷ್ಟಿಯಾಗುವ ಸಾಹಿತ್ಯವು ಭಿನ್ನವೂ, ವೈವಿಧ್ಯಮಯವೂ ಆಗಿರುವುದು ಸಹಜ. ಅದರಲ್ಲೂ ಜನಪದ ಕತೆಗಳು ಆ ಪ್ರದೇಶದ ನೆಲ ಮೂಲ ಜೀವನ, ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಿರುತ್ತವೆ. 'ತುಳುನಾಡಿನ ಜನಪದ ಕತೆಗಳು' ಕೃತಿಯಲ್ಲಿ ತುಳುನಾಡಿನ ಕೆಲವು ಮೂಲ ಜನಪದ ಕತೆಗಳನ್ನು ಸಂಗ್ರಹಿಸಿ ಯಥಾವತ್ತಾಗಿ ನೀಡುವ ಮೂಲಕ ತುಳುನಾಡಿನ ಜನಜೀವನ ಹಾಗೂ ಅಲ್ಲಿನ ಸಂಸ್ಕೃತಿಯ ವಿವಿಧ ಭಿತ್ತಿಗಳನ್ನು ಪರಿಚಯಿಸುವ ಅಗತ್ಯತೆಯನ್ನು ಲೇಖಕರು ಪೂರೈಸಿದ್ದಾರೆ. ತುಳುನಾಡಿನ ಜನಪದ ಕತೆಗಳಲ್ಲಿ ಪುರುಷಪ್ರಧಾನ ಕತೆಗಳೇ ಹೆಚ್ಚು. ಈ ಕೃತಿಯು ಅದನ್ನು ಪುಷ್ಟೀಕರಿಸಿದರೂ, ಸ್ತ್ರೀಪ್ರಧಾನ ಹಾಗೂ ಸಾಮಾನ್ಯ ಕತೆಗಳೂ ಇಲ್ಲಿ ಸ್ಥಾನ ಪಡೆದುಕೊಂಡಿವೆ. ಮೌಖಿಕ ಪರಂಪರೆಯಲ್ಲಿಯೇ ಮರೆಯಾಗಿ ಹೋಗಬಹುದಾದ ಕತೆಗಳು ಇಲ್ಲಿ ವಾಚಿಕನೆಲೆಗೆ ಒದಗುತ್ತಿರುವುದು ಅತ್ಯಂತ ಮಹತ್ವದ ಸಂಗತಿ.

ತುಳುನಾಡಿನ ಜನಪದ ಕಥಾ ಪ್ರಪಂಚವನ್ನು ಅರಿಯ ಹೊರಡುವ ಪಥಿಕರಿಗೆ ಒಂದು ಮಾರ್ಗವನ್ನು ಒದಗಿಸುವ ಮೌಲಿಕ ಕೃತಿಯನ್ನು ರಚಿಸಿ, ಮಹತ್ವದ ಕಾರ್ಯವನ್ನು ಆಗು ಮಾಡಿಕೊಟ್ಟ ಹಿರಿಯರಾದ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

₹ ೧೦೦/-

ISBN 938314900-0
9789383149001
ISBN : 978-93-83149-00-1

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ